
ಬುಧವಾರ, ಮಾರ್ಚ್ 6, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರಿಷ್ಮಾ ಝಲಕ್
ಮುಂಬೈನಲ್ಲಿ ಮಂಗಳವಾರ ಬಾಲಿವುಡ್ ನಟಿ ಕರಿಷ್ಮಾ ಕಪೂರ್ ತಮ್ಮ ಹಿಂದಿ ಚಿತ್ರ 'ಮರ್ಡರ್ ಮುಬಾರಕ್'ನ ಟ್ರೇಲರ್ ಬಿಡುಗಡೆ ವೇಳೆ ಕಾಣಿಸಿದ್ದು ಹೀಗೆ



ರಾಷ್ಟ್ರೀಯ ತೋಟಗಾರಿಕೆ ಮೇಳಕ್ಕೆ ಮೊದಲ ದಿನವೇ 18 ಸಾವಿರ ವೀಕ್ಷಕರ ಭೇಟಿ • ಗಮನಸೆಳೆದ ಯಂತ್ರೋಪಕರಣಗಳು

ಭರಪೂರ ಮಾಹಿತಿ ಕಣಜ, ತಂತ್ರಜ್ಞಾನದ ತಾಣ

• ಖಲೀಲಅಹ್ಮದ ಶೇಖ



ಬೆಂಗಳೂರಿನ ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ ಮಂಗಳವಾರ ಆರಂಭಗೊಂಡ ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ತರಕಾರಿ ತಾಕುಗಳಲ್ಲಿ ರೈತರು ವಿಜ್ಞಾನಿಗಳಿಂದ ಮಾಹಿತಿ ಪಡೆದರು
—ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.

ಬೆಂಗಳೂರು: ತೋಟಗಾರಿಕೆ ಕ್ಷೇತ್ರದ ಸಂಶೋಧನೆಗಳ ಬಗ್ಗೆ ಮಾಹಿತಿ ನೀಡುವ ಮಳಿಗೆಗಳು, ಬೇಸಿಗೆಯಲ್ಲೂ ನಳನಳಿಸುತ್ತಿದ್ದ ವಿವಿಧ ಬಗೆಯ ಹೂವಿನ ಗಿಡಗಳು, ತರಕಾರಿ ಹಾಗೂ ಹಣ್ಣಿನ ಬೆಳೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದ ರೈತರು, ತರಕಾರಿ ಬಿತ್ತನೆ ಬೀಜದ ಕೌಂಟರ್‌ನಲ್ಲಿ ರೈತರ ಸರದಿ...

– ಇದು ಮಂಗಳವಾರ ಆರಂಭವಾದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಹೆಸರಘಟ್ಟದಲ್ಲಿ ಆಯೋಜಿಸಿರುವ 'ರಾಷ್ಟ್ರೀಯ ತೋಟಗಾರಿಕೆ ಮೇಳ–2024'ದಲ್ಲಿ ಕಂಡು ಬಂದ ದೃಶ್ಯಗಳು.

ವಿಷಯಾಧಾರಿತವಾಗಿ ವಿಂಗಡಿಸಿದ ತಾಕುಗಳು, ಪ್ರತಿ ತಾಕುಗಳಿಗೆ ಜೋಡಿಸಿದ್ದ ನಾಮಫಲಕಗಳು ರೈತರಿಗೆ ಯಾವುದೇ ಗೊಂದಲವಿಲ್ಲದಂತೆ ತಾಕಿನ ಬಳಿಗೆ ತೆರಳಲು ನೆರವಾಗುತ್ತಿದ್ದವು. ಕಡಿಮೆ ಜಾಗದಲ್ಲಿಯೇ ಸಾಕಷ್ಟು ಮಾಹಿತಿ ಸಿಗಬೇಕು ಎಂಬ ಚಿಂತನೆಯಲ್ಲಿ ಈ ವ್ಯವಸ್ಥೆ ರೂಪಿಸಲಾಗಿತ್ತು. ಪ್ರತಿ ತಾಕಿಗೂ ಒಬ್ಬೊಬ್ಬ ಉಸ್ತುವಾರಿ ನೇಮಿಸಲಾಗಿದ್ದು, ರೈತರು ಅವರಿಂದ ಮಾಹಿತಿ ಪಡೆದರು.

ತರಕಾರಿ ತಾಕಿಗೆ ಹೆಚ್ಚು ರೈತರು ಭೇಟಿ ನೀಡುತ್ತಿದ್ದರು. ಹಣ್ಣಿನ ಬೆಳೆ, ತಂತ್ರಜ್ಞಾನಗಳ ಪ್ರದರ್ಶನವೂ ಆಕರ್ಷಣೀಯ ತಾಣವಾಗಿತ್ತು. ಹೂವಿನ ತಾಕಿನಲ್ಲಿ ಕಡಿಮೆ ಎತ್ತರದ ಚೆಂಡು ಹೂವು, ಅಲಂಕಾರಿಕ ಗ್ಲಾಡಿಯೋಲಸ್ ತಳಿಗಳಾದ ಅರ್ಕಾ ಕೇಸರ್‌ಗಳ ವೈಯ್ಯಾರ, ಅರ್ಕಾ ವೈಟ್ ಎಂಬ ಬಿಳಿ ಬಣ್ಣದ ಜರ್ಬೇರಾ, ಅರ್ಕಾ ಚೆನ್ನ ತಳಿಯ ಕನಕಾಂಬರ, ಅರ್ಕಾ ನಿರಂತರ ಎಂಬ ಸುಗಂಧರಾಜದ ಗಾಂಭೀರ್ಯ ಮೇಳಕ್ಕೆ ಮತ್ತಷ್ಟು ಮೆರುಗು ನೀಡಿದ್ದವು. ಮೇಳಕ್ಕೆ ಬಂದವರು, ಹೂವಿನ ಲೋಕದ ಎದುರು ನಿಂತು ಫೋಟೊ ತೆಗೆಸಿಕೊಳ್ಳುತ್ತಿದ್ದರು.

ಕೃಷಿಯಲ್ಲಿ ಕಾರ್ಮಿಕರ ಕೊರತೆ ನೀಗಿಸುವಂತಹ ಯಂತ್ರೋಪಕರಣಗಳ ಬಗ್ಗೆ ರೈತರು ವಿಚಾರಿಸುತ್ತಿದ್ದರು. ರೈತರ ಅಗತ್ಯಕ್ಕೆ ತಕ್ಕಂತೆ ಸಿದ್ಧಪಡಿಸಲಾದ ಹತ್ತಾರು ಉಪಯುಕ್ತ ಯಂತ್ರೋಪಕರಣಗಳು ಮೇಳದ ಮತ್ತೊಂದು ಆಕರ್ಷಣೆಯಾಗಿತ್ತು.

ಈರುಳ್ಳಿ ನಾಟಿ ಮಾಡುವ ಯಂತ್ರ, ಈರುಳ್ಳಿ ಗ್ರೇಡ್ ಮಾಡುವ ಯಂತ್ರ, ಉತ್ತುವ, ಬಿತ್ತುವ, ಕೊಯ್ಲು ಮಾಡುವುದು ಸೇರಿದಂತೆ ಐಐಎಚ್‌ಆರ್ ಸಿದ್ದಪಡಿಸಿರುವ ಹಲವು ಉಪಕರಣಗಳು ಮೇಳದಲ್ಲಿದ್ದವು. ಮಳಿಗೆಗಳಲ್ಲಿ ಹಲವು ಕಂಪನಿಗಳು ತಾವು ಅಭಿವೃದ್ಧಿಪಡಿಸಿರುವ ಆಧುನಿಕ ಯಂತ್ರಗಳ ಕುರಿತು ರೈತರಿಗೆ ಪ್ರಾತ್ಯಕ್ಷಿಕೆ ನೀಡುತ್ತಿದ್ದವು. ಒಟ್ಟು 250ಕ್ಕೂ ಹೆಚ್ಚು ಮಳಿಗೆಗಳು ಮೇಳದಲ್ಲಿವೆ.

ಐಐಎಚ್‌ಆರ್ ಆವರಣದಲ್ಲಿ ಬೆಳೆದಿರುವ ವಿವಿಧ ಬಗೆಯ ಹಣ್ಣು ಮತ್ತು ತರಕಾರಿ ಬೆಳೆಗಳ ಬಗ್ಗೆ ರೈತರು ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದರು. ಮೇಳದಲ್ಲಿ ವಿವಿಧ ಬಗೆಯ ಸಾವಯವ ಹಾಗೂ ಜೈವಿಕ ಗೊಬ್ಬರದ ಮಳಿಗೆಗಳ ಮುಂದೆ ರೈತರ ಗುಂಪು–ಗುಂಪಾಗಿ ಸೇರಿದ್ದರು. ಸೋಲಾರ್ ಆಧಾರಿತ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಹೇಗೆ? ಇದನ್ನು ಅಳವಡಿಸಿಕೊಂಡರೆ ರೈತರು ಯಾವ ರೀತಿಯ ಲಾಭಗಳಾಗುತ್ತವೆ ಎಂಬುದರ ಬಗ್ಗೆ ರೈತರು ಮಾಹಿತಿ ಪಡೆದುಕೊಳ್ಳುತ್ತಿದ್ದರು.

ಗಮನ ಸೆಳೆದ ಸೆಲ್ಫಿ ಪಾಯಿಂಟ್: ರಾಷ್ಟ್ರೀಯ ತೋಟಗಾರಿಕಾ ಮೇಳಕ್ಕೆ ಆಗಮಿಸಿದ್ದ ಎಲ್ಲರೂ ಮುಖ್ಯ ವೇದಿಕೆಯ ಬಲಭಾಗದಲ್ಲಿ ನಿರ್ಮಿಲಾಗಿದ್ದ ಸೆಲ್ಫಿ ಪಾಯಿಂಟ್‌ನಲ್ಲಿ ಫೋಟೊಗೆ ಪೋಸ್ ನೀಡುತ್ತಿದ್ದರು. ಯುವಕರು, ರೈತರು, ರೈತ ಮಹಿಳೆಯರು ತಂಡೋಪತಂಡವಾಗಿ ಫೋಟೊ ತೆಗೆಸಿಕೊಳ್ಳುತ್ತಿದ್ದರು.

ಬೀಜ ಖರೀದಿಯತ್ತ ರೈತರ ಚಿತ್ತ

ಮೇಳದಲ್ಲಿ ವಿವಿಧ ಬಗೆಯ ಬಿತ್ತನೆ ಬೀಜಗಳನ್ನು ಮಾರಾಟ ಮಾಡುವ ಮಳಿಗೆಗಳನ್ನು ತೆರೆಯಲಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ರೈತರು ಬೀಜ ಖರೀದಿಗೆ ಮುಂದಾಗಿದ್ದರು. ಐಐಎಚ್‌ಆರ್‌ನ ಬೀಜ ಮಾರಾಟದ ಕೌಂಟರ್‌ನಲ್ಲಿ ವಿವಿಧ ತಳಿಯ ತರಕಾರಿ ಬೀಜಗಳನ್ನು ಮಾರಾಟ ಮಾಡಲಾಗುತ್ತಿತ್ತು. ಆನ್‌ಲೈನ್ ಮೂಲಕವೂ ಬೀಜಗಳ ಖರೀದಿ ವ್ಯವಸ್ಥೆಯ ಬಗ್ಗೆ ಮಾಹಿತಿ ಇಲ್ಲದ ರೈತರು ಇಲ್ಲಿಗೆ ಬಂದು ತಮಗೆ ಬೇಕಾದ ಬೀಜಗಳನ್ನು ಖರೀದಿಸಲು ಸರದಿಯಲ್ಲಿ ನಿಂತಿದ್ದರು.

'ಐಐಎಚ್‌ಆರ್ ಅಭಿವೃದ್ಧಿ ಪಡಿಸಿರುವ ಮೆಣಸಿನಕಾಯಿ ತಳಿಗಳು ಹೆಚ್ಚು ಇಳುವರಿ ನೀಡುತ್ತವೆ ಎಂಬುದನ್ನು ಕೇಳಿದ್ದೆ. ಆ ತಳಿಯ ಬಿತ್ತನೆಬೀಜ ಖರೀದಿಸಲು ಮೇಳಕ್ಕೆ ಬಂದಿದ್ದೇನೆ' ಎಂದು ಚಿತ್ರದುರ್ಗ ಜಿಲ್ಲೆಯ ರೈತ ಪಾಲಯ್ಯ ತಿಳಿಸಿದರು.





ಮೆಣಸಿನಕಾಯಿ ತಳಿಯ ತಾಕು

ಹೊಸ ಮೆಣಸಿನಕಾಯಿ ತಳಿ ಪರಿಚಯ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ರೋಗನಿರೋಧಕ ಮೆಣಸಿನಕಾಯಿಯ ಏಳು ತಳಿಗಳನ್ನು ಪರಿಚಯಿಸಲಾಗಿದೆ.

ಅಧಿಕ ಇಳುವರಿ ಕೊಡುವಂತಹ 'ಅರ್ಕ ನಿಹಿರ' ಮತ್ತು 'ಅರ್ಕ ಧೃತಿ' ಮೆಣಸಿನಕಾಯಿ ತಳಿಗಳನ್ನು ರೈತರಿಗಾಗಿ ಹೊಸದಾಗಿ ಪರಿಚಯಿಸಲಾಗಿದೆ.

ಅರ್ಕ ತೇಜಸ್ವಿ, ಅರ್ಕ ತನ್ವಿ ಮತ್ತು ಅರ್ಕ ಸಾನ್ವಿ ಮೆಣಸಿನಕಾಯಿ ತಳಿಗಳು ಖಾರ ಜಾಸ್ತಿ ಹೊಂದಿದ್ದು ಹಸಿ ಮತ್ತು ಒಣರೂಪದಲ್ಲಿ ಉಪಯೋಗಿಸಬಹುದಾಗಿದ. 'ಅರ್ಕ ಯಶಸ್ವಿ', 'ಅರ್ಕ ಗಗನ್' ಮೆಣಸಿನಕಾಯಿ ತಳಿಗಳನ್ನು ಕೇವಲ ಹಸಿ ರೂಪದಲ್ಲಿ ಉಪಯೋಗಿಸಬಹುದು. ಈ ತಳಿಗಳಲ್ಲಿ ಶೇ 80ರಷ್ಟು ವೈರಸ್ ನಿರೋಧಕ ಶಕ್ತಿಯನ್ನು ಹೊಂದಿವೆ ಎಂದು ತರಕಾರಿ ವಿಭಾಗದ ಪ್ರಧಾನ ವಿಜ್ಞಾನಿ ಮಾಧವಿ ರೆಡ್ಡಿ ತಿಳಿಸಿದರು.

ರೈತರು ಕೊಟ್ಟಿಗೆ ಗೊಬ್ಬರವನ್ನು ನೇರವಾಗಿ ಗಿಡಗಳಿಗೆ ಹಾಕದೆ ಉಪಚಾರ ಮಾಡಿದ ನಂತರ ಹಾಕಬೇಕು. ತಮ್ಮ ತೋಟದಲ್ಲಿನ ಮಣ್ಣು ಮತ್ತು ನೀರಿನ ಪರೀಕ್ಷೆ ಮಾಡಿಸಿ ಅದಕ್ಕೆ ತಕ್ಕಂತಹ ಬೆಳೆಗಳನ್ನು ಮಾತ್ರ ಬೆಳೆಯುವುದರಿಂದ ಹೆಚ್ಚು ಇಳುವರಿ ಬರುತ್ತದೆ. ಆದಷ್ಟು ಯೂರಿಯಾ ಉಪಯೋಗಿಸುವುದನ್ನು ತಪ್ಪಿಸಬೇಕು ಎಂದು ಅವರು ಸಲಹೆ ನೀಡಿದರು.

ಮೇಳಕ್ಕೆ ಬಂದವರ ಅನಿಸಿಕೆಗಳು...

ಕೃಷಿ ಬಗ್ಗೆ ಇನ್ನಷ್ಟು ಒಲವು



ಮನೆಗೆ ಉಪಯುಕ್ತ ಆಗುವಂತಹ ತರಕಾರಿಗಳನ್ನು ಕಡಿಮೆ ಜಾಗದಲ್ಲಿ ಬೆಳೆಯುವಂತಹ ಮಾದರಿ ಕೃಷಿ ಪದ್ಧತಿ ಗಮನ ಸೆಳೆಯಿತು. ಕೇವಲ ಒಂದು ಸಾಲು ತರಕಾರಿ ಬೆಳೆದರೆ ಮನೆಗೆ ಸಾಕಾಗುವಷ್ಟು ಲಭ್ಯವಾಗುತ್ತದೆ. ಮೇಳದಿಂದ ಕೃಷಿ ಬಗ್ಗೆ ಇನ್ನಷ್ಟು ಒಲವು ಮೂಡಿದೆ

ಶಬ್ಬೀರ್, ಕೋಳಾಲ, ಗುಬ್ಬಿ ತಾಲ್ಲೂಕು

ಪ್ರಚಾರ ಬೇಕಿತ್ತು



ಐಐಎಚ್‌ಆರ್‌ನ ತಂತ್ರಜ್ಞಾನದಿಂದ ಕಡಿಮೆ ನೀರನ್ನು ಬಳಸಿ, ಹೆಚ್ಚು ಇಳುವರಿ ಕೊಡುವಂತಹ ತರಕಾರಿ ಬೆಳೆಯಬಹುದು ಎಂಬ ಮಾಹಿತಿ ಲಭ್ಯವಾಯಿತು ಮೇಳದಿಂದ ರೈತರಿಗೆ ಬಹಳ ಅನುಕೂಲವಾಗುತ್ತಿದೆ. ಇನ್ನಷ್ಟು ಪ್ರಚಾರ ಬೇಕಿತ್ತು.

ಬಸವರಾಜಯ್ಯ

ನಿವೃತ್ತ ಬ್ಯಾಂಕ್ ಉದ್ಯೋಗಿ, ಆಲಂಬಾಡಿ, ಕೆ.ಆರ್.ಪೇಟೆ, ಮಂಡ್ಯ

ತಂತ್ರಜ್ಞಾನದ ಮಾಹಿತಿ ಲಭ್ಯ



ತೋಟಗಾರಿಕೆ ಮೇಳದಿಂದ ಕೃಷಿಗೆ ಸಂಬಂಧಿಸಿದ ಆಧುನಿಕ ತಂತ್ರಜ್ಞಾನದ ಬಗ್ಗೆ ಮಾಹಿತಿಯನ್ನು ಪಡೆಯಲು ಅನುಕೂಲವಾಯಿತು

ಬೈರೇಶ್, ತಿಪಟೂರು

ಹೊಸತಳಿಗಳ ಮಾಹಿತಿ



ಐಐಎಚ್‌ಆರ್ ಅಭಿವೃದ್ಧಿಪಡಿಸಿರುವ ವಿವಿಧ ಬಗೆಯ ತರಕಾರಿ, ಹೂವಿನ ತಳಿಗಳು ನಮಗೆ ಬಹಳ ಇಷ್ಟವಾಗಿವೆ. ಅವುಗಳನ್ನು ನಮ್ಮ ಜಮೀನಿನಲ್ಲಿ ಬೆಳೆಯುವುದಕ್ಕೆ ಬೀಜಗಳನ್ನು ತೆಗೆದುಕೊಂಡು ಹೋಗುತ್ತಿದ್ದೇನೆ.

ಬೊಮ್ಮಮ್ಮ, ರೈತ ಮಹಿಳೆ, ರಾಮನಗರ ಜಿಲ್ಲೆ

ಬೆಳೆ ನಿರ್ವಹಣೆಗೆ 'ಎಐ' ಆಧಾರಿತ ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಬೆಳೆಗಳಿಗೆ ತಗುಲುವ ರೋಗಗಳು ಹಾಗೂ ಹವಾಮಾನ ಅನಿಶ್ಚಿತತೆಯ ಬಗ್ಗೆ ಮಾಹಿತಿ ನೀಡುವ 'ಇಂಟರ್‌ನೆಟ್ ಆಫ್ ಥಿಂಗ್ಸ್ (ಐಒಟಿ)' ಎಂಬ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಯಂತ್ರವೊಂದು ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ರೈತರ ಗಮನ ಸೆಳೆಯಿತು.

ಬೆಂಗಳೂರಿನ ಫಸಲ್ ಕಂಪನಿ ತಯಾರಿಸಿರುವ ಈ ಯಂತ್ರವನ್ನು ಮೇಳದಲ್ಲಿ ಪ್ರದರ್ಶನಕ್ಕಿಡಲಾಗಿತ್ತು.

ಈ ಯಂತ್ರ ಹಣ್ಣು ಸೇರಿದಂತೆ ವಿವಿಧ ಬಗೆಯ ಗಿಡಗಳಿಗೆ ಎಷ್ಟು ಪ್ರಮಾಣದಲ್ಲಿ ನೀರು ಕೊಡಬೇಕು. ಗಿಡಕ್ಕೆ ಯಾವ ಹಂತದಲ್ಲಿ ಯಾವ ರೋಗ ಬರುತ್ತದೆ ಎಂಬುದರ ಬಗ್ಗೆ ಮುಂಚಿತವಾಗಿ ಮಾಹಿತಿ ನೀಡುತ್ತದೆ. ಜೊತೆಗೆ ರೋಗಕ್ಕೆ ಯಾವ ಔಷಧ ಸಿಂಪಡಿಸುತ್ತಾರೆಂಬ ಮಾಹಿತಿಯ ನೀಡುತ್ತದೆ. ಈ ಯಂತ್ರ ಅಳವಡಿಸಿಕೊಳ್ಳುವವರು, ತಮ್ಮ ಮೊಬೈಲ್‌ನಲ್ಲಿ 'ಫಸಲ್ ಆ್ಯಪ್' ಡೌನ್‌ಲೋಡ್ ಮಾಡಿಕೊಂಡು ಇನ್‌ಸ್ಟಾಲ್ ಮಾಡಿಕೊಂಡಿರಬೇಕು. ಈ ಆ್ಯಪ್ ಮೂಲಕ ಯಂತ್ರ ಸೂಚನೆ/ಮಾಹಿತಿ ರವಾನಿಸುತ್ತದೆ.



ಜಮೀನಿನಲ್ಲಿ ಅಳವಡಿಸಿರುವ ಐಒಟಿ ಯಂತ್ರ

'ಐದು ಎಕರೆ ಪ್ರದೇಶದ ಜಮೀನಿನಲ್ಲಿ ಒಂದೇ ಗುಣಲಕ್ಷಣವಿರುವ ಮಣ್ಣು ಇದ್ದು, ಒಂದೇ ಬೆಳೆ ಬೆಳೆದಿರುವ ರೈತರಿಗೆ ಈ ಯಂತ್ರ ಸಹಾಯಕವಾಗಲಿದೆ' ಎಂದು ಫಸಲ್ ಕಂಪನಿ ಸಿಬ್ಬಂದಿ ವರುಣ್ ಮಾಹಿತಿ ನೀಡಿದರು.

'14 ದಿನ ಮುಂಚಿತವಾಗಿ ಮಳೆ ಬರುವ ಬಗ್ಗೆ ಮಾಹಿತಿ ನೀಡಲಿದೆ. ಕಂಪನಿಯ ಸಂಪೂರ್ಣ ಎಂಬ ಯೋಜನೆ ಅಡಿ ಈ ಯಂತ್ರವನ್ನು ₹15 ಸಾವಿರಕ್ಕೆ ಖರೀದಿಸಬಹುದು. ಇದಕ್ಕೆ 3 ತಿಂಗಳವರೆಗೆ ಉಚಿತ ಚಂದಾದಾರಿಕೆ ನೀಡಲಾಗುವುದು. ₹40 ಸಾವಿರ ನೀಡಿ ಯಂತ್ರ ಖರೀದಿಸಿದರೆ, ಒಂದು ವರ್ಷದವರೆಗೆ ಉಚಿತವಾಗಿ ಚಂದಾದಾರಿಕೆ ಸಿಗಲಿದೆ' ಎಂದರು.

ದಾಳಿಂಬೆ ಹಣ್ಣಿನ ಮೌಲ್ಯವರ್ಧನೆ

ಮಹಾರಾಷ್ಟ್ರದ ಸೊಲ್ಲಾಪುರದಲ್ಲಿರುವ ದಾಳಿಂಬೆ ರಾಷ್ಟ್ರೀಯ ಸಂಶೋಧನಾ ಕೇಂದ್ರ, ದಾಳಿಂಬೆ ಹಣ್ಣಿನಿಂದ ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಈ ತಂತ್ರಜ್ಞಾನದಿಂದ ತಯಾರಿಸಿದ ಉತ್ಪನ್ನಗಳನ್ನು ಮೇಳದಲ್ಲಿ ಪ್ರದರ್ಶನಕ್ಕಿಟ್ಟಿತ್ತು.

'ದಾಳಿಂಬೆಯ ಸಿಪ್ಪೆ ಒಣಗಿಸಿ ಪೌಡರ್ ತಯಾರಿಸಬಹುದು. ಈ ಪೌಡರ್ ಚರ್ಮದ ಆರೋಗ್ಯ ರಕ್ಷಣೆಗೆ ಸಹಕಾರಿಯಾಗುತ್ತದೆ. ದಾಳಿಂಬೆ ಕಾಳುಗಳಿಂದ ಬೀಜಗಳನ್ನು ಬೇರ್ಪಡಿಸಿ, ಒಣಗಿಸಿ ಅದರಿಂದ ತೈಲವನ್ನು ತಯಾರಿಸಬಹುದು. ಇದು ಸೌಂದರ್ಯವರ್ಧಕ ಉತ್ಪನ್ನಗಳಲ್ಲಿ ಬಳಸಬಹುದಾಗಿದೆ. ಹಣ್ಣಿನಿಂದ ಜ್ಯೂಸ್ ಸಿರಪ್ ತಯಾರಿಸಿ, ಇದರಿಂದ ವಿವಿಧ ಫ್ಲೇವರ್‌ಗಳಲ್ಲಿ ಜ್ಯೂಸ್ ತಯಾರಿಸಬಹುದು' ಎಂದು ಐಸಿಎಆರ್ ವಿಜ್ಞಾನಿ ಮಹದೇವ್ ಮಾಹಿತಿ ನೀಡಿದರು.

'ಕಾಳುಗಳಿಂದ ಬೀಜ ಬೇರ್ಪಡಿಸುವುದು, ಕಾಳುಗಳನ್ನು ಒಣಗಿಸಿ ಮೌಲ್ಯವರ್ಧಿಸುವುದಕ್ಕೆ ಬೇಕಾದ ತಂತ್ರಜ್ಞಾನಗಳು ನಮ್ಮ ಸಂಶೋಧನಾ ಕೇಂದ್ರದಲ್ಲಿವೆ. ಕೆಲವು ನವೋದ್ಯಮಗಳು ಈ ತಂತ್ರಜ್ಞಾನಗಳನ್ನು ಬಳಸಿಕೊಂಡು ದಾಳಿಂಬೆ ಮೌಲ್ಯವರ್ಧನೆ ಮಾಡುತ್ತಿವೆ' ಎಂದು ಅವರು ತಿಳಿಸಿದರು.



ದಾಳಿಂಬೆಯ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳು

ಬೃಹತ್ ಮರಗೆಣಸು

ಕೇರಳದ ಪತ್ತನಂತಿಟ್ಟನ ರಿಜು– ರಾಜು ಸಹೋದರರು ತಂದಿದ್ದ ಬೃಹತ್ ಗಾತ್ರದ ಮರಗೆಣಸು ಮೇಳದ ಮತ್ತೊಂದು ಆಕರ್ಷಣೆ. ಮಳಿಗೆಗೆ ಭೇಟಿ ನೀಡಿದ್ದವರೆಲ್ಲ ಆ ಮರಗೆಣಸಿನ ಬಗ್ಗೆಯೇ ಮಾಹಿತಿ ಕೇಳುತ್ತಿದ್ದರು.

ಬೃಹತ್ ಗಾತ್ರದ ಮರಗೆಣಸಿನ ತಳಿಯ ಹೆಸರು 'ಅಂಬಕಾಡ್'. ಇದು ನಾಟಿ ತಳಿ. ಅಳಿವಿನಂಚಿನಲ್ಲಿರುವ ಈ ನಾಟಿ ಮರಗೆಣಸಿನ ತಳಿಯನ್ನು ಈ ಸಹೋದರರು ರಕ್ಷಿಸಿದ್ದಾರೆ. 'ಎಲ್ಲರಿಗೂ ಮಾಹಿತಿ ನೀಡುವುದಕ್ಕಾಗಿ ಮೇಳಕ್ಕೆ ತಂದಿದ್ದೇವೆ' ಎಂದು ಮಾಹಿತಿ ಹಂಚಿಕೊಂಡರು. ಮರಗೆಣಸಿನ ಜೊತೆಗೆ, ಸುವರ್ಣಗೆಡ್ಡೆ, ಅರಿಶಿಣ, ಶುಂಠಿ, 'ಎಲಿಫೆಂಟ್ ಟೇಲ್' ಎಂಬ ಮತ್ತೊಂದು ಮರಗೆಣಸಿನ ತಳಿಯನ್ನೂ ಪ್ರದರ್ಶನದಲ್ಲಿ ಇಟ್ಟಿದ್ದರು.



ಬೃಹತ್ ಗಾತ್ರದ ಮರಗೆಣಸಿನ ಗೆಡ್ಡೆಯನ್ನು ಅಚ್ಚರಿಯಿಂದ ವೀಕ್ಷಿಸಿದ ಯಕ್ಷಗಾನ ವೇಷಧಾರಿಗಳು

'ರೈತರ ಆದಾಯ ಹೆಚ್ಚಳಕ್ಕೆ ತಂತ್ರಜ್ಞಾನ ನೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ(ಐಐಎಚ್‌ಆರ್) ಅಭಿವೃದ್ಧಿ ಪಡಿಸಿರುವ ತಂತ್ರಜ್ಞಾನಗಳು ಲಕ್ಷದ್ವೀಪದಂತಹ ದೂರ ಪ್ರದೇಶಗಳಲ್ಲಿರುವ ರೈತರ ಆದಾಯವನ್ನು ಹೆಚ್ಚಿಸಲು ನೆರವಾಗಿವೆ' ಎಂದು ಬೆಂಗಳೂರಿನ ಕೃಷಿ ತಂತ್ರಜ್ಞಾನ ಅನ್ವಯಿಕ ಸಂಶೋಧನಾ ಸಂಸ್ಥೆ ನಿರ್ದೇಶಕ ವೆಂಕಟ ಸುಬ್ರಹ್ಮಣ್ಯಂ ಅವರು ಶ್ಲಾಘಿಸಿದರು.

ಹೆಸರಘಟ್ಟದ ಐಐಎಚ್‌ಆರ್ ಆವರಣದಲ್ಲಿ ಮಂಗಳವಾರ ಆರಂಭವಾದ 'ರಾಷ್ಟ್ರೀಯ ತೋಟಗಾರಿಕಾ ಮೇಳ–2024'ರ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಐಐಎಚ್‌ಆರ್ ತಂತ್ರಜ್ಞಾನಗಳು, ಮಹಿಳಾ ಉದ್ಯೋಗಿಗಳನ್ನು ಸೃಷ್ಟಿಸುವಲ್ಲಿಯೂ ಅಪಾರ ಕೊಡುಗೆ ನೀಡುತ್ತಿವೆ' ಎಂದರು.

ಮೇಳ ಉದ್ಘಾಟಿಸಿ ಮಾತನಾಡಿದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಭಾನುಪ್ರಕಾಶ್ ಶ್ರೀವಾಸ್ತವ್, 'ದೇಶದ ಸೇನೆಗಾಗಿ ಬಿಇಎಲ್ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ ಹಾಗೂ ಸಂಶೋಧನೆಯನ್ನು ತೋಟಗಾರಿಕೆಯಲ್ಲಿ ಅಳವಡಿಸಿಕೊಳ್ಳಲು ಐಐಎಚ್‌ಆರ್‌ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ' ಎಂದು ಹೇಳಿದರು.

ಐಸಿಎಆರ್ ತೋಟಗಾರಿಕೆ ವಿಭಾಗದ ಉಪಮಹಾ ನಿರ್ದೇಶಕ ಪ್ರೊ. ಸಂಜಯ್ ಕುಮಾರ್ ಸಿಂಗ್, ಐಐಎಚ್‌ಆರ್ ನಿರ್ದೇಶಕ (ಪ್ರಭಾರ) ಪ್ರಕಾಶ್ ಪಾಟೀಲ್, ತೋಟಗಾರಿಕೆ ಮೇಳದ ಆಯೋಜನಾ ಕಾರ್ಯದರ್ಶಿ ಎಂ.ವಿ.ಧನಂಜಯ ಇದ್ದರು.



ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಕುಳಿತವರು (ಎಡದಿಂದ ಬಲಕ್ಕೆ) ಓಗೆಪ್ಪ ಹೊಸಮನಿ, ಕುಮಾರಸ್ವಾಮಿ ಎಂ. ಎಚ್., ಮದನ್ ಮೋಹನ್ ಮಂಡಿ, ಇಕ್ಬಾಲ್ ಹೊಸೇನ್, ಎನ್. ಬಿ. ಸಂಗ ಚಾಂಗ್ಟೆ, ಸಿದ್ದು ಟೇಂಗಳಿ, ನಿಂತವರು (ಎಡದಿಂದ ಬಲಕ್ಕೆ) ಯದುನಾಥ್ ಗೊರಾಯಿ, ಮಹಿತೋಶ್ ದಾಸ್(ಪ್ರಶಸ್ತಿ ವಿಜೇತ ರೈತರು). ಐಐಎಚ್‌ಆರ್‌ನ ವಿಜ್ಞಾನಿ ಎಂ.ವಿ. ಧನಂಜಯ, ಐಸಿಎಆರ್ ಉಪಮಹಾನಿರ್ದೇಶಕ ಸಂಜಯ್ ಕುಮಾರ್ ಸಿಂಗ್, ಬಿಇಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಭಾನುಪ್ರಕಾಶ್ ಶ್ರೀವಾಸ್ತವ, ಎಟಿಎಆರ್‌ಐನ ನಿರ್ದೇಶಕ ವೆಂಕಟಸುಬ್ರಹ್ಮಣ್ಯಂ, ಐಐಎಚ್‌ಆರ್ ನಿರ್ದೇಶಕ(ಪ್ರಭಾರ) ಪ್ರಕಾಶ್ ಪಾಟೀಲ, (ಪ್ರಶಸ್ತಿ ಪುರಸ್ಕೃತ ರೈತರು) ರವಿ ಕುಮಾರ್, ಟಿ.ಎಚ್. ಮುರುಗೇಶನ್ —ಪ್ರಜಾವಾಣಿ ಚಿತ್ರ

ಎಸ್ಕಾಂ: ಆನ್‌ಲೈನ್ ಸೇವೆ 10 ದಿನ ಅಲಭ್ಯ

ಬೆಂಗಳೂರು: ಇಂಧನ ಇಲಾಖೆಯ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಉನ್ನತೀಕರಿಸುತ್ತಿದ್ದು, ಈ ಕಾರಣದಿಂದ ಇದೇ 10 ರಿಂದ 19ರವರೆಗೆ ಎಲ್ಲ ಎಸ್ಕಾಂಗಳ ಆನ್‌ಲೈನ್ ಸೇವೆಗಳು ಗ್ರಾಹಕರಿಗೆ ಲಭ್ಯ ಇರುವುದಿಲ್ಲ.

ಎಸ್ಕಾಂಗಳ ವ್ಯಾಪ್ತಿಯಲ್ಲಿ 10 ದಿನ ವಿದ್ಯುತ್ ಬಿಲ್ ಪಾವತಿ, ಹೊಸ ಸಂಪರ್ಕಕ್ಕಾಗಿ ಆನ್‌ಲೈನ್ ಅರ್ಜಿ ಸಲ್ಲಿಕೆ, ಹೆಸರು ಮತ್ತು ಜಕಾತಿ ಬದಲಾವಣೆ ಸೇರಿದಂತೆ ಯಾವುದೇ ಆನ್‌ಲೈನ್ ಸೇವೆಗಳು ಈ ಅವಧಿಯಲ್ಲಿ ಲಭ್ಯ ಇರುವುದಿಲ್ಲ. ವಿದ್ಯುತ್ ಪೂರೈಕೆಯಲ್ಲಿ ಬದಲಾವಣೆ ಅಥವಾ ಕಡಿತ ಮಾಡುವುದಿಲ್ಲ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ತಂತ್ರಾಂಶ ಕಾರ್ಯಾರಂಭವಾದ ನಂತರ ಸ್ಥಿರಗೊಳ್ಳಲು ಅಂದಾಜು 15 ದಿನಗಳ ಅಗತ್ಯವಿದೆ. ಸಾಫ್ಟ್‌ವೇರ್ ಉನ್ನತೀಕರಣ ಸಂದರ್ಭದಲ್ಲಿ ವಿದ್ಯುತ್ ಪಾವತಿ ಸಾಧ್ಯವಾಗದ ಕಾರಣ ಗ್ರಾಹಕರ ವಿದ್ಯುತ್ ಸಂಪರ್ಕ ಕಡಿತ ಮಾಡುವುದಿಲ್ಲ. ಮೀಟರ್ ರೀಡರ್‌ಗಳು, ಗ್ರಾಹಕರಿಗೆ ಬಿಲ್ ನೀಡಲಿದ್ದಾರೆ. ಆದರೆ, ಈ ಬಿಲ್‌ಗಳನ್ನು ಮಾರ್ಚ್ 20 ರ ನಂತರವೇ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಸಾಧ್ಯವಾಗಲಿದೆ. ಗ್ರಾಹಕರು ಸಹಕರಿಸಬೇಕು ಎಂದು ಕೋರಿದ್ದಾರೆ.

ರಾಹುಲ್ ಜತೆ ಇಲ್ತಾಝ್ ನಂಟು: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ ಆರೋಪದಡಿ ಬಂಧಿತನಾಗಿರುವ ಮೊಹಮದ್ ಇಲ್ತಾಝ್ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆಪ್ತ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ.

ರಾಹುಲ್ ಗಾಂಧಿ ಮತ್ತು ಇಲ್ತಾಝ್ ಕೈ ಕೈ ಹಿಡಿದು ನಡೆಯುತ್ತಿರುವ ಫೋಟೊಗಳನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಅವರು, 'ರಾಹುಲ್ ಕರ್ನಾಟಕದಲ್ಲಿ ಭಾರತ್ ಜೋಡೋ ಯಾತ್ರೆ ನಡೆಸಿದ್ದಾಗ ಇಲ್ತಾಝ್ ಕೂಡ ಜತೆಗಿದ್ದ' ಎಂದಿದ್ದಾರೆ.

'ಪ್ರಕರಣದ ತನಿಖೆ ಆಮೆ ಗತಿಯಲ್ಲಿ ಸಾಗಲು ಈ ದೋಸ್ತಿಯೇ ಕಾರಣವಾ? ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜನರಿಗೆ ತಿಳಿಸಬೇಕು' ಎಂದು ಆಗ್ರಹಿಸಿದ್ದಾರೆ.

ರಾಹುಲ್ ಮತ್ತು ಇಲ್ತಾಝ್ ಜತೆ ಡಿ.ಕೆ. ಶಿವಕುಮಾರ್ ಕೂಡ ಜತೆಯಾಗಿ ಸಾಗುತ್ತಿರುವ ಒಂದು ಫೋಟೊವನ್ನೂ ಹಂಚಿಕೊಂಡಿದ್ದಾರೆ.



ರಾಹುಲ್ ಗಾಂಧಿ ಜತೆ ಇಲ್ತಾಝ್

ಉಡುಗೊರೆ ನೀಡದ ಪತಿ: ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ವಾರ್ಷಿಕೋತ್ಸವಕ್ಕೆ ಉಡುಗೊರೆ ನೀಡಲಿಲ್ಲವೆಂಬ ಕಾರಣಕ್ಕೆ ಚಾಕುವಿನಿಂದ ಇರಿದು ಪತಿಯ ಕೊಲೆಗೆ ಯತ್ನಿಸಲಾಗಿದ್ದು, ಈ ಸಂಬಂಧ ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಚುನ್ನಸಂದ್ರದ 37 ವರ್ಷ ವಯಸ್ಸಿನ ವ್ಯಕ್ತಿ ದೂರು ನೀಡಿದ್ದಾರೆ. ಕೊಲೆ ಯತ್ನ ಆರೋಪದಡಿ ಅವರ ಪತ್ನಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ, ಪತ್ನಿ ಹಾಗೂ ಮಗುವಿನ ಜೊತೆ ವಾಸವಿದ್ದಾರೆ. ಪ್ರತಿ ವರ್ಷವೂ ಮದುವೆ ವಾರ್ಷಿಕೋತ್ಸವದಂದು ಪತ್ನಿಗೆ ವಿಶೇಷ ಉಡುಗೊರೆ ನೀಡುತ್ತಿದ್ದರು. ಆದರೆ, ಈ ವರ್ಷ ದೂರುದಾರರ ತಾತ ತೀರಿಕೊಂಡಿದ್ದಾರೆ. ಹೀಗಾಗಿ, ಪತ್ನಿಗೆ ಉಡುಗೊರೆ ನೀಡಿರಲಿಲ್ಲ. ಸಿಟ್ಟಾದ ಪತ್ನಿ, ರಾತ್ರಿ ಮಲಗಿದ್ದ ಸಂದರ್ಭದಲ್ಲಿ ದೂರುದಾರರ ಕೊಲೆಗೆ ಯತ್ನಿಸಿದ್ದಾರೆಂದು ಆರೋಪಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ತೀವ್ರ ಗಾಯಗೊಂಡಿದ್ದ ಪತಿ, ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದಾರೆ. ಪತ್ನಿಯನ್ನು ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ತಿಳಿಸಿದರು.

4 ವರ್ಷದ ಬಳಿಕ ಆರೋಪಿ ಸೆರೆ

ಬೆಂಗಳೂರು: ಆರ್‌ಎಸ್‌ಎಸ್ ಕಾರ್ಯಕರ್ತ ವರುಣ್ ಅವರ ಕೊಲೆಗೆ ಯತ್ನಿಸಿದ್ದ ಪ್ರಕರಣದ ಆರೋಪಿ ಅಜರ್‌ನನ್ನು (41) 4 ವರ್ಷಗಳ ಬಳಿಕ ಪಶ್ಚಿಮ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

'ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಅಜರ್, ಪ್ರಕರಣ ದಾಖಲಾದ ನಂತರ ತಲೆಮರೆಸಿಕೊಂಡಿದ್ದ. ನಗರ ತೊರೆದು ದುಬೈಗೆ ಹೋಗಿದ್ದ. ಇತ್ತೀಚೆಗೆ ದುಬೈನಿಂದ ತನ್ನೂರಿಗೆ ಬಂದಿದ್ದ. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಆರೋಪಿಯನ್ನು ಬಂಧಿಸಲಾಗಿದ್ದು, ಸದ್ಯ ಈತ ಪೊಲೀಸ್ ಕಸ್ಟಡಿಯಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

'ಸಿಎಎ ಬೆಂಬಲಿಸಿ' ಸಂಸದ ತೇಜಸ್ವಿ ಸೂರ್ಯ ಹಾಗೂ ಚಕ್ರವರ್ತಿ ಸೂಲಿಬೆಲೆ ನೇತೃತ್ವದಲ್ಲಿ 2019ರ ಡಿ. 22ರಂದು ಪುರಭವನ ಎದುರು ಪ್ರತಿಭಟನೆ ನಡೆದಿತ್ತು. ಜೆ.ಪಿ. ನಗರದ ವರುಣ್, ಪ್ರತಿಭಟನೆ ಮುಗಿಸಿಕೊಂಡು ಮನೆಗೆ ಹೊರಟಿದ್ದರು. ಜೆ.ಸಿ.ರಸ್ತೆಯಲ್ಲಿ ವರುಣ್ ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವರುಣ್ ಚೇತರಿಸಿಕೊಂಡಿದ್ದರು' ಎಂದು ತಿಳಿಸಿದರು.

'ಏನೇ ಆದರೂ ನೀರು ಪೂರೈಸುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಡಿಯುವ ನೀರಿನ ವಿಚಾರದಲ್ಲಿ ಬಹಳ ಸಂದಿಗ್ಧ ಪರಿಸ್ಥಿತಿ ಎದುರಾಗಿದೆ. ಏನೇ ಆದರೂ ಬೆಂಗಳೂರಿಗೆ ನೀರು ಪೂರೈಸುತ್ತೇವೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಬರ ನಿರ್ವಹಣೆ ಪರಿಶೀಲನೆ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ಕುಡಿಯುವ ನೀರಿನ ಕೊರತೆ ನೀಗಿಸಲು ಹೊಸಕೋಟೆ, ರಾಮನಗರ, ಚನ್ನಪಟ್ಟಣ, ಮಾಗಡಿ, ರಾಮನಗರದಿಂದ ದೊಡ್ಡ ಟ್ಯಾಂಕರ್‌ನಲ್ಲಿ ನೀರು ತರಲು ಸೂಚಿಸಿದ್ದೇವೆ' ಎಂದರು.

'ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಾರದು ಎಂಬ ಕಾರಣಕ್ಕೆ ಮೇಕೆದಾಟು ಯೋಜನೆ ಆಗ್ರಹಿಸಿ ನಾವು ನೀರಿಗಾಗಿ ನಡಿಗೆ ಪಾದಯಾತ್ರೆ ಮಾಡಿದ್ದೆವು. ಕೇಂದ್ರ ಸರ್ಕಾರ ಈಗಲಾದರೂ ಮೇಕೆದಾಟು ಯೋಜನೆಗೆ ಅನುಮತಿ ನೀಡಿ ಸಮಸ್ಯೆಗೆ ಪರಿಹರಿಸಬೇಕು' ಎಂದು ಆಗ್ರಹಿಸಿದರು.

'ಬರ ಪರಿಸ್ಥಿತಿಯಿಂದ ಎದುರಾಗಿರುವ ನೀರಿನ ಅಭಾವ ನೀಗಿಸಲು ಮುಖ್ಯಮಂತ್ರಿ, ಕಂದಾಯ ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರು ಸೇರಿದಂತೆ ಎಲ್ಲ ಸಚಿವರು ಮತ್ತು ಅಧಿಕಾರಿಗಳು ಚರ್ಚೆ ಮಾಡಿದ್ದೇವೆ. ನಗರದಲ್ಲಿ ನೀರು ಲಭ್ಯ ಇಲ್ಲದೇ ಇದ್ದರೆ, 15 ಕಿ. ಮೀ ಸುತ್ತಮುತ್ತಲಿನ ಪ್ರದೇಶದಲ್ಲಿ ನೀರಿನ ಮೂಲಗಳನ್ನು ಬಳಸಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇವೆ' ಎಂದರು.

'ಕೆಲವು ಟ್ಯಾಂಕರ್‌ನವರು ನೀರು ಪೂರೈಕೆಗೆ ₹ 600, ಇನ್ನೂ ಕೆಲವರು ₹3 ಸಾವಿರಕ್ಕೂ ಹೆಚ್ಚು ಹಣ ಪಡೆಯುತ್ತಿದ್ದಾರೆ. ಹೀಗಾಗಿ, ನೀರು ಪೂರೈಸುವ ಟ್ಯಾಂಕರ್‌ಗಳನ್ನು ನೋಂದಣಿ ಮಾಡಿಕೊಳ್ಳಲು ತಿಳಿಸಿದ್ದೇವೆ. ಎಲ್ಲರೂ ನೋಂದಣಿ ಮಾಡಿಕೊಂಡ ನಂತರ ಎಲ್ಲವನ್ನೂ ಒಂದು ವ್ಯವಸ್ಥೆ ಮೂಲಕ ನೀಡಲಾಗುವುದು. ಎಷ್ಟು ದೂರದಿಂದ ನೀರು ತರಲಾಗಿದೆ ಎಂದು ನೋಡಿಕೊಂಡು ದರ ನಿಗದಿಪಡಿಸಲಾಗುವುದು' ಎಂದರು.

ನೀರಿನ ಟ್ಯಾಂಕರ್‌ಗಳನ್ನು ವಶಕ್ಕೆ ತೆಗೆದುಕೊಳ್ಳುವುದರಿಂದ ಕೆಲವು ಅಪಾರ್ಟ್‌ಮೆಂಟ್‌ಗಳ ನಿವಾಸಿಗಳಿಗೆ ಸಮಸ್ಯೆ ಆಗಬಹುದೆಂಬ ಆತಂಕದ ಬಗ್ಗೆ ಕೇಳಿದಾಗ, 'ಅಪಾರ್ಟ್‌ಮೆಂಟ್‌ಗಳಿಗೂ ನೀರು ಪೂರೈಸುತ್ತೇವೆ. ಅಪಾರ್ಟ್‌ಮೆಂಟ್‌ಗಳ ನಿವಾಸಿಗಳಾಗಲಿ, ಕೊಳಗೇರಿ ನಿವಾಸಿಗಳಾಗಲಿ ಎಲ್ಲರಿಗೂ ನೆರವಾಗುವುದು ನಮ್ಮ ಕರ್ತವ್ಯ' ಎಂದರು.

ನಗರದಲ್ಲಿ ಇಂದು

ಭಾರತೀಯ ಭಾಷಾ ಸಮ್ಮೇಳನ: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಶ್ರೀನಿವಾಸ ಎಸ್. ಬಳ್ಳಿ, ಆಶಯ ಭಾಷಣ: ಆಂಟೋನಿಯೋ ಪುನೀತಾ, ಆಯೋಜನೆ: ನೃಪತುಂಗ ವಿಶ್ವವಿದ್ಯಾಲಯ, ಭಾರತೀಯ ಶಿಕ್ಷಣ ಮಂಡಲ, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 9ರಿಂದ

ಬೆಂಗಳೂರಿನಿಂದ ಮೈಸೂರಿಗೆ ಶಾಂತಿ ನಡಿಗೆ: ಆಯೋಜನೆ: ಪ್ರಾಂತೀಯ ಟಿಬೆಟಿಯನ್ ಮಹಿಳಾ ಸಂಘ ಮುಂಡಗೋಡ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 9

'ಇಳೆಗೆ ಅಹಿಂಸಾವಾದಿನಿ ಶ್ರೀವಾಸವಿ' ಯಕ್ಷಗಾನ ಪ್ರದರ್ಶನ: ಆಯೋಜನೆ: ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10


'ಮಹಿಳೆ–ಭ್ರಮೆ ಮತ್ತು ವಾಸ್ತವ' ಕುರಿತ ವಿದ್ಯಾರ್ಥಿಗಳೊಂದಿಗೆ ಸಂವಾದ: ವಿಷಯ ಮಂಡನೆ: ಎಂ.ಎಸ್. ಆಶಾದೇವಿ, ಅತಿಥಿಗಳು: ಡಿ.ಎಸ್. ರಮೇಶ್, ಬಿ. ರಾಜಶೇಖರಮೂರ್ತಿ, ಉಪಸ್ಥಿತಿ: ಲೋಕೇಶ್ ಟಿ.ಎನ್., ಭ್ರಮರಿಪಾಂಡೆ, ಎಸ್.ಜಿ. ರಾಜಶೇಖರ, ಅಧ್ಯಕ್ಷತೆ: ಶೀಲಾಪ್ರಕಾಶ್, ಆಯೋಜನೆ: ಎನ್‌ಎಂಕೆಆರ್‌ವಿ ಪದವಿ ಪೂರ್ವ ಕಾಲೇಜು, ಜನ ಪ್ರಕಾಶನ, ಸ್ಥಳ: ಎನ್‌ಎಂಕೆಆರ್‌ವಿ ಪದವಿ ಪೂರ್ವ ಕಾಲೇಜು, ಜಯನಗರ, ಬೆಳಿಗ್ಗೆ 11.30

ಪದವಿ ದಿನಾಚರಣೆ: ಅತಿಥಿಗಳು: ಡಾ. ಚನ್ ಪೆಕ್ ಲುಯಿ, ಎಂ.ಆರ್. ಸಂಪಂಗಿರಾಮಯ್ಯ, ಎಂ.ಆರ್. ಆನಂದರಾಮ್, ಎಂ.ಆರ್. ಶ್ರೀನಿವಾಸಮೂರ್ತಿ, ಕೆ.ಕೆ. ರೈನಾ, ಒ.ಪಿ. ಕರಬಂದ, ವೆಂಕಟೇಶ್ ಜಿ.ಎಸ್., ಅಧ್ಯಕ್ಷತೆ: ಎಂ.ಆರ್. ಜಯರಾಂ, ಆಯೋಜನೆ ಮತ್ತು ಸ್ಥಳ: ರಾಮಯ್ಯ ವೈದ್ಯಕೀಯ ಕಾಲೇಜು, ರಾಮಯ್ಯ ವಿಶ್ವವಿದ್ಯಾಲಯ, ಸಂಜೆ 4

ಯುವ ಬರಹಗಾರರ ಚೊಚ್ಚಲ ಪುಸ್ತಕಗಳ ಬಿಡುಗಡೆ, ಶಾಲಾ–ಕಾಲೇಜುಗಳಿಗೆ ಉಚಿತ ಪುಸ್ತಕ ವಿಸ್ತರಣೆ: ಉದ್ಘಾಟನೆ: ಶಿವರಾಜ ತಂಗಡಗಿ, ಪುಸ್ತಕ ವಿತರಣೆ: ಗಿರೀಶ್ ರಾವ್ ಹತ್ವಾರ್ (ಜೋಗಿ), ಅತಿಥಿಗಳು: ಧರಣಿದೇವಿ ಮಾಲಗತ್ತಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

'370ನೇ ವಿಧಿ ರದ್ದು – ಭಯೋತ್ಪಾದನೆಗೆ ತಿರುಗೇಟು' ಕುರಿತ ಉಪನ್ಯಾಸ: ಗಗನ್‌ದೀಪ ಬಕ್ಷಿ, ಉಪಸ್ಥಿತಿ: ಪಿ. ಕೃಷ್ಣ ಭಟ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಕೆಆರ್‌ಜಿ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ಮುನಿಯಪ್ಪ ಅವರ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ' 'ಮಾಸ್ತಿ ಕನ್ನಡದ ಆಸ್ತಿ' ಪುಸ್ತಕಗಳ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಉಪಸ್ಥಿತಿ: ಜಯಕರ ಎಸ್.ಎಂ., ಅಧ್ಯಕ್ಷತೆ: ಡಿ. ಡೊಮಿನಿಕ್, ಪುಸ್ತಕಗಳ ಕುರಿತು: ಎಚ್. ದಂಡಪ್ಪ, ಎಲ್. ಎನ್. ಮುಕುಂದರಾಜ್, ಅತಿಥಿಗಳು: ಶೇಖ್ ಲತೀಫ್, ಎನ್. ಶ್ರೀನಿವಾಸ್, ಆಯೋಜನೆ: ಪ್ರೊ. ಮುನಿಯಪ್ಪ ಶಿಷ್ಯ ಬಳಗ, ಸ್ಥಳ: ಪ್ರೊ. ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣ, ಬೆಳಿಗ್ಗೆ 11



ಬರಗೂರು ರಾಮಚಂದ್ರಪ್ಪ


ಬುಧವಾರ, ಮಾರ್ಚ್ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 66 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಎಫ್‌ಎಸ್‌ಎಲ್ ವರದಿ ಏನು, ಎತ್ತ...

'ಯುವ ನಾಯಕರೆಂದರೆ 'ಕೈ'ಗೆ ಭಯ' 6

ಸಾಯಿಬಾಬಾ ದೋಷಮುಕ್ತ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,677 ▲	22,356 ▲	₹66,320 (ಬೆಂಗಳೂರು) ▲	₹73,400 (ಬೆಂಗಳೂರು) ▲	82.90

ಜಿಲ್ಲಾ ಉಸ್ತುವಾರಿ ಸಚಿವರು, ಡಿ.ಸಿ, ಸಿ.ಇ.ಒಗಳ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ

ಬರ ಎದುರಿಸಲು ಸಿದ್ಧತೆ ಭರಪೂರ

ಪ್ರಜಾವಾಣಿ ವಾರ್ತೆ

223	194	98
ಬರಪೀಡಿತವೆಂದು ಘೋಷಿಸಿದ ತಾಲ್ಲೂಕುಗಳು	ತೀವ್ರ ಬರ ಎದುರಿಸುತ್ತಿರುವ ತಾಲ್ಲೂಕುಗಳು	ಸದ್ಯ ಕುಡಿಯುವ ನೀರಿನ ಸಮಸ್ಯೆ ಇರುವ ತಾಲ್ಲೂಕುಗಳು

ಮುಂದಿನ 3 ತಿಂಗಳ ಮುನ್ಸೂಚನೆ

7,408	1,115
ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದಾದ ಹಳ್ಳಿಗಳು	ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದಾದ ವಾರ್ಡ್‌ಗಳು

₹854 ಕೋಟಿ ಎಲ್ಲ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿರುವ ಒಟ್ಟು ಹಣ

ಬೆಂಗಳೂರು: ರಾಜ್ಯದಲ್ಲಿ ಬರಪರಿಸ್ಥಿತಿ ಗಂಭೀರವಾಗಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ತೀವ್ರವಾಗಬಹುದು. ಹೀಗಾಗಿ, ಕುಡಿಯುವ ನೀರಿನ ಸಮಸ್ಯೆಯೂ ಸೇರಿ ಯಾವುದೇ ಸಂಕಷ್ಟದ ಸ್ಥಿತಿಯನ್ನು ಎದುರಿಸಲು ಸರ್ಕಾರ ಸಿದ್ಧತೆ ನಡೆಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜತೆ ಬರದ ಸ್ಥಿತಿಯನ್ನು ಸಮರೋಪಾದಿಯಲ್ಲಿ ನಿರ್ವಹಿಸುವುದಕ್ಕೆ ಸಂಬಂಧಿಸಿ ಮಂಗಳವಾರ ವಿಡಿಯೊ ಸಂವಾದ ನಡೆಸಿ, ಹಲವು ಸಲಹೆ ಸೂಚನೆಗಳನ್ನು ನೀಡಿದರು.

ಬರಪೀಡಿತವೆಂದು ಘೋಷಿಸಿದ 223 ತಾಲ್ಲೂಕುಗಳ ಪೈಕಿ, 194 ತಾಲ್ಲೂಕುಗಳು ತೀವ್ರ ಬರ ಎದುರಿಸುತ್ತಿವೆ. ಮುಂದಿನ ಮೂರು ತಿಂಗಳಲ್ಲಿ ಸುಮಾರು 7,408 ಹಳ್ಳಿಗಳು ಹಾಗೂ 1,115 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಅಭಾವ ಎದುರಾಗಬಹುದು ಎಂದು ಸರ್ಕಾರ ಅಂದಾಜಿಸಿದೆ. ಅಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು. 'ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆ ಆಗಬಾರದು. ಎಷ್ಟೇ ಹಣ ಖರ್ಚಾದರೂ ನೀಡಲಾಗುವುದು' ಎಂದು ಅಧಿಕಾರಿಗಳಿಗೆ ಸಿದ್ದರಾಮಯ್ಯ ತಿಳಿಸಿದರು.

ವಿಡಿಯೊ ಸಂವಾದದ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಮುಖ್ಯಮಂತ್ರಿ, 'ರಾಜ್ಯದಲ್ಲಿ ಮುಂದಿನ ಮೂರು ತಿಂಗಳುಗಳಲ್ಲಿ ಎದುರಾಗಬಹುದಾದ ತೀವ್ರ ಬರಗಾಲವನ್ನು ನಿಭಾಯಿಸಲು ಸಂಪೂರ್ಣ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಹಾಯವಾಣಿ ಮತ್ತು ನಿಯಂತ್ರಣ ಕೊಠಡಿ ಸ್ಥಾಪಿಸಲು ಸೂಚಿಸಲಾಗಿದೆ. ಬರ ಪರಿಹಾರಕ್ಕೆ ಅನುದಾನದ ಕೊರತೆ ಇಲ್ಲ' ಎಂದರು.

'ಕುಡಿಯುವ ನೀರಿಗೆ ತೊಂದರೆ ಆಗಬಹುದೆಂದು ಅಂದಾಜಿಸಿರುವ ಕಡೆಗಳಲ್ಲಿ ಸಮಸ್ಯೆ ಬಗೆಹರಿಸಲು ಯೋಜನೆ ರೂಪಿಸಲಾಗಿದೆ. ಖಾಸಗಿ ಕೊಳವೆಬಾವಿಗಳ ಮಾಲೀಕರ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮ ತೆಗೆದುಕೊಳ್ಳಲಾಗಿದೆ. ವಾಚಕರ ವಾಣಿ, ಸಾಮಾಜಿಕ ಜಾಲತಾಣಗಳಲ್ಲಿನ ವರದಿಗಳನ್ನು ಕಟ್ಟುನಿಟ್ಟಾಗಿ ಗಮನಿಸಿ, ಪರಿಹಾರ ನೀಡುವಂತೆಯೂ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ವಿವರಿಸಿದರು.

5ನೇ ಪುಟ ನೋಡಿ

ರೈತರಿಗೆ ಪರಿಹಾರ ನೀಡಿದ ರಾಜ್ಯ

ಈವರೆಗೆ 33.25 ಲಕ್ಷ ರೈತರಿಗೆ ₹631.13 ಕೋಟಿ ತಾತ್ಕಾಲಿಕ ಪರಿಹಾರ (₹2 ಸಾವಿರದಂತೆ) ನೀಡಲಾಗಿದೆ. ವಿಮೆ ಸಂಸ್ಥೆಗಳ ಮೂಲಕ ₹600 ಕೋಟಿ ಬೆಳೆ ವಿಮೆ ಪರಿಹಾರವನ್ನು ಸರ್ಕಾರ ಇತ್ಯರ್ಥಪಡಿಸಿದೆ. ಬೆಳೆ ವಿಮೆಯಾಗಿ ರೈತರಿಗೆ ಇನ್ನೂ ₹800 ಕೋಟಿ ಪಾವತಿಯಾಗುವ ನಿರೀಕ್ಷೆ ಇದೆ ಎಂದು ಮುಖ್ಯಮಂತ್ರಿ ತಿಳಿಸಿದರು.


'ಜಪ್ಪಯ್ಯ ಅಂದರೂ ಕೇಂದ್ರ ಕೊಡುತ್ತಿಲ್ಲ': ₹18,172 ಕೋಟಿ ಬರ ಪರಿಹಾರ ಕೋರಿ ಮನವಿ ಸಲ್ಲಿಸಿದ್ದರೂ, ಕೇಂದ್ರ ಸರ್ಕಾರ ಬಿಡಿಗಾಸೂ ನೀಡಿಲ್ಲ. ಪ್ರಧಾನಿ ಭೇಟಿಗೆ ಬಿಜೆಪಿ ನಾಯಕರ ನೇತೃತ್ವದಲ್ಲಿಯೇ ನಿಯೋಗ ಹೋಗೋಣವೆಂದರೂ ಬಿಜೆಪಿ ನಾಯಕರ ಉತ್ತರವಿಲ್ಲ. ಕೇಂದ್ರ ಸರ್ಕಾರ ಜಪ್ಪಯ್ಯ ಅಂದರೂ ಒಂದು ರೂಪಾಯಿಯೂ ನೀಡುತ್ತಿಲ್ಲ. ಪರಿಹಾರ ನೀಡಿಲ್ಲ ಎನ್ನಲೂ ನಮಗೆ ಸ್ವಾತಂತ್ರ್ಯವಿಲ್ಲವೇ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಸಿ.ಎಂ ಕಚೇರಿಗೂ ಟ್ಯಾಂಕರ್ ನೀರು

ಬೆಂಗಳೂರಿನ ಹಲವೆಡೆ ನೀರಿನ ಸಮಸ್ಯೆ ಉಲ್ಬಣಗೊಂಡಿದ್ದು, ಕುಮಾರ ಕೃಪಾ ರಸ್ತೆಯಲ್ಲಿರುವ ಮುಖ್ಯಮಂತ್ರಿಯ ಗೃಹ ಕಚೇರಿ 'ಕೃಷ್ಣಾ'ಕ್ಕೂ ನೀರಿನ ಸಮಸ್ಯೆ ಎದುರಾಗಿದೆ. ಜಲಮಂಡಳಿಯ ಟ್ಯಾಂಕರ್ ಮೂಲಕ ಕೃಷ್ಣಾಕ್ಕೆ ನೀರು ಪೂರೈಸಲಾಗಿದೆ. ಬರ ನಿರ್ವಹಣೆಗೆ ಸಂಬಂಧಿಸಿ ಮಂಗಳವಾರ ನಡೆದ ಸಭೆಗೂ ಮೊದಲು ಟ್ಯಾಂಕರ್‌ನಲ್ಲಿ ನೀರು ಪೂರೈಕೆ ಮಾಡಲಾಯಿತು.

ಬರಗಾಲ ಬಂದಾಗ ನರೇಗಾ ಅಡಿ ಮಾನವ ದಿನಗಳನ್ನು 150 ದಿನಗಳಿಗೆ ಹೆಚ್ಚಿಸಲು ಅವಕಾಶವಿದೆ. ಈ ಬಗ್ಗೆ ಕೇಂದ್ರಕ್ಕೆ ಮನವಿ ಮಾಡಿದ್ದರೂ ಹೆಚ್ಚಿಸಿಲ್ಲ. ಕೆಲಸದ ಹಣವನ್ನೂ ಪಾವತಿಸಿಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ



ಶಿವನ ಸ್ಮರಣೆ ಪುಣೆಯ ವೀರ್ ಗ್ರಾಮದಲ್ಲಿ ಮಂಗಳವಾರ ನಡೆದ 'ಶ್ರೀನಾಥ್ ವೀರ್ ಮಹಸ್ಕೋಬಾ' ಹಬ್ಬದಂದು ಅಸಂಖ್ಯಾತ ಭಕ್ತರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಡಿಕೆಶಿ ವಿರುದ್ಧದ ಇ.ಡಿ. ಪ್ರಕರಣ ರದ್ದುಗೊಳಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್) ಅಡಿ ದಾಖಲಿಸಿರುವ ಪ್ರಕರಣವನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 120–'ಬಿ' (ಅಪರಾಧಿಕ ಒಳಸಂಚು) ಅನುಸಾರ ಈ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣದಲ್ಲಿ ಇ.ಡಿ ನೀಡಿದ್ದ ಸಮನ್ಸ್ ರದ್ದುಪಡಿಸಲು ನಿರಾಕರಿಸಿದ್ದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಶಿವಕುಮಾರ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಕೆ.ವಿ.ವಿಶ್ವನಾಥನ್ ಅವರಿದ್ದ ದ್ವಿಸದಸ್ಯ ಪೀಠವು ಪ್ರಕರಣದ ವಿಚಾರಣೆ ನಡೆಸಿ, ಹೈಕೋರ್ಟ್ ಆದೇಶವನ್ನು ಅನೂರ್ಜಿತಗೊಳಿಸಿದೆ. ಶಿವಕುಮಾರ್ ಹಾಗೂ ದೆಹಲಿ ಕರ್ನಾಟಕ ಭವನದ ಸಿಬ್ಬಂದಿ ಆಂಜನೇಯ ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿಗಳನ್ನು ಪುರಸ್ಕರಿಸಿದೆ.

5ನೇ ಪುಟ ನೋಡಿ

ಪ್ರಕರಣದ ಮೂಲ

ಡಿ.ಕೆ.ಶಿವಕುಮಾರ್ ಮತ್ತು ಅವರ ಆಪ್ತರಿಗೆ ಸೇರಿರುವ ದೆಹಲಿಯ ಆರ್.ಕೆ.ಪುರಂ ಮನೆ, ಸಫ್ದರ್‌ಜಂಗ್ ಎನ್‌ಕ್ಲೇವ್ ಫ್ಲ್ಯಾಟ್‌ಗಳಿಂದ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ವಶಪಡಿಸಿಕೊಂಡಿರುವ ₹8.60 ಕೋಟಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಈ ಹಣವನ್ನು ಬೆಂಗಳೂರಿನಿಂದ ಹವಾಲಾ ಮಾರ್ಗದಲ್ಲಿ ಕಳಿಸಲಾಗಿದೆ ಎಂದೂ ದೂರಲಾಗಿತ್ತು. ಕೋಟ್ಯಂತರ ರೂಪಾಯಿ ತೆರಿಗೆ ವಂಚನೆ ಮತ್ತು ಹವಾಲಾ ವಹಿವಾಟು ನಡೆಸಿದ ಆರೋಪದಲ್ಲಿ ಶಿವಕುಮಾರ್ ವಿರುದ್ಧ ಐ.ಟಿ. ಇಲಾಖೆಯು 2018ರಲ್ಲಿ ಬೆಂಗಳೂರಿನ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿತ್ತು. ತಮ್ಮ ಸಹವರ್ತಿ ಎಸ್.ಕೆ. ಶರ್ಮ ಜತೆ ಸೇರಿ ಅವರು ಲೆಕ್ಕಪತ್ರವಿಲ್ಲದ ಭಾರಿ ಮೊತ್ತವನ್ನು ಅಕ್ರಮವಾಗಿ ಸಾಗಿಸಿದ್ದಾರೆ ಎಂದು ಆರೋಪಿಸಲಾಗಿತ್ತು. ಇದಕ್ಕೆ ಇತರ ಮೂವರು ಸಹಕರಿಸಿದ್ದರು ಎಂದೂ ಹೇಳಲಾಗಿತ್ತು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸ್ಫೋಟ: ಮಂಗಳೂರು, ಶಿವಮೊಗ್ಗದಲ್ಲಿ ವಿಚಾರಣೆ 06

ಶಹಜಹಾನ್ ವಶಕ್ಕೆ ಪಡೆಯಲು ಸಿಬಿಐ ವಿಫಲ

ನವದೆಹಲಿ/ಕೋಲ್ಕತ್ತ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ಸಂದೇಶ್‌ಖಾಲಿಯಲ್ಲಿ ನಡೆದ ದಾಳಿ ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಬೇಕು ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಕಲ್ಕತ್ತ ಹೈಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಅಲ್ಲದೇ, ಪ್ರಕರಣದ ಪ್ರಮುಖ ಆರೋಪಿ, ಟಿಎಂಸಿಯಿಂದ ಅಮಾನತುಗೊಂಡಿರುವ ಶಹಜಹಾನ್ ಶೇಖ್ ಅವರನ್ನು ಸಿಬಿಐ ವಶಕ್ಕೆ ಒಪ್ಪಿಸಬೇಕು ಎಂದೂ ಹೈಕೋರ್ಟ್ ನಿರ್ದೇಶನ ನೀಡಿದೆ.

ಆದರೆ, ಶಹಜಹಾನ್ ಶೇಖ್ ಅವರನ್ನು ವಶಕ್ಕೆ ಪಡೆಯಲು ಸಿಬಿಐ ವಿಫಲವಾಯಿತು.

ಹೈಕೋರ್ಟ್ ಆದೇಶ ನೀಡಿದ ಬೆನ್ನಲ್ಲೇ, ಶಹಜಹಾನ್ ಶೇಖ್ ಅವರನ್ನು ವಶಕ್ಕೆ ಪಡೆಯುವುದಕ್ಕಾಗಿ ಸಿಬಿಐ ಅಧಿಕಾರಿಗಳಿದ್ದ ಒಂದು ತಂಡ ಸಿಆರ್‌ಪಿಎಫ್ ಸಿಬ್ಬಂದಿಯೊಂದಿಗೆ ಕೋಲ್ಕತ್ತದ ಭವಾನಿ ಭವನದಲ್ಲಿರುವ ಸಿಐಡಿ ಕೇಂದ್ರ ಕಚೇರಿಗೆ ತೆರಳಿತು.

ರಾತ್ರಿ 7.30ರ ವರೆಗೆ ಕಾದ ಸಿಬಿಐ ತಂಡ, ಬರಿಗೈಲಿ ವಾಪಸಾಯಿತು. 'ಹೈಕೋರ್ಟ್ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಹೀಗಾಗಿ, ಶೇಖ್ ಅವರನ್ನು ಸಿಬಿಐಗೆ ಹಸ್ತಾಂತರಿಸಿಲ್ಲ' ಎಂದು ಸಿಐಡಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸತ್ಯಮೇವ ಜಯತೆ, ಕಲ್ಕತ್ತ ಹೈಕೋರ್ಟ್ ಆದೇಶ ಬಿಜೆಪಿಯ ನಿಲುವನ್ನು ಸಮರ್ಥಿಸಿದೆ

ಶೆಹಜಾದ್ ಪೂನಾವಾಲಾ, ಬಿಜೆಪಿ ವಕ್ತಾರ

ಇನ್ನೊಂದೆಡೆ, ಪ್ರಕರಣದ ತನಿಖೆಯನ್ನು ವಹಿಸಿಕೊಳ್ಳುವುದಕ್ಕಾಗಿ ಸಿಬಿಐ ಅಧಿಕಾರಿಗಳು ಪಶ್ಚಿಮ ಬಂಗಾಳ ಪೊಲೀಸರನ್ನು ಸಂಪರ್ಕಿಸಿದರು.



ಈ ಬೆಳವಣಿಗೆ ಬೆನ್ನಲ್ಲೇ, ಕಲ್ಕತ್ತ ಹೈಕೋರ್ಟ್ ಆದೇಶ ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತು.

ಅರ್ಜಿಯ ತುರ್ತು ವಿಚಾರಣೆ ನಡೆಸುವಂತೆ ಪಶ್ಚಿಮ ಬಂಗಾಳ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತ ಅವರಿದ್ದ ನ್ಯಾಯಪೀಠಕ್ಕೆ ಮನವಿ ಮಾಡಿದರು.

ತುರ್ತು ವಿಚಾರಣೆಗೆ ನಿರಾಕರಿಸಿದ ನ್ಯಾಯಪೀಠ, ಅರ್ಜಿಯನ್ನು ವಿಚಾರಣೆ ಪಟ್ಟಿಗೆ ಸೇರಿಸುವ ಸಂಬಂಧ, ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರಿಗೆ ಮನವಿ ಸಲ್ಲಿಸುವಂತೆ ಸಿಂಘ್ವಿ ಅವರಿಗೆ ಸೂಚಿಸಿತು.

ಪ್ರತ್ಯೇಕ ಅರ್ಜಿ: ಜನವರಿ 5ರಂದು ಸಂದೇಶ್‌ಖಾಲಿಯಲ್ಲಿ ಇ.ಡಿ ಅಧಿಕಾರಿಗಳ ಮೇಲೆ ಹಲ್ಲೆ ನಡೆದಿತ್ತು.

11ನೇ ಪುಟ ನೋಡಿ

ಸ್ಫೋಟಕ್ಕೆ ಸಂಚು: ಏಳು ರಾಜ್ಯಗಳಲ್ಲಿ ಎನ್‌ಐಎ ಶೋಧ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ 'ಲಷ್ಕರ್‌–ಎ–ತಯಬಾ' ನಿಷೇಧಿತ ಸಂಘಟನೆಯ ಶಂಕಿತ ಉಗ್ರರು ಬಾಯ್ಬಿಟ್ಟ ಮಾಹಿತಿ ಆಧರಿಸಿ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ದೇಶದ 7 ರಾಜ್ಯಗಳ 17 ಸ್ಥಳಗಳಲ್ಲಿ ಮಂಗಳವಾರ ದಾಳಿ ಮಾಡಿದರು.

ಕರ್ನಾಟಕ, ತಮಿಳುನಾಡು, ತೆಲಂಗಾಣ, ಪಂಜಾಬ್, ಕೇರಳ, ಗುಜರಾತ್ ಹಾಗೂ ಪಶ್ಚಿಮ ಬಂಗಾಳದಲ್ಲಿ ಎನ್‌ಐಎ ದಾಳಿ ನಡೆದಿದೆ. 25 ಮೊಬೈಲ್, 6 ಲ್ಯಾಪ್‌ಟಾಪ್, 4 ಹಾರ್ಡ್‌ಡಿಸ್ಕ್, ನಗದು, ವಿವಿಧ ದೇಶಗಳ ಕರೆನ್ಸಿ ನೋಟುಗಳು ಹಾಗೂ ಇತರೆ ದಾಖಲೆಗಳನ್ನು ಎನ್‌ಐಎ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ಬೆಂಗಳೂರಿನ ಸೈಯದ್ ಕೈಲ್, ದಕ್ಷಿಣ ಕನ್ನಡದ ನವೀದ್ ಮತ್ತು ಬಿಜ್ಜು, ಪಶ್ಚಿಮ ಬಂಗಾಳದ ಮಯೂರ್ ಚಕ್ರವರ್ತಿ, ಪಂಜಾಬ್‌ನ ನವಜೋತ್ ಸಿಂಗ್, ಗುಜರಾತ್‌ನ ಹಾರ್ದಿಕ್ ಕುಮಾರ್, ಕರಣ್‌ಕುಮಾರ್, ಕೇರಳದ ಜಾನ್ಸನ್, ತಮಿಳುನಾಡಿನ ಮುಸ್ತಾಕ್ ಅಹ್ಮದ್ ಸತೀಕ್ ಅಲಿ, ಮೊಬಿತ್, ಹಸನ್ ಅಲ್ ಬಸ್ಸಮ್‌ಗೆ ಸೇರಿದ್ದ ಸ್ಥಳಗಳಲ್ಲಿ ಶೋಧ ಮಾಡ ಲಾಗಿದೆ. ಇದರಲ್ಲಿ ಕೆಲವರನ್ನು ವಶಕ್ಕೆ ಪಡೆಯಲಾಗಿದೆ. ಹಲವರನ್ನು ವಿಚಾರಣೆಗೆ ಕರೆಯಲಾಗಿದೆ. ಕೆಲವರು ತಲೆಮರೆಸಿ ಕೊಂಡಿದ್ದಾರೆ' ಎಂದು ಎನ್‌ಐಎ ತಿಳಿಸಿದೆ.

3B ಪುಟ ನೋಡಿ

ಜೈಲಿನಲ್ಲಿ ವಿಚಾರಣೆ

ಕೆಫೆ ಬಾಂಬ್ ಸ್ಫೋಟ ಹಾಗೂ ಬಾಂಬ್ ಸ್ಫೋಟಕ್ಕೆ ಸಂಚು ಎರಡೂ ಪ್ರಕರಣದ ತನಿಖೆ ನಡೆಸುತ್ತಿರುವ ಎನ್‌ಐಎ ಅಧಿಕಾರಿಗಳ ತಂಡಗಳು, ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಸೋಮವಾರ (ಮಾ. 4) ಭೇಟಿ ನೀಡಿದವು.

'ಶಂಕಿತ ಉಗ್ರ ಟಿ. ನಾಸೀರ್ ಹಾಗೂ ಇತರೆ ಶಂಕಿತರನ್ನು ಎನ್‌ಐಎ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು. ಪ್ರಕರಣ ಸಂಬಂಧ ಕೆಲ ಪುರಾವೆಗಳನ್ನು ಸಂಗ್ರಹಿಸಿದರು. ಇದೇ ಮಾಹಿತಿ ಆಧಾರದಲ್ಲಿ ಮಂಗಳವಾರ ದಾಳಿ ಮಾಡಿದ್ದಾರೆ. ದೇಶದಲ್ಲಿ ಬಾಂಬ್ ಸ್ಫೋಟ ಮಾಡಲು ಶಂಕಿತ ಉಗ್ರರು ಸಂಚು ರೂಪಿಸಿದ್ದ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿದ್ದಾರೆ' ಎಂದು ಮೂಲಗಳು ಹೇಳಿವೆ. 'ಸ್ಫೋಟಕ್ಕೆ ಸಂಚು ಪ್ರಕರಣದಲ್ಲಿ ಶಂಕಿತರ ಬಳಿ 7 ನಾಡ ಪಿಸ್ತೂಲ್, 45 ಗುಂಡುಗಳು, 4 ವಾಕಿಟಾಕಿ ಮಾದರಿಯ ಟ್ರಿಗರ್, 12 ಮೊಬೈಲ್, ಡ್ಯಾಗರ್ ಹಾಗೂ 4 ಗ್ರೆನೇಡ್‌ಗಳು ಪತ್ತೆಯಾಗಿದ್ದವು. ಇವುಗಳ ಬಗ್ಗೆಯೂ ಅಧಿಕಾರಿಗಳು ವಿಚಾರಣೆ ನಡೆಸಿದ್ದರು' ಎಂದು ಮೂಲಗಳು ತಿಳಿಸಿವೆ.

ಬಂಡಾಯದ ನಾಡು ನರಗುಂದದಲ್ಲಿ ಭಾವೈಕ್ಯದ ಚೆಂಬೆಳಕು

ಹಿರೇಮಠಕ್ಕೆ ಮುಸ್ಲಿಂ ಟ್ರಸ್ಟ್‌ನಿಂದ ತೇರು



₹30 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ತೇರು

• ಬಸವರಾಜ ಹಲಕುರ್ಕಿ

ಒಳ್ಳೆ ಸುದ್ದಿ

ನರಗುಂದ (ಗದಗ ಜಿಲ್ಲೆ): ಐತಿಹಾಸಿಕ ಪಂಚಗ್ರಹ ಗುಡ್ಡದ ಹಿರೇಮಠದ ಸಿದ್ದೇಶ್ವರ ಜಾತ್ರೆಗೆ ಪಟ್ಟಣದ ಇಮಾಮ್‌ಸಾಹೇಬ ಮಹ್ಮದಸಾಬ ಶರಣರ ಸೇವಾ ಟ್ರಸ್ಟ್ ಸದಸ್ಯರು ₹30 ಲಕ್ಷ ವೆಚ್ಚದಲ್ಲಿ ನೂತನ ತೇರು ನಿರ್ಮಿಸಿಕೊಟ್ಟಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಪಟ್ಟಣದ ಮೆಹಬೂಬ್ ಸುಬಾನಿ ದರ್ಗಾದ ಬಾಬು ಅಜ್ಜನವರು ಪಂಚಪೀಠಾಧೀಶ್ವರರಲ್ಲಿ ಒಬ್ಬರಾದ ಉಜ್ಜಯನಿ ಜಗದ್ಗುರು ಸಮ್ಮುಖದಲ್ಲಿ ಹಿರೇಮಠಕ್ಕೆ ನೂತನ ತೇರು ನಿರ್ಮಿಸಿಕೊಡುವ ಪ್ರಸ್ತಾಪ ಮಾಡಿದ್ದರು. ಆದರೆ, ಕೋವಿಡ್ ಸಾಂಕ್ರಾಮಿಕದ ಕಾರಣಗಳಿಂದ ಅದು ಸಾಧ್ಯವಾಗಿರಲಿಲ್ಲ.

2023ರಲ್ಲಿ ಮತ್ತೆ ಉಜ್ಜಯನಿ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವದಲ್ಲಿ ನೂತನ ತೇರಿನ ನಿರ್ಮಾಣದ ಪ್ರಸ್ತಾಪವಾದಾಗ ಬಾಬುಸಾಬ ಶರಣರು, 'ಒಂದು ವರ್ಷದೊಳಗೆ ನೂತನ ತೇರನ್ನು ಸೇವಾ ಟ್ರಸ್ಟ್ ಮೂಲಕ ನಿರ್ಮಿಸಿಕೊಡಲಾಗುವುದು' ಎಂದು ಹೇಳಿದ್ದರು. ಅದರಂತೆ ಈಗ ರಥ ನಿರ್ಮಿಸಿಕೊಟ್ಟಿದ್ದಾರೆ.

ಇಡಗುಂಜಿ ಗಣಪತಿ ದೇವಸ್ಥಾನದ ಪ್ರಧಾನ ರಥಶಿಲ್ಪಿ ಮೂಲಕ 25 ಅಡಿ ಎತ್ತರದ ರಥ ನಿರ್ಮಿಸಲಾಗಿದೆ. ಮುಸ್ಲಿಂ ಶರಣರು ರಥದ ನಿರ್ಮಾಣದ ನೇತೃತ್ವ ವಹಿಸಿಕೊಂಡಿದ್ದರೂ ವೀರಶೈವ ಲಿಂಗಾಯತ ಧರ್ಮದ ಸಂಪ್ರದಾಯದಂತೆ ರಥ ಸಿದ್ಧಗೊಂಡಿರುವುದು ವಿಶೇಷವಾಗಿದೆ.

ಮಾರ್ಚ್ 7ರಂದು ಮೆಹಬೂಬ್ ಸುಬಾನಿ ದರ್ಗಾದಿಂದ ಪಂಚಗ್ರಹ ಗುಡ್ಡದ ಹಿರೇಮಠದವರೆಗೆ ರಥದ ಮೆರವಣಿಗೆ ನಡೆಯಲಿದೆ. ನಂತರ, ನೂತನ ರಥಕ್ಕೆ ಐದು ದಿನಗಳ ಕಾಲ ಧಾರ್ಮಿಕ ವಿಧಿವಿಧಾನಗಳು ನಡೆಯಲಿವೆ. ಮಾರ್ಚ್ 11ರಂದು ಉಜ್ಜಯಿನಿ ಜಗದ್ಗುರುಗಳ ಸಮ್ಮುಖದಲ್ಲಿ ರಥೋತ್ಸವ ನಡೆಯಲಿದೆ.



ಇಮಾಮ್‌ಸಾಹೇಬ ಮಹ್ಮದಸಾಬ ಶರಣರ ಸೇವಾ ಟ್ರಸ್ಟ್ ಮೂಲಕ ಬಾಬುಸಾಬ ಅಜ್ಜನವರು ತೇರು ನಿರ್ಮಿಸಿಕೊಟ್ಟು ಭಾವೈಕ್ಯ ಮೆರೆದಿದ್ದಾರೆ

ಸಿದ್ದಲಿಂಗ ಶಿವಾಚಾರ್ಯರು, ಪಂಚಗ್ರಹ ಗುಡ್ಡದ ಹಿರೇಮಠ, ನರಗುಂದ



ಆ ಧರ್ಮ, ಈ ಧರ್ಮ ಎನ್ನದೇ ಇದು ಸರ್ವಧರ್ಮದವರಿಂದ ನಿರ್ಮಾಣಗೊಂಡಿರುವ ರಥವಾಗಿದೆ. ಭಾವೈಕ್ಯದತ್ತ ಸಾಗಲು ನಾಂದಿ ಹಾಡಿದೆ

ಬಾಬು ಅಜ್ಜನವರು, ಮೆಹಬೂಬ್ ಸುಬಾನಿ ದರ್ಗಾ, ನರಗುಂದ

ವೈಚಾರಿಕತೆ ಬೆಳೆಸಿಕೊಳ್ಳಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ವೈಚಾರಿಕತೆ, ವೈಜ್ಞಾನಿಕತೆ ಬೆಳೆಸಿಕೊಳ್ಳಬೇಕು. ಜ್ಞಾನದ ವಿಕಾಸ ಆಗಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ ವತಿಯಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ಬಲವರ್ಧನೆ ಕಾರ್ಯಕ್ರಮ 'ನಮ್ಮ ಶಾಲೆ ನಮ್ಮ ಜವಾಬ್ದಾರಿ'ಗೆ ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.



ಸಿದ್ದರಾಮನಹುಂಡಿ ಮತ್ತು ಕುಪ್ಪೇಗಾಲ ಸರ್ಕಾರಿ ಶಾಲೆಯ ಮಕ್ಕಳ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂವಾದ ನಡೆಸಿದರು

ತಮ್ಮ ಗೃಹ ಕಚೇರಿಗೆ ಬಂದ, ತಾವು ಓದಿದ ಸಿದ್ದರಾಮನಹುಂಡಿ ಮತ್ತು ಕುಪ್ಪೇಗಾಲ ಸರ್ಕಾರಿ ಶಾಲೆಯ ಮಕ್ಕಳ ಜೊತೆ ಮುಖ್ಯಮಂತ್ರಿ ಸಂವಾದ ನಡೆಸಿದರು. 'ಸಂವಿಧಾನವನ್ನು ಅರಿತು ಕೊಳ್ಳಬೇಕು' ಎಂದ ಮುಖ್ಯಮಂತ್ರಿ, 'ಸಂವಿಧಾನ ಏನು ಹೇಳುತ್ತದೆ? ಹೇಳಿ ನೋಡೋಣ' ಎಂದು ಮಕ್ಕಳನ್ನು ಪ್ರಶ್ನಿಸಿದರು. ಆಗ ಮಕ್ಕಳು ಸಂವಿಧಾನದ ಪೂರ್ಣ ಪೀಠಿಕೆ ಹೇಳಿದರು.

₹ 10 ಲಕ್ಷ ದೇಣಿಗೆ: ತಾವು ಓದಿದ ಕುಪ್ಪೇಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸಿದ್ದರಾಮನಹುಂಡಿಯ ಕೆಪಿಎಸ್ ಶಾಲೆಗೆ ಮುಖ್ಯಮಂತ್ರಿ ₹ 10 ಲಕ್ಷ ದೇಣಿಗೆ ನೀಡಿದರು.

₹6 ಕೋಟಿ ಸಂಗ್ರಹ

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, 'ಶಾಲೆಯ ಹಳೆ ವಿದ್ಯಾರ್ಥಿಗಳು ₹ 6 ಕೋಟಿ ನೀಡಿದ್ದಾರೆ. ಮಾಲೂರಿನಲ್ಲಿಯೂ ಹಳೆ ವಿದ್ಯಾರ್ಥಿಗಳು ₹ 6 ಕೋಟಿ ಸಂಗ್ರಹಿಸಿದ್ದಾರೆ. ಸಾಮಾಜಿಕ ಕಳಕಳಿ ಇರುವವರು ಮಕ್ಕಳಿಗೆ ಪಾಠವನ್ನೂ ಮಾಡಿದ್ದಾರೆ. 48 ಸಾವಿರ ಸರ್ಕಾರಿ ಶಾಲೆಗಳಲ್ಲಿ 14 ಸಾವಿರ ವಾಟ್ಸ್ಆ್ಯಪ್ ಗುಂಪುಗಳಾಗಿವೆ. ಸರ್ಕಾರಿ ಶಾಲೆಗಳ ಅಭಿವೃದ್ಧಿ ಕುರಿತು ದೊಡ್ಡ ಗುರಿ ಇದೆ. ಶಾಲೆಗಳ ಅಭಿವೃದ್ಧಿಗೆ ₹ 44 ಸಾವಿರ ಕೋಟಿ ಮೀಸಲಿರಿಸಲಾಗಿದೆ. ಸಿಎಸ್‌ಆರ್ ನಿಧಿಯಿಂದಲೂ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ' ಎಂದರು.

ಅತ್ಯಾಚಾರ: 5 ಆರೋಪಿಗಳ ಬಂಧನ

ನವದೆಹಲಿ (ಎಎಫ್‌ಪಿ): ಸ್ಪೇನ್ ಪ್ರವಾಸಿ ಮೇಲೆ ಅತ್ಯಾಚಾರ ಪ್ರಕರಣದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಇದರೊಂದಿಗೆ ಬಂಧಿತರ ಒಟ್ಟು ಸಂಖ್ಯೆ ಎಂಟಕ್ಕೇರಿದೆ.


ಭಾರತ ಪ್ರವಾಸಕ್ಕೆ ಬಂದಿದ್ದ ಸ್ಪೇನ್ ದೇಶದ ಮಹಿಳೆ ಮೇಲೆ ಜಾರ್ಖಂಡ್‌ನ ದುಮ್ಕಾ ಜಿಲ್ಲೆಯಲ್ಲಿ ಕಳೆದ ಶುಕ್ರವಾರ ಸಾಮೂಹಿಕ ಅತ್ಯಾಚಾರ ನಡೆದಿತ್ತು.

ಬಿಬಿಎಂಪಿ ಆರ್‌.ಆರ್‌. ನಗರ ವಲಯ: ಇಬ್ಬರು ಕಂದಾಯ ಅಧಿಕಾರಿಗಳ ಅಮಾನತು

ಬಸವರಾಜ್ ಬಂಧನ, ದೇವರಾಜ್ ನಾಪತ್ತೆ

ಪ್ರಜಾವಾಣಿ ವಾರ್ತೆ


ಬಸವರಾಜ್ ಮಗ್ಗಿ


ದೇವರಾಜ್

ಬೆಂಗಳೂರು: ಆಸ್ತಿಗಳ ನಕಲಿ ದಾಖಲೆಗಳನ್ನು ಸೃಷ್ಟಿಸಿರುವ ಕಂದಾಯ ಅಧಿಕಾರಿ ಬಸವರಾಜ್ ಮಗ್ಗಿ ಅವರನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಮತ್ತೊಬ್ಬ ಪ್ರಮುಖ ಆರೋಪಿ ಎಚ್‌. ದೇವರಾಜ್ ನಾಪತ್ತೆಯಾಗಿದ್ದಾರೆ.

ನಕಲಿ ದಾಖಲೆಗಳನ್ನು ಸೃಷ್ಟಿಸಿ, ಸ್ಕ್ಯಾನಿಂಗ್ ಮಾಡಿ ಅಪ್‌ಲೋಡ್ ಮಾಡಿರುವ ಕೆಂಗೇರಿ ವಿಭಾಗದ ಮೌಲ್ಯಮಾಪಕ ಹಾಗೂ ಹೆಚ್ಚುವರಿ ಸಹಾಯಕ ಕಂದಾಯ ಅಧಿಕಾರಿ ಎಚ್‌. ದೇವರಾಜ್ ಮತ್ತು ಹೆಚ್ಚುವರಿ ಕಂದಾಯ ಅಧಿಕಾರಿ ಬಸವರಾಜ್ ಮಗ್ಗಿ ಅವರ ವಿರುದ್ಧ ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತ ವಿ. ಅಜಯ್ ಅವರು ಮಾರ್ಚ್ 4ರಂದು ದೂರು ದಾಖಲಿಸಿದ್ದರು.

ದೂರಿನ ಅನ್ವಯ ಪರಿಶೀಲನೆ ನಡೆಸಿದ ಪೊಲೀಸರು ಬಸವರಾಜ್ ಮಗ್ಗಿ ಅವರನ್ನು ಮಾರ್ಚ್ 5ರಂದು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಮೊದಲ ಆರೋಪಿಯಾಗಿರುವ ಎಚ್‌. ದೇವರಾಜ್ ಅವರು ನಾಪತ್ತೆಯಾಗಿದ್ದಾರೆ.

ಪ್ರಕರಣದ ಹಿನ್ನೆಲೆ: ಪಟ್ಟಣಗೆರೆ ಗ್ರಾಮದ ಅಸೆಸ್‌ಮೆಂಟ್ ಭಾಗ-3 ಮತ್ತು ಸಂಬಂಧಪಟ್ಟ ದಾಖಲೆಗಳಲ್ಲಿ, ವಹಿ ಹಾಗೂ ಸ್ಕ್ಯಾನಿಂಗ್ ಸಾಫ್ಟ್ ಕಾಪಿಯಲ್ಲಿ ಹೊಂದಾಣಿಕೆ ಇಲ್ಲ. ರಿಜಿಸ್ಟರ್‌ಗಳಲ್ಲಿ ಹಿಂದಿನ ಸಹಾಯಕ ಕಂದಾಯ ಅಧಿಕಾರಿ ವೆಂಕಟಪ್ಪ ಅವರ ಸಹಿ ಬದಲು ಎಆರ್‌ಒ ಎಚ್‌. ದೇವರಾಜ್ ಸಹಿ ಹಾಗೂ ಸೀಲ್ ಇದೆ.

ಎ ವಹಿಯಲ್ಲಿ 1ರಿಂದ 202 ಪುಟಗಳಿದ್ದು, 1ರಿಂದ 40 ಪುಟಗಳು ಮಾತ್ರ ಬಳಕೆಯಾಗಿವೆ. ಆದರೆ, ದೇವರಾಜ್ 202 ಪುಟಗಳನ್ನೂ ದೃಢೀಕರಿಸಿ ಸಹಿ ಮಾಡಿದ್ದಾರೆ. ಪಟ್ಟಣಗೆರೆ ಸರ್ವೆ ನಂ. 10ರಲ್ಲಿ ಹಿಂದಿನ ನಗರಸಭೆ ಖಾತಾ ತೆಗೆದು ಅರ್ಜಿದಾರರಿಗೆ ಖಾತಾ ವರ್ಗಾಯಿಸಲಾಗಿದೆ ಎಂದು ದೇವರಾಜ್ ಸಹಿ ಮಾಡಿದ್ದಾರೆ. ವಿಷಯ ನಿರ್ವಾಹಕರು, ಕಚೇರಿ ವ್ಯವಸ್ಥಾಪಕರ ಸಹಿ ಇಲ್ಲ.72 ಖಾತೆಗಳನ್ನು ಮುನಿಯಪ್ಪ ಅವರ ಹೆಸರಿನಿಂದ ಪುಟ್ಟಮ್ಮ ಅವರ ಹೆಸರಿಗೆ ವರ್ಗಾವಣೆ ಮಾಡಲಾಗಿದ್ದು, ಕಂದಾಯ, ಸುಧಾರಣೆ ವೆಚ್ಚ ಪಾವತಿಸಿರುವ ಮಾಹಿತಿ ಇಲ್ಲ.

ವಾಜರಹಳ್ಳಿ ಗ್ರಾಮದ ಸರ್ವೆ ನಂ. 9ರಲ್ಲಿ 2 ಎಕರೆ 25 ಗುಂಟೆಯನ್ನು ಎ ವಹಿಯಲ್ಲಿ ಪ್ರದೀಪ್ ಕೃಷ್ಣಪ್ಪ ಹೆಸರಲ್ಲಿ ದಾಖಲಿಸಲಾಗಿದೆ. 1 ಎಕರೆ 3 ಗುಂಟೆಯನ್ನು ಜಯಮ್ಮ ಬಿನ್ ಕೃಷ್ಣಪ್ಪ ಅವರ ಹೆಸರಿನಲ್ಲಿ ದಾಖಲಾಗಿದೆ. ಯು.ಎಂ. ಕಾವಲ್ ಸರ್ವೆ ನಂ. 98/1ರಲ್ಲಿ 30 ಬಿಡಿ ನಿವೇಶನಗಳಿಗೆ ಕ್ರಮ ಸಂಖ್ಯೆ 73ರಿಂದ 102ರವರೆಗೆ ಗಂಗಾಧರ್ ಹೆಸರಿನಲ್ಲಿ ಖಾತಾ ದಾಖಲಿಸಲಾಗಿದೆ. ಹೆಮ್ಮಿಗೆಪುರದಲ್ಲಿ 96 ಬಿಡಿ ನಿವೇಶನಗಳಿಗೆ ಅಕ್ರಮವಾಗಿ ಖಾತಾ ನೀಡಲಾಗಿದೆ.

ಈ ಪ್ರಕರಣಗಳು ಎಚ್‌. ದೇವರಾಜ್ ಹಾಗೂ ಬಸವರಾಜ್ ಮಗ್ಗಿ ಅವರ ಅವಧಿಯಲ್ಲಿ ನಡೆದಿವೆ. ಅಕ್ರಮವಾಗಿ ಬಿ ಖಾತಾ ವಹಿಯನ್ನು ಎ ಖಾತಾ ವಹಿಯನ್ನಾಗಿ ಮಾರ್ಪಡಿಸಲಾಗಿದೆ. ಖಾತಾ ನೋಂದಣಿಯಲ್ಲಿ ಗಂಭೀರ ಆರೋಪ ಎಸಗಿದ್ದು, ಪಾಲಿಕೆಗೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಇವರ ಮೇಲೆ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ರಾಜರಾಜೇಶ್ವರಿನಗರ ವಲಯದ ಜಂಟಿ ಆಯುಕ್ತರು, ವಲಯ ಆಯುಕ್ತ ಹಾಗೂ ಕಂದಾಯ ವಿಭಾಗದ ವಿಶೇಷ ಆಯುಕ್ತರು ಶಿಫಾರಸು ವರದಿಯನ್ನು ಮುಖ್ಯ ಆಯುಕ್ತರಿಗೆ ಸಲ್ಲಿಸಿದ್ದರು.

ಈ ವರದಿಯಂತೆ ಎಚ್‌. ದೇವರಾಜ್ ಅವರನ್ನು ಅಮಾನತುಗೊಳಿಸಿ ಆಡಳಿತ ವಿಭಾಗದ ಉಪ ಆಯುಕ್ತರು ಮಾರ್ಚ್ 4ರಂದು ಆದೇಶಿಸಿದ್ದರು. ಬಸವರಾಜ್ ಮಗ್ಗಿಯನ್ನು ಅಮಾನತು ಮಾಡಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಶಿಫಾರಸು ಮಾಡಿದ್ದರು.

ದೂರು: 'ಬಿಬಿಎಂಪಿಯ ಎಲ್ಲಾ ನಿಯಮಗಳನ್ನೂ ಮೀರಿ 200ಕ್ಕೂ ಹೆಚ್ಚು ಸ್ವತ್ತುಗಳಿಗೆ ಫೆಬ್ರುವರಿ ಒಂದೇ ತಿಂಗಳಲ್ಲಿ 'ಎ' ಖಾತಾಗಳನ್ನು ಮಾಡಿಕೊಡಲಾಗಿದೆ. ಪಾಲಿಕೆಗೆ ಐದಾರು ಕೋಟಿ ರೂಪಾಯಿಯಷ್ಟು ನಷ್ಟ ಉಂಟು ಮಾಡಿರುವ ಕಂದಾಯ ಅಧಿಕಾರಿ ಬಸವರಾಜ ಮಗ್ಗಿ, ಸಹಾಯಕ ಕಂದಾಯ ಅಧಿಕಾರಿ ಎಚ್‌. ದೇವರಾಜ್ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಬಿಬಿಎಂಪಿ ಆಡಳಿತಗಾರರು, ಮುಖ್ಯ ಆಯುಕ್ತರು, ಕಂದಾಯ ವಿಭಾಗದ ವಿಶೇಷ ಆಯುಕ್ತರಿಗೆ ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ರಮೇಶ್ ಎನ್‌.ಆರ್‌. ಅವರು ಮಾರ್ಚ್ 4ರಂದು ದೂರು ನೀಡಿದ್ದರು.

ಅಪ್‌ಲೋಡ್ ಡಿಲೀಟ್!

'ಕೆಂಗೇರಿ ಉಪ ವಿಭಾಗದ ಎಲ್ಲ 'ಎ' ಮತ್ತು 'ಬಿ' ವಹಿಗಳನ್ನು ಮೇರು ಇನ್‌ಫೋ ಸಲ್ಯೂಷನ್ ಅವರು ಸ್ಕ್ಯಾನಿಂಗ್ ಮಾಡಿ 2023ರ ನವೆಂಬರ್ 25ರಿಂದ ಡಿಸೆಂಬರ್ 3ರವರೆಗೆ ಅಪ್‌ಲೋಡ್ ಮಾಡಿದ್ದಾರೆ. ಆದರೆ, ಪಟ್ಟಣಗೆರೆ ಗ್ರಾಮದ ಭಾಗ-3 ವಹಿಯನ್ನು ಮಾತ್ರ 2024ರ ಫೆಬ್ರುವರಿ 19ರಂದು ಅಪ್‌ಲೋಡ್ ಮಾಡಲಾಗಿದ್ದು, ಇದು ಡಿಲೀಟ್ ಆಗಿ, ಫೆಬ್ರುವರಿ 22ರಂದು ಪುನಃ ಅಪ್‌ಲೋಡ್ ಮಾಡಲಾಗಿದೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.


ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಯೋತ್ಪಾದನಾ ವಿರೋಧಿ ಹೋರಾಟ ಸಮಿತಿ ಸದಸ್ಯರು ರಾಮೇಶ್ವರಂ ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣ ಖಂಡಿಸಿ ಮಂಗಳವಾರ ಪ್ರತಿಭಟಿಸಿದರು – ಪ್ರಜಾವಾಣಿ ಚಿತ್ರ

ರೈಲಿನಿಂದ ಬಿದ್ದು ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಿಂದ ಚೆನ್ನೈಗೆ ಹೊರಟಿದ್ದ ರೈಲಿನಿಂದ ಬಿದ್ದು ಬಿ. ಗೌರಿಶಂಕರ್ (22) ಎಂಬುವವರು ಮೃತಪಟ್ಟಿದ್ದು, ಈ ಸಂಬಂಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಮಿಳುನಾಡು ವೆಲ್ಲೂರು ಬಳಿಯ ಅಂಬೂರಿನ ಗೌರಿಶಂಕರ್, ಬೆಂಗಳೂರಿನಲ್ಲಿ ಸಣ್ಣ-ಪುಟ್ಟ ಕೆಲಸ ಮಾಡಿಕೊಂಡಿದ್ದರು. ಮಂಗಳವಾರ ಮಧ್ಯಾಹ್ನ ತಮ್ಮೂರಿಗೆ ರೈಲಿನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ರೈಲು ಬಾಗಿಲು ಬಳಿ ನಿಂತಿದ್ದರು ಎನ್ನಲಾದ ಗೌರಿಶಂಕರ್, ಆಕಸ್ಮಿಕವಾಗಿ ಹೊರಗೆ ಬಿದ್ದಿದ್ದರು. ಹಳಿ ಮೇಲೆ ಹಲವು ಬಾರಿ ಉರುಳಿ, ಮೇಲ್ಸೇತುವೆ ಕೆಳಭಾಗದ ರಸ್ತೆಯಲ್ಲಿ ಹೊರಟಿದ್ದ ಕಾರಿನ ಮೇಲೆ ಬಿದ್ದು ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಗೌರಿಶಂಕರ್ ಅವರು ಅಣ್ಣನಿಗೆ ಕರೆ ಮಾಡಿ ಊರಿಗೆ ಬರುತ್ತಿರುವುದಾಗಿ ಹೇಳಿದ್ದರು. ಸಾವಿನ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದರು.

ಕೆಪಿಎಸ್‌ಸಿ ಕಾರ್ಯದರ್ಶಿ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆ. 7 ರಿಂದ ರಜೆ ಮೇಲೆ ತೆರಳಿರುವ ಕೆಪಿಎಸ್‌ಸಿ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಅವರನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಕಾರ್ಯನಿರ್ವಾಹಕ ನಿರ್ದೇಶಕಿಯಾಗಿ ವರ್ಗಾವಣೆ ಮಾಡಲಾಗಿದೆ.

ಲತಾಕುಮಾರಿ ಅವರು ರಜೆಯಲ್ಲಿ ತೆರಳಿದ ಬಳಿಕ ಕಾರ್ಯದರ್ಶಿ ಹುದ್ದೆಯ ಹೊಣೆಯನ್ನು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ಕೆ. ರಾಕೇಶ್ ಕುಮಾರ್ ಅವರಿಗೆ ವಹಿಸಲಾಗಿತ್ತು. ಲತಾಕುಮಾರಿ ಅವರನ್ನು ವರ್ಗಾವಣೆ ಮಾಡಿರುವುದರಿಂದ ರಾಕೇಶ್ ಕುಮಾರ್ ಅವರಿಗೇ ಕಾರ್ಯದರ್ಶಿಯ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ ಹುದ್ದೆಗೆ ನೇಮಕಾತಿ ವಿಷಯದಲ್ಲಿ ಕೆಪಿಎಸ್‌ಸಿ ಅಧ್ಯಕ್ಷರು ಹಾಗೂ ಕೆಲವು ಸದಸ್ಯರು ಮತ್ತು ಲತಾಕುಮಾರಿ ಮಧ್ಯೆ ಸಂಘರ್ಷ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಫೆ. 7 ರಿಂದ 17ರವರೆಗೆ 10 ದಿನಗಳ ಗಳಿಕೆ ರಜೆಯನ್ನು ಲತಾಕುಮಾರಿ ಅವರಿಗೆ ಸರ್ಕಾರ ಮಂಜೂರು ಮಾಡಿತ್ತು.

'ರಜೆ ಮುಗಿಸಿ ಮತ್ತೆ ಹುದ್ದೆ ವಹಿಸಿಕೊಳ್ಳಲು ಬಂದಾಗಲೂ ಗಳಿಕೆ ರಜೆ ಮುಂದುವರಿಸುವಂತೆ ಸರ್ಕಾರ ಸೂಚನೆ ನೀಡಿತ್ತು. ಹೀಗಾಗಿ, ಒಲ್ಲದ ಮನಸ್ಸಿನಿಂದ ರಜೆ ಮೇಲೆ ತೆರಳಿದ್ದ ಅವರು, ಈ ಕ್ರಮದಿಂದ ಬೇಸತ್ತು ವರ್ಗಾವಣೆ ಕೋರಿ ಫೆ. 19 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿದ್ದರು' ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿ ಕಾರ್ಯದರ್ಶಿಯಾಗಿ ನೇಮಕಗೊಂಡ ಆರು ತಿಂಗಳ ಒಳಗೆ ಲತಾ ಕುಮಾರಿ ವರ್ಗಾವಣೆಗೊಂಡಂತಾಗಿದೆ. ಅವರಿಗಿಂತಲೂ ಮೊದಲು ಕೆಪಿಎಸ್‌ಸಿ ಕಾರ್ಯದರ್ಶಿಯಾಗಿದ್ದ ಸುರಳ್ಕರ್ ವಿಕಾಸ್ ಕಿಶೋರ್ ಕೇವಲ 14 ತಿಂಗಳಲ್ಲಿ ವರ್ಗಾವಣೆಗೊಂಡಿದ್ದರು.

ಜಯಲಲಿತಾ ಆಭರಣ ಹಸ್ತಾಂತರಕ್ಕೆ ತಡೆ



ಬೆಂಗಳೂರು: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಜಯಲಲಿತಾ ವಿರುದ್ಧದ ಅಕ್ರಮ ಆಸ್ತಿ ಗಳಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ವಶಕ್ಕೆ ಪಡೆಯಲಾದ ಚಿನ್ನಾಭರಣಗಳನ್ನು ನಗರದ ವಿಶೇಷ ನ್ಯಾಯಾಲಯದ ಸುಪರ್ದಿಯಿಂದ ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಹಸ್ತಾಂತರ ಪ್ರಕ್ರಿಯೆ ಪ್ರಶ್ನಿಸಿ ಜಯಲಲಿತಾ ಅವರ ಅಣ್ಣ ಜಯಕುಮಾರ್ ಪುತ್ರಿ ಜೆ.ದೀಪಾ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಪಿ.ಎಂ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ದಿವಂಗತ ಜಯಲಲಿತಾ ಅವರಿಗೆ ಸೇರಿದ ಚಿನ್ನಾಭರಣಗಳನ್ನು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸುವಂತೆ ನಗರದ 36ನೇ ಹೆಚ್ಚುವರಿ ಸಿಟಿ ಸಿವಿಲ್ ಕೋರ್ಟ್‌ನ ವಿಶೇಷ ನ್ಯಾಯಾಲಯ 2023ರ ಜುಲೈ 12ರಂದು ಆದೇಶಿಸಿದೆ. ಆದರೆ, ಅರ್ಜಿದಾರರಾದ ಜೆ.ದೀಪಾ ಅವರು ಜಯಲಲಿತಾರ ಕಾನೂನು ಬದ್ಧ ವಾರಸುದಾರರಾಗಿದ್ದು, ಎಲ್ಲ ಚಿನ್ನಾಭರಣಗಳನ್ನು ಅವರಿಗೇ ಹಸ್ತಾಂತರಿಸಲು ನಿರ್ದೇಶಿಸಬೇಕು. ಅರ್ಜಿ ಇತ್ಯರ್ಥಗೊಳ್ಳುವ ಮೊದಲು ವಿಶೇಷ ನ್ಯಾಯಾಲಯದ ಆದೇಶಕ್ಕೆ ಮಧ್ಯಂತರ ತಡೆ ನೀಡಬೇಕು' ಎಂದು ಕೋರಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ' ಎಂದು ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಕಿರಣ್ ಎಸ್. ಜವಳಿ ಅವರಿಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

‘ರಾಜಕೀಯ ತರಬೇತಿ ಸಂಸ್ಥೆ ಆರಂಭಕ್ಕೆ ಚಿಂತನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಯುವಜನರಿಗೆ ರಾಜಕೀಯ ಮತ್ತು ಆಡಳಿತದ ಕುರಿತು ತರಬೇತಿ ನೀಡಲು ವಿಧಾನಮಂಡಲದಿಂದ ಪ್ರತ್ಯೇಕ ಸಂಸ್ಥೆ ಆರಂಭಿಸುವ ಚಿಂತನೆ ನಡೆದಿದೆ ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.

ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯಿಂದ ರಾಜ್ಯದ ಕಾನೂನು ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಮಂಗಳವಾರ ಆಯೋಜಿಸಿದ್ದ ಮಾದರಿ ವಿಧಾನಸಭಾ ಅಧಿವೇಶನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

‘ರಾಜಕೀಯ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಯುವಜನರಿಗೆ ಸೂಕ್ತ ತರಬೇತಿ ದೊರೆತರೆ ಉತ್ತಮ ನಾಯಕತ್ವ ಸೃಷ್ಟಿಯಾಗಲು ಸಾಧ್ಯವಾಗುತ್ತದೆ. ಅದಕ್ಕೆ ಪೂರಕವಾಗಿ ತರಬೇತಿ ಆರಂಭಿಸುವ ಪ್ರಸ್ತಾವವಿದೆ. ವಿಧಾನ ಪರಿಷತ್ ಸಭಾಪತಿಯವರ ಜತೆಗೂ ಈ ಬಗ್ಗೆ ಚರ್ಚೆ ನಡೆಸಲಾಗಿದೆ. ವಿಧಾನಮಂಡಲದ ವತಿಯಿಂದ ‘ಸ್ಕೂಲ್ ಆಫ್ ಗವರ್ನೆನ್ಸ್’ ಎಂಬ ಸಂಸ್ಥೆ ಆರಂಭಿಸುವ ಯೋಚನೆ ಇದೆ’ ಎಂದರು.



ಸಚಿವೆಯಾಗಿ ಕಾರ್ಯನಿರ್ವಹಿಸಿದ ವಿದ್ಯಾರ್ಥಿನಿಯೊಬ್ಬರು ವಿರೋಧ ಪಕ್ಷಗಳ ಪ್ರಶ್ನೆಗಳಿಗೆ ಉತ್ತರಿಸಿದರು –ಪ್ರಜಾವಾಣಿ ಚಿತ್ರ

ವಯೋಮಿತಿಯ ಆಧಾರದಲ್ಲಿ ಎಲ್ಲ ಜನರಿಗೂ ಏಕಕಾಲಕ್ಕೆ ಮತದಾನದ ಹಕ್ಕು ನೀಡಿದ ದೇಶ ಭಾರತ ಮಾತ್ರ. ಇಲ್ಲಿರುವ ಪ್ರಜಾಪ್ರಭುತ್ವ ವ್ಯವಸ್ಥೆ ಅತ್ಯಂತ ಶ್ರೇಷ್ಠವಾದುದು. ಇತ್ತೀಚಿನ ವರ್ಷಗಳಲ್ಲಿ ಮತದಾರರು ಹಣದ ಪ್ರಭಾವಕ್ಕೆ ಮಣಿಯುತ್ತಿದ್ದಾರೆ. ಜನರಲ್ಲೇ ಸುಧಾರಣೆ ತರುವಂತಹ ಪ್ರಯತ್ನಗಳು ಆಗಬೇಕಿದೆ ಎಂದು ಹೇಳಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ‘ಒಂದು ಕಾಲದಲ್ಲಿ 91 ವಕೀಲರು ವಿಧಾನಸಭೆಯ ಸದಸ್ಯರಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ಚುನಾವಣೆಯಲ್ಲಿ ಹಣಬಲದಲ್ಲಿ ಗೆದ್ದು ಬರುವವರ ಸಂಖ್ಯೆ ಹೆಚ್ಚುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು. ‘ಈಗ ಇರುವ ಪ್ರಜಾಪ್ರಭುತ್ವದ ಬಗ್ಗೆ ನನಗೆ ಒಳ್ಳೆಯ ಭಾವನೆ ಇಲ್ಲ. ಹಣ ಪಡೆದು ಮತ ಚಲಾಯಿಸುವವರು ಇರುವವರೆಗೂ ಸುಧಾರಣೆ ಕಷ್ಟ’ ಎಂದರು.

ವಿಧಾನಮಂಡಲದ ವತಿಯಿಂದಲೇ ಯುವಜನರಿಗೆ ಮಾದರಿ ವಿಧಾನಸಭಾ ಅಧಿವೇಶನ ನಡೆಸಲಾಗುವುದು ಎಂದು ಹೇಳಿದರು.

ಕರ್ನಾಟಕ ಕಾನೂನು ಮತ್ತು ಸುಧಾರಣಾ ಸಂಸ್ಥೆಯ ನಿರ್ದೇಶಕ ಕೆ. ದ್ವಾರಕಾನಾಥ್ ಬಾಬು ಅಧ್ಯಕ್ಷತೆ ವಹಿಸಿದ್ದರು. ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ, ವಿಧಾನಸಭೆಯ ಅಧ್ಯಕ್ಷರ ಸಲಹೆಗಾರ ಪಿ. ಓಂಪ್ರಕಾಶ್, ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಸಂಶೋಧನಾ ಮುಖ್ಯಸ್ಥ ರೇವಯ್ಯ ಒಡೆಯರ್ ಉಪಸ್ಥಿತರಿದ್ದರು.

‘ಹಾಸಿಗೆ ಹಾಕಬೇಕಾಗಬಹುದು’

‘ವಿಧಾನಸಭೆ ಅಧಿವೇಶನದ ಅವಧಿಯಲ್ಲಿ ಶಾಸಕರು ಮಧ್ಯಾಹ್ನದ ವೇಳೆ ನಿದ್ದೆ ಮಾಡುವುದಕ್ಕಾಗಿ ಸದನದಿಂದ ಹೊರ ಹೋಗುತ್ತಾರೆ. ಅವರನ್ನು ಹಿಡಿದಿಟ್ಟುಕೊಳ್ಳಲು ವಿಧಾನಸಭೆಯ ಮೊಗಸಾಲೆಯಲ್ಲೇ 20 ಹಾಸಿಗೆಗಳ ವ್ಯವಸ್ಥೆ ಮಾಡಿದರೆ ಒಳ್ಳೆಯದೇನೋ ಅನಿಸುತ್ತದೆ’ ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಬೆಂಗಳೂರು ವಿ.ವಿಗೆ ₹ 50 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷಾ ವಿಧಾನಗಳಲ್ಲಿ ಹೊಸ ಪದ್ಧತಿ, ಅನುಷ್ಠಾನದ ಸಾಧನೆಯಲ್ಲಿ ‘ಅತ್ಯುತ್ತಮ ವಿಶ್ವವಿದ್ಯಾಲಯ’ ಎಂದು ಗುರುತಿಸಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಉನ್ನತ ಶಿಕ್ಷಣ ಇಲಾಖೆ ₹ 50 ಲಕ್ಷ ಪ್ರೋತ್ಸಾಹ ಧನ ನೀಡಿದೆ.

ಸಾರ್ವಜನಿಕ ವಿಶ್ವವಿದ್ಯಾಲಯಗಳ ಆಡಳಿತ ವ್ಯವಸ್ಥೆಯನ್ನು ಉತ್ತಮಪಡಿಸಲು ಗುರುತಿಸಿದ 10 ಸುಶಾಸನ ಸೂಚ್ಯಂಕಗಳನ್ನು ಸಾಧಿಸಿದ ವಿಶ್ವವಿದ್ಯಾಲಯಗಳಿಗೆ ₹ 50 ಲಕ್ಷ ಪ್ರೋತ್ಸಾಹ ಧನ ನೀಡಲಾಗುವುದು ಎಂದು 2023-24ರ ಬಜೆಟ್‌ನಲ್ಲಿ ಸರ್ಕಾರ ಘೋಷಿಸಿತ್ತು.

‘ಪರೀಕ್ಷಾ ವಿಧಾನ ಮತ್ತು ಅಭ್ಯಾಸದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಇಡೀ ರಾಜ್ಯದಲ್ಲಿ ಮುಂಚೂಣಿಯಲ್ಲಿದ್ದು, ಮೌಲ್ಯಮಾಪನವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಲಾಗಿದೆ. ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆ ನಡೆಸಿದ ಮೊದಲ ವಿಶ್ವವಿದ್ಯಾಲಯ ಬೆಂಗಳೂರು. ವಲಸೆ ಪ್ರಮಾಣಪತ್ರ, ನಡತೆಯ ಪ್ರಮಾಣಪತ್ರ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ದೃಢೀಕರಣ ಪತ್ರ ಸೇರಿದಂತೆ ಅನೇಕ ಸೇವೆಗಳನ್ನು ಏಕಗವಾಕ್ಷಿ ಕೇಂದ್ರದ ಮೂಲಕ ತ್ವರಿತವಾಗಿ ನೀಡಲಾಗುತ್ತಿದೆ. ತ್ವರಿತ ಮತ್ತು ದೋಷರಹಿತ ಫಲಿತಾಂಶದ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲಕರ ವ್ಯವಸ್ಥೆ ನಿರ್ಮಿಸಲಾಗಿದೆ’ ಎಂದು ಕುಲಸಚಿವ (ಮೌಲ್ಯಮಾಪನ) ಸಿ. ಶ್ರೀನಿವಾಸ್ ತಿಳಿಸಿದರು.

‘ಪ್ರೋತ್ಸಾಹ ಧನದ ಮೊತ್ತವನ್ನು ಮೌಲ್ಯಮಾಪನ, ಡಿಜಿಟಲೀಕರಣ, ಮೂಲಸೌಕರ್ಯಗಳ ಉನ್ನತೀಕರಣಕ್ಕೆ ಸಮರ್ಪಕವಾಗಿ ಬಳಸಲಾಗುವುದು’ ಎಂದೂ ಅವರು ಹೇಳಿದರು.

ಏಳು ವಿ.ವಿಗಳಿಗೆ ಸಾಧನಾ ಪ್ರಶಸ್ತಿ

ಬೆಂಗಳೂರು: ರಾಜ್ಯದ ಏಳು ಸರ್ಕಾರಿ ವಿಶ್ವವಿದ್ಯಾಲಯಗಳು ಉತ್ತಮ ಸಾಧನಾ ಪ್ರಶಸ್ತಿಗೆ ಭಾಜನವಾಗಿದ್ದು, ಉನ್ನತ ಶಿಕ್ಷಣ ಇಲಾಖೆ ತಲಾ ₹ 50 ಲಕ್ಷ ಪ್ರೋತ್ಸಾಹ ಧನ ನೀಡಿದೆ.

ಬೆಂಗಳೂರು, ಮೈಸೂರು, ದಾವಣಗೆರೆ ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು, ಧಾರವಾಡದ ಕರ್ನಾಟಕ, ವಿಜಯನಗರ ಶ್ರೀಕೃಷ್ಣದೇವರಾಯ, ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಗಳು ಪ್ರೋತ್ಸಾಹ ಪ್ರಶಸ್ತಿಗೆ ಭಾಜನವಾಗಿವೆ. ವಿಶ್ವವಿದ್ಯಾಲಯಗಳ ಉತ್ತಮ ಆಡಳಿತ ಮೌಲ್ಯಮಾಪನ ಮಾಡಲು ರಾಜ್ಯ ಉನ್ನತ ಶಿಕ್ಷಣ ಪರಿಷತ್ ರಚಿಸಿದ್ದ ಸಮಿತಿ ಪ್ರಸಕ್ತ ಸಾಲಿಗೆ ಏಳು ವಿಶ್ವವಿದ್ಯಾಲಯಗಳನ್ನು ಆಯ್ಕೆ ಮಾಡಿತ್ತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

NIRMAN INTERNATIONAL PUBLIC SCHOOL- CBSE,7th Block, Vishweshwaraiah Layout, Bangalore-91 Requires qualified TEACHERS for all Subjects from Nursery to Grade-X. Contact: 8123030731/ 9986055970.

BISHOP COTTON GIRLS' SCHOOL
(Managed by CSI Karnataka Central Diocese)
BANGALORE
REQUIRES

JUNIOR SCHOOL – STDS. 1 – IV

KANNADA TEACHER - 1 TEACHER Qualifications required : B.A. (Kannada) B.Ed, 5 years experience at the Junior School level teaching Kannada as the main subject.

ART & CRAFT TEACHER – 1 TEACHER Qualifications required : B.F.A. / B.V.A. B.Ed with 5 years experience

FLOATING TEACHER - 1 TEACHER Qualifications required : B.A. / B.Sc B.Ed with 5 years teaching experience

COMPUTER TEACHER – 1 TEACHER Qualifications required : B.C.A. / B.Sc (Comp. Science) B.Ed with 5 years teaching experience

MIDDLE SCHOOL – STDS. V – VII

ENGLISH – 2 TEACHERS Qualifications required : B.A. (Eng. Lit) B.Ed, 5 years experience at the Middle School level teaching English Literature as the main subject.

ART & CRAFT - 1 TEACHER Qualifications required : B.F.A. / B.V.A. B.Ed with 5 years experience

MATHEMATICS Qualifications required : B.Sc. (Mathematics/ Physics) B.Ed, 5 years experience at the Middle School level teaching Mathematics as the main subject

ICSE - STDS. VIII – X

ENGLISH – 2 TEACHERS Qualifications required : M.A. (Eng. Lit) B.Ed, 5 years experience at the ICSE level teaching English Literature as the main subject.

ECONOMICS - 1 TEACHER Qualifications required : M.A. (Economics) B.Ed, 5 years experience at the ICSE level teaching Economics as the main subject.

GEOGRAPHY - 1 TEACHER Qualifications required : M.A. (Geography) B.Ed, 5 years experience at the ICSE level teaching Geography as the main subject.

KANNADA - 1 TEACHER Qualifications required : M.A. (Kannada) B.Ed, 5 years experience at the ICSE level teaching Kannada as the main subject

PHYSICAL EDUCATION – 1 TEACHER Qualifications required : B.P.Ed / M.P.Ed, 5 years experience at the ICSE level teaching Physical Education as the main subject.

ISC - STDS. XI & XII

BUSINESS STUDIES / COMMERCIAL STUDIES - 1 TEACHER
Qualifications required : M.Com., B.Ed, 5 years experience at the ISC level teaching Business Studies as the main subject.

PHYSICS – 1 TEACHER Qualifications required : M.Sc. B.Ed, 5 years experience at the ISC level teaching Physics as the main subject.

ADMINISTRATIVE DEPARTMENT

ACCOUNTS MANAGER - 1 Qualifications required : M.Com/M.B.A (Finance) with minimum 15 years experience in Accounts in a school level. Age : 45 years and above. Male candidates preferred

CANTEEN SUPERVISOR - 1 Qualifications required : B.H.M./B.Sc. (Food Science/Nutrition) with 5 years experience. Male candidates preferred.

CANDIDATES MUST POSSESS EFFECTIVE WRITTEN AND SPOKEN ENGLISH SKILLS.
CANDIDATES WHO HAVE APPLIED EARLIER NEED NOT APPLY.
ALL DEGREES SHOULD BE ACQUIRED THROUGH REGULAR STREAM ONLY,
Last date for Submission of Applications is 15.03.2024 before 3.00 P.M.
Please mention the post you are applying for on the envelope and send your application to: The Principal Bishop Cotton Girls' School, St. Mark's Road, Bangalore 560 001.
ROUNAQH

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org

Faculty Positions for Engineering & Polytechnic

Applications are invited for the posts of Professors, Associate Professors and Asst. Professors in the following Disciplines...

- Computer Science & Engineering
- Information Science & Engineering
- Electronics & Communication Engineering
- Mechanical Engineering
- Electrical & Electronics Engineering
- Basic Science Department : Physics, Chemistry and Mathematics
- Kannada, English
- MBA (Marketing, Finance, HR)
- Physical Education Director
- Librarian and Asst. Librarian

Non Teaching Posts

- Accountants, FDA, SDA.
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and attenders in the above departments

Qualification and Pay Scale: As per AICTE norms

Note: For the posts of Professor & Associate Professor, Candidates having Ph.D are only eligible. Apply Via email and hard copy so as to reach before 7 days from the date of advertisement along with your detailed CV & supporting documents.
Dr. H.D. Ramesh, Principal 98806 58861 / 77602 68213
Sri D.C. Venugopal Chairman

FOR ENVIRONMENT Laboratory (NABL Accredited and MOEF & CC-Recognized) at Mahalaxmi Layout, Bangalore- 560086. 1)Chemists (Males): B.Sc./M.Sc- Freshers preferred, Local candidates around Bangalore. 2)Chemical Lab Assistants/ STP, ETP, RO Operators/ Helpers (Males): Freshers, ITI, PUC Sc, SSLC, 8th Std. Pass/ Fail. Send Biodata/ Resume to E-mail: drrpdambal@gmail.com/ pollutechaids1985@gmail.com. Ph: 080 29550488/ 23492130. Above categories Local Candidates Preferred.

POORNAPRAJNA EDUCATION CENTRE, INDIRANAGAR
(Promoted & Managed by Udupi Sri Admar Mutt Education Council)
C.A Site No. 48, New Thippasandra, HAL 3rd Stage, Bangalore -75. Ph.080-25292930
Invites applications from experienced & qualified teachers for the following posts:
PRIMARY SCHOOL SECTION
ENGLISH TEACHER: B A / M A (English) with B Ed
PRE PRIMARY SCHOOL SECTION
ASST TEACHER: Graduation preferably Nursery Teachers Training
SPECIAL DEPARTMENT
SUPW /CRAFT TEACHER: Degree with expert in craft, glass painting, tailoring, embroidery, cookery, etc
ASST LIBRARIAN: B Lib.Sc /M Lib.Sc with experience in digital library
Computer literacy is mandatory for all the posts
Apply to the Hon. Secretary on or before 12-03-2024 email to contact.indiranagar@ppec.edu.in

Multiple Vacancy

THE BANGALORE PRESS
(No.88, Mysore Road, Chamarajpet, Bangalore-18)
has opening for the below roles;

ROLE	REQUIREMENT
Sales & Marketing Officers	2+ years experience in field sales of consumer goods. Good communication skills in Kannada and English
Marketing Manager	5+ years experience handling sales teams in FMCG goods Good communication skills in Kannada and English
Production Supervisors & Managers	2+ years experience in a production unit, preferably a paper/book printing industry. Basic Computer knowledge preferred.
Accounts and Office Assistants	2+ years experience in accounts department, with knowledge of Tally ERP.
DTP Operators	3+ years experience in designing, with exp in Coreldraw, Pagemaker & Microsoft Office applications.

Please email details (including resume with your work experience and expected salary) to bangalorepressjobs@gmail.com

Karnataka Digital Economy Mission (KDEM)
An initiative of the Govt. of Karnataka
Career Opportunities Call for Applicants
- CLUSTER MANAGER-HBD : 9-13 years of Experience Location : Hubbali /Belagavi/Dharwad
- MANAGER - IT/GCC : 8+ years of experience, Location : Bengaluru
- ASSOCIATE - IT/GCC : 1- 3 years of experience, Location : Bengaluru
- ASSOCIATE - ESDM : 3-5 years of experience, Location : Bengaluru
- ASSOCIATE - BB : 3-6 years of experience, Location : Kalaburagi

The detailed Job Description and application process are available at www.karnatakadigital.in/careers
The deadline for applications is 12 March 2024

LITTLE BLOOM ENGLISH HIGH SCHOOL 62/1,DEVASANDRA KR.PURAM. BENGALURU-36. Ph:-9739411881/ 9739797756. Experienced/ Trained/ Untrained Teachers to Handle Nursery to High School to teach all Subjects. Computer Teacher and PE- Instructor for 24-25 Qualification: NTT/D.Ed/ B.A/B.Sc/ B.Ed/M.A/M.Ed.Email- littlebloomenglishschool@gmail.com Walk-in Interview 13th, 14th & 15th March Timings: 10.00am to 1.00pm

GAYATHRI VIDYANIKETAN, 53/3 2nd Cross Kottigepalya, Off Magadi Road, Bangalore-91. Required Primary Teachers for Science English Social Studies Kannada P.E. Computer Teacher. B.Sc/ M.Sc/ B.Ed, BA/ MA/ B.Ed, B.PEd Contact: 9900035670 Send resume with recent photo to: E-mail: gvidyaniketan@gmail.com

SRI AHAM AATHMA VIDYALAYA- [ICSE/ State] Nagasandra post Bangalore-73 requires Teachers for the academic year 2024-25 (1) Computer Science- BCA/MCA/B.Sc, M.Sc B.Ed (2) Teachers for all the subjects. Nursery/ Primary/Middle/High-school. (3)Office Staff/ Receptionist/ Data/DTP Operator with Tally, IT System Admin (4) Lab-Assistant, Librarian, PT Teacher, Academic Co-Ordinator. Offers Attractive Salary. Transportation will be considered Contact 9880200172, 9663778869 sriaavapplic@gmail.com

WANTED FOR Institution in Kanakapura Road. Principal- PUC College, 5- 8 years of experience, Accountant 8- 10 years' experience in Tally, GST, ESIEPF. CBSE School environment. Fluency in English, Kannada. Contact 9845900062 or Email: rmsinstitution@gmail.com

EMPLOYEE NEEDED! Business Development Officer for property developer company No investment, age above 30 years No experienced required. Earning Rs. 50,000/- per month Retired persons are eligible. Contact:- 9845334751.

St Joseph's University
#36, Lalbagh Road, Bengaluru - 560 027
invites applications for likely positions for the academic year 2024-25:

1. Associate/ Assistant Professors in:
*Commerce *Management *Chemistry *Biochemistry *Economics *Industrial Relations *International Relations, Peace Studies and Public Policy- (part- time / contractual basis) *Political Science *Psychology and Counselling *English *French *German *Spanish *Hindi *Kannada *Biotechnology *Botany *Environmental Science *Food Science and Technology *Microbiology *Zoology *Physics *Statistics *Social Work *Advanced Computing *Computer Science

2. School of Communication and Media Studies:
*Assistant Professor cum Technical Faculty with experience in Graphic Design
*Assistant Professor cum Technical Faculty for Filmmaking with advanced expertise in cinematography /editing / direction etc.

Qualification for all the above posts: Ph.D./ NET or KSET with relevant teaching experience preferred. Apply with all your Research details.

3. Senior Positions in:
*School of Humanities
*School of Information Technology

Non-Teaching Posts:
4. University Librarian 5. Office Assistant

To apply, use the Google Form on the University website: www.sju.edu.in (in the 'Announcements' section) on or before Sunday, 17th March 2024.

ACADEMIC SUPERVISOR with 5 years Experience required. Also Trained Teachers to handle Nursery, Primary, High-School and Receptionist for Academic Year 2024-25. Qualification: NTT, D.Ed, B.A/B.Sc.,B.Ed, M.A/M.Sc.,M.Ed. Only English Medium Candidates need apply. Max Muller Public School, Mahalakshmi Layout, B'lore-96. Ph: 23376049/23376050. E-mail: maxmullerpublicschool.mlayout@gmail.com

HINDI LANGUAGE TEACHERS needed for Chitrakoota CBSE School in Nagarbhavi, Kengeri Ring Road, with high salary. Immediately or for the academic year. Call: 7829647333

General

IMMEDIATE REQUIREMENT FABRICATOR of 2.5 Dia Pipe at Pune/ Maharashtra. Phone: 9008826378/ 8519993159. pvrplblr@gmail.com

WANTED PART Time/ Full Time Female Graduate, Pleasing Personality. Knowledge of Computer, Internet, Fluent in English. Contact: 9108100200.

WANTED IMMEDIATELY OPERATIONS EXECUTIVES with Bike, TELECALLERS. Very good Salary. Bengaluru South Candidates Call: 99000-54469

ARVIND INTERNATIONAL SCHOOL
Affiliated to CBSE, New Delhi (Affiliation No.831133)
#14, Kalikanagar, opp. Sowmyakali Temple, Andrahalli Main Road, PSI Post, BANGALORE- 560058
Ph: 9945409738 / 9663930002.
REQUIRES TRAINED EXPERIENCED FACULTY WITH ENGLISH FLUENCY
Teachers for NURSERY/ PRIMARY/ HIGH SCHOOL/ PE Teacher
Only CBSE experienced teachers are preferred.
Salary is not a constraint for suitable candidates.
Transportation for Teachers from: Magadi Road, Jalahalli Metro Station and Laggere.
Send your resume with recent passport size photo to arvindinterblr@gmail.com within 7 days
Selection will be held through Online & Offline mode.

VIKAS HIGH School BSK 3rd Stage Bangalore-85 Require B.Sc/ B.Ed TEACHER for Chemistry, Biology, Computer Science & NURSERY TEACHER. Contact: 9620448778/ 9448110651

HRD & Admin

ADMIN.EXECUTIVE WITH over 5yrs. Exp. Knowledge of M S office, with excellent communication skills required. Candidates staying with in 10km.to the campus prefered. ISME, Sarjapur Road, Bangalore. hiring@isme.in, 080-28019800

Accounts & Finance

WANTED ACCOUNTANT Age:25-45 Years. Having Working knowledge in TALLY, GST,ESI,EPF Fluent in Kannada, Hindi, English. Work at Wilson Garden, Salary Will Commensurate with Experience. Contact: 9900195666. Between 10am to 5pm.only

Engg/ Production Technical

WANTED 1.PCB Assemblers 2.Engineer- Electronics. Contact Atel Devices and systems, Alahalli, Anjanapuura post, Bengaluru-560062 Mob 8880888071

Marketing & Sales

TELECALLERS (FEMALE) BUSINESS DEVELOPMENT EXECUTIVES (M/F) Wanted with English Communication Computer Knowledge, Basaveswarnagar Office: 9845411113

Part-Time Jobs

ARPITA FOUNDATION A Mental Health Helpline requires Volunteers for 2 hours a week. Kindly call 8105247529, visit our website www.arpitafoundation.org

Wanted

WANTED SRINIVASA Educational Society, Kudlu Gate, Hosur Main Road, Bengaluru. Computer Operators, Commerce Lectures, MBA, M.Com., 9341948860, 9449979054

Hospital & Medical Jobs

AL AMEEN MEDICAL COLLEGE AND HOSPITAL, VIJAYAPUR
Well renowned Medical College and Hospital, situated at excellent location in Vijayapur, Karnataka. Urgently requires for following Posts:-
1. Chief Pharmacists / Asst Pharmacists: (Minimum Experience -5 years). Pharmacists should be holding practicing license.
2. Accountants: Preferably B.Com Graduate (Minimum 5 to 7 years experience).
3. Cashier: Preferably B.Com Graduate (Minimum 5 years experience).
Attractive Salary offered and accommodation provided.
Please send us your C.V's to ibc2@ibc.co.in
Contact: 9731312115 / 6361701108
Call this No. for Interview

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

PROPERTY CORNER

FOR SALE
MULTI STORIED COMMERCIAL BUILDING
Situated on Tumkur Road, BANGALORE
FETCHING VERY-GOOD RENTAL INCOME
Parties who can invest Rs. 70 Crores, may contact owner: 9880737490

Nagarabhavi

"SALE 40X60, 30X40 NGEF/ MPM/ ITI Layout Mallathahalli, Good locations, Genuine Buyers Contact: 7760388034/ 9242135834"

30X40 SITE For Sale in MPM Layout Nagarbhavi Near Deepa Complex Ph: 9844776757

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Industrial & Factory

Tumkur Road

9.5 ACRES Industrial Land. Sale/ Rent, Built to suit between Nelamangala- Dabaspet. NAIK: 9141326819, 9972636255

Sites

Kempegowda Layout

COMMERCIAL SITE Sale,KEMPEGOWDA LAYOUT 8th_Block, 'D'_Sector, 55X100,W/F BDA,NOC,NNA, Conversion land,Leagal Documents,₹5250/-sqft. Contact:9686469799

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted&, Agriculture Lands Call:7204995189

AUTOMOTIVE

Four Wheelers Selling

Maruti

MARUTI ALTO, Model 2023 White Colour, Single Owner 4600 Kms, AC, Power Steering Power Windows, Air Bags, Central Locking, Music System, Reverse Censors. Comprehensive Insurance 2025. Extended Warranty. 9341273990.

PERSONAL

Change of Name

I, P. AMMAYAMMA W/o. Late K. Raja Rathnam Aged about 78 years, Residing at No. 523 2nd Cross, Nagendra Block, Bengaluru 560050, do hereby declare that K. JAMUNA and P. AMMAYAMMA are one and the same person and not a different person. Herein after I will be known as called as P. AMMAYAMMA only. Vide affidavit dated 23.02.2024 sworn to before S. Eswara Reddy, Advocate & Notary, Govt. of India, Bengaluru.

I, FARIDA Begum Shaik Dawood aged about 69 years W/O Shaik Dawood residing at No. 4/5, Saunders Road cross, Frazer town Bangalore-5 have changed my name as FARIDA BEGUM vide Affidavit dated 05/03/2024, before Notary Noor Ahmed, Bangalore

I, SHIROMANI PM aged about 29 years D/o Maresh Kumar Residing at No. 435, near Mariamma temple, Venugopal Nagar, Bannerghatta Road, Bangalore- 560076. have changed my name to JESSIE SHIROMANI PM vide affidavit dated 05.03.2024 before notary T.R. Raghavendra Rao, Bangalore

I, I. AROCKYANATHAN, S/o. J.M. Irudayaraj, Residing at 49A, 5th Block, BEML Township, C.V. Raman Nagar Post, Bangalore-75 have changed my name to I. SOORRIYA NANDHA, vide affidavit dated 19.10.2012 before notary D.K. Prakash Bangalore.

ಖ್ಯಾತ ಸಂಗೀತ ನಿರ್ದೇಶಕನಿಗೆ ಜನ್ಮಶತಮಾನೋತ್ಸವ ನಿಮಿತ್ತ ನುಡಿನಮನ

ಚಿತ್ರೋತ್ಸವ: ವಿಜಯ ಭಾಸ್ಕರ್ ನೆನಪು

ಪ್ರಜಾವಾಣಿ ವಾರ್ತೆ



ವಿಜಯ ಭಾಸ್ಕರ್ ಜನ್ಮಶತಮಾನೋತ್ಸವದ ಹಿನ್ನೆಲೆಯಲ್ಲಿ ನಡೆದ ನುಡಿನಮನ ಕಾರ್ಯಕ್ರಮದಲ್ಲಿ ಸಂಗೀತ ಸಂಯೋಜಕ, 'ಡೆಕ್ಕನ್ ಹೆರಾಲ್ಡ್' ಸಹ ಸಂಪಾದಕ ಎಸ್‌.ಆರ್‌. ರಾಮಕೃಷ್ಣ, ವಿಜಯ ಭಾಸ್ಕರ್ ಅವರ ಪುತ್ರಿಯರಾದ ಶಂಕರಿ ಅನಂತ್, ಮಂಗಳ ಗೌರಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಜಯತು ಜಯ ವಿಠಲ..', 'ಹಾಡೊಂದ ಹಾಡುವೆ ನೀ ಕೇಳು ಮಗುವೆ..', 'ಹಾವಿನ ದ್ವೇಷ..', 'ಹೂವೊಂದು ಬಳಿ ಬಂದು..' ಹೀಗೆ ಕನ್ನಡಿಗರ ಮನಸ್ಸಿನಲ್ಲಿ ಸದಾ ಹಸಿರಾಗಿರುವ ನೂರಾರು ಹಾಡುಗಳಿಗೆ ಸಂಗೀತ ನೀಡಿದ್ದ ಸಂಗೀತ ನಿರ್ದೇಶಕ ದಿವಂಗತ ವಿಜಯ ಭಾಸ್ಕರ್ ಜನ್ಮಶತಮಾನೋತ್ಸವ ವರ್ಷವಿದು.

ಒರಾಯನ್ ಮಾಲ್‌ನಲ್ಲಿ ನಡೆಯುತ್ತಿರುವ 15ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಿತ್ರೋತ್ಸವದಲ್ಲಿ ಮಂಗಳವಾರ (ಮಾರ್ಚ್ 5) ವಿಜಯ ಭಾಸ್ಕರ್ ಜನ್ಮಶತಮಾನೋತ್ಸವದ ಅಂಗವಾಗಿ ನುಡಿನಮನ ಕಾರ್ಯಕ್ರಮ ನಡೆಯಿತು. ಅವರ ಸಂಗೀತ, ವ್ಯಕ್ತಿತ್ವದ ನೆನಪುಗಳ ಮೆಲುಕು ಇದರಲ್ಲಿ ವಿಶೇಷವಾಗಿತ್ತು.

ವಿಜಯ ಭಾಸ್ಕರ್ ಅವರೊಂದಿಗೆ ಒಡನಾಡಿದ ಸಂದರ್ಭಗಳನ್ನು ನೆನಪಿಸಿಕೊಳ್ಳುತ್ತಾ ಮಾತು ಆರಂಭಿಸಿದ ಸಂಗೀತ ಸಂಯೋಜಕ, 'ಡೆಕ್ಕನ್ ಹೆರಾಲ್ಡ್' ಸಹ ಸಂಪಾದಕ ಎಸ್.ಆರ್. ರಾಮಕೃಷ್ಣ, 'ವಿಜಯ ಭಾಸ್ಕರ್ ಅವರು ಭಾರತದ ಪ್ರಮುಖ ಸಂಗೀತ ಸಂಯೋಜಕರಾಗಿದ್ದರು. 'ಶ್ರೀ ರಾಮ ಪೂಜ' ಅವರು ಸಂಗೀತ ಸಂಯೋಜಿಸಿದ್ದ ಮೊದಲ ಸಿನಿಮಾ. ಅಲ್ಲಿಂದಾಚೆಗೆ 700ಕ್ಕೂ ಅಧಿಕ ಸಿನಿಮಾಗಳಿಗೆ ಅವರು ಸಂಗೀತ ನೀಡಿದ್ದರು. ಮುಂಬೈನಲ್ಲಿ ನೌಶಾದ್ ಅವರ ಆರ್ಕೆಸ್ಟ್ರಾದಲ್ಲಿ ಕೆಲಸ ಆರಂಭಿಸಿ, ಕನ್ನಡದಲ್ಲಿ ಹಲವು ಭಕ್ತಿ ಪ್ರಧಾನ ಚಿತ್ರಗಳಿಗೆ ಸಂಗೀತ ನೀಡಿದರು. ಪುಟ್ಟಣ್ಣ ಕಣಗಾಲ್–ವಿಜಯ ಭಾಸ್ಕರ್ ಅವರದ್ದು ಹಿಟ್ ಕಾಂಬಿನೇಷನ್. 'ನಾಗರಹಾವು' ಚಿತ್ರದಿಂದ ವಿಜಯ ಭಾಸ್ಕರ್ ಅವರ ಸಂಗೀತದ ಶೈಲಿ ಬದಲಾಗುತ್ತಾ ಹೋಯಿತು. ಒಂದು ರೀತಿ ಡ್ರಮಾಟಿಕ್ ಸಂಯೋಜನಾ ಶೈಲಿಯದು. ಅದೇ ರೀತಿ ಹೀರೊಗೆ ಒಂದು ಥೀಮ್ ಸಂಗೀತವನ್ನು ನೀಡಲು ಆರಂಭಿಸಿದ್ದು ಇವರೇ. 'ನಾಗರಹಾವು' ಚಿತ್ರದ ಹೀರೊ ಥೀಮ್ ಸಂಗೀತ ಇದಕ್ಕೆ ಉದಾಹರಣೆ. ಇದು ಇಂದಿಗೂ ಸಿನಿಮಾದಲ್ಲಿ ಪ್ರೇರಣೆಯಾಗಿ ಉಳಿದಿದೆ' ಎಂದರು.

> **ತಂದೆಯ ಪ್ರಪಂಚ ಸಂಗೀತವೇ ಆಗಿತ್ತು. ನಮ್ಮೊಂದಿಗೆ ಅವರ ಒಡನಾಟ ಕಡಿಮೆಯೇ. ಆದರೆ, ಅವರ ಹಾಡುಗಳನ್ನು ಕೇಳಿದಾಗ ನಮಗಾದ ಹೆಮ್ಮೆ ಮಾತಿನಲ್ಲಿ ಕಟ್ಟಲು ಅಸಾಧ್ಯ**
> **–ಶಂಕರಿ ಅನಂತ್**
> ವಿಜಯ ಭಾಸ್ಕರ್ ಹಿರಿಯ ಪುತ್ರಿ

'ಚಲನಚಿತ್ರ ಸಂಗೀತದಲ್ಲಿ ಹಲವು ಪ್ರಯೋಗಗಳನ್ನು ವಿಜಯ ಭಾಸ್ಕರ್ ಮಾಡಿದರು. 'ನಾಗರಹಾವು' ಚಿತ್ರದಲ್ಲಿನ 'ಚಿತ್ರದುರ್ಗದ ಕಲ್ಲಿನ ಕೋಟೆ..' ಹಾಡಿನಲ್ಲಿ ಲಾವಣಿ ಶೈಲಿಯಿದೆ. ಕೆಲವು ನಿರ್ದಿಷ್ಟ ವಾದ್ಯಗಳನ್ನಷ್ಟೇ ಅವರು ಬಳಸುತ್ತಿದ್ದರು. ಸರಳವಾದ ಸಂಗೀತ ಅವರ ಪ್ರಮುಖ ಗುರುತಾಗಿತ್ತು. ಕಮರ್ಷಿಯಲ್ ಸಿನಿಮಾಗಳ ಜೊತೆಗೆ ಕಲಾತ್ಮಕ ಸಿನಿಮಾಗಳಿಗೂ ಸಂಗೀತ ಸಂಯೋಜಿಸಿದ್ದಾರೆ. ಅವರಿಗೆ ಇದ್ದ ಸಾಹಿತ್ಯದ ಬಗೆಗಿನ ಒಲವನ್ನು ಅವರ ಸಂಗೀತದ ಮುಖಾಂತರ ನಾವು ತಿಳಿದುಕೊಳ್ಳಬಹುದು' ಎಂದರು.

ಸ್ಫೋಟಕ್ಕೆ ಸಂಚು: 7 ರಾಜ್ಯಗಳಲ್ಲಿ ಎನ್‌ಐಎ ಶೋಧ

ಒಂದನೇ ಪುಟದಿಂದ...

ಸಂಚು ಭೇದಿಸಿದ್ದ ಸಿಸಿಬಿ ಪೊಲೀಸರು: ಬೆಂಗಳೂರಿನ ಸುಲ್ತಾನ್ ಪಾಳ್ಯದ ಮನೆಯೊಂದರ ಮೇಲೆ 2023ರ ಜುಲೈ 18ರಂದು ದಾಳಿ ನಡೆಸಿದ್ದ ಸಿಸಿಬಿ ಪೊಲೀಸರು, ಶಂಕಿತರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ (30) ಹಾಗೂ ಮೊಹಮ್ಮದ್ ಉಮರ್‌ನನ್ನು ಬಂಧಿಸಿದ್ದರು. ಭಯೋತ್ಪಾದನಾ ಕೃತ್ಯಕ್ಕೆ ಪ್ರಚೋದಿಸುತ್ತಿದ್ದ ಆರೋಪದಡಿ ಶಂಕಿತ ಉಗ್ರ ಟಿ. ನಾಸೀರ್‌ನನ್ನೂ ಸೆರೆ ಹಿಡಿದಿದ್ದರು.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಎನ್‌ಐಎ ಅಧಿಕಾರಿಗಳು ಕೈಗೆತ್ತಿಕೊಂಡಿದ್ದಾರೆ. ದಿ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ತನಿಖೆ ಹೊಣೆಯನ್ನೂ ಎನ್‌ಐಎ ವಹಿಸಿಕೊಂಡಿದೆ.

ಸಹ ಕೈದಿಗಳ ಪ್ರಚೋದನೆ: 'ಇಸ್ಲಾಮಿಕ್ ಸ್ಟೇಟ್ (ಐಎಸ್) ಅಡಿಯಲ್ಲಿ ಲಷ್ಕರ್–ಎ–ತಯಬಾದ ಶಂಕಿತ ಉಗ್ರರು ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದರು. ಜೈಲಿನಲ್ಲಿದ್ದ ಶಂಕಿತ ಉಗ್ರ ನಾಸೀರ್, ಸಹಕೈದಿಗಳನ್ನು ಪ್ರಚೋದಿಸಿ ಭಯೋತ್ಪಾದನಾ ಕೃತ್ಯ ಎಸಗಲು ಹೇಳುತ್ತಿದ್ದನೆಂಬುದು ತನಿಖೆಯಿಂದ ಗೊತ್ತಾಗಿತ್ತು' ಎಂದು ಮೂಲಗಳು ಹೇಳಿವೆ.

'ನಾಸೀರ್ ಸೇರಿದಂತೆ ಎಂಟು ಜನರ ವಿರುದ್ಧ ಎನ್‌ಐಎ ಅಧಿಕಾರಿಗಳು ನ್ಯಾಯಾಲಯಕ್ಕೆ ಜ.12 ರಂದು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ಇನ್ನೊಬ್ಬ ಆರೋಪಿ ಜುನೈದ್ ಅಹ್ಮದ್ ತಲೆಮರೆಸಿಕೊಂಡಿದ್ದಾನೆ' ಎಂದು ತಿಳಿಸಿವೆ.

ಐಜೂರು ಪಿಎಸ್‌ಐ ಅಮಾನತು ರದ್ದು


ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲಾ ವಕೀಲರ ಸಂಘದ 40 ಪದಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿದ ಆರೋಪದ ಮೇಲೆ ಅಮಾನತು ಆಗಿದ್ದ ಐಜೂರು ಪೊಲೀಸ್ ಠಾಣೆ ಪಿಎಸ್‌ಐ ಸಯ್ಯದ್ ತನ್ವೀರ್ ಹುಸೇನ್ ಅವರ ಅಮಾನತು ಆದೇಶ ರದ್ದುಪಡಿಸಲಾಗಿದೆ.

ಕೇಂದ್ರ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ ಅವರು ಮಾರ್ಚ್ 1ರಂದು ಅಮಾನತು ರದ್ದುಪಡಿಸಿ ಆದೇಶ ಹೊರಡಿಸಿದ್ದಾರೆ.

ವಕೀಲರ ಹೋರಾಟ ತೀವ್ರಗೊಂಡ ಹಿನ್ನೆಲೆಯಲ್ಲಿ ಫೆ. 21ರಂದು ಐಜೂರು ಠಾಣೆ ಪಿಎಸ್‌ಐ ಅಮಾನತು ಗೊಳಿಸಲಾಗಿತ್ತು. ಅವರ ವಿಚಾರಣೆ ನಡೆಸಿ ವರದಿ ನೀಡಲು ಚನ್ನಪಟ್ಟಣ ಡಿವೈಎಸ್‌ಪಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೂಚಿಸಿದ್ದರು. ವಿಚಾರಣೆ ನಡೆಸಿದ ಡಿವೈಎಸ್‌ಪಿ 'ತನ್ವೀರ್ ಅವರು ಬಾಹ್ಯ ಒತ್ತಡಕ್ಕೆ ಮಣಿಯದೆ ನಿಷ್ಪಕ್ಷಪಾತವಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಪ್ರಕರಣ ದಾಖಲಿಸಿದ್ದಾರೆ. ಒಂದು ಕೋಮಿನ ಜನರಿಗೆ ಸಹಾಯ ಮಾಡುವ ಉದ್ದೇಶ ಹೊಂದಿರಲಿಲ್ಲ' ಎಂದು ವರದಿ ಕೊಟ್ಟಿದ್ದಾರೆ.

ತಂತ್ರಜ್ಞಾನ



ಚಿಣ್ಣರ ಕಥೆಗಳಿಗೆ ಬಣ್ಣದ ಅಕ್ಷರ 'ಚಿಕ್ಕಮಗಳೂರು'

ಇ.ಎಸ್. ಸುಧೀಂದ್ರ ಪ್ರಸಾದ್

ಡಿಜಿಟಲ್ ಲೋಕದಲ್ಲಿ ಕನ್ನಡ ಭಾಷೆಗೆ ವರವಾದ ಯುನಿಕೋಡ್‌ಗೆ ಅಕ್ಷರ ವಿನ್ಯಾಸದ ಕೊರತೆ ಇದ್ದೇ ಇದೆ. ಇದನ್ನು ನೀಗಿಸುವ ಪ್ರಯತ್ನದಲ್ಲಿರುವ ಬೆಂಗಳೂರಿನ 'ಅಕ್ಷರ ಟೈಪ್ ಸ್ಟುಡಿಯೊ' ಕನ್ನಡದ ಮೊದಲ ಬಣ್ಣದ ಅಕ್ಷರಗಳನ್ನು ಪರಿಚಯಿಸಿದೆ.

ಮಕ್ಕಳ ಕಥೆಗಳಿಗೆ, ಮಕ್ಕಳದ್ದೇ ಮುದ್ದಾದ ಅಕ್ಷರ ಬಳಸಿ, ಅವರ ಎಳೆಯ ಮನಸ್ಸಿನ ಭಾವನೆಗಳನ್ನೆ ಪ್ರಕಟಪಡಿಸುವ ಅಕ್ಷರಗಳು ಇವಾಗಿವೆ. ಇದಕ್ಕೆ 'ಚಿಕ್ಕಮಗಳೂರು' ಎಂದು ಹೆಸರಿಟ್ಟಿದ್ದಾರೆ ಅದರ ವಿನ್ಯಾಸಕ ಟಿ. ನರಸೀಪುರ ಮೂಲದವರಾದ ಮಂಜುನಾಥ ಆರ್.

ಬ್ಯಾನರ್‌ಗಳನ್ನು ಬರೆಯುವುದರ ಮೂಲಕ ಅಕ್ಷರ ವಿನ್ಯಾಸದಲ್ಲಿ ಆಸಕ್ತಿ ತಳೆದ ಮಂಜುನಾಥ್, ಅದೇ ಕ್ಷೇತ್ರದಲ್ಲೇ ಶಿಕ್ಷಣ ಪಡೆದವರು. ಕನ್ನಡಕ್ಕಾಗಿ ಹೊಸತನ್ನು ನೀಡಬೇಕೆಂಬ ಹಂಬಲ ಹೊಂದಿದವರು. ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಬಳಸಿದ ಡಿಜಿಟಲ್ ಬೋರ್ಡ್‌ನಲ್ಲಿ ಕನ್ನಡ ಫಲಕಕ್ಕೆ ಇರುವ ಅಡ್ಡಿ ಆತಂಕಗಳನ್ನು ನಿವಾರಿಸುವ ಪಣತೊಟ್ಟ ಇವರು, ರಚಿಸಿದ್ದೇ 'ಬೆಂಗಳೂರು' ಎಂಬ ವಿನ್ಯಾಸದ ಅಕ್ಷರಗಳನ್ನು.



ಮಂಜುನಾಥ ಆರ್.

ಇವರ ಪ್ರಯತ್ನದ ಫಲವಾಗಿಯೇ ಕೆಲವು ಬಸ್ಸುಗಳಲ್ಲಿ 'ಬೆಂಗಳೂರು ಎಲ್‌ಇಡಿ' ಫಾಂಟ್‌ಗಳು ಬಳಕೆಯಾಗುತ್ತಿವೆ. ವನ್ಯಜೀವಿಗಳ ಬಗ್ಗೆ ಅಪಾರ ಕಾಳಜಿಯುಳ್ಳ ಇವರು, ಆನೆಯನ್ನೇ ಮಾದರಿಯಾಗಿಟ್ಟುಕೊಂಡು ವಿನ್ಯಾಸಗೊಳಿಸಿದ ಫಾಂಟ್‌ಗೆ 'ಬಂಡೀಪುರ' ಎಂದು ಹೆಸರಿಟ್ಟಿದ್ದಾರೆ. ಇದರ ಬಳಕೆಯೂ ವ್ಯಾಪಕವಾಗಿದೆ.

'ವಿವಾಹ, ಪುಸ್ತಕ ಬಿಡುಗಡೆ ಹೀಗೆ ಹಲವು ಸಂದರ್ಭಗಳ ಆಹ್ವಾನ ಪತ್ರಿಕೆಯಲ್ಲಿ ಸಂದರ್ಭಕ್ಕೆ ಅನುಗುಣವಾದ ಅಕ್ಷರಗಳ ವಿನ್ಯಾಸವನ್ನೇ ಬಳಸುತ್ತೇವೆ. ಆದರೆ ಕಥೆಗಳಿಗೆ, ಅದರಲ್ಲೂ ವಿಶೇಷವಾಗಿ ಮಕ್ಕಳ ಕಥೆಗಳಿಗೂ ದೊಡ್ಡವರ ಕಥೆಗಳಿಗೆ ಬಳಸುವ ಅಕ್ಷರಗಳನ್ನೇ ಬಳಸುತ್ತಿದ್ದೇವೆ. ಇದು ಮಕ್ಕಳ ಆ ಮುಗ್ಧ ಮನಸ್ಸಿನ ಭಾವಗಳನ್ನು ಅಭಿವ್ಯಕ್ತಪಡಿಸುವಲ್ಲಿ ವಿಫಲವಾಗುತ್ತಿದೆ ಎಂಬ ಕೊರಗು ಸದಾ ನನ್ನನ್ನು ಕಾಡುತ್ತಿತ್ತು. ಇದಕ್ಕೊಂದು ಪರಿಹಾರ ಕಂಡುಕೊಳ್ಳಬೇಕು ಎಂಬ ಉದ್ದೇಶದಿಂದಲೇ ಈ ಅಕ್ಷರ ವಿನ್ಯಾಸದ ಅಭಿವೃದ್ಧಿಗೆ ಕೈಹಾಕಿದೆ. ಸುಮಾರು ಒಂದು ವರ್ಷಗಳ ಪ್ರಯತ್ನದ ಫಲವೇ ಈ ಫಾಂಟ್' ಎನ್ನುವುದು ಅವರ 'ಚಿಕ್ಕಮಗಳೂರು' ಪಯಣದ ಕಥೆ.

ಮುದ್ರಣವೇ ಆಗಿರಲಿ ಅಥವಾ ಡಿಜಿಟಲ್ ಮಾಧ್ಯಮವೇ ಆಗಿರಲಿ ಅಕ್ಷರ ಟೈಪ್ ಸ್ಟುಡಿಯೊ ವಿನ್ಯಾಸಗೊಳಿಸಿದ ಫಾಂಟ್‌ಗಳು ಬಳಸಲು ಸಂಪೂರ್ಣವಾಗಿ ಉಚಿತ. ಸ್ಟುಡಿಯೊದ ಅಧಿಕೃತ ಅಂತರ್ಜಾಲಪುಟದಿಂದ (aksharatypestudio.in) ಡೌನ್‌ಲೋಡ್ ಮಾಡಿಕೊಳ್ಳಬಹುದು. ಆದರೆ ಓಪನ್ ಸೋರ್ಸ್ ಅಲ್ಲದ ಈ ಓಪನ್ ಟೈಪ್ ಫಾಂಟ್‌ಗೆ ಬೇರೆ ವಿನ್ಯಾಸ ಕೊಡಬೇಕೆಂದರೆ, ಅದಕ್ಕಾಗಿ ಇವರ ಸ್ಟುಡಿಯೊಗೆ ಕೋರಿಕೆ ಕಳಿಸುವುದು ಅಗತ್ಯ.

ಅಡೋಬಿ, ಮೈಕ್ರೊಸಾಫ್ಟ್, ಐಒಎಸ್‌ಗಳಲ್ಲಿ ಸುಲಭವಾಗಿ 'ಅಕ್ಷರ ಟೈಪ್ ಸ್ಟುಡಿಯೊ'ದ 'ಬೆಂಗಳೂರು', 'ಬಂಡೀಪುರ' ಹಾಗೂ 'ಚಿಕ್ಕಮಗಳೂರು' ಫಾಂಟ್‌ಗಳನ್ನು ಬಳಸಬಹುದು. ಆಫ್ರಿಕಾದ 146, ಅಮೆರಿಕದ 105, ಏಷ್ಯಾದ 72, ಯುರೋಪ್‌ನ 93 ಹಾಗೂ ಓಷಿನಿಯಾದ 25 ಸೇರಿ ಒಟ್ಟು 441 ಫಾಂಟ್‌ಗಳಿಗೂ 'ಚಿಕ್ಕಮಗಳೂರು' ಒಳಗೊಂಡಂತೆ ಅಕ್ಷರ ಟೈಪ್ ಸ್ಟುಡಿಯೊದ ಫಾಂಟ್‌ಗಳನ್ನು ಬಳಸಬಹುದು. ಹೀಗಾಗಿ ಕನ್ನಡದ ಮಕ್ಕಳ ಅಕ್ಷರದ ಅಂದ ಜಗತ್ತಿನ ಹಲವು ಭಾಷೆಗಳಿಗೂ ಅನ್ವಯವಾಗುವಂತೆ ವಿನ್ಯಾಸಗೊಳಿಸಲಾಗಿದೆ.


'ಚಿಕ್ಕಮಗಳೂರು' ಫಾಂಟ್ ಅನ್ನು ಅಭಿವೃದ್ಧಿಪಡಿಸಿದುದ್ದರ ಬಗ್ಗೆ ಮಂಜುನಾಥ್, 'ಒಂದರಿಂದ ಮೂರನೇ ತರಗತಿವರೆಗಿನ ಮಕ್ಕಳ ಕೈಬರಹಗಳನ್ನು ಇದಕ್ಕಾಗಿ ಅಭ್ಯಸಿಸಲಾಯಿತು. ಅವರು ಬರೆಯುವ ಶೈಲಿ, ತಪ್ಪಾದರೆ ಗೀಚುವ ವಿನ್ಯಾಸ, ಆ ಏರಿಳಿತ, ಚಿತ್ತಾರಗಳ ವಿನ್ಯಾಸ ತೊದಲುನುಡಿಯಷ್ಟೇ ಚೆನ್ನ. ಅವುಗಳಿಗೆ ಡಿಜಿಟಲ್ ಸ್ಪರ್ಶವನ್ನು ನೀಡುವ ಮೂಲಕ ಒಂದಷ್ಟು ಬದಲಾವಣೆಗಳನ್ನು ಮಾಡಿ 'ಚಿಕ್ಕಮಗಳೂರು' ವಿನ್ಯಾಸಗೊಂಡಿದೆ. ಅದಕ್ಕೊಂದಷ್ಟು ಹಿತ ನೀಡುವ ಬಣ್ಣಗಳನ್ನು ಬಳಸಲಾಗಿದೆ. ಈ ಅಕ್ಷರವನ್ನು ಯಾವುದೇ ಪ್ಲಾಟ್‌ಫಾರ್ಮ್‌ನಲ್ಲಿ ಬಳಸಿದರೂ ಅದೇ ಬಣ್ಣ ಹಾಗೂ ವಿನ್ಯಾಸದಲ್ಲೇ ಮೂಡಿಬರಲಿದೆ ಎನ್ನುವದೇ ಇದರ ವಿಶೇಷತೆ' ಎಂದಿದ್ದಾರೆ.



ಅಕ್ಷರ ಟೈಪ್ ಸ್ಟುಡಿಯೊದ 'ಚಿಕ್ಕಮಗಳೂರು' ಅಕ್ಷರ ವಿನ್ಯಾಸ

ಅಕ್ಷರ ಟೈಪ್ ಸ್ಟುಡಿಯೊದ ಫಾಂಟ್‌ಗಳನ್ನು ತಮ್ಮ ಕಂಪ್ಯೂಟರ್ ಅಥವಾ ಮೊಬೈಲ್‌ಗೆ ಡೌನ್‌ಲೋಡ್ ಮಾಡಿಕೊಂಡಾದರೂ ಬಳಸಬಹುದು. ಇಲ್ಲವೇ ಅಕ್ಷರ ಟೈಪ್ ಸ್ಟುಡಿಯೊದ ಅಂತರ್ಜಾಲಪುಟದಲ್ಲಿ ಇರುವ ಎಡಿಟರ್‌ನಲ್ಲಿ ನೀಡಿರುವ ಕೀಲಿಮಣೆ ಬಳಸಿಯೂ ಟೈಪಿಸಿ, ಅದಕ್ಕೆ ತಮ್ಮಿಷ್ಟದ ಅಕ್ಷರ ವಿನ್ಯಾಸವನ್ನೂ ಬಳಸಲೂ ಅವಕಾಶ ಕಲ್ಪಿಸಲಾಗಿದೆ. ಈ ಕೀಲಿಮಣೆಯಲ್ಲಿ ಕೆಲವೊಂದು ವಿಶೇಷ ಪದಗಳ ರಚನೆಯ ಬಗ್ಗೆಯೂ ಮಾಹಿತಿ ಇದೆ.

'ಚಿಕ್ಕಮಗಳೂರು' ಅಕ್ಷರವನ್ನು ಕಂಪ್ಯೂಟರ್‌ನಂತ ಡಿಜಿಟಲ್ ಸಾಧನಗಳಲ್ಲಿ ಬಳಸಲು ಅನುಕೂಲವಾಗುವಂತೆ ಒಟಿಎಫ್ ಹಾಗೂ ಟಿಟಿಎಫ್ ಮಾದರಿಗಳಲ್ಲೂ ಲಭ್ಯ. ಜತೆಗೆ ಅಂತರ್ಜಾಲಗಳಲ್ಲಿ ಬಳಸಲು ಅನುಕೂಲವಾಗುವಂತೆ ಡಬ್ಲೂಒಎಫ್‌ಎಫ್ ಹಾಗೂ ಡಬ್ಲೂಒಎಫ್‌ಎಫ್2 ಮಾದರಿಯಲ್ಲೂ ಲಭ್ಯವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಈ ಫಾಂಟ್ ಅನ್ನು ಬಳಸುವ ವಿಧಾನವನ್ನೂ ಅಂತರ್ಜಾಲಪುಟದಲ್ಲಿ ವಿವರಿಸಲಾಗಿದೆ. ಅಡೋಬಿ ಇಲಸ್ಟ್ರೇಟ್, ಅಡೋಬಿ ಇನ್‌ಡಿಸೈನ್, ಮೈಕ್ರೊಸಾಫ್ಟ್ ವರ್ಡ್, ಆ್ಯಪಲ್ ಆ್ಯಪ್‌ಗಳು, ಫಿಗ್ಮಾ, ಸಿಎಸ್‌ಎಸ್‌ನಲ್ಲಿ ಬಳಸುವುದು ಹೇಗೆ ಎಂಬುದರ ವಿವರಣೆಗಳನ್ನು ಅಲ್ಲಿ ಪಡೆಯ ಬಹುದು. ಇಂಗ್ಲಿಷ್ ಮತ್ತು ಲ್ಯಾಟಿನ್‌ಗಳನ್ನು ಹೊರತುಪಡಿಸಿದರೆ ಬಣ್ಣದ ಫಾಂಟ್‌ಗಳು ದೊರೆಯುವುದು ಕನ್ನಡದಲ್ಲೇ. ಉಚಿತವಾಗಿ ನೀಡಲಾಗುತ್ತಿರುವ ಈ ಫಾಂಟ್‌ಗಳ ಮೂಲಕ ಕನ್ನಡಕ್ಕಾಗಿ ನನ್ನದೊಂದು ಅಳಿಲು ಸೇವೆಯಷ್ಟೇ' ಎನ್ನುವುದು ವಿನ್ಯಾಸಕರ ಧನ್ಯತೆಯ ಮಾತು.



ಆರೋಗ್ಯಕ್ಕೆ ಫಿಟ್ನೆಸ್ ಟ್ರ್ಯಾಕರ್‌ಗಳು

ಅವಿನಾಶ್ ಬಿ.

ಇದು ಧಾವಂತದ ಯುಗ. ದೈಹಿಕ ಚಟುವಟಿಕೆ ಕಡಿಮೆ, ಕುಳಿತಲ್ಲೇ ಮಾಡುವ ಕೆಲಸಗಳೇ ಹೆಚ್ಚು. ಇದಕ್ಕೆ ಮಾನಸಿಕ ಕ್ಷಮತೆ, ಏಕಾಗ್ರತೆ ಬೇಕು. ಆದರೆ, ಮನೋದ್ವೇಗ, ಮಾನಸಿಕ ಒತ್ತಡಗಳಿಂದ ದೈಹಿಕ ಸ್ವಾಸ್ಥ್ಯವೂ ಕೆಡುತ್ತಿದೆ. ಹೃದಯಾಘಾತ, ಇಲ್ಲವೇ ಹೃದಯಸ್ತಂಭನವಾದ ಘಟನೆಗಳು ಸಾಮಾನ್ಯವಾಗುತ್ತಿರುವುದನ್ನು ನಾವಿಂದು ಮಾಧ್ಯಮಗಳಲ್ಲಿ ಓದುತ್ತಿದ್ದೇವೆ. ಈಗಿನ ಆಧುನಿಕ ಜೀವನಶೈಲಿಯಲ್ಲಿ ಮನುಷ್ಯರಿಗೆ ಸಮಯವಿಲ್ಲದಿರುವಾಗ, ಆರೋಗ್ಯರಕ್ಷಣೆಗೆ ಸಹಾಯ ಮಾಡಲೆಂದೇ ತಂತ್ರಜ್ಞಾನವೂ ಬೆಳೆದಿದೆ. ಇದರ ಫಲವೇ 'ಫಿಟ್ನೆಸ್ ಟ್ರ್ಯಾಕರ್'ಗಳು.

ದೈಹಿಕ ಚಟುವಟಿಕೆಗಳ ಜಾಡು ಹಿಡಿಯಬಲ್ಲ ಈ ಫಿಟ್ನೆಸ್ ಟ್ರ್ಯಾಕರ್‌ಗಳು ಸ್ಮಾರ್ಟ್ ವಾಚ್‌ಗಳ ರೂಪದಲ್ಲಿ, ಕೈಯಲ್ಲಿರುವ ಸ್ಮಾರ್ಟ್ ಬ್ಯಾಂಡ್ ರೂಪದಲ್ಲಿ, ಸ್ಮಾರ್ಟ್ ಫೋನ್‌ನಲ್ಲಿ ಆ್ಯಪ್‌ಗಳ ರೂಪದಲ್ಲಿ ನಮಗಿಂದು ಲಭ್ಯ. ಇವುಗಳಲ್ಲಿರುವುದು ಸೆನ್ಸರ್‌ಗಳು ಅಥವಾ ಸಂವೇದಕಗಳು. ಈ ಸೆನ್ಸರ್‌ಗಳು ದೈಹಿಕ ಚಟುವಟಿಕೆಗಳ ಜಾಡು ಹಿಡಿದು ದಾಖಲಿಸಿಕೊಳ್ಳಬಲ್ಲವು.

ನಡಿಗೆ, ಓಟ, ಬೆಟ್ಟ-ಮೆಟ್ಟಿಲು ಎಷ್ಟೆತ್ತರ ಏರಿದೆವು ಎಂಬುದನ್ನೂ, ಸೈಕ್ಲಿಂಗ್, ನಿದ್ರೆ, ಉಸಿರಾಟ, ಹೃದಯಬಡಿತ, ರಕ್ತದಲ್ಲಿನ ಆಮ್ಲಜನಕದ ಪ್ರಮಾಣ, ರಕ್ತದ ಒತ್ತಡ ಮುಂತಾದವುಗಳಷ್ಟೇ ಅಲ್ಲ, ಬೆವರಿನ ಪ್ರಮಾಣವನ್ನೂ ಅಳೆಯಬಲ್ಲವು, ವಿಶ್ಲೇಷಿಸಬಲ್ಲವು. ಹೆಚ್ಚು ಹೊತ್ತು ಮೊಬೈಲ್ ಫೋನ್‌ನಲ್ಲಿ ಅಥವಾ ಕಂಪ್ಯೂಟರ್ ಕೆಲಸದಲ್ಲಿ ಮಗ್ನವಾಗಿದ್ದರೆ ಗಂಟೆಗೊಮ್ಮೆ ಎದ್ದು ನಡೆಯುವಂತೆ ಸೂಚನೆ ನೀಡಬಲ್ಲವು. ಇದಕ್ಕೆ ಪೂರಕವಾದ ತಂತ್ರಾಂಶವು ನಿರ್ದಿಷ್ಟ ಚಟುವಟಿಕೆಯೇನಾದರೂ ಕಡಿಮೆಯಾದಲ್ಲಿ ನಮ್ಮನ್ನು ಎಚ್ಚರಿಸಬಲ್ಲದು, ನಾವು ಇರಿಸಿದ ಗುರಿ ತಲುಪಿದರೆ, ಶಹಬ್ಬಾಸ್ ಹೇಳಿ ಹುರಿದುಂಬಿಸಬಲ್ಲದು; ಮತ್ತು ಹೆಚ್ಚು ಚಟುವಟಿಕೆಯಿಂದಿರುವಂತೆ ಪ್ರೇರೇಪಿಸಬಲ್ಲದು. ಪರಿಣಾಮ, ನಮ್ಮ ದೈಹಿಕ ಚಟುವಟಿಕೆ ಹೆಚ್ಚಾಗಿ, ಕೊಂಚವಾದರೂ ದೇಹಕ್ಕೆ, ಮನಸ್ಸಿಗೆ ವ್ಯಾಯಾಮ ದೊರೆಯುವಂತಾಗುತ್ತದೆ.

ಕಳೆದ ತಿಂಗಳು ಬೆಂಗಳೂರಿನ ಕೋಡ್ ಡೆವಲಪರ್ ಶರತ್ ಶ್ರೀರಾಮ್ ಎಂಬವರು ಆ್ಯಪಲ್ ಸಿಇಒ ಟಿಮ್ ಕುಕ್‌ಗೆ ಪತ್ರ ಬರೆದು, ಆ್ಯಪಲ್ ವಾಚ್‌ನಲ್ಲಿದ್ದ ಹೃದಯಬಡಿತದ ವೇಗವನ್ನು ತಿಳಿಸುವ ವೈಶಿಷ್ಟ್ಯದಿಂದ ತನ್ನ ಆರೋಗ್ಯ ಸುಧಾರಣೆಯಾಗಿರುವ ಬಗ್ಗೆ ತಿಳಿಸಿ ಧನ್ಯವಾದ ಹೇಳಿದ ಸುದ್ದಿ ವರದಿಯಾಗಿತ್ತು.

ಸಾಫ್ಟ್‌ವೇರ್ ಕ್ಷೇತ್ರದ ಉದ್ಯೋಗಿಯಾಗಿ, ನಿಗದಿತ ಸಮಯಕ್ಕಿಂತ ಹೆಚ್ಚು ಸಮಯ ಕೆಲಸ, ನಿರ್ದಿಷ್ಟ ಗಡುವಿನೊಳಗೆ ಕೆಲಸ ಮುಗಿಸಲೇಬೇಕಾದ ಅನಿವಾರ್ಯತೆ - ಹೀಗೆ ಕೆಲಸದ ಒತ್ತಡದಿಂದಾಗಿ ಅವರಿಗೆ ಹೃದಯ ಬಡಿತದ ವೇಗ ತೀರಾ ಹೆಚ್ಚಾಗಿದೆ ಎಂಬ ನೋಟಿಫಿಕೇಶನ್ ಬರುತ್ತಿತ್ತು. ಇದರ ಆಧಾರದಲ್ಲಿ ಇಸಿಜಿ ಮಾಡಿಸಿ ನೋಡಿದಾಗ, ದೈಹಿಕ ಆರೋಗ್ಯ ಚೆನ್ನಾಗಿಯೇ ಇತ್ತು. ವೈದ್ಯರಲ್ಲಿ ತಪಾಸಣೆ ಮಾಡಿದಾಗ, ಈ ರೀತಿಯ ಸ್ಟ್ರೆಸ್ ಮುಂದಕ್ಕೆ ಗಂಭೀರ ಅನಾರೋಗ್ಯಕ್ಕೆ ಕಾರಣವಾಗಬಹುದು ಎಂಬ ಎಚ್ಚರಿಕೆ ದೊರೆಯಿತು. ವೈದ್ಯರ ಸಲಹೆ ಪಡೆದ ಬಳಿಕ ಅವರು ಉದ್ಯೋಗದಲ್ಲಿ ಬದಲಾವಣೆ ಮಾಡಿಕೊಂಡು, ತಮ್ಮ ಹೃದಯಬಡಿತದ ವೇಗವನ್ನು ತಹಬಂದಿಗೆ ತಂದುಕೊಂಡಿದ್ದರು.

ದೈಹಿಕ ಸ್ವಾಸ್ಥ್ಯದಷ್ಟೇ ಮಾನಸಿಕ ಕ್ಷಮತೆಯೂ ಮುಖ್ಯ. ಇದನ್ನೂ ನಾವು ನಿರ್ಲಕ್ಷಿಸದಂತೆ ಸಹಾಯ ಮಾಡುತ್ತವೆ, ಫಿಟ್ನೆಸ್ ಟ್ರ್ಯಾಕರ್‌ಗಳು. ಈ ತಂತ್ರಜ್ಞಾನ ಅಳವಡಿಸಿರುವ ಸಾಧನಗಳನ್ನು 'ವೇರೆಬಲ್ಸ್' (ಧರಿಸಬಹುದಾದ ಸಾಧನಗಳು) ಎಂದು ಕರೆಯುತ್ತಾರೆ. ಆಂಡ್ರಾಯ್ಡ್, ಆ್ಯಪಲ್‌ನ ಸಾಕಷ್ಟು ಸ್ಮಾರ್ಟ್ ಸಾಧನಗಳು (ವಾಚ್, ಬ್ಯಾಂಡ್) ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಇವುಗಳಿಂದ ಲಭ್ಯವಾಗುವ ದತ್ತಾಂಶವನ್ನು ಸ್ಮಾರ್ಟ್ ಫೋನ್‌ಗೆ ವರ್ಗಾಯಿಸಬಹುದು, ವಿಶ್ಲೇಷಿಸಬಹುದು ಮತ್ತು ವೈದ್ಯರಿಗೆ ತೋರಿಸಿ ಅವರಿಂದ ಸಲಹೆ ಪಡೆಯಬಹುದು.

ವೈದ್ಯಕೀಯ ಸಾಧನಗಳಲ್ಲ: ಬಹುತೇಕ ಫಿಟ್ನೆಸ್ ಟ್ರ್ಯಾಕರ್ ತಂತ್ರಾಂಶಗಳು ವೈದ್ಯಕೀಯವಾಗಿ ಅಧಿಕೃತ ಪರೀಕ್ಷೆಗೊಳಪಟ್ಟಿಲ್ಲ. ಇದರಿಂದಾಗಿಯೇ ಅವುಗಳನ್ನು ವೈದ್ಯಕೀಯ ಸಾಧನಗಳೆಂದು ಪರಿಗಣಿಸುವಂತಿಲ್ಲ. ಎಂದರೆ, ಇದರಲ್ಲಿ ಲಭ್ಯವಾದ ಮಾಹಿತಿಯು ಶೇ 100 ನಿಖರ ಎನ್ನುವಂತಿಲ್ಲ.

ಈ ಟ್ರ್ಯಾಕರ್‌ಗಳು ನಡಿಗೆಯ ಹೆಜ್ಜೆ, ವ್ಯಯಿಸಿದ ಸಮಯದ ಲೆಕ್ಕಾಚಾರವನ್ನು ನಿಖರವಾಗಿ ತೋರಿಸಬಹುದಾದರೂ, ಹೃದಯ ಬಡಿತ, ರಕ್ತದೊತ್ತಡ, ರಕ್ತದಲ್ಲಿರುವ ಆಮ್ಲಜನಕ ಪ್ರಮಾಣ ಮುಂತಾದವುಗಳ ಬಗ್ಗೆ ಸುಳಿವಷ್ಟೇ ನೀಡಬಲ್ಲವು; ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳುವಂತೆ ಪ್ರೇರಣೆ ನೀಡಬಲ್ಲವು. ಇವು ವೈದ್ಯಕೀಯ ಸಾಧನಗಳಲ್ಲದ ಕಾರಣ, ನಾವು ಪೂರ್ತಿಯಾಗಿ ನಂಬುವಂತಿಲ್ಲ.

ಆದರೆ, ಫಿಟ್ನೆಸ್ ಟ್ರ್ಯಾಕರ್ ಇರುವ ಸ್ಮಾರ್ಟ್‌ವಾಚ್ ಅಥವಾ ಆ್ಯಪ್ ಬಳಸಿ, ಹಲವರು ಆರೋಗ್ಯಕರ ಜೀವನ ಶೈಲಿಯನ್ನು ರೂಢಿಸಿಕೊಂಡಿರುವುದು, ದೈಹಿಕ ಚಟುವಟಿಕೆ ಹೆಚ್ಚಿಸಿ ಆರೋಗ್ಯದಲ್ಲಿ ಸುಧಾರಣೆ ಮಾಡಿಕೊಂಡಿರುವುದು ಸುಳ್ಳಲ್ಲ.

ಪ್ರಯೋಜನಗಳು


ಫಿಟ್ನೆಸ್ ಟ್ರ್ಯಾಕರ್‌ಗಳ ಪರಿಣಾಮಕಾರಿತ್ವದ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿದ್ದು, ಆರೋಗ್ಯಕರ ಜೀವನಶೈಲಿ ರೂಢಿಸಿಕೊಳ್ಳುವ ಬಗ್ಗೆ ಇವು ಪ್ರೇರಣೆ ನೀಡುತ್ತವೆ ಮತ್ತು ದೈಹಿಕ ಸ್ವಾಸ್ಥ್ಯ ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರವನ್ನಯ ವಹಿಸುತ್ತವೆ ಎಂಬುದು ದೃಢಪಟ್ಟಿದೆ.

ವಿಶೇಷವಾಗಿ ಈ ಕಾಲದ ಆತಂಕಗಳಲ್ಲಿ ಪ್ರಮುಖವಾಗಿರುವ ಹೃದಯದ ನಾಳ, ರಕ್ತದೊತ್ತಡಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ಆರಂಭದಲ್ಲೇ ಪತ್ತೆ ಹಚ್ಚಿ ವೈದ್ಯಕೀಯ ಸಲಹೆ ಪಡೆಯಲು ಫಿಟ್ನೆಸ್ ಟ್ರ್ಯಾಕರ್‌ಗಳ ಕೊಡುಗೆ ಗಮನಾರ್ಹ.

ನಿಯಮಿತವಾಗಿ ವ್ಯಾಯಾಮ, ನಡಿಗೆ ಮುಂತಾದ ದೈಹಿಕ ಚಟುವಟಿಕೆಗಳನ್ನು ಉತ್ತೇಜಿಸುತ್ತವೆ. ತನ್ಮೂಲಕ ತೂಕ ಇಳಿಸಿಕೊಳ್ಳಲು, ಒತ್ತಡ ಕಡಿಮೆ ಮಾಡಿಕೊಳ್ಳಲು, ಹೃದಯ ಬಡಿತದ ಮಿತಿ ಕಾಯ್ದುಕೊಳ್ಳುವಲ್ಲಿ ನೆರವಾಗುತ್ತವೆ.

ಹಿಂದಿನ ದಿನಕ್ಕೆ ಅಥವಾ ಹಿಂದಿನ ವಾರ ಅಥವಾ ತಿಂಗಳಿನ ನಮ್ಮ ದೈಹಿಕ ಚಟುವಟಿಕೆಗಳನ್ನು ಹೋಲಿಸಿ, ಸುಧಾರಿಸಿಕೊಳ್ಳುವಲ್ಲಿಯೂ ಈ ಸಾಧನಗಳಲ್ಲಿ ಅಡಕವಾಗಿರುವ ತಂತ್ರಾಂಶಗಳು ನೆರವಾಗುತ್ತವೆ. ನಮ್ಮನ್ನು ಚಟುವಟಿಕೆಯಿಂದಿರುವಂತೆ ನೋಡಿಕೊಂಡು, ಆರೋಗ್ಯಕರ ಜೀವನಶೈಲಿಯನ್ನು ಹುರಿದುಂಬಿಸುತ್ತವೆ.

ಈ ಕಾರಣಕ್ಕಾಗಿ ಇ-ಯುಗದಲ್ಲಿ 'ಫಿಟ್ನೆಸ್ ಬ್ಯಾಂಡ್' ಅಥವಾ 'ಸ್ಮಾರ್ಟ್ ವಾಚ್'ಗಳು ಅನಿವಾರ್ಯವಾಗಿವೆ. ತಂತ್ರಜ್ಞಾನದ ಪ್ರಗತಿಯ ಜೊತೆಗೆ ನಾವೂ ಹೆಜ್ಜೆ ಹಾಕುವಲ್ಲಿ ಸಹಕರಿಸುತ್ತವೆ. ಇಂದು ಮೊಬೈಲ್ ಫೋನ್‌ಗಳು ನಮ್ಮ ಜೀವನದ ಅವಿಭಾಜ್ಯ ಅಂಗವಾದಂತೆಯೇ ಮುಂದಿನ ಸರದಿ, ಈ ಫಿಟ್ನೆಸ್ ಟ್ರ್ಯಾಕರ್‌ಗಳಿರುವ ಸ್ಮಾರ್ಟ್ ವಾಚ್‌ಗಳದ್ದು.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ವಿಜ್ಞಾನ

ಮಾದರಿ ಪ್ರಶ್ನೋತ್ತರ–

54) ಪುನರುತ್ಪಾದನೆ (regeneration) ಮೂಲಕ ನಡೆಯುವ ಸಂತಾನೋತ್ಪತ್ತಿಯ ಬಗ್ಗೆ ಬರೆಯಿರಿ.

ಉತ್ತರ:– ಸಂಪೂರ್ಣವಾಗಿ ವಿಭೇದೀಕರಿಸಿದ ಅನೇಕ ಜೀವಿಗಳು ತಮ್ಮ ದೇಹದ ಭಾಗಗಳಿಂದ ಹೊಸ ಜೀವಿಗಳನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿವೆ. ಅಂದರೆ, ಒಂದು ವೇಳೆ ಜೀವಿಯು ಯಾವುದೋ ಕಾರಣದಿಂದ ತುಂಡಾದರೆ ಅಥವಾ ಅನೇಕ ಚೂರುಗಳಾಗಿ ಮುರಿದು ಹೋದರೆ ಇಂತಹ ಅನೇಕ ಚೂರುಗಳು ಪ್ರತ್ಯೇಕ ಜೀವಿಗಳಾಗಿ ಬೆಳೆಯುತ್ತವೆ. ಉದಾಹರಣೆಗೆ ಹೈಡ್ರಾ ಮತ್ತು ಪ್ಲನೇರಿಯಗಳಂಥ ಸರಳ ಜೀವಿಗಳನ್ನು ಅನೇಕ ಚೂರುಗಳಾಗಿ ತುಂಡರಿಸಬಹುದು ಮತ್ತು ಪ್ರತಿ ಚೂರೂ ಒಂದು ಸಂಪೂರ್ಣ ಜೀವಿಯಾಗಿ ಬೆಳೆಯುತ್ತದೆ. ಇದನ್ನು ಪುನರುತ್ಪಾದನೆ (regeneration) ಎಂದು ಕರೆಯುವರು ವಿಶಿಷ್ಟ ಜೀವಕೋಶಗಳು ಪುನರುತ್ಪಾದನೆಯನ್ನು ನಡೆಸುತ್ತವೆ. ಈ ಜೀವಕೋಶಗಳು ವೃದ್ಧಿಯಾಗುತ್ತವೆ ಮತ್ತು ಅಸಂಖ್ಯ ಜೀವಕೋಶಗಳನ್ನು ಉಂಟುಮಾಡುತ್ತವೆ. ಈ ಜೀವಕೋಶಗಳ ಸಮೂಹದಿಂದ ವಿಭಿನ್ನ ಜೀವಕೋಶಗಳು ಬದಲಾವಣೆಗಳಿಗೆ ಒಳಗಾಗಿ ಅನೇಕ ವಿಧದ ಜೀವಕೋಶ ಮತ್ತು ಅಂಗಾಂಶಗಳಾಗುತ್ತವೆ. ಈ ಬದಲಾವಣೆಗಳು ಒಂದು ಸಂಘಟಿತವಾದ ಅನುಕ್ರಮದಲ್ಲಿ ನಡೆಯುತ್ತವೆ. ಇದನ್ನು ಅಭಿವರ್ಧನೆ (development) ಎನ್ನುವರು.

55) ಮಾನವನ ಮಿದುಳಿನ ಚಿತ್ರ ಬರೆದು ವಿವಿಧ ಭಾಗಗಳನ್ನು ಗುರುತಿಸಿ



56) ಪರಿಸರವನ್ನು ರಕ್ಷಿಸಲು ಇರಬೇಕಾದ ಐದು R ಗಳ ಬಗ್ಗೆ ವಿವರಿಸಿ

ಉತ್ತರ:– ಪರಿಸರವನ್ನು ರಕ್ಷಿಸಲು ನೀವು ಐದು R ಗಳನ್ನು ಅನುಸರಿಸಬೇಕು: Refuse (ನಿರಾಕರಣೆ), Reduse (ಮಿತಬಳಕೆ) Reuse (ಮರುಬಳಕೆ) Repurpose (ಮರುಉದ್ದೇಶ) ಮತ್ತು Recycle (ಮರುಚಕ್ರೀಕರಣ) ಅವು

ನಿರಾಕರಣೆ : ನಮಗೆ ಅಗತ್ಯವಿಲ್ಲದ ವಸ್ತುಗಳನ್ನು ಜನರು ನಮಗೆ ಕೊಡಲು ಬಂದಾಗ ಬೇಡ ಎಂದು ಹೇಳುವುದೇ ಇದರ ಅರ್ಥ. ನಮಗೆ ಮತ್ತು ಪರಿಸರಕ್ಕೆ ಹಾನಿ ಉಂಟುಮಾಡುವ ವಸ್ತುಗಳನ್ನು ಕೊಂಡುಕೊಳ್ಳುವುದನ್ನು ನಿರಾಕರಿಸಿ, ಒಮ್ಮೆ ಮಾತ್ರ ಬಳಸಬಹುದಾದ ಪ್ಲಾಸ್ಟಿಕ್ ಕೈಚೀಲಗಳನ್ನು ತಿರಸ್ಕರಿಸುವುದು

ಮಿತಬಳಕೆ : ನಾವು ಕಡಿಮೆ ಬಳಸಬೇಕು ಎಂದು ಇದರ ಅರ್ಥ. ದೀಪಗಳು ಮತ್ತು ಫ್ಯಾನ್‌ಗಳ ಅನವಶ್ಯಕ ಕೆಲಸವನ್ನು ನಿಲ್ಲಿಸುವ ಮೂಲಕ ನಾವು ವಿದ್ಯುತ್‌ಅನ್ನು ಉಳಿಸಬಹುದು. ಸೋರುತ್ತಿರುವ ನಲ್ಲಿಗಳನ್ನು ದುರಸ್ತಿ ಮಾಡುವ ಮೂಲಕ ನಾವು ನೀರನ್ನು ಉಳಿಸಬಹುದು. ನಾವು ಆಹಾರವನ್ನು ವ್ಯರ್ಥ ಮಾಡಬಾರದು ಹಾಗೂ ಕಡಿಮೆ ಬಳಕೆ ಮಾಡುಬೇಕು

ಮರುಬಳಕೆ : ಈ ವಿಧಾನ ನಿಜವಾಗಿಯೂ ಮರುಚಕ್ರೀಕರಣ ವಿಧಾನಕ್ಕಿಂತ ಉತ್ತಮ. ಏಕೆಂದರೆ ಮರುಚಕ್ರೀಕರಣ ವಿಧಾನವು ಸ್ವಲ್ಪ ಶಕ್ತಿಯನ್ನು ಬಳಸಿಕೊಳ್ಳುತ್ತದೆ. ಮರುಬಳಕೆಯ ತಂತ್ರವೇನೆಂದರೆ, ನಾವು ವಸ್ತುಗಳನ್ನು ಮತ್ತೆ ಮತ್ತೆ ಉಪಯೋಗಿಸುವುದು. ಬಳಸಿದ ಲಕೋಟೆಗಳನ್ನು ಎಸೆಯುವುದರ ಬದಲು ಅದನ್ನು ತಿರುಗಿಸಿ ಮತ್ತೆ ಪುನಃ ಬಳಸುವುದು. ನಾವು ಕೊಳ್ಳುವ ಜಾಮ್ ಅಥವಾ ಉಪ್ಪಿನಕಾಯಿಗಳಂತಹ ಆಹಾರ ವಸ್ತುಗಳು ತುಂಬಿರುವ ಪ್ಲಾಸ್ಟಿಕ್ ಬಾಟಲ್‌ಗಳನ್ನು, ಖಾಲಿಯಾದ ನಂತರ ಅಡುಗೆ ಮನೆಯಲ್ಲಿ ಇತರ ವಸ್ತುಗಳನ್ನು ಸಂಗ್ರಹಿಸಿಡಲು ಬಳಸಬಹುದು.

ಮರುಉದ್ದೇಶ : ಇದರ ಅರ್ಥವೇನೆಂದರೆ, ಒಂದು ವಸ್ತುವನ್ನು ಅದರ ಮೂಲ ಉದ್ದೇಶಕ್ಕೆ ಬಳಸಲು ಸಾಧ್ಯವಾಗದೇ ಇದ್ದರೆ ಎಚ್ಚರಿಕೆಯಿಂದ ಯೋಚಿಸಿ ಅದನ್ನು ಬೇರೆ ಯಾವುದೇ ಉಪಯುಕ್ತ ಉದ್ದೇಶಕ್ಕೆ ಬಳಸುವುದು. ಉದಾಹರಣೆಗೆ, ಬಿರುಕು ಬಿಟ್ಟ ಮಣ್ಣಿನ ಪಾತ್ರೆ ಅಥವಾ ಮಡಕೆಗಳನ್ನು ಅಥವಾ ಹಿಡಿಕೆ ಮುರಿದ ಲೋಟಗಳನ್ನು, ಸಣ್ಣ ಸಸ್ಯಗಳನ್ನು ಬೆಳೆಸಲು ಮತ್ತು ಪಕ್ಷಿಗಳಿಗೆ ಆಹಾರವುಣಿಸಲು ಬಳಸಬಹುದು.

ಮರುಚಕ್ರೀಕರಣ: ಇದರ ಅರ್ಥವೇನೆಂದರೆ, ನಾವು ಪ್ಲಾಸ್ಟಿಕ್, ಕಾಗದ, ಗಾಜು ಮತ್ತು ಲೋಹಗಳನ್ನು ಹೊಸದಾಗಿ ತಯಾರಿಸುವುದು ಅಥವಾ ಹೊರತೆಗೆಯುವುದರ ಬದಲು ಉಪಯೋಗಿಸಿದ ಪ್ಲಾಸ್ಟಿಕ್, ಕಾಗದ, ಗಾಜು ಮತ್ತು ಲೋಹಗಳನ್ನು ಸಂಗ್ರಹಿಸಿ ಮರುಚಕ್ರೀಕರಣ ಮಾಡಿ ಅಗತ್ಯ ವಸ್ತುಗಳನ್ನು ತಯಾರಿಸುವುದು. ಮರುಬಳಕೆ ಮಾಡುವ ಮೊದಲು ನಾವು ತ್ಯಾಜ್ಯ ಪದಾರ್ಥಗಳನ್ನು ಬೇರ್ಪಡಿಸಬೇಕು. ಆದ್ದರಿಂದ ಮರುಚಕ್ರೀಕರಣ ಮಾಡಬಹುದಾದ ವಸ್ತುಗಳನ್ನು ಇತರ ತ್ಯಾಜ್ಯವಸ್ತುಗಳ ಜೊತೆ ರಾಶಿಹಾಕುವ ಹಾಗಿಲ್ಲ.

57) ಸೋಡಿಯಂ ಮತ್ತು ಪೊಟ್ಯಾಸಿಯಂನಂಥ ಲೋಹಗಳನ್ನು ಸೀಮೆ ಎಣ್ಣೆಯಲ್ಲಿ ಯಾಕೆ ಸಂಗ್ರಹಿಸಿಡುತ್ತಾರೆ.

ಉತ್ತರ:– ಸೋಡಿಯಂ ಮತ್ತು ಪೊಟ್ಯಾಸಿಯಂನಂಥ ಲೋಹಗಳು ಗಾಳಿಗೆ ತೆರೆದಿಟ್ಟಾಗ ಕ್ಷಿಪ್ರವಾಗಿ ವರ್ತಿಸಿ ಬೆಂಕಿ ಹೊತ್ತಿಕೊಳ್ಳುತ್ತದೆ. ಆದ್ದರಿಂದ ಅವುಗಳನ್ನು ಸಂರಕ್ಷಿಸಲು ಮತ್ತು ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಳ್ಳುವುದನ್ನು ತಪ್ಪಿಸಲು ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಡುತ್ತಾರೆ.

58) ಬ್ರಯೋಫಿಲಮ್ ಎಲೆ ಅಂಚಿಬುದ್ದಕ್ಕೂ ಇರುವ ಕುಳಿಗಳಲ್ಲಿ ಮೊಗ್ಗುಗಳು ಉತ್ಪತ್ತಿಯಾಗುವ ಚಿತ್ರವನ್ನು ಬರೆಯಿರಿ

ಉತ್ತರ:–



59) ಪೀನ ದರ್ಪಣದ ಉಪಯೋಗಗಳನ್ನು ತಿಳಿಸಿ

ಉತ್ತರ:– ಪೀನ ದರ್ಪಣದ ಉಪಯೋಗಗಳು:–

(ಮುಂದುವರಿಯುವುದು)

II PUC CET MATHS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MULTIPLE CHOICE QUESTIONS

1) If $f(x) = \log_{x^2}(\log x)$, then $f'(x)$ at $x = e$ is

(A) 0 (B) 1 (C) $\frac{1}{e}$ (D) $\frac{1}{2e}$

Ans: (D) $\frac{1}{2e}$

Expln :– $f(x) = \log_{x^2}(\log x) = \frac{\log_e(\log x)}{\text{lig}_e x^2} = \frac{\log(\log x)}{2\log x}$

$$f'(x) = \frac{2\log x.\frac{1}{\log x}.\frac{1}{x} - \log(\log x).\frac{2}{x}}{4(\log x)^2}$$

At $x = e$, $\log x = 1$. $\therefore \log(\log x) = 0$.

$$f'(x) = \frac{2.\left(\frac{1}{e}\right)}{4} = \frac{1}{2e}.$$

2) The value of c in Lagrange's theorem for the function $f(x) = \log(\sin x)$ in the interval $\left[\frac{\pi}{6}, \frac{5\pi}{6}\right]$ is..............................

(A) $\frac{\pi}{4}$ (B) $\frac{\pi}{2}$

(C) $\frac{2\pi}{3}$ (D) None of these

Ans: (B) $\frac{\pi}{2}$

Expln :– $f(x) = \log(\sin x)$

$\therefore f'(x) = \frac{1}{\sin x}.\cos x = \cot x \therefore f'(c) = \cot c$

Lagrange's theorem is $f'(c) = \frac{f(b) - f(a)}{b - a}$

Here, $a = \frac{\pi}{6}$, $b = \frac{5\pi}{6}$

$$\therefore f'(c) = \frac{\log\sin\frac{5\pi}{6} - \log\sin\frac{\pi}{6}}{\frac{5\pi}{6} - \frac{\pi}{6}}$$

$$f'(c) = \frac{\log\frac{1}{2} - \log\frac{1}{2}}{\frac{4\pi}{6}} = 0$$

$\therefore f'(c) = \cot c = 0 \Rightarrow c = \frac{\pi}{2}$.

3) If $\tan(x + y) = 33$ and $x = \tan^{-1} 3$ then y is

(A) $\frac{3}{10}$ (B) $\frac{33}{10}$

(C) $\frac{1}{3}$ (D) $\tan^{-1}\frac{3}{10}$

Ans : (D) $\tan^{-1}\frac{3}{10}$

Expln :– $\tan(x + y) = \frac{\tan x + \tan y}{1 - \tan x \tan y}$

$33 = \frac{3 + \tan y}{1 - 3\tan y}$ $\therefore 33(1 - 3\tan y) = 3 + \tan y$

$33 - 99\tan y = 3 + \tan y$

$30 = 100\tan y$ $\therefore$ $\tan y = \frac{30}{100} = \frac{3}{10}$

$\therefore y = \tan^{-1}\frac{3}{10}$

4) $\lim_{x \to \infty}\left(\sqrt{a^2x^2 + bx + x} - ax\right) = $..............................

(A) $\frac{b}{2a}$ (B) $\frac{b}{a}$

(C) $\frac{b+1}{2a}$. (D) $\frac{2b}{a}$

Ans : C

Expln :–

$$\lim_{x \to \infty}\left[\left(\sqrt{a^2x^2 + bx + x} - ax\right) \times \frac{\sqrt{a^2x^2 + bx + x} + ax}{\sqrt{a^2x^2 + bx + x} + ax}\right]$$

$$\lim_{x \to \infty}\frac{a^2x^2 + bx + x - a^2x^2}{\sqrt{a^2x^2 + bx + x} + ax} = \lim_{x \to \infty}\frac{x(b+1)}{\sqrt{x^2\left(x^2 + \frac{b}{x} + \frac{1}{x}\right)} + ax}$$

$$\lim_{x \to \infty}\frac{x(b+1)}{x\left\{\sqrt{a^2 + \frac{b}{x} + \frac{1}{x}} + a\right\}} \lim_{x \to \infty}\frac{b+1}{\sqrt{a^2 + \frac{b}{x} + \frac{1}{x^2}} + a} = \frac{b+1}{2a}.$$

5) The solution of $\frac{6x}{4x-1} < \frac{1}{2}$ is

(A) $x < -\frac{1}{8}$ (B) $-\frac{1}{8} < x < \frac{1}{4}$

(C) $x < -\frac{1}{8}$ and $x > \frac{1}{4}$ (D) $x > \frac{1}{8}$

Ans: (B) $-\frac{1}{8} < x < \frac{1}{4}$

Expln: $\frac{6x}{4x-1} < \frac{1}{2} \Rightarrow \frac{6x}{4x-1} - \frac{1}{2} < 0$

$\frac{12x - (4x-1)}{2(4x-1)} < 0$

$\frac{8x+1}{2(4x-1)} < 0$

A fraction less than zero means Nr < 0 or Dr < 0

i.e., $8x + 1 < 0$ or $4x - 1 < 0$.Let $4x - 1 < 0$ and $8x + 1 > 0$.

Then $x < \frac{1}{4}$, $8x + 1 > 0$ $\therefore 8x > -1$ i.e., $x > -\frac{1}{8}$.

$\therefore -\frac{1}{8} < x < \frac{1}{4}$.

ಪಾಕಿಸ್ತಾನ ಜಿಂದಾಬಾದ್ ಘೋಷಣೆ: ಬಿಜೆಪಿ–ಕಾಂಗ್ರೆಸ್‌ನಿಂದ ಆರೋಪ–ಪ್ರತ್ಯಾರೋಪ

‘ನಾಸಿರ್ ವಿರುದ್ಧವೂ ಪ್ರಕರಣ ದಾಖಲಿಸಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನಾಸಿರ್ ಹುಸೇನ್ ಅವರ ಬೆಂಬಲಿಗರು ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದ್ದಾರೆ. ಹೀಗಾಗಿ ನಾಸಿರ್ ಅವರ ವಿರುದ್ಧವೂ ಪ್ರಕರಣ ದಾಖಲಿಸಬೇಕು. ಈ ಪ್ರಕರಣ ಇತ್ಯರ್ಥ ಆಗುವವರೆಗೂ ಅವರು ರಾಜ್ಯಸಭಾ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಬಾರದು’ ಎಂದು ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಹೇಳಿದರು.

‘ನಾಸಿರ್ ಹುಸೇನ್ ನಿಜವಾದ ದೇಶಭಕ್ತರಾಗಿದ್ದರೆ, ಘೋಷಣೆ ಕೂಗಿದವರ ಕಪಾಳಕ್ಕೆ ಬಾರಿಸಬೇಕಿತ್ತು. ಅದರ ಬದಲು ಮಾಧ್ಯಮದವರ ಮೇಲೆಯೇ ಹರಿಹಾಯ್ದರು. ಈ ಘಟನೆಯನ್ನು ಕಾಂಗ್ರೆಸ್‌ನವರು ಖಂಡಿಸಲಿಲ್ಲ’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ಘೋಷಣೆ ಕೂಗಿದ್ದನ್ನು ಕಾಂಗ್ರೆಸ್‌ನವರು ಮೊದಲು ಅಲ್ಲಗಳೆದರು. ಈಗ ಏಕೆ ಮೂವರನ್ನು ಬಂಧಿಸಲಾಗಿದೆ? ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ಅಧಿಕಾರದಲ್ಲಿರಲು ನೈತಿಕತೆ ಇಲ್ಲ. ಅವರು ಕೂಡಲೇ ರಾಜೀನಾಮೆ ಕೊಡಬೇಕು’ ಎಂದು ಅವರು ಆಗ್ರಹಿಸಿದರು.

‘ದೇಶದ್ರೋಹಿಗಳು ಯಾರೆಂದು ಬಿಜೆಪಿಯವರೇ ಉತ್ತರಿಸಲಿ’

ಶಿರಸಿ (ಉತ್ತರ ಕನ್ನಡ ಜಿಲ್ಲೆ): ‘ಪಾಕಿಸ್ತಾನ ಪರ ಘೋಷಣೆ ಕೂಗಿದವರನ್ನು ಈ ಹಿಂದೆ ಬಿಜೆಪಿ ರಕ್ಷಣೆ ಮಾಡಿತ್ತು. ಆದರೆ, ನಾವು ಬಂಧಿಸಿದ್ದೇವೆ. ಈಗ ದೇಶದ್ರೋಹಿಗಳು ಯಾರು ಎಂದು ಬಿಜೆಪಿಯವರೇ ಉತ್ತರಿಸಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

ಮಂಗಳವಾರ ಬನವಾಸಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬಿಜೆಪಿ ಆಡಳಿತದಲ್ಲಿ ಮಂಡ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಪಾಕ್ ಪರ ಘೋಷಣೆ ಕೂಗಿದ್ದರು. ಆಗ ಆ ಸರ್ಕಾರ ಪ್ರಕರಣ ವಜಾಗೊಳಿಸಿತ್ತು. ಯಾರು ದೇಶದ್ರೋಹಿಗಳು ಎಂದು ಬಿಜೆಪಿ ಹೇಳಲಿ’ ಎಂದರು.

‘ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಪೊಲೀಸರು, ಸಿಸಿಬಿ, ಎನ್‌ಐಎ ತನಿಖೆ ನಡೆಸುತ್ತಿವೆ. ಐವರ ಬಂಧನವಾಗಿದೆ’ ಎಂದರು.

‘ಉಗ್ರರ ಅಡ್ಡೆಯಾಗಿತ್ತು’

ಕಲಬುರಗಿ: ‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಬೆಂಗಳೂರು ಭಯೋತ್ಪಾದಕರ ಅಡ್ಡೆಯಾಗಿತ್ತು. ನಮ್ಮ ಸರ್ಕಾರ ಬಂದ ಮೇಲೆ ಉಗ್ರರ ಚಟುವಟಿಕೆಗಳು ಕಡಿಮೆಯಾಗಿವೆ’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ಇಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣ, ಮಲ್ಲೇಶ್ವರ, ವಿಮಾನ ನಿಲ್ದಾಣ ಸೇರಿ ಆರು ಕಡೆ ಬಾಂಬ್ ಸ್ಫೋಟ ಆಗಿತ್ತು. ಬಿಜೆಪಿ ಆಡಳಿತಕ್ಕೆ ಹೋಲಿಸಿದರೆ ಈಗ ಅಪರಾಧ ಚಟುವಟಿಕೆಗಳು ಕಡಿಮೆಯಾಗಿವೆ. ಈಗ ಒಂದು ಬಾಂಬ್ ಸ್ಫೋಟವಾಗಿದ್ದು, ಮುಂದೆ ಸಂಪೂರ್ಣವಾಗಿ ನಿಯಂತ್ರಿಸುತ್ತೇವೆ’ ಎಂದರು.

‘ನಾಸಿರ್ ಎ1’

ಬಳ್ಳಾರಿ/ವಿಜಯನಗರ: ‘ಪಾಕಿಸ್ತಾನ ಜಿಂದಾಬಾದ್ ಘೋಷಣೆ ಪ್ರಕರಣದಲ್ಲಿ ನಾಸಿರ್ ಹುಸೇನ್ ಅವರೇ ಎ1 ಆರೋಪಿ. ಅವರನ್ನೂ ತನಿಖೆಗೆ ಒಳಪಡಿಸಬೇಕು’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ಸಚೇತಕ ರವಿಕುಮಾರ್ ಆಗ್ರಹಿಸಿದರು.

‘ಪ್ರಕರಣದಲ್ಲಿ ಮೂವರನ್ನು ಮಾತ್ರ ಬಂಧಿಸಲಾಗಿದೆ. ಅಂದು ಪಾಸ್ ಪಡೆದು ವಿಧಾನಸೌಧಕ್ಕೆ ಬಂದ 34 ಜನರನ್ನೂ ಬಂಧಿಸಬೇಕು’ ಎಂದು ತಿಳಿಸಿದರು.

ರಾಷ್ಟ್ರಪತಿಗೆ ಪತ್ರ

ಬೆಳಗಾವಿ: ‘ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದ ಪ್ರಕರಣದಲ್ಲಿ ನಾಸೀರ್ ಹುಸೇನ್ ಅವರನ್ನು ನಾಲ್ಕನೇ ಆರೋಪಿ ಮಾಡಿ, ಪ್ರಕರಣ ದಾಖಲಿಸಬೇಕು. ತನಿಖೆ ಪೂರ್ಣಗೊಳ್ಳುವವರೆಗೆ ಅವರಿಗೆ ಪ್ರಮಾಣ ವಚನಕ್ಕೆ ಅವಕಾಶ ನೀಡಬಾರದು ಎಂದು ಕೋರಿ ರಾಷ್ಟ್ರಪತಿ ಅವರಿಗೆ ಪತ್ರ ಬರೆಯಲಾಗುವುದು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

‘ಸೂತ್ರಧಾರ ನಾಸೀರ್ ಹುಸೇನ್ ಹೆಸರನ್ನೇ ಎಫ್‌ಐಆರ್‌ನಲ್ಲಿ ಕೈಬಿಟ್ಟಿದ್ದಾರೆ. ಅವರ ಮೇಲೆ ಪ್ರಕರಣ ದಾಖಲಿಸಬೇಕು’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ದಿಕ್ಕು ತಪ್ಪಿಸಲು ಬಿಜೆಪಿ ಕಾರ್ಯಕರ್ತನ ಬಂಧನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸೌಧದಲ್ಲಿ ಪಾಕಿಸ್ತಾನಕ್ಕೆ ಜಿಂದಾಬಾದ್ ಕೂಗಿದ್ದ ಪ್ರಕರಣದಲ್ಲಿ ತಮ್ಮ ಪಕ್ಷದ ಕಾರ್ಯಕರ್ತರ ಬಂಧನದಿಂದ ಕಾಂಗ್ರೆಸ್ ನಾಯಕರು ತೀವ್ರ ಮುಖಭಂಗ ಅನುಭವಿಸಿದ್ದಾರೆ. ಈಗ ಜನರನ್ನು ದಿಕ್ಕು ತಪ್ಪಿಸುವುದಕ್ಕಾಗಿ ಮಂಡ್ಯದಲ್ಲಿ ಬಿಜೆಪಿ ಕಾರ್ಯಕರ್ತನನ್ನು ಬಂಧಿಸಲಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣ ಆರೋಪಿಸಿದ್ದಾರೆ.

ಈ ಕುರಿತು ಮಂಗಳವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಪಾಕಿಸ್ತಾನದ ಭಿಲಾವಲ್ ಭುಟ್ಟೋ ವಿರುದ್ಧ ಎರಡು ವರ್ಷದ ಹಿಂದೆ ಮಂಡ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಆಗ ನಮ್ಮ ಕಾರ್ಯಕರ್ತ ರವಿ, ಹಿಂದಿ ಭಾಷೆ ತಿಳಿಯದ ಕಾರಣದಿಂದ ಅಚಾತುರ್ಯದಿಂದ ಘೋಷಣೆ ಕೂಗುವಾಗ ಪಾಕಿಸ್ತಾನ ಜಿಂದಾಬಾದ್ ಎಂದಿದ್ದರು. ಈಗ ಆ ಪ್ರಕರಣವನ್ನು ಸೇಡಿನ ರಾಜಕಾರಣಕ್ಕೆ ಬಳಸಿಕೊಂಡಿದ್ದಾರೆ’ ಎಂದಿದ್ದಾರೆ.

ನಾಸೀರ್ ಹುಸೇನ್ ವಿರುದ್ಧ ದೂರು

ಬೆಂಗಳೂರು: ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದ್ದ ಪ್ರಕರಣದಲ್ಲಿ ರಾಜ್ಯಸಭಾ ಸದಸ್ಯ ಸೈಯದ್ ನಾಸೀರ್ ಹುಸೇನ್ ವಿರುದ್ಧವೂ ಕ್ರಮ ಜರುಗಿಸುವಂತೆ ಬಿಜೆಪಿ ಮುಖಂಡರ ನಿಯೋಗ ವಿಧಾನಸೌಧ ಪೊಲೀಸ್ ಠಾಣೆಗೆ ಮಂಗಳವಾರ ದೂರು ನೀಡಿದೆ.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ಯುವ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಶಾಸಕ ಧೀರಜ್ ಮುನಿರಾಜು, ಪಕ್ಷದ ಮುಖಂಡ ಚಿ.ನಾ.ರಾಮು ನೇತೃತ್ವದ ನಿಯೋಗವು ಎಂ.ಎಸ್. ಬಿಲ್ಡಿಂಗ್‌ನಲ್ಲಿರುವ ವಿಧಾನಸೌಧ ಪೊಲೀಸ್ ಠಾಣೆಗೆ ತೆರಳಿ, ದೂರು ಸಲ್ಲಿಸಿತು.

ಘೋಷಣೆ ಕೂಗಿದ ಪ್ರಕರಣದಲ್ಲಿ ನಾಸೀರ್ ಹುಸೇನ್ ಮತ್ತು ಅವರ ಬೆಂಬಲಿಗರ ವಿರುದ್ಧ ಪ್ರಕರಣ ದಾಖಲಿಸುವಂತೆ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಫೆಬ್ರುವರಿ 27ರಂದು ದೂರು ಸಲ್ಲಿಸಿದ್ದರು. ಆ ದೂರಿನ ಆಧಾರದಲ್ಲಿ ಕ್ರಮ ಜರುಗಿಸುವಂತೆ ಕೋರಲಾಗಿದೆ ಎಂದು ಬಿಜೆಪಿಯ ಪ್ರಕಟಣೆ ತಿಳಿಸಿದೆ.

‘ರವಿ ತಪ್ಪು ಮಾಡಿಲ್ಲ ಎಂಬುದು ಪೊಲೀಸರಿಗೆ ಆಗಲೇ ಮನದಟ್ಟಾಗಿತ್ತು. ಆರಾಧ್ಯ ಎಂಬುವವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರೂ ಪ್ರಕರಣ ದಾಖಲಿಸಲಾಗಿತ್ತು. ಉದ್ದೇಶಪೂರ್ವಕವಾಗಿ ಘೋಷಣೆ ಕೂಗಿಲ್ಲ ಎಂಬುದು ಖಚಿತವಾದ ಬಳಿಕ ಪೊಲೀಸರು ಎಚ್ಚರಿಕೆ ನೀಡಿ, ಆ ಪ್ರಕರಣವನ್ನು ಮುಕ್ತಾಯಗೊಳಿಸಿದ್ದರು’ ಎಂದು ಹೇಳಿದ್ದಾರೆ.

‘ವಿಧಾನಸೌಧದ ಪ್ರಕರಣದಲ್ಲಿ ಮುಸ್ಲಿಂ ಯುವಕರನ್ನು ಬಂಧಿಸಿರುವ ಕಾರಣಕ್ಕಾಗಿ ಮಂಡ್ಯದಲ್ಲಿ ಹಿಂದೂ ಕಾರ್ಯಕರ್ತನನ್ನು ಬಂಧಿಸಲಾಗಿದೆ. ಈ ರೀತಿಯ ಸುಳ್ಳು ಪ್ರಕರಣವನ್ನು ಹಿಂಪಡೆಯಬೇಕು. ವಿಧಾನಸೌಧದಲ್ಲಿ ಘೋಷಣೆ ಕೂಗಿದವರ ಬೆಂಬಲಕ್ಕೆ ನಿಂತಿದ್ದ ಸಚಿವರನ್ನು ವಜಾಗೊಳಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ಎಫ್‌ಎಸ್‌ಎಲ್ ವರದಿ ಆಧರಿಸಿ ಬಂಧನ’

ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ: ಗೃಹ ಸಚಿವ ಪರಮೇಶ್ವರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸೌಧದ ಆವರಣದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿರುವುದು ಇಲಾಖೆಯ ಅಧಿಕೃತ ಎಫ್‌ಎಸ್‌ಎಲ್ ವರದಿಯಲ್ಲಿ ಖಚಿತವಾದ ಹಿನ್ನೆಲೆಯಲ್ಲಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ. ತನಿಖೆಯಿಂದ ಬರುವ ಮಾಹಿತಿ ಆಧರಿಸಿ ಪೊಲೀಸರು ಮುಂದಿನ ಕ್ರಮ ತೆಗೆದುಕೊಳ್ಳಲಿದ್ದಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಖಾಸಗಿಯವರೂ ಎಫ್‌ಎಸ್‌ಎಲ್ ವರದಿ ಬಿಡುಗಡೆ ಮಾಡಿದ್ದರು. ನಾವು ಅದನ್ನು ಅಧಿಕೃತವೆಂದು ಪರಿಗಣಿಸುವುದಿಲ್ಲ. ನಾವು ಅವರಿಗೆ ಯಾವುದೇ ರೀತಿಯ ಮಾನ್ಯತೆ ನೀಡಿಲ್ಲ’ ಎಂದರು.

‘ಮಂಡ್ಯದಲ್ಲಿ 2022ರ ನವೆಂಬರ್‌ನಲ್ಲಿ ಬಿಜೆಪಿ ಕಾರ್ಯಕರ್ತನೊಬ್ಬ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದ್ದ. ಆಗ ಅಧಿಕಾರದಲ್ಲಿದ್ದ ಬಿಜೆಪಿಯವರು ಕ್ರಮ ತೆಗೆದುಕೊಳ್ಳಲಿಲ್ಲ? ಹಳೆಯ ಪ್ರಕರಣ ಈಗ ಬಯಲಿಗೆ ಬಂದಿದ್ದು, ಮಂಡ್ಯ ಪೊಲೀಸರು ಒಬ್ಬನನ್ನು ಬಂಧಿಸಿದ್ದಾರೆ. ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದ ಮೇಲೆ ಪ್ರಕರಣ ಒಂದೇ ಅಲ್ಲವೇ. ಯಾವ ಸಂದರ್ಭದಲ್ಲಿ ಕೂಗಿದ್ದಾರೆ ಎಂಬುದು ತನಿಖೆಯಿಂದ ಹೊರಬರಲಿದೆ’ ಎಂದರು.

ಆರೋಪಿಗಳು ಪೊಲೀಸ್ ಕಸ್ಟಡಿಗೆ: ಮಹಜರು

ಬೆಂಗಳೂರು: ‘ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ’ ಎಂದು ಆರೋಪಿಸಲಾದ ಪ್ರಕರಣದಡಿ ಸೋಮವಾರ ಬಂಧಿಸಲಾಗಿರುವ ಮೂವರು ಆರೋಪಿಗಳನ್ನು ಎರಡು ದಿನ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ನ್ಯಾಯಾಧೀಶರ ಎದುರು ಸೋಮವಾರ ರಾತ್ರಿ ಆರೋಪಿಗಳನ್ನು ಹಾಜರುಪಡಿಸಲಾಗಿತ್ತು. ಕಸ್ಟಡಿಗೆ ನೀಡುವಂತೆ ಪೊಲೀಸರು ಕೋರಿದ್ದರು. ಮನವಿ ಪುರಸ್ಕರಿಸಿದ್ದ ನ್ಯಾಯಾಧೀಶರು, ಆರೋಪಿಗಳನ್ನು ಪೊಲೀಸರ ಕಸ್ಟಡಿಗೆ ವಹಿಸಿ ಆದೇಶಿಸಿದರು.

ಸೋಮವಾರ ರಾತ್ರಿಯೇ ಆರೋಪಿಗಳನ್ನು ಕಸ್ಟಡಿಗೆ ಪಡೆದಿರುವ ವಿಧಾನಸೌಧ ಠಾಣೆ ಪೊಲೀಸರು, ಮೂವರ ವಿಚಾರಣೆ ಮುಂದುವರಿಸಿದ್ದಾರೆ. ಮಂಗಳವಾರ ಆರೋಪಿಗಳನ್ನು ವಿಧಾನ ಸೌಧಕ್ಕೆ ಕರೆದೊಯ್ದು, ಘಟನಾ ಸ್ಥಳದಲ್ಲಿ ಮಹಜರು ನಡೆಸಿದರು.

‘ದೆಹಲಿ ಕಿಶನ್‌ಗಂಜ್‌ನ ಮೊಹಮ್ಮದ್ ಇಲ್ತಾಜ್, ಹಾವೇರಿ ಜಿಲ್ಲೆಯ ಬ್ಯಾಡಗಿಯ ಮೊಹಮ್ಮದ್ ನಾಶಿಪುಡಿ, ಬೆಂಗಳೂರು ಜಯಮಹಲ್‌ನ ಮುನಾವರ್ ಅಹ್ಮದ್‌ನಿಂದ ಪ್ರಕರಣ ಬಗ್ಗೆ ಮತ್ತಷ್ಟು ಮಾಹಿತಿ ಕಲೆಹಾಕಬೇಕಿದೆ. ಹೀಗಾಗಿ, ಕಸ್ಟಡಿಗೆ ಪಡೆದು ವಿಚಾರಣೆ ಮುಂದುವರಿಸಲಾಗಿದೆ. ಕಾನೂನು ಅನ್ವಯ ಮಹಜರು ಪ್ರಕ್ರಿಯೆ ನಡೆಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಮೊಹಮ್ಮದ್ ಇಲ್ತಾಜ್, ಯೂತ್ ಕಾಂಗ್ರೆಸ್ ರಾಷ್ಟ್ರೀಯ ಘಟಕದ ಸಂಯೋಜಕ ಎಂಬುದು ತನಿಖೆಯಿಂದ ಗೊತ್ತಾಗಿದೆ. ರಾಜ್ಯಸಭಾ ಚುನಾವಣೆ ನಿಮಿತ್ತ ಈತ, ನಗರಕ್ಕೆ ಬಂದಿದ್ದ. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸೈಯ್ಯದ್ ನಾಸಿರ್ ಹುಸೇನ್ ಅವರ ಶಿಫಾರಸು ಮೂಲಕ ಪಾಸ್ ಪಡೆದುಕೊಂಡು ವಿಧಾನಸೌಧದೊಳಗೆ ಬಂದಿದ್ದ’ ಎಂದು ತಿಳಿಸಿವೆ.

ಮತ್ತಷ್ಟು ಮಂದಿ ವಿಚಾರಣೆ: ‘ವಿಧಾನಸೌಧದಲ್ಲಿ ಫೆ. 27ರಂದು ಸೈಯದ್ ನಾಸಿರ್ ಹುಸೇನ್ ಅವರ ಸಂಭ್ರಮಾಚರಣೆ ವೇಳೆ ಸಾಕಷ್ಟು ಮಂದಿ ಹಾಜರಿದ್ದರು. ಇವರ ಮಧ್ಯೆಯೇ ಆರೋಪಿಗಳು, ‘ಪಾಕಿಸ್ತಾನ ಜಿಂದಾಬಾದ್’ ಘೋಷಣೆ ಕೂಗಿದ್ದರು. ಸದ್ಯ ಮೂವರನ್ನು ಮಾತ್ರ ಗುರುತಿಸಲಾಗಿದೆ. ಉಳಿದವರ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬರ ಎದುರಿಸಲು ಸಿದ್ಧತೆ ಭರಪೂರ

ಒಂದನೇ ಪುಟದಿಂದ...

‘ಅನಿವಾರ್ಯ ಆದಾಗ ಮಾತ್ರ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಈ ಉದ್ದೇಶಕ್ಕೆ ಈಗಾಗಲೇ ₹140 ಕೋಟಿ ಅನುದಾನ ಕೊಡಲಾಗಿದೆ. ಹೆಚ್ಚುವರಿಯಾಗಿ ₹70 ಕೋಟಿ ಬಿಡುಗಡೆ ಮಾಡಲಾಗುವುದು. ಎಲ್ಲ ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ₹854 ಕೋಟಿ ಲಭ್ಯವಿದೆ. ಮೇವಿಗೆ ಈವರೆಗೆ ಸಮಸ್ಯೆ ಇಲ್ಲ. ಆದರೂ ಮುನ್ನೆಚ್ಚರಿಕೆ ಕ್ರಮವಾಗಿ ಮೇವು ಬೆಳೆಯಲು ಪಶುಸಂಗೋಪನೆ ಇಲಾಖೆಗೆ ₹40 ಕೋಟಿ ಒದಗಿಸಲಾಗಿದೆ’ ಎಂದರು.

‘ಪ್ರತಿ ಜಿಲ್ಲೆಯಲ್ಲಿ ಕಾರ್ಯಪಡೆಯ ಸಭೆ ಕರೆದು ತಾಲ್ಲೂಕಿನ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸೂಚಿಸಲಾಗಿದೆ. ತಾಲ್ಲೂಕು ಮಟ್ಟದ ಕಾರ್ಯಪಡೆ ಈವರೆಗೆ 646 ಸಭೆಗಳನ್ನು ನಡೆಸಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ 307 ಸಭೆಗಳಾಗಿವೆ. ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದಾದ ಗ್ರಾಮ, ಜಿಲ್ಲೆಗಳಲ್ಲಿ ಮೊದಲೇ ಯೋಜನೆ ತಯಾರಿಸಬೇಕು. ಸದ್ಯ 98 ತಾಲ್ಲೂಕುಗಳ 412 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. 175 ಗ್ರಾಮಗಳಿಗೆ 596 ಖಾಸಗಿ ಕೊಳವೆ ಬಾವಿಗಳಿಂದ 204 ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ’ ಎಂದು ವಿವರಿಸಿದರು.

‘ಕೆಲವೆಡೆ ಸರ್ಕಾರದ ಕೊಳವೆ ಬಾವಿಗಳನ್ನು ಇನ್ನಷ್ಟು ಆಳ ಮಾಡುವುದು, ಫ್ಲ್ಯಾಶಿಂಗ್ ಮಾಡುವುದು, ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆಯುವುದರ ಜತೆಗೆ, ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಕ್ರಮ ವಹಿಸಲಾಗಿದೆ. ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಿಗೂ ನೋಂದಣಿ ಮಾಡಿಸಿಕೊಂಡು ದರಗಳನ್ನು ನಿಯಂತ್ರಿಸಲಾಗುವುದು. ಬೆಂಗಳೂರಿನಲ್ಲಿ ಬಿಬಿಎಂಪಿ 120 ಹಾಗೂ ಜಲಮಂಡಳಿ 232 ಟ್ಯಾಂಕರ್‌ಗಳ ಮೂಲಕ 96 ವಾರ್ಡುಗಳಲ್ಲಿ ನೀರು ಸರಬರಾಜು ಆಗುತ್ತಿದೆ’ ಎಂದರು.

‘ನಾರಾಯಣಪುರ, ಆಲಮಟ್ಟಿ, ಮಲಪ್ರಭಾ, ಘಟಪ್ರಭಾ, ಕಾವೇರಿ ಕಣಿವೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇಲ್ಲ. ತುಂಗಭದ್ರಾ ಜಲಾಶಯದಲ್ಲಿ 1.78 ಟಿಎಂಸಿ ಅಡಿ ನೀರು ಮಾತ್ರ ಲಭ್ಯವಿದ್ದು ಜೂನ್ ಅಂತ್ಯದವರೆಗೆ ಅದರಲ್ಲಿಯೇ ನಿರ್ವಹಿಸಬೇಕಿದೆ. ಕುಡಿಯುವ ನೀರಿಗೆ ತುಂಗಭದ್ರಾ ನದಿ ಅವಲಂಬಿತರಾಗಿರುವವರಿಗೆ ನೀರಿನ ಸಮಸ್ಯೆ ಆಗಬಹುದು. ವಾರಕ್ಕೊಮ್ಮೆ ಸಭೆ ನಡೆಸಿ ಪರಿಸ್ಥಿತಿ ಅವಲೋಕಿಸಬೇಕೆಂದು ಸೂಚಿಸಿದ್ದೇನೆ’ ಎಂದರು.

ಗುಳೇ ಹೋಗುತ್ತಿಲ್ಲ: ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ‘ಗ್ಯಾರಂಟಿ’ ಯೋಜನೆಗಳಿಂದಾಗಿ 1.20 ಕೋಟಿ ಕುಟುಂಬಗಳ 4.50 ಕೋಟಿ ಜನರಿಗೆ ಲಾಭ ಸಿಗುತ್ತಿದೆ. ಪ್ರತಿ ಕುಟುಂಬಕ್ಕೆ ₹4 ಸಾವಿರದಿಂದ ₹5 ಸಾವಿರ ದೊರೆಯುತ್ತಿದೆ. ಹೀಗಾಗಿ ಜನ ಗುಳೇ ಹೋಗುತ್ತಿಲ್ಲ’ ಎಂದು ಮುಖ್ಯಮಂತ್ರಿ ಹೇಳಿದರು.

‘ಗುಳೇ ಪರಿಸ್ಥಿತಿ ಬರಬಹುದು’

‘ನರೇಗಾ ಯೋಜನೆಯಡಿ ರಾಜ್ಯಕ್ಕೆ ನೀಡಿದ್ದ ಮಾನವ ದಿನಗಳು ಮುಗಿದಿವೆ. 1,400 ಕೋಟಿ ಕೆಲಸ ನಿರ್ವಹಿಸಿದ ಮೊತ್ತ ₹730 ಕೋಟಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಬೇಕಿದೆ. 4.74 ಲಕ್ಷ ಕುಟುಂಬಗಳು ನೂರು ದಿನಗಳ ಕೆಲಸ ಪೂರೈಸಿದ್ದು, ಅವರಿಗೆ ಮತ್ತೆ ಉದ್ಯೋಗ ಸಿಗದಿದ್ದರಿಂದ ಗುಳೇ ಹೋಗುವ ಸಂದರ್ಭ ಬರಬಹುದು’ ಎಂದು ಸಚಿವ ಕೃಷ್ಣಬೈರೇಗೌಡ ಆತಂಕ ವ್ಯಕ್ತಪಡಿಸಿದರು.

ಪ್ರಕರಣ ರದ್ದುಗೊಳಿಸಿದ ‘ಸುಪ್ರೀಂ’

ಒಂದನೇ ಪುಟದಿಂದ...

ಸುಪ್ರೀಂ ಕೋರ್ಟ್‌ನ ಆದೇಶವು ಶಿವಕುಮಾರ್ ಅವರಿಗೆ ಲೋಕಸಭಾ ಚುನಾವಣೆಯ ಹೊತ್ತಿನಲ್ಲಿ ಸಿಕ್ಕಿದ ದೊಡ್ಡ ಗೆಲುವು ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗಿದೆ.

ಶಿವಕುಮಾರ್ ಹಾಗೂ ಆಂಜನೇಯ ಪರವಾಗಿ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ, ಅಭಿಷೇಕ್ ಮನು ಸಿಂಘ್ವಿ ಹಾಗೂ ಎಸ್. ನಾಗಮುತ್ತು ವಾದ ಮಂಡಿಸಿದರು. ‘ಶಿವಕುಮಾರ್ ಅವರದ್ದು ಆದಾಯ ತೆರಿಗೆಗೆ ಸಂಬಂಧಿಸಿದ ಪ್ರಕರಣವಾಗಿದೆ. ಆದರೆ, 120 ಬಿ ಅನುಸಾರ ಇ.ಡಿ. ಪ್ರಕರಣ ದಾಖಲಿಸಿದೆ. ಇದು ಕಾನೂನುಬಾಹಿರ ನಡೆ’ ಎಂದು ಅವರು ವಾದಿಸಿದರು.

ವಾದಗಳನ್ನು ಆಲಿಸಿದ ನ್ಯಾಯ ಪೀಠವು, ‘120 ಬಿ ಬಗ್ಗೆ ಪವನ ದಿಬ್ಬೂರು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಪು ನೀಡಿದೆ’ ಎಂದು ಅಭಿಪ್ರಾಯಪಟ್ಟು ಪ್ರಕರಣವನ್ನು ವಜಾಗೊಳಿಸಿತು.

ಡಿಕೆಶಿಗೆ ನೆರವಾದ ದಿಬ್ಬೂರು ಪ್ರಕರಣದ ತೀರ್ಪು: ಐಪಿಸಿಯ ಸೆಕ್ಷನ್ 120ಬಿ ಅಡಿ ಶಿಕ್ಷಾರ್ಹವಾಗುವ ಕ್ರಿಮಿನಲ್ ಪಿತೂರಿಯಂತಹ ಅಪರಾಧ ಕೃತ್ಯವು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅನುಸೂಚಿಯಲ್ಲಿ ನಿರ್ದಿಷ್ಟವಾಗಿ ಉಲ್ಲೇಖಿಸಿದ ಅಪರಾಧಕ್ಕೆ ಸಂಬಂಧಪಟ್ಟಿದ್ದರೆ ಮಾತ್ರ ಅದು ಅನುಸೂಚಿತ ಅಪರಾಧವಾಗುತ್ತದೆ ಎಂದು ಸುಪ್ರೀಂ ಕೋರ್ಟ್ 2023ರ ನವೆಂಬರ್‌ನಲ್ಲಿ ಮಹತ್ವದ ತೀರ್ಪು ನೀಡಿತ್ತು.

ಪವನ ದಿಬ್ಬೂರು ಎಂಬವರು ಬೆಂಗಳೂರಿನಲ್ಲಿ ಅಲಯನ್ಸ್ ಬ್ಯುಸಿನೆಸ್ ಸ್ಕೂಲ್‌ನ ಆಸ್ತಿಯನ್ನು ₹13.05 ಕೋಟಿಗೆ ಹಾಗೂ ಮಧುಕರ್ ಅಂಗೂರ್ ಅವರ ಆಸ್ತಿಯನ್ನು ₹2.47 ಕೋಟಿಗೆ ಖರೀದಿಸಲು ಕ್ರಿಮಿನಲ್ ಸಂಚು ರೂಪಿಸಿದ್ದರು. ಇದರ ಆಧಾರದ ಮೇಲೆ ಪವನ ವಿರುದ್ಧ ಹಣದ ಅಕ್ರಮ ವರ್ಗಾವಣೆ ಕಾಯ್ದೆಯಡಿ ಕ್ರಮ ಕೈಗೊಳ್ಳುವುದಕ್ಕೆ ಜಾರಿ ನಿರ್ದೇಶನಾಲಯ ಮುಂದಾಗಿತ್ತು. ಇದನ್ನು ಪ್ರಶ್ನಿಸಿ ಪವನ ದಿಬ್ಬೂರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ತೀರ್ಪನ್ನು ಮರುಪರಿಶೀಲಿಸಬೇಕು ಎಂದು ಕೋರಿ ನಿರ್ದೇಶನಾಲಯವು ಸುಪ್ರೀಂ ಕೋರ್ಟ್‌ಗೆ ಈಗಾಗಲೇ ಅರ್ಜಿ ಸಲ್ಲಿಸಿದೆ.

ಆ ಪ್ರಕಾರ, ಮರುಪರಿಶೀಲನಾ ಅರ್ಜಿಯನ್ನು ಅಂಗೀಕರಿಸಿದರೆ, ಈ ತೀರ್ಪಿನಲ್ಲಿ ಹೈಕೋರ್ಟ್ ತೆಗೆದುಕೊಂಡ ಅಭಿಪ್ರಾಯವು ದೃಢೀಕರಿಸಲ್ಪಡುತ್ತದೆ ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು ಸ್ಪಷ್ಟಪಡಿಸಿತು.

‘ಮರುಪರಿಶೀಲನಾ ಕೋರಿಕೆ ಅರ್ಜಿ ಸ್ವೀಕಾರವಾದರೆ ಇಂದಿನ ಆದೇಶ ಹಿಂಪಡೆಯಬೇಕೋ ಬೇಡವೋ ಎಂಬುದನ್ನು ನಿರ್ಧರಿಸಲು ಏಜೆನ್ಸಿಯು ಮುಕ್ತ ಅವಕಾಶವನ್ನು ಹೊಂದಿದೆ’ ಎಂದೂ ನ್ಯಾಯಪೀಠ ಹೇಳಿತು.

> **ನ್ಯಾಯಪೀಠದಿಂದ ಅನ್ಯಾಯ ಆಗುವುದಿಲ್ಲ ಎಂದು ನಂಬಿದ್ದೆ. ಅದರಂತೆ ನ್ಯಾಯ ಸಿಕ್ಕಿದೆ. ಸಿಬಿಐನವರು ಈಗಲೂ ಏನೆಲ್ಲಾ ಮಾಡುತ್ತಿದ್ದಾರೆ ಎಂದು ಸದ್ಯದಲ್ಲೇ ಬಹಿರಂಗಪಡಿಸುತ್ತೇನೆ**
> **ಡಿ.ಕೆ. ಶಿವಕುಮಾರ್,** ಡಿಸಿಎಂ

ಪ್ರಕರಣದ ಮೂಲ

ಒಂದನೇ ಪುಟದಿಂದ...

ಡಿ.ಕೆ.ಶಿವಕುಮಾರ್, ಸಚಿನ್ ನಾರಾಯಣ, ಸುನಿಲ್ ಕುಮಾರ್ ಶರ್ಮ, ಆಂಜನೇಯ ಮತ್ತು ರಾಜೇಂದ್ರ ವಿರುದ್ಧ ಇ.ಡಿ. ಪ್ರಕರಣ ದಾಖಲಿಸಿತ್ತು. ನಿರ್ದೇಶನಾಲಯ ನೀಡಿದ್ದ ಸಮನ್ಸ್ ರದ್ದುಗೊಳಿಸಬೇಕು ಎಂದು ಕೋರಿ ಶಿವಕುಮಾರ್ ಸಲ್ಲಿಸಿದ್ದ ಮನವಿಯನ್ನು ಕರ್ನಾಟಕ ಹೈಕೋರ್ಟ್ 2019ರ ಆಗಸ್ಟ್ 29ರಂದು ತಿರಸ್ಕರಿಸಿತ್ತು. ಸೆ.3ರಂದು ಶಿವಕುಮಾರ್ ಅವರನ್ನು ಬಂಧಿಸಲಾಗಿತ್ತು. ಅವರು 33 ದಿನ ಜೈಲಿನಲ್ಲಿದ್ದರು. ದೆಹಲಿ ಹೈಕೋರ್ಟ್ ಅಕ್ಟೋಬರ್‌ನಲ್ಲಿ ಜಾಮೀನು ನೀಡಿತ್ತು. ಇ.ಡಿ ಇಲ್ಲಿನಚುನಾಯಿತ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ 2022ರಲ್ಲಿ ಆರೋಪಪಟ್ಟಿ ಸಲ್ಲಿಸಿತ್ತು.

ಹೈಕೋರ್ಟ್ ಆದೇಶದಲ್ಲಿ ಏನಿತ್ತು?

‘ಡಿ.ಕೆ.ಶಿವಕುಮಾರ್ ಪ್ರಕರಣದಲ್ಲಿ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಅಡಿಯಲ್ಲಿ ಆದಾಯ ತೆರಿಗೆ ಇಲಾಖೆ ಪ್ರಕರಣ ದಾಖಲಿಸಿದೆ. ಇದರನ್ವಯ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಇಸಿಐಆರ್ (ಪೊಲೀಸ್ ಎಫ್‌ಐಆರ್‌ಗೆ ಸಮಾನವಾದ–ಜಾರಿ ಪ್ರಕರಣ ಮಾಹಿತಿ ವರದಿ) ದಾಖಲಿಸಿದ್ದಾರೆ. ಹೀಗಾಗಿ, ಈ ಹಂತದಲ್ಲಿ ಆರೋಪಿಗಳ ಅರ್ಜಿಗಳು ವಿಚಾರಣೆಗೆ ಅರ್ಹವಾಗಿಲ್ಲ’ ಎಂದು ಹೈಕೋರ್ಟ್‌ನ ನ್ಯಾಯಮೂರ್ತಿ ಅರವಿಂದ ಕುಮಾರ್ ನೇತೃತ್ವದ ಪೀಠ 2019ರ ತೀರ್ಪಿನಲ್ಲಿ ಹೇಳಿತ್ತು.

‘ಆರೋಪಿಗಳ ವಿರುದ್ಧ ಅಕ್ರಮ ಹಣ ವರ್ಗಾವಣೆ ಆರೋಪ ಇದ್ದು, ಕಳಂಕಿತ ಹಣವನ್ನು ದೇಶದ ಆರ್ಥಿಕತೆಯಲ್ಲಿ ತೊಡಗಿಸುವುದು ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿ ಅಪರಾಧವಾಗಿದೆ. ಹಾಗಾಗಿ, ಇಂತಹ ಪ್ರಕರಣಗಳಲ್ಲಿ ತನಿಖಾ ಸಂಸ್ಥೆಗಳು ಹೆಚ್ಚಿನ ವಿಚಕ್ಷಣಾ ಧೋರಣೆ ಹೊಂದಿರಬೇಕು. ಪಿಎಂಎಲ್ ಕಾಯ್ದೆ–2002ರ ಅಡಿಯಲ್ಲಿ ಒಂದೇ ಒಂದು ಪ್ರಕರಣ ದಾಖಲಿಸಿದ್ದರೂ ಸಾಕು. ಐಪಿಸಿ ಕಲಂ 120 ಬಿ ಜತೆಗೆ ಷೆಡ್ಯೂಲ್ಡ್ ಪ್ರಕರಣವೇ ದಾಖಲಾಗಬೇಕು ಎಂದೇನೂ ಇಲ್ಲ. ಹೀಗಾಗಿ ಇದೊಂದು ತನಿಖೆಗೆ ಯೋಗ್ಯವಾದ ಪ್ರಕರಣ’ ಎಂದೂ ಅಭಿಪ್ರಾಯಪಟ್ಟಿತ್ತು.

ಉದ್ಯೋಗ ವಾಣಿ

ಕುಟುಂಬ ರಾಜಕಾರಣದ ವಿರುದ್ಧ ನರೇಂದ್ರ ಮೋದಿ ವಾಗ್ದಾಳಿ • ನನಗೆ ದೇಶವೇ ಮೊದಲು: ಪ್ರಧಾನಿ

‘ಯುವ ನಾಯಕರೆಂದರೆ ‘ಕೈ’ಗೆ ಭಯ’

ಸಂಗಾರೆಡ್ಡಿ (ತೆಲಂಗಾಣ): ಯುವ ನಾಯಕರನ್ನು ಮುಂಚೂಣಿಗೆ ತರಲು ಹೆದರುತ್ತಿರುವ ಕಾಂಗ್ರೆಸ್ ಪಕ್ಷವು, 75ರಿಂದ 80 ವರ್ಷ ಮೀರಿದವರನ್ನು ಪ್ರಮುಖ ಸ್ಥಾನಕ್ಕೆ ನೇಮಿಸುತ್ತಿದೆ ಎಂದು ವಾಗ್ದಾಳಿ ಮಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪರೋಕ್ಷವಾಗಿ ಟೀಕಿಸಿದರು.

ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದ ಅವರು, ಬಳಿಕ ಬಿಜೆಪಿ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

‘ಸಹಸ್ರಾರು ಕೋಟಿ ರೂಪಾಯಿಯ ಹಗರಣಗಳನ್ನು ಬಹಿರಂಗಪಡಿಸುತ್ತಿರುವ ಕಾರಣ ಕುಟುಂಬ ರಾಜಕಾರಣ ನಡೆಸುತ್ತಿರುವ ಪಕ್ಷಗಳು ತಮ್ಮನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸುತ್ತಿವೆ ಎಂದು ಅವರು ದೂರಿದರು.

‘ನಾನು ಯಾವುದೇ ರೀತಿಯ ವೈಯಕ್ತಿಕ ದಾಳಿ ಮಾಡಿಲ್ಲ, ಆದರೆ ಕುಟುಂಬ ರಾಜಕಾರಣದ ವಿರುದ್ಧ ಧ್ವನಿ ಎತ್ತಿದ್ದೇನೆ’ ಎಂದರು.

‘ಕುಟುಂಬ ರಾಜಕಾರಣವು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದ್ದು, ಅದು ಯುವಜನರು ಅವಕಾಶಗಳಿಂದ ವಂಚಿತರಾಗುವಂತೆ ಮಾಡುತ್ತದೆ ಎಂದು ನಾನು ಹೇಳಿದರೆ, ಅದಕ್ಕೆ ಪ್ರತಿಕ್ರಿಯಿಸದ ವಿರೋಧ ಪಕ್ಷಗಳು ಮೋದಿಯವರಿಗೆ ಕುಟುಂಬವಿಲ್ಲ ಎಂದು ಜರೆಯುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.



ತೆಲಂಗಾಣದ ಸಂಗಾರೆಡ್ಡಿಯಲ್ಲಿ ಮಂಗಳವಾರ ನಡೆದ ವಿವಿಧ ಅಭಿವೃದ್ಧಿ ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೇಂದ್ರ ಸಚಿವ ಜಿ. ಕಿಶನ್ ರೆಡ್ಡಿ ಶ್ರೀಕೃಷ್ಣನ ಪ್ರತಿಮೆ ನೀಡಿ ಸನ್ಮಾನಿಸಿದರು —ಪಿಟಿಐ ಚಿತ್ರ

ಮಹಾಕಾಳಿ ಬಳಿ ಪ್ರಾರ್ಥನೆ

ಸಿಕಂದರಾಬಾದಿನಲ್ಲಿ ಇರುವ ಉಜ್ಜಯಿನಿ ಮಹಾಕಾಳಿ ದೇವಾಲಯಕ್ಕೆ ಮಂಗಳವಾರ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಾರ್ಥನೆ ಸಲ್ಲಿಸಿದರು. ದೇವಸ್ಥಾನದ ಅರ್ಚಕರು ಮೋದಿ ಅವರಿಗೆ ದೇವಿಯ ಛಾಯಾಚಿತ್ರವನ್ನು ಉಡುಗೊರೆಯಾಗಿ ನೀಡಿದರು. ‘ಸಿಕಂದರಾಬಾದಿನ ಶ್ರೀ ಉಜ್ಜಯಿನಿ ಮಹಾಕಾಳಿ ದೇವಸ್ಥಾನದಲ್ಲಿ ಭಾರತೀಯರಿಗೆ ಉತ್ತಮ ಆರೋಗ್ಯ, ಯೋಗಕ್ಷೇಮ ಮತ್ತು ಸಮೃದ್ಧಿ ದೊರೆಯಲಿ ಎಂದು ಪ್ರಾರ್ಥಿಸಿದ್ದೇನೆ’ ಎಂದು ಪ್ರಧಾನಿ ಮೋದಿ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಜತೆಗೆ ತಾವು ದೇವಾಲಯಕ್ಕೆ ಭೇಟಿ ನೀಡಿದ್ದ ಫೋಟೊಗಳನ್ನೂ ಅವರು ಹಂಚಿಕೊಂಡಿದ್ದಾರೆ. ಬಳಿಕ ಅವರು ಸಂಗಾರೆಡ್ಡಿಯಲ್ಲಿ ₹ 7,200 ಕೋಟಿ ವೆಚ್ಚದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು.

‘ಆರಂಭದಲ್ಲಿ ಕಾಂಗ್ರೆಸ್ ಕುಟುಂಬ ರಾಜಕಾರಣದ ಪಕ್ಷವಾಗಿರಲಿಲ್ಲ. ಆದರೆ ಈಗ ಅದು 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಬಡ್ತಿಯನ್ನೇ ನೀಡುತ್ತಿಲ್ಲ. ಪ್ರಮುಖ ಸ್ಥಾನಗಳಿಗೆ 75- 80 ಮತ್ತು 85 ವರ್ಷ ಮೀರಿದವರನ್ನು ನೇಮಿಸುತ್ತಿದೆ. 50 ವರ್ಷದೊಳಗಿನವರು ಬಂದರೆ ತಮ್ಮ ಕುಟುಂಬದವರನ್ನು ಹಿಂದಿಕ್ಕುತ್ತಾರೆ ಎಂಬ ಭಯ ಅವರನ್ನು ಕಾಡುತ್ತಿದೆ’ ಎಂದು ಮೋದಿ ಕುಟುಕಿದರು.

‘ದೇಶದಲ್ಲಿ ಜಮ್ಮು ಮತ್ತು ಕಾಶ್ಮೀರದಿಂದ ತಮಿಳುನಾಡಿನವರೆಗೆ ಎಲ್ಲೆಲ್ಲಿ ಕುಟುಂಬ ಕೇಂದ್ರಿತ ಪಕ್ಷಗಳು ಆಡಳಿತ ನಡೆಸುತ್ತಿವೆಯೋ ಅಲ್ಲೆಲ್ಲ ರಾಜ್ಯಗಳು ಹಾಳಾಗಿದ್ದು, ಅಲ್ಲಿನ ಕುಟುಂಬಗಳು ಮಾತ್ರ ಪ್ರಬಲವಾಗಿವೆ. ಈ ರೀತಿ ಕುಟುಂಬ ರಾಜಕೀಯವನ್ನು ಮುಂದುವರಿಸಲು ಬಿಡಬೇಕೇ’ ಎಂದು ಮೋದಿ ಪ್ರಶ್ನಿಸಿದರು.

‘ನನಗೆ ದೇಶವೇ ಮೊದಲು’: ‘ಮೋದಿ ಅವರೊಂದಿಗೆ ಸೈದ್ಧಾಂತಿಕ ಹೋರಾಟವಿದೆ ಎನ್ನುವ ಅವರು, ಕುಟುಂಬ ರಾಜಕಾರಣವೇ ಮೊದಲು ಎಂದು ಏಕೆ ಹೇಳುತ್ತಾರೆ. ಆದರೆ ನನಗೆ ದೇಶವೇ ಮೊದಲು’ ಎಂದು ಮೋದಿ ಹೇಳಿದರು.

‘ಅವರಿಗೆ ಕುಟುಂಬವೇ ಸರ್ವಸ್ವವಾದರೆ, ನನಗೆ ದೇಶದ ಪ್ರತಿಯೊಂದು ಕುಟುಂಬವೂ ಸರ್ವಸ್ವ. ಅವರು ಕುಟುಂಬದ ಯೋಗಕ್ಷೇಮಕ್ಕಾಗಿ ದೇಶದ ಹಿತಾಸಕ್ತಿಯನ್ನು ಬಲಿ ಕೊಡುತ್ತಾರೆ. ಆದರೆ ನಾವು ದೇಶದ ಹಿತಾಸಕ್ತಿಗಾಗಿ ನಮ್ಮನ್ನು ಅರ್ಪಿಸಿಕೊಂಡಿದ್ದೇವೆ. ಅವರು ದೇಶವನ್ನು ಲೂಟಿ ಮಾಡಿದರು. ನಾನು ಅವಕಾಶ ಸಿಕ್ಕಾಗೆಲ್ಲ ವೇತನವನ್ನು ಜನರಿಗಾಗಿ ಖರ್ಚು ಮಾಡಿದ್ದೇನೆ’ ಎಂದರು.

ಸರ್ಕಾರದಲ್ಲಿದ್ದಾಗ ಈ ‘ಪರಿವಾರವಾದಿಗಳು’ ಉಡುಗೊರೆಗಳನ್ನು ಸ್ವೀಕರಿಸಿ, ತಮ್ಮ ಕಪ್ಪು ಹಣವನ್ನು ಸಕ್ರಮ ಮಾಡಿಕೊಳ್ಳುತ್ತಾರೆ. ನಾನು ಪಡೆದ ಉಡುಗೊರೆಗಳನ್ನು ‘ತೋಷಖಾನ’ದಲ್ಲಿ ಇಟ್ಟಿದ್ದೇನೆ. ಪರಿವಾರವಾದಿಗಳು ವಿದೇಶಿ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆಯುತ್ತಾರೆ, ಆದರೆ ನಾನು ಕೋಟಿಗಟ್ಟಲೆ ಜನಸಾಮಾನ್ಯರಿಗೆ ‘ಜನ್‌ಧನ್’ ಖಾತೆಗಳನ್ನು ತೆರೆಸಿದ್ದೇನೆ ಎಂದು ಹೇಳಿದರು.

ಸುದ್ದಿ 2 ನಿಮಿಷ

ಅರ್ಜುನ್ ಮೋಧವಾಡಿಯಾ ಅಂಬರೀಷ್ ಡೇರ್ ಬಿಜೆಪಿಗೆ

ಗಾಂಧಿನಗರ (ಪಿಟಿಐ): ಸೋಮವಾರ ಅಷ್ಟೇ ಕಾಂಗ್ರೆಸ್ ತೊರೆದಿದ್ದ ಗುಜರಾತ್‌ನ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಅರ್ಜುನ್ ಮೋಧವಾಡಿಯಾ ಮತ್ತು ಅಂಬರೀಷ್ ಡೇರ್ ಬಿಜೆಪಿಗೆ ಮಂಗಳವಾರ ಸೇರ್ಪಡೆಯಾದರು.

ಇಲ್ಲಿನ ಪಕ್ಷದ ಕಚೇರಿಯಲ್ಲಿ ಹಲವು ನಾಯಕರ ಸಮ್ಮುಖದಲ್ಲಿ ಪಕ್ಷವನ್ನು ಸೇರಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮೋಧವಾಡಿಯಾ, ‘ದೇಶಕ್ಕೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಬೇಕೆಂಬ ಮಹಾತ್ಮ ಗಾಂಧಿ ಅವರ ಕನಸನ್ನು ನನಸು ಮಾಡಲು ಶ್ರಮಿಸುತ್ತಿರುವ ನರೇಂದ್ರ ಮೋದಿ ಅವರ ಕೆಲಸಕ್ಕೆ ಕೈಜೋಡಿಸುತ್ತೇನೆ. 1947ರಲ್ಲೇ ಭಾರತ ಸ್ವತಂತ್ರಗೊಂಡರೂ ಮಹಾತ್ಮ ಗಾಂಧಿ ಕನಸು ನನಸಾಗಿಲ್ಲ. ಗುಜರಾತ್‌ನ ಇಬ್ಬರು ಮಕ್ಕಳಾದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ದೇಶವನ್ನು ಮುನ್ನಡೆಸುತ್ತಿದ್ದಾರೆ. ಅಭಿವೃದ್ಧಿಶೀಲ ಭಾರತ ನಿರ್ಮಾಣಕ್ಕಾಗಿ ಶ್ರಮಿಸುತ್ತಿದ್ದಾರೆ’ ಎಂದು ಹೇಳಿದರು.

ಡೇರ್ ಮಾತನಾಡಿ, ‘ಹಲವಾರು ವರ್ಷಗಳಿಂದ ಬಾಕಿ ಉಳಿದಿದ್ದ ಸಮಸ್ಯೆಗಳನ್ನು ಬಿಜೆಪಿ ಇತ್ಯರ್ಥ ಮಾಡುತ್ತಿದೆ. ಅಯೋಧ್ಯೆಯ ರಾಮ ಮಂದಿರ ವಿಚಾರವಾಗಿ ಕಾಂಗ್ರೆಸ್ ನಾಯಕರು ಜನರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ’ ಎಂದು ಹೇಳಿದರು.

ಉಭಯ ನಾಯಕರು ಸೋಮವಾರ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಅಯೋಧ್ಯೆಯ ರಾಮಮಂದಿರದ ಉದ್ಘಾಟನಾ ಸಮಾರಂಭದ ಆಹ್ವಾನವನ್ನು ಪಕ್ಷವು ತಿರಸ್ಕರಿಸಿದ್ದರಿಂದ ಬೇಸರಗೊಂಡು ರಾಜೀನಾಮೆ ಸಲ್ಲಿಸುತ್ತಿರುವುದಾಗಿ ಅವರು ತಿಳಿಸಿದ್ದರು.

ಬಿಜೆಪಿ ಸೇರಿದ ರಾಜೇಶ್ ಮಿಶ್ರಾ (ನವದೆಹಲಿ– ಪಿಟಿಐ): ಉತ್ತರ ಪ್ರದೇಶ ಕಾಂಗ್ರೆಸ್ ಪಕ್ಷದ ಪ್ರಮುಖ ನಾಯಕ ರಾಜೇಶ್ ಮಿಶ್ರಾ ಮಂಗಳವಾರ ಬಿಜೆಪಿ ಸೇರಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮತ್ತು ರವಿ ಶಂಕರ್ ಪ್ರಸಾದ್ ಸೇರಿದಂತೆ ಹಲವು ನಾಯಕರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

ಬಿಆರ್‌ಎಸ್–ಬಿಎಸ್‌ಪಿ ಮೈತ್ರಿ

ಹೈದರಾಬಾದ್: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತೆಲಂಗಾಣದಲ್ಲಿ ಮೈತ್ರಿ ಮಾಡಿಕೊಳ್ಳುವುದಾಗಿ ಬಿಆರ್‌ಎಸ್ ಮತ್ತು ಬಿಎಸ್‌ಪಿ ಮಂಗಳವಾರ ಘೋಷಿಸಿವೆ.

ಬಿಆರ್‌ಎಸ್, ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳಲಿದೆ ಎಂಬ ಊಹೆ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ.

ತೆಲಂಗಾಣ ಬಿಎಸ್‌ಪಿ ಘಟಕದ ಅಧ್ಯಕ್ಷ ಆರ್.ಎಸ್.ಪ್ರವೀಣ್ ಕುಮಾರ್ ಅವರು ಬಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ್ ರಾವ್ ಅವರನ್ನು ಭೇಟಿ ಮಾಡಿ ಮೈತ್ರಿ ಬಗ್ಗೆ ಚರ್ಚೆ ನಡೆಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಸಿಆರ್, ‘ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ. ಸೀಟು ಹಂಚಿಕೆ ಕುರಿತು ಮುಂದೆ ಮಾತುಕತೆ ನಡೆಯಲಿದೆ. ದಲಿತರು ಮತ್ತು ದುರ್ಬಲ ವರ್ಗದವರಿಗೆ ಯೋಜನೆ ಜಾರಿ ಸೇರಿದಂತೆ ಹಲವು ವಿಚಾರಗಳಲ್ಲಿ ಎರಡೂ ಪಕ್ಷಗಳ ಮಧ್ಯೆ ಹಲವು ಸಾಮಾನ್ಯ ಸಂಗತಿಗಳಿವೆ’ ಎಂದರು.

ಪ್ರವೀಣ್ ಕುಮಾರ್, ‘ತೆಲಂಗಾಣದಲ್ಲಿ ಬಿಜೆಪಿ ವಿರುದ್ಧ ಹೋರಾಡಲು ಜಾತ್ಯತೀತ ನಿಲುವು ಹೊಂದಿದ ಪಕ್ಷಗಳು ಒಂದಾಗಬೇಕಾದ ಅಗತ್ಯವಿದೆ. ಬಿಜೆಪಿಯು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬೆದರಿಕೆಯಾಗಿ ಪರಿಣಮಿಸಿದೆ. ಕಾಂಗ್ರೆಸ್ ಸಹ ಬಿಜೆಪಿಯಂತೆಯೇ ಆಗುತ್ತಿದೆ’ ಎಂದು ಹೇಳಿದರು.

ವರಿಷ್ಠರು ಹೇಳಿದ ಕಡೆ ಸ್ಪರ್ಧೆ: ಶೆಟ್ಟರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಲೋಕಸಭಾ ಚುನಾವಣೆಯಲ್ಲಿ ನನಗೆ ಟಿಕೆಟ್ ನೀಡುವ ವಿಷಯ ವರಿಷ್ಠರಿಗೆ ಬಿಟ್ಟದ್ದು. ಧಾರವಾಡ, ಹಾವೇರಿ, ಬೆಳಗಾವಿ ಸೇರಿದಂತೆ ವರಿಷ್ಠರು ಸೂಚಿಸಿದ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುತ್ತೇನೆ. ಒಂದು ವೇಳೆ ಸ್ಪರ್ಧೆ ಬೇಡ ಚುನಾವಣಾ ಪ್ರಚಾರ ಮಾಡುವಂತೆ ಹೇಳಿದರೂ ಅದಕ್ಕೂ ಸಿದ್ಧ’ ಎಂದು ಎಂದು ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಅವರು ಇಲ್ಲಿ ಹೇಳಿದರು.

ರಾಜ್ಯ ಸರ್ಕಾರಕ್ಕೆ ಜೆಡಿಎಸ್ ರಾಷ್ಟ್ರೀಯ ನಾಯಕ ಎಚ್‌.ಡಿ. ದೇವೇಗೌಡ ಸವಾಲು

‘ಮುಸ್ಲಿಮರ ಮೀಸಲಾತಿ ಮರಳಿ ಕೊಡಲಿ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದಕ್ಕೆ ನನ್ನ ಜಾತ್ಯತೀತ ನಿಲುವು ಪ್ರಶ್ನಿಸುವ ಕಾಂಗ್ರೆಸ್, ತಾಕತ್ತಿದ್ದರೆ ಮುಸ್ಲಿಂ ಸಮುದಾಯಕ್ಕೆ ನಾನು ಕೊಟ್ಟ ಶೇ 4 ರಷ್ಟು ಮೀಸಲಾತಿ ಮರಳಿ ಕೊಡಲಿ’ ಎಂದು ಜೆಡಿಎಸ್ ರಾಷ್ಟ್ರೀಯ ನಾಯಕ ಎಚ್. ಡಿ.ದೇವೇಗೌಡ ಸವಾಲು ಹಾಕಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಿದ್ದರಾಮಯ್ಯ ಟೀಕಿಸಿದಂತೆ ಶೂನ್ಯ ಸಾಧನೆ ಭಯಕ್ಕೆ ಬಿಜೆಪಿ ಜತೆ ಜೆಡಿಎಸ್ ಮೈತ್ರಿ ಮಾಡಿಕೊಂಡಿಲ್ಲ. ಯಾರದು ಶೂನ್ಯ ಸಾಧನೆ ಎನ್ನುವುದಕ್ಕೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಜನರೇ ಉತ್ತರ ನೀಡಲಿದ್ದಾರೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಮಂಡ್ಯದ ನಾಯಕರೊಬ್ಬರಿಗೆ ಸಾರಿಗೆ ಮಂತ್ರಿ ಮಾಡಿದ್ದರು. ಕುಮಾರಸ್ವಾಮಿ ಸರ್ಕಾರ ಕೆಡವಿದವರ ಜತೆ ಸೇರಿಕೊಂಡು ಆ ಮಹಾನುಭಾವ ಈಗ ನಮ್ಮನ್ನೇ ಟೀಕೆ ಮಾಡುತ್ತಿದ್ದಾರೆ. ಮುದುಕಪ್ಪನನ್ನ ಕಟ್ಟಿಕೊಂಡು ಏನೇನೋ ಮಾಡೋಕೆ ಹೋಗ್ತಿದ್ದಾರೆ ಅಂತಾರೆ. ಈ ಮುದುಕಪ್ಪನಿಗೆ ಸ್ವಾಭಿಮಾನ ಇದೆ. ನಿಮಗೆ ನನ್ನ ಬಗ್ಗೆ ಮಾತಾಡೋ ಯೋಗ್ಯತೆ ಇಲ್ಲ ಅಷ್ಟೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಯಾವುದೇ ಕಾಮಗಾರಿಯ ಹಣ ಭರವಸೆ ಪತ್ರ ನೀಡಲು ಐದು ಪೈಸೆ ಪಡೆದಿರುವುದು ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಐದು ಪೈಸೆ ತಗೊಳ್ಳೋದು ಎಲ್ಲಾದರೂ ಉಂಟೆ? ಅದು ಮುಖ್ಯಮಂತ್ರಿ ಸ್ಥಾನಕ್ಕೆ ಗೌರವ ತರುತ್ತಾ? ನೀರಾವರಿ ಕಾರ್ಯದರ್ಶಿ ಕರೆ ಮಾಡಿದರೂ ಪ್ರತಿಕ್ರಿಯಿಸುವುದಿಲ್ಲ. ನಾನೊಬ್ಬ ಸಣ್ಣ ರಾಜಕಾರಣಿ ಎಂದು ನಿರ್ಲಕ್ಷ್ಯ ಮಾಡುತ್ತಾರೆ. ಅಂತಹ ದೊಡ್ಡ ಹುದ್ದೆಗೆ ಕಿರಿಯ ಅಧಿಕಾರಿ ನೇಮಿಸಿದ್ದಾರೆ’ ಎಂದು ಅವರು ಹೇಳಿದರು.

‘ಬರ ನಿರ್ವಹಣೆಯಲ್ಲಿ ಸರ್ಕಾರ ಸಂಪೂರ್ಣ ವಿಫಲ’


ಎಚ್‌.ಡಿ. ದೇವೇಗೌಡ

ರಾಜ್ಯ ಸರ್ಕಾರ ಬರ ಪರಿಸ್ಥಿತಿ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ. ರಾಜ್ಯದಲ್ಲಿ 692 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಸಿದ್ದರಾಮಯ್ಯ ಸಾಧನೆಯ ಕಿರುನೋಟ ಎಂದು ದೇವೇಗೌಡ ಅವರು ಟೀಕಿಸಿದರು.


ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ತೀವ್ರವಾಗಿದೆ. ಕಾವೇರಿ ನೀರಿಗಾಗಿ ಹಿಂದಿನಿಂದಲೂ ಹೋರಾಟ ನಡೆದಿದೆ. ಹೇಮಾವತಿ, ಕಬಿನಿ, ಹಾರಂಗಿ ಅಣೆಕಟ್ಟು ಕಟ್ಟಿಸಿದ್ದೇವೆ. ಹೇಮಾವತಿಯಲ್ಲಿ ನೀರಿದೆ. ಅಲ್ಲಿನ ಹಳ್ಳಿಗಳಿಗೆ, ಬೆಂಗಳೂರಿಗೂ ನೀರು ಕೊಡಬೇಕು. ಟ್ಯಾಂಕರ್ ನೀರಿಗೆ ನ್ಯಾಯಯುತ ದರ ದರ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ಗ್ಯಾರಂಟಿ ಅನುಷ್ಠಾನ, ಸಮೀಕ್ಷೆ ಹೆಸರಲ್ಲಿ ಸರ್ಕಾರ ತೆರಿಗೆ ಹಣ ದುಂದು ವೆಚ್ಚ ಮಾಡುತ್ತಿದೆ. ಅದಕ್ಕಾಗಿ ಐದು ಜನ ಮಂತ್ರಿಗಳು, ಮೇಲುಸ್ತುವಾರಿ ಸಮಿತಿ ನೇಮಿಸಿದೆ. ಹಲವರಿಗೆ ಸಂಪುಟ ದರ್ಜೆಯ ಸ್ಥಾನ ನೀಡಿದೆ. ರಾಜ್ಯದ ತೆರಿಗೆ ಹಣ ನೀರಿನಂತೆ ಖರ್ಚು ಮಾಡುತ್ತಾ, ಕೇಂದ್ರ ಸರ್ಕಾರವನ್ನು ದೂರುತ್ತಿದೆ. ಬೆಳಿಗ್ಗೆ ಎದ್ದು, ಮಲಗುವವರೆಗೂ ಮೋದಿ ಅವರನ್ನು ಟೀಕಿಸುವುದೇ ಕೆಲಸವಾಗಿದೆ. ಮಾತಿಗೂ ಇತಿಮಿತಿ ಬೇಡವೇ ಎಂದು ಪ್ರಶ್ನಿಸಿದರು.

ಬಿಜೆಪಿ ಸೇರಲು ಆಮಿಷ: ಬಿ.ಆರ್. ಪಾಟೀಲ

ಕಲಬುರಗಿ: ‘ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾದರೆ ಚುನಾವಣೆ ಮತ್ತು ವೈಯಕ್ತಿಕ ಖರ್ಚು ನೋಡಿಕೊಳ್ಳುತ್ತೇವೆ. ಮುಂದೆ ಅಧಿಕಾರಕ್ಕೆ ಬಂದರೆ ಮಂತ್ರಿಯನ್ನೂ ಮಾಡುವುದಾಗಿ ಬಿಜೆಪಿಯ ಜವಾಬ್ದಾರಿಯುತ ವ್ಯಕ್ತಿಯೊಬ್ಬರು ಆಮಿಷ ಒಡ್ಡಿದ್ದರು’ ಎಂದು ಮುಖ್ಯಮಂತ್ರಿ ರಾಜಕೀಯ ಸಲಹೆಗಾರ, ಆಳಂದ ಶಾಸಕ ಬಿ.ಆರ್. ಪಾಟೀಲ ಅವರು ಹೇಳಿದರು.

ಎಂ.ಎಸ್. ಸತ್ಯುಗೆ ‘ಜೀವಮಾನ ಸಾಧನೆ’ ಪ್ರಶಸ್ತಿ



ಬೆಂಗಳೂರು: 15ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವದ ‘ಜೀವಮಾನ ಸಾಧನೆ’ ಪ್ರಶಸ್ತಿಗೆ ಅಂತರರಾಷ್ಟ್ರೀಯ ಖ್ಯಾತಿಯ ಹಿರಿಯ ನಿರ್ದೇಶಕ ಎಂ.ಎಸ್. ಸತ್ಯು ಅವರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿದೆ.

15ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವ ಆಯ್ಕೆ ಸಮಿತಿ ಶಿಫಾರಸು ಮಾಡಿದ್ದ, ಚಿತ್ರರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮೂರು ಮಂದಿಯ ಹೆಸರುಗಳ ಪೈಕಿ ಎಂ.ಎಸ್. ಸತ್ಯು ಅವರನ್ನು ಆಯ್ಕೆ ಮಾಡಲಾಗಿದೆ.

ನಗರದಲ್ಲಿ ಫೆ. 29ರಿಂದ 15ನೇ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ನಡೆಯುತ್ತಿದ್ದು, ಕೊನೆಯ ದಿನವಾದ ಮಾರ್ಚ್ 7ರಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ನಾಳೆ ಬಿಜೆಪಿಗೆ ಸೇರ್ಪಡೆ • ಟಿಎಂಸಿ ಭ್ರಷ್ಟಾಚಾರ ವಿರುದ್ಧ ಹೋರಾಟವೇ ಗುರಿ ಎಂದು ಹೇಳಿಕೆ

ನ್ಯಾ. ಗಂಗೋಪಾಧ್ಯಾಯ ರಾಜೀನಾಮೆ

ಕೋಲ್ಕತ್ತ (ಪಿಟಿಐ): ಕಲ್ಕತ್ತ ಹೈಕೋರ್ಟ್‌ನ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಮಂಗಳವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಬಳಿಕ ತಾನು ಬಿಜೆಪಿಗೆ ಸೇರ್ಪಡೆ ಆಗುವುದಾಗಿಯೂ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದ ಆಡಳಿತಾರೂಢ ಟಿಎಂಸಿ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು. ‘ಭ್ರಷ್ಟಾಚಾರದ ಜೊತೆಗೆ ತಾಳೆಯಾಗಿರುವ ಟಿಎಂಸಿ ವಿರುದ್ಧ ಕೊನೆಯವರೆಗೂ ಹೋರಾಟ ನಡೆಸಲಿದ್ದೇನೆ’ ಎಂದರು.

‘ಬಹುಶಃ ಮಾರ್ಚ್ 7ರಂದು ನಾನು ಬಿಜೆಪಿಗೆ ಸೇರಲಿದ್ದೇನೆ. ಅದು, ರಾಷ್ಟ್ರೀಯ ಪಕ್ಷವಾಗಿದ್ದು, ರಾಜ್ಯದಲ್ಲಿ ಟಿಎಂಸಿಯ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿರುವುದು ನನ್ನ ಈ ನಿರ್ಧಾರಕ್ಕೆ ಕಾರಣ’ ಎಂದು ಸಮರ್ಥಿಸಿಕೊಂಡರು. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿ ಅವರು ನೀಡಿದ್ದ ತೀರ್ಪು ತೀವ್ರ ರಾಜಕೀಯ ಚರ್ಚೆಗೆ ಗ್ರಾಸವಾಗಿತ್ತು.

ಲೋಕಸಭೆ ಚುನಾವಣೆಗೆ ಸ್ಪರ್ಧಿಸುವಿರಾ ಎಂಬ ಪ್ರಶ್ನೆಗೆ ಅವರು ನೇರ ಉತ್ತರ ನೀಡಲಿಲ್ಲ. ‘ನಾನು ಸ್ಪರ್ಧಿಸಬೇಕೇ ಎಂಬುದನ್ನು ಬಿಜೆಪಿ ವರಿಷ್ಠರು ತೀರ್ಮಾನಿಸಬೇಕು. ಅವರ ನಿರ್ಧಾರವನ್ನು ನಾನು ಒಪ್ಪುತ್ತೇನೆ’ ಎಂದರು.

‘ಟಿಎಂಸಿ ಪಕ್ಷದ ಅನ್ಯಾಯ ಹಾಗೂ ಭ್ರಷ್ಟಾಚಾರ ವಿರುದ್ಧ ನಾನು ಹೋರಾಟ ನಡೆಸುತ್ತೇನೆ. ಟಿಎಂಸಿ ನಾಯಕರು ಕೆಲವು ದಿನಗಳಿಂದ ನನ್ನ ವಿರುದ್ಧ ಮಾನಹಾನಿಕರವಾದ ಭಾಷೆಯನ್ನು ಬಳಸುತ್ತಿದ್ದಾರೆ. ತೀರ್ಪು ಇಷ್ಟವಾಗಲಿಲ್ಲ ಎಂಬ ಕಾರಣಕ್ಕೇ ನ್ಯಾಯಮೂರ್ತಿ ವಿರುದ್ಧ ನೇರವಾಗಿ ವಾಗ್ದಾಳಿ ನಡೆಸಲಾಗದು. ಇಂಥ ಪ್ರಚೋದನಕಾರಿ ವರ್ತನೆಗಳೇ ರಾಜಕೀಯ ಪ್ರವೇಶಿಸುವ ನನ್ನ ತೀರ್ಮಾನಕ್ಕೆ ಕಾರಣವಾಗಿದೆ’ ಎಂದು ತಮ್ಮ ನಡೆಯನ್ನು ಅವರು ಸಮರ್ಥಿಸಿಕೊಂಡರು.

‘ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯ ದಿನಗಣನೆ ಆರಂಭವಾಗಿದೆ. ಸಿಪಿಎಂ ನೇತೃತ್ವದ ಎಡರಂಗವು 2009ರ ಲೋಕಸಭೆ ಚುನಾವಣೆಯ ನಂತರ ಅಧಃಪತನವಾಯಿತು. ಟಿಎಂಸಿ ಕೂಡಾ ಅಂತಹದೇ ಸ್ಥಿತಿ ಎದುರಿಸಲಿದೆ’ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ವಿರುದ್ಧವೂ ಭ್ರಷ್ಟಾಚಾರದ ಆರೋಪವಿರುವ ಕುರಿತ ಪ್ರಶ್ನೆಗೆ, ‘ಅವರು ಮತ್ತು ಕೆಲ ಟಿಎಂಸಿ ನಾಯಕರ ವಿರುದ್ಧ ಪ್ರಕರಣವನ್ನು ರೂಪಿಸಲಾಗಿತ್ತು’ ಎಂದು ಹೇಳಿದರು.

ಗಂಗೋಪಾಧ್ಯಾಯ ಅವರು ತಮ್ಮ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕಳುಹಿಸಿದರು. ಹಾಗೂ, ಅದರ ಪ್ರತಿಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಕಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಗ್ನನಮ್ ಅವರಿಗೂ ಕಳುಹಿಸಿದ್ದಾರೆ.

ಹೆಚ್ಚುವರಿ ನ್ಯಾಯಮೂರ್ತಿಯಾಗಿ ಗಂಗೋಪಾಧ್ಯಾಯ ಅವರು 2018ರ ಮೇ 2ರಂದು ಕಲ್ಕತ್ತ ಹೈಕೋರ್ಟ್ ಪ್ರವೇಶಿಸಿದ್ದರು. 2020ರ ಜುಲೈ 30ರಂದು ಪೂರ್ಣಾವಧಿಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

ಶೋಭಾ ವಿರುದ್ಧ ರೀಲ್ಸ್ ಹಾಡು

ಪ್ರಜಾವಾಣಿ ವಾರ್ತೆ



ಉಡುಪಿ: ‘ಗೋ ಬ್ಯಾಕ್ ಶೋಭಾ ಅಭಿಯಾನ’ದ ಬಳಿಕ ಇದೀಗ ರೀಲ್ಸ್‌ನಲ್ಲಿ ಎಲ್ಲೆಡೆ ಸದ್ದು ಮಾಡುತ್ತಿರುವ ‘ಕರಿಮಣಿ ಮಾಲೀಕ ನೀನಲ್ಲ’ ಹಾಡನ್ನು ಬಳಸಿಕೊಂಡು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕುರಿತು ರಚಿಸಲಾಗಿರುವ ಹಾಡು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಉಡುಪಿ– ಚಿಕ್ಕಮಗಳೂರು ಕ್ಷೇತ್ರ ವ್ಯಾಪ್ತಿಯ ಹದಗೆಟ್ಟ ರಸ್ತೆಗಳು, ಉಡುಪಿಯ ಸಂತೆಕಟ್ಟೆ ಜಂಕ್ಷನ್‌ನಲ್ಲಿ ರಾಷ್ಟ್ರೀಯ ಹೆದ್ದಾರಿಯ ಒಂದು ಭಾಗ ಕುಸಿಯುವ ವಿಡಿಯೊ ಬಳಸಿಕೊಂಡು ಹಾಡನ್ನು ರಚಿಸಲಾಗಿದೆ.

ಉಡುಪಿ ಜಿಲ್ಲಾ ಕಾಂಗ್ರೆಸ್ ಮುಖಂಡ ಅಮೃತ್ ಶೆಣೈ ಅವರ ಖಾತೆಯಿಂದ ಪೋಸ್ಟ್ ಆಗಿರುವ ಹಾಡನ್ನು 1900ಕ್ಕೂ ಹೆಚ್ಚು ಮಂದಿ ಶೇರ್ ಮಾಡಿದ್ದು, 750ಕ್ಕೂ ಹೆಚ್ಚು ಮಂದಿ ಲೈಕ್ ಮಾಡಿದ್ದಾರೆ. ಶೋಭಾ ಅವರ ವಿರುದ್ಧ ನಡೆಯುತ್ತಿರುವ ಅಭಿಯಾನದಲ್ಲಿ ಪಕ್ಷದ ಪದಾಧಿಕಾರಿಗಳು ಭಾಗಿಯಾಗಿದ್ದರೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಕಿಶೋರ್ ಕುಂದಾಪುರ ತಿಳಿಸಿದ್ದಾರೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಜೀನಾಮೆ

ಪ್ರಜಾವಾಣಿ ವಾರ್ತೆ


ಡಾ.ಎಚ್‌.ಎನ್. ರವೀಂದ್ರ

ಮಂಡ್ಯ: ಲೋಕಸಭೆ ಚುನಾವಣೆ ಅಭ್ಯರ್ಥಿ ಆಯ್ಕೆ ಕುರಿತು ಅಸಮಾಧಾನಗೊಂಡಿರುವ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ.ಎಚ್.ಎನ್.ರವೀಂದ್ರ ಮಂಗಳವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

‘ಹಣಕ್ಕೆ ಮಣೆ ಹಾಕಿರುವ ವರಿಷ್ಠರು ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವವನ್ನೂ ಪಡೆಯದ ವ್ಯಕ್ತಿಗೆ ಟಿಕೆಟ್ ನೀಡುವ ನಿರ್ಧಾರ ಕೈಗೊಂಡಿದ್ದಾರೆ. ಸ್ಥಳೀಯ ಮುಖಂಡರು, ಕಾರ್ಯಕರ್ತರೊಂದಿಗೆ ಚರ್ಚಿಸದೇ ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡು ಹೊರಗಿನ ವ್ಯಕ್ತಿಗೆ ಟಿಕೆಟ್ ನೀಡುತ್ತಿದ್ದಾರೆ. ಇದನ್ನು ಖಂಡಿಸಿ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕಷ್ಟೇ ರಾಜೀನಾಮೆ ನೀಡಿದ್ದೇನೆ. ಕಾಂಗ್ರೆಸ್ ಪಕ್ಷದಲ್ಲಿ ಮುಂದುವರಿದು ಜನರ ಸಮಸ್ಯೆಗಳ ಪರ ಹೋರಾಟ ನಡೆಸುತ್ತೇನೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮೇಲುಕೋಟೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಆಗಲೂ ಯಾರೊಂದಿಗೂ ಚರ್ಚಿಸದೇ ಕರ್ನಾಟಕ ಸರ್ವೋದಯ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಲು ನಿರ್ಧರಿಸಲಾಯಿತು. ಆದರೂ ಪಕ್ಷದ ಹಿತದೃಷ್ಟಿಯಿಂದ ಅವರ ಗೆಲುವಿಗೆ ಶ್ರಮಿಸಿದ್ದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಟಿಕೆಟ್ ನೀಡಬೇಕು. ಇಲ್ಲದಿದ್ದರೆ ವ್ಯತಿರಿಕ್ತ ನಿರ್ಣಯ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಯೂನಿವರ್ಸಲ್ ಆರೋಗ್ಯ ಯೋಜನೆ ಕುರಿತು ಮಾತನಾಡಲು ಮುಖ್ಯಮಂತ್ರಿ ಭೇಟಿಗಾಗಿ ಪ್ರಯತ್ನಿಸಿದ್ದೆ. ಮಂಡ್ಯ, ಮೈಸೂರು, ಬೆಂಗಳೂರಿನಲ್ಲೂ ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ದೆಹಲಿಗೆ ತೆರಳಿ ಕರ್ನಾಟಕ ಭವನದಲ್ಲಿ ಭೇಟಿಯಾಗಲೂ ಯತ್ನಿಸಿದೆ. ಆದರೂ ಸಾಧ್ಯವಾಗಲಿಲ್ಲ. ಕೃಷಿ ಸಚಿವ ಚಲುವರಾಯಸ್ವಾಮಿ ಕೂಡ ಕಾರ್ಯಕರ್ತರಿಗೆ ಸ್ಪಂದಿಸುತ್ತಿಲ್ಲ. ಈ ಎಲ್ಲಾ ಬೆಳವಣಿಗೆಗಳಿಂದ ಬೇಸತ್ತು ರಾಜೀನಾಮೆ ನೀಡುತ್ತಿದ್ದೇನೆ’ ಎಂದರು.

‘ತಿಂಗಳ ಹಿಂದೆಯೇ ಕೆಪಿಸಿಸಿ ಅಧ್ಯಕ್ಷರಿಗೆ ರಾಜೀನಾಮೆ ನೀಡಿದ್ದೆ, ಆದರೆ ಅವರು ರಾಜೀನಾಮೆ ಅಂಗೀಕಾರ ಮಾಡಿರಲಿಲ್ಲ. ಈಗ ಮತ್ತೊಮ್ಮೆ ರಾಜೀನಾಮೆ ಸಲ್ಲಿಸಿದ್ದೇನೆ’ ಎಂದರು.

ಅನಂತಕುಮಾರ ಹೆಗಡೆಗೆ ಸಂಸ್ಕೃತಿ ಇಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಶಿರಸಿ: ಸಂಸದ ಅನಂತಕುಮಾರ ಹೆಗಡೆಗೆ ಸಂಸ್ಕೃತಿ ಇಲ್ಲ. ನನ್ನನ್ನ ಟಾರ್ಗೆಟ್ ಮಾಡಿದಾಗ ಹಿಂದುತ್ವ ಬರುತ್ತದೆ. ನಾಲ್ಕು ವರ್ಷದಿಂದ ಅವರು ಎಲ್ಲಿ ಹೋಗಿದ್ದರು? ಅಂಥವರನ್ನು ಇಲ್ಲಿನ ಮತದಾರರೇ ಆಯ್ಕೆ ಮಾಡಿದ್ದಾರೆ. ಅಭಿವೃದ್ಧಿ ಕೆಲಸ, ಜನರ ಕೆಲಸ ಮಾಡದ ವ್ಯಕ್ತಿ ಅನಂತಕುಮಾರ್ ಹೆಗಡೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಬನವಾಸಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕಾಂಗ್ರೆಸ್ ಸೇರ್ಪಡೆ ಬಗ್ಗೆ ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ್ ನನ್ನ ಬಳಿ ಈವರೆಗೆ ಚರ್ಚೆ ಮಾಡಿಲ್ಲ. ಆದರೆ ಕಾಂಗ್ರೆಸ್ ಸಿದ್ಧಾಂತ ಒಪ್ಪಿ ಪಕ್ಷಕ್ಕೆ ಬಂದರೆ ಅವರಿಗೆ ಸ್ವಾಗತ ಎಂದ ಅವರು, ಈ ಹಿಂದೆ ಹೆಬ್ಬಾರ್ ಕಾಂಗ್ರೆಸ್‌ನಲ್ಲಿದ್ದರು. ನಂತರ ಬಿಜೆಪಿ ಹೋಗಿದ್ದಾರೆ. ಈಗ ಬಿಜೆಪಿಯಲ್ಲಿ ಬೇಸರ ಆಗಿದೆ ಎನ್ನುತ್ತಿದ್ದಾರೆ. ಮುಂದಿನ ಪರಿಣಾಮ ಏನಾಗುತ್ತದೆ ಎಂದು ಕಾದು ನೋಡೋಣ’ ಎಂರು.

‘ನನ್ನ ಕೈಯಲ್ಲಿ ಟಿಕೆಟ್ ಇಲ್ಲ’

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ‘ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಬಿಜೆಪಿಯ ಹಲವು ಆಕಾಂಕ್ಷಿಗಳು ತಮ್ಮ ಜೇಬಿನಲ್ಲಿ ಟಿಕೆಟ್ ಇಟ್ಟುಕೊಂಡು ಓಡಾಡುತ್ತಿದ್ದಾರೆ. ನನ್ನ ಬಳಿ ಟಿಕೆಟ್ ಇಲ್ಲ. ಯಾರೇ ಅಭ್ಯರ್ಥಿಯಾದರೂ ಗೆಲ್ಲಿಸಿ’ ಎಂದು ಸಂಸದ ಅನಂತಕುಮಾರ ಹೆಗಡೆ ಹೇಳಿದರು.

ತಾಲ್ಲೂಕಿನ ಮಾವಳ್ಳಿಯಲ್ಲಿ ಸೋಮವಾರ ಸಂಜೆ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಯಾಗಲು ಗೊಂದಲವಿದೆ. ಆದರೆ, ಬಿಜೆಪಿಯಲ್ಲಿ ಪೈಪೋಟಿ ಇದೆ’ ಎಂದರು.

5 ವಿ.ವಿಗೆ ಕುಲಪತಿಗಳ ನೇಮಕ

ಬೆಂಗಳೂರು: ರಾಜ್ಯದ ಐದು ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಆದೇಶ ಹೊರಡಿಸಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಕೆ.ಎಂ.ಮೇತ್ರಿ ಅವರನ್ನು ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯಕ್ಕೆ, ಮಂಗಳೂರು ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪಿ.ಸಿ.ಧರ್ಮ ಅವರನ್ನು ಅದೇ ವಿಶ್ವವಿದ್ಯಾಲಯಕ್ಕೆ ಹಾಗೂ ಮೈಸೂರು ತೋಟಗಾರಿಕಾ ಕಾಲೇಜಿನ ಡೀನ್ ವಿಷ್ಣುವರ್ಧನ ಅವರನ್ನು ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ, ಪ್ರೊ. ಶರತ್ ಅನಂತಮೂರ್ತಿ ಅವರನ್ನು ಕುವೆಂಪು ವಿ.ವಿಗೆ ಹಾಗೂ ಪ್ರೊ. ಸಿ.ಎಂ. ತ್ಯಾಗರಾಜ್ ಅವರನ್ನು ರಾಣಿ ಚನ್ನಮ್ಮ ವಿ.ವಿಗೆ ಕುಲಪತಿಗಳನ್ನಾಗಿ ನೇಮಿಸಲಾಗಿದೆ.

ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ • ಪಾಠಗಳಲ್ಲಿ ಒಂದಷ್ಟು ಬದಲಾವಣೆ

ಪ್ರಚಲಿತ ವಿದ್ಯಮಾನಗಳೂ ಪಠ್ಯ ಪುಸ್ತಕಕ್ಕೆ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಜುನಾಥ ಜಿ. ಹೆಗಡೆ ಸಂಯೋಜಕರಾಗಿರುವ ರಾಜ್ಯ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಹೊಸ ಸಂಸತ್ ಭವನ, ಸಾಂಸ್ಕೃತಿಕ ನಾಯಕ ಬಸವೇಶ್ವರ ಎಂಬ ವಿವರ ಸೇರಿದಂತೆ ಪ್ರಚಲಿತ ವಿದ್ಯಮಾನ ಗಳನ್ನೂ 2024–25ನೇ ಸಾಲಿನ ಪಠ್ಯಕ್ಕೆ ಸೇರ್ಪಡೆ ಮಾಡಿದೆ.

10ನೇ ತರಗತಿಯ ಭೂಗೋಳದಲ್ಲಿ ಇದುವರೆಗೂ ಇದ್ದ ರಾಷ್ಟ್ರೀಯ ಹೆದ್ದಾರಿ, ವಿಮಾನ ನಿಲ್ದಾಣದ ಮಾಹಿತಿಯ ಜತೆಗೆ ಮೆಟ್ರೊ ರೈಲು ಮಾಹಿತಿ, ಈಗಷ್ಟೇ ಮರಣೋತ್ತರವಾಗಿ ‘ಭಾರತ ರತ್ನ’ ಪುರಸ್ಕೃತರಾದ ಹಸಿರು ಕ್ರಾಂತಿಯ ಹರಿಕಾರ ಸ್ವಾಮಿನಾಥನ್ ಕುರಿತ ಮಾಹಿತಿ ಸೇರಿಸಲಾಗಿದೆ. ಕೇಂದ್ರ ಸರ್ಕಾರ ಈಚೆಗೆ ಮಹಿಳಾ ಮೀಸಲಾತಿಗಾಗಿ ರೂಪಿಸಿದ ‘ನಾರಿಶಕ್ತಿ ವಂದನಾ’ ಕಾಯ್ದೆ, ಬ್ಯಾಂಕ್‌ಗಳ ವಿಲೀನ, ಲಿಂಗತ್ವ ಅಲ್ಪಸಂಖ್ಯಾತರ ಮಾಹಿತಿ, ಪೋಕ್ಸೊ ಕಾಯ್ದೆಯ ವಿವರವನ್ನು 10ನೇ ತರಗತಿಯ ರಾಜ್ಯಶಾಸ್ತ್ರದಲ್ಲಿ ಅಳವಡಿಸಲಾಗಿದೆ. ಮಹಿಳಾ ದಿನಾಚರಣೆ ಪಾಠದಲ್ಲಿ ಹಲವು ಸಾಧಕ ಮಹಿಳೆಯರನ್ನು ಪರಿಚಯಿಸಲಾಗಿದೆ.

6ನೇ ತರಗತಿಯಿಂದ 10ನೇ ತರಗತಿವರೆಗಿನ ರಾಜ್ಯ ಪಠ್ಯಕ್ರಮದ ಪಠ್ಯಪುಸ್ತಕಗಳ ಪರಿಷ್ಕರಣೆಗೆ ಕಳೆದ ಸೆಪ್ಟೆಂಬರ್‌ನಲ್ಲಿ ಐದು ಸಮಿತಿಗಳನ್ನು ರಚಿಸಲಾಗಿತ್ತು. ಕನ್ನಡ ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆ, 6, 7ನೇ ತರಗತಿಯ ಸಮಾಜ ವಿಜ್ಞಾನ ಹಾಗೂ 8,9, 10ನೇ ತರಗತಿಯ ಸಮಾಜ ವಿಜ್ಞಾನಕ್ಕೆ ಪ್ರತ್ಯೇಕವಾಗಿ ಸಮಿತಿಗಳನ್ನು ರಚಿಸಲಾಗಿತ್ತು. ಸಮಿತಿಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿತ್ತು. ನಿಗದಿತ ಅವಧಿಯ ಒಳಗೆ ಮಧ್ಯಂತರ ವರದಿ ನೀಡಿದ ನಂತರ ಮತ್ತೆ ಎರಡು ತಿಂಗಳು ಅವಧಿ ವಿಸ್ತರಿಸಲಾಗಿತ್ತು.

ಹಿಂದಿನ ಬಿಜೆಪಿ ಸರ್ಕಾರ ತಿದ್ದುಪಡಿ ಮಾಡಿದ್ದ ಪಾಠಗಳು ಹಾಗೂ ಕೆಲ ಅಂಶಗಳನ್ನು ಕಾಂಗ್ರೆಸ್ ಸರ್ಕಾರ ವಾಪಸ್ ಪಡೆದು, ಬರಗೂರು ರಾಮಚಂದ್ರಪ್ಪ ಸಮಿತಿ ರೂಪಿಸಿದ್ದ ಹಳೆಯ ಪಠ್ಯಗಳನ್ನೇ ಮುಂದುವರಿಸಿತ್ತು. ಕರ್ನಾಟಕ ಪಠ್ಯಪುಸ್ತಕ ಸಂಘ ಇದೇ ಶೈಕ್ಷಣಿಕ ಸಾಲಿನಲ್ಲಿ ಕೈಬಿಟ್ಟ–ಸೇರಿಸಿದ ಪಾಠಗಳು, ತಿದ್ದುಪಡಿ ಮಾಡಿದ ಅಂಶಗಳನ್ನು ಹಾಗೆ ಉಳಿಸಿಕೊಂಡಿರುವ ಸಮಿತಿ ರಾಷ್ಟ್ರೀಯ ಹಾಗೂ ರಾಜ್ಯ ಪಠ್ಯಕ್ರಮ ಚೌಕಟ್ಟುಗಳಿಗೆ ಅನುಗುಣವಾಗಿ, ಮೂಲ ಸ್ವರೂಪ ಬದಲಾಗದಂತೆ ಒಂದಷ್ಟು ಸಣ್ಣ ಬದಲಾವಣೆಗಳನ್ನು ಮಾಡಿದೆ.

ವರದಿಯನ್ನು ಸ್ವೀಕರಿಸಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮಿತಿ ನೀಡಿದ ಕರಡು ಪಠ್ಯಗಳನ್ನು ಮುದ್ರಿಸಲು ಕರ್ನಾಟಕ ಪಠ್ಯಪುಸ್ತಕ ಸಂಘಕ್ಕೆ ಅನುಮತಿ ನೀಡಿದೆ. ಸಮಾಜ ವಿಜ್ಞಾನ ವಿಷಯದ ಪುಸ್ತಕಗಳನ್ನು ಕನ್ನಡ ಹಾಗೂ ಇಂಗ್ಲಿಷ್ ಜತೆಗೆ ಉರ್ದು, ತಮಿಳು, ತೆಲುಗು, ಮರಾಠಿ ಹಾಗೂ ಹಿಂದಿಯಲ್ಲೂ ಮುದ್ರಿಸಿ, ವಿತರಿಸಲು ಸೂಚಿಸಿದೆ.

ಜಾತ್ಯತೀತ, ವೈಜ್ಞಾನಿಕ ಪಾಠ ಅಳವಡಿಕೆ

ಮಕ್ಕಳಲ್ಲಿ ಜಾತ್ಯತೀತ, ವೈಚಾರಿಕ ಭಾವನೆಗಳನ್ನು ಬಿತ್ತಲು ಈಗಾಗಲೇ ಸಂವಿಧಾನದ ಓದು ಮತ್ತಿತರ ಕ್ರಮಗಳನ್ನು ಕೈಗೊಂಡಿರುವ ರಾಜ್ಯ ಸರ್ಕಾರದ ಆಶಯಕ್ಕೆ ಪೂರಕವಾಗಿ ಸಮಾಜ ವಿಜ್ಞಾನ ಪಾಠಗಳಲ್ಲೂ ಒಂದಷ್ಟು ಬದಲಾವಣೆಗಳನ್ನು ಸಮಿತಿ ಮಾಡಿದೆ.

6ನೇ ತರಗತಿಯ ಸಮಾಜ ವಿಜ್ಞಾನದಲ್ಲಿ ‘ವೇದ ಕಾಲದ ಸಂಸ್ಕೃತಿ ಮತ್ತು ಹೊಸ ಧರ್ಮಗಳ ಉದಯ’ ಪಾಠ ಸೇರಿಸಲಾಗಿದೆ. ಬೌದ್ಧ, ಜೈನ ‘ಮತಗಳು’ ಎಂಬ ಪದದ ಬದಲು ‘ಧರ್ಮಗಳು’ ಎಂದೂ, ಆ ಧರ್ಮಗಳ ಉದಯದ ಹಿನ್ನೆಲೆಗೆ ಕಾರಣವಾದ ಅಂಶಗಳನ್ನು ವಿವರಿಸುವ ಹೆಚ್ಚುವರಿ ಮಾಹಿತಿಯನ್ನೂ ಅಳವಡಿಸಲಾಗಿದೆ. ‘ರಿಲಿಜಿಯನ್’ ಎಂಬ ಪದದ ಬದಲಾಗಿ ಎಲ್ಲೆಡೆ ‘ಧರ್ಮಗಳು’ ಎಂದು ಬದಲಿಸಲಾಗಿದೆ. ವೀರಶೈವ ಪಂಥದ ಮೌಲ್ಯಗಳ ಬದಲಾಗಿ, ಬಸವಾದಿ ಶರಣರ ಮೌಲ್ಯಗಳು ಎಂದು ಸೇರಿಸಲಾಗಿದೆ. ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳು ಅಧ್ಯಯನದಲ್ಲಿ ಸಾವಿತ್ರಿ ಬಾ ಫುಲೆ, ಯುವ ಬಂಗಾಳಿ ಚಳವಳಿ, ಪೆರಿಯಾರ್ ಅವರ ಮಾಹಿತಿ ನೀಡಲಾಗಿದೆ. 9 ಮತ್ತು 10 ನೇ ತರಗತಿ ಕನ್ನಡ ತೃತೀಯ ಭಾಷಾ ಪಠ್ಯದಲ್ಲಿ ಹಿಂದಿನ ಬಿಜೆಪಿ ಸರ್ಕಾರ ಕೈಬಿಟ್ಟಿದ್ದ ನಾಗೇಶ ಹೆಗಡೆ, ಪಿ.ಲಂಕೇಶ್ ಅವರ ಲೇಖನಗಳನ್ನು ಮರು ಸೇರ್ಪಡೆ ಮಾಡಲಾಗಿದೆ.

ಸೇರ್ಪಡೆ ಮಾಡಿದ ಗದ್ಯ/ಪದ್ಯ

ಚಂದ್ರಶೇಖರ ಕಂಬಾರ	ಸೀಮೆ
ಗಿರೀಶ್ ಕಾರ್ನಾಡ್	ಅಧಿಕಾರ
ದೇವಿದಾಸ	ಚಕ್ರಗ್ರಹಣ
ಮರಿಯಪ್ಪ ಭಟ್ಟ	ನಮ್ಮ ಭಾಷೆ
ಎ.ಎನ್.ಮೂರ್ತಿರಾವ್	ವ್ಯಾಘ್ರಗೀತೆ
ದೇವನೂರ ಮಹಾದೇವ	ಎದೆಗೆಬಿದ್ದ ಅಕ್ಷರ
ಅಕ್ಕಮಹಾದೇವಿ	ವಚನಗಳು
ಹೋಯಿಸಳ	ಸಂತಮ್ಮಣ್ಣ
ರಾಜರತ್ನಂ	ತುತ್ತೂರಿ
ಎಸ್.ಜಿ.ನರಸಿಂಹಾಚಾರ್	ಗೋವಿನ ಚರಿತ್ರೆ
ಜಿ.ಎಸ್.ಶಿವರುದ್ರಪ್ಪ	ಗಂಗೆಯಲ್ಲಿ ದೀಪಮಾಲೆ
ನೇಮಿಚಂದ್ರ	ಏನಾದರೂ ಮಾಡಿ ದೂರಬೇಡಿ

ಸ್ಫೋಟ: ಮಂಗಳೂರು, ಶಿವಮೊಗ್ಗದಲ್ಲಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಎನ್‌ಐಎ ಅಧಿಕಾರಿಗಳು, ಶಂಕಿತನ ಪತ್ತೆಗಾಗಿ ಮಂಗಳೂರು, ಶಿವಮೊಗ್ಗದಲ್ಲಿ ಕೆಲವರನ್ನು ವಿಚಾರಣೆ ನಡೆಸಿರುವುದಾಗಿ ಗೊತ್ತಾಗಿದೆ.

‘ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟಕ್ಕೂ ಕೆಫೆ ಸ್ಫೋಟಕ್ಕೂ ಸಾಮ್ಯತೆ ಇದೆ’ ಎಂಬುದಾಗಿ ಹಲವು ತನಿಖಾ ತಂಡಗಳು ಅಭಿಪ್ರಾಯಪಟ್ಟಿವೆ. ಇದೇ ಕಾರಣಕ್ಕೆ ಕುಕ್ಕರ್ ಬಾಂಬ್ ಸ್ಫೋಟದ ಬಗ್ಗೆ ಎನ್‌ಐಎ ಅಧಿಕಾರಿಗಳು ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ.

2022ರ ನ.19ರಂದು ಮಂಗಳೂರಿನ ನಾಗುರಿಯಲ್ಲಿ ಕುಕ್ಕರ್ ಬಾಂಬ್ ಸ್ಫೋಟದಲ್ಲಿ ಶಂಕಿತ ಶಾರೀಕ್ ತೀವ್ರ ಗಾಯಗೊಂಡಿದ್ದ. ಈತ ಸದ್ಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾನೆ. ಜೈಲಿನಲ್ಲಿ ಶಾರೀಕ್‌ನನ್ನೂ ಎನ್‌ಐಎ ಅಧಿಕಾರಿಗಳು ವಿಚಾರಣೆ ನಡೆಸಿರುವುದಾಗಿ ಮೂಲಗಳು ಹೇಳಿವೆ.

‘ಶಂಕಿತ ಶಾರೀಕ್, ಶಿವಮೊಗ್ಗದಲ್ಲಿ ಬಾಂಬ್ ಸ್ಫೋಟದ ಬಗ್ಗೆ ತರಬೇತಿ ಪಡೆದುಕೊಂಡಿದ್ದ. ಜೊತೆಗೆ, ಸ್ಫೋಟದ ಪರೀಕ್ಷೆಯನ್ನೂ ನಡೆಸಿದ್ದ. ಈತನ ಜೊತೆ ಹಲವರನ್ನು ತರಬೇತಿ ಪಡೆದಿರುವ ಮಾಹಿತಿ ಇದೆ. ಅವರು ಯಾರು ಎಂಬುದನ್ನು ಪತ್ತೆ ಮಾಡಲು ಎನ್‌ಐಎ ಪ್ರಯತ್ನಿಸುತ್ತಿದೆ’ ಎಂದು ತಿಳಿಸಿವೆ.

ದಿ ರಾಮೇಶ್ವರಂ ಕೆಫೆಗೆ ಎನ್‌ಐಎ ಐಜಿಪಿ ಸಂತೋಷ್ ರಸ್ತೋಗಿ ಹಾಗೂ ಅಧಿಕಾರಿಗಳು ಮಂಗಳವಾರ ಭೇಟಿ ನೀಡಿದರು.

ಜಾತಿಗಣತಿ ಪ್ರಶ್ನಿಸಿದ ಅರ್ಜಿಗಳ ವಿಚಾರಣೆ 21ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿರುವ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ಪ್ರಶ್ನಿಸಲಾಗಿರುವ ಅರ್ಜಿಗಳ ಕುರಿತಂತೆ ಸುದೀರ್ಘ ವಿಚಾರಣೆ ಅಗತ್ಯವಿದ್ದು ಸದ್ಯಕ್ಕೆ ಈ ಅರ್ಜಿಗಳ ಮೇಲೆ ಯಾವುದೇ ರೀತಿಯ ಆದೇಶ ನೀಡಲಾಗದು' ಎಂದು ಹೈಕೋರ್ಟ್ ಹೇಳಿದೆ.

ಈ ಕುರಿತಂತೆ ಸಲ್ಲಿಸಲಾದ ಹಲವು ಅರ್ಜಿಗಳು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಟಿ.ಜೆ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠದ ಮುಂದೆ ಮಂಗಳವಾರ ವಿಚಾರಣೆಗೆ ನಿಗದಿಯಾಗಿದ್ದವು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಆಯೋಗದಿಂದ ವರದಿಯನ್ನು 2024ರ ಫೆಬ್ರುವರಿ 29ಕ್ಕೆ ಸ್ವೀಕರಿಸಿದೆ. ಈ ಕುರಿತಂತೆ ಸರ್ಕಾರ ಇನ್ನೂ ನಿರ್ಧಾರಕ್ಕೆ ಕೈಗೊಳ್ಳಬೇಕಿದೆ' ಎಂದು ವಿವರಿಸಿ ಪ್ರಮಾಣ ಪತ್ರ ಸಲ್ಲಿಸಿದರು.

ಇದೇ ವೇಳೆ ಅರ್ಜಿದಾರರ ಪರ ವಕೀಲರು, 'ಅರ್ಜಿಯ ಮುಂದಿನ ವಿಚಾರಣೆಯವರೆಗೂ ವರದಿಗೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ಕ್ರಮಕ್ಕೆ ಮುಂದಾಗದಂತೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅರ್ಜಿಗಳಿಗೆ ಸಂಬಂಧಿಸಿದಂತೆ ಸುಧೀರ್ಘ ವಿಚಾರಣೆಯ ಅಗತ್ಯವಿದೆ' ಎಂಬ ಅಭಿಪ್ರಾಯದೊಂದಿಗೆ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

ಪ್ರಮಾಣ ಪತ್ರದಲ್ಲಿ ಏನಿದೆ?: 'ಜಾತಿಗಣತಿ ವರದಿಯನ್ನು ಅನುಷ್ಠಾನಗೊಳಿಸಲು ನಿರ್ದೇಶಿಸಬೇಕು ಎಂದು ಕೋರಿ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಗೌರವಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಸೇರಿದಂತೆ ಒಟ್ಟು 13 ವಿವಿಧ ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳು ಸಲ್ಲಿಸಿರುವ ಅರ್ಜಿ ಹಾಗೂ ಜಾತಿ ಆಧಾರಿತ ಗಣತಿಗೆ ನೀಡಲಾಗಿರುವ ಸರ್ಕಾರದ ಆದೇಶವನ್ನು ರದ್ದುಗೊಳಿಸಬೇಕು ಎಂದು ಕೋರಲಾಗಿರುವ ಅರ್ಜಿಗಳ ವಿಚಾರಣೆ ಈಗ ನಿರರ್ಥಕ. ಅಂತೆಯೇ, ಜಾತಿ ಗಣತಿಯನ್ನು ಪ್ರಶ್ನಿಸಿ ಬೀದರ್‌ನ ಶಿವರಾಜ ಕಣಶೆಟ್ಟಿ ಹಾಗೂ ಇತರರು ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸುವ ಅಗತ್ಯವಿಲ್ಲ' ಎಂದು ಸರ್ಕಾರ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ವಿವರಿಸಲಾಗಿದೆ.

ನ್ಯಾ.ಸೋಮಶೇಖರ್ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿ ಕೆ. ಸೋಮಶೇಖರ್ ಅವರನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ಕಾರ್ಯಕಾರಿ ಅಧ್ಯಕ್ಷರನ್ನಾಗಿ ಫೆಬ್ರುವರಿ 25ರಿಂದ ಪೂರ್ವಾನ್ವಯ ಆಗುವಂತೆ ನೇಮಕ ಮಾಡಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಂಗಳವಾರ ಆದೇಶ ಹೊರಡಿಸಿದ್ದಾರೆ.



ನ್ಯಾಯಮೂರ್ತಿ ಕೆ.ಸೋಮಶೇಖರ್

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರವರ ಕಚೇರಿ,
ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ
GSTIN:29BLR002252F1DR

ಸಂ.ಕಾನಿಅ/ಲೋಇ/ಯಾವಿ/ಶಾಆ-1/ಇ-ಟೆಂಡರ್ ಪ್ರಕಟಣೆ/2023-24/ 2796, ದಿನಾಂಕ: 02.03.2024

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-2 & 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2023-24 ನೇ ಸಾಲಿನ ಕೆಕೆಆರ್‌ಡಿಬಿ (ಯೋಜನೆ)) ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ವರ್ಕ ಇಂಡೆಂಟ್ ಸಂಖ್ಯೆ: (1)9537, (2)9566, (3)9641, (4)9642 ಮತ್ತು (5)9649 ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. **2) ಕಾಮಗಾರಿ ಅಂದಾಜು ಮೊತ್ತ:** ಕನಿಷ್ಠ ರೂ.50.00 ಲಕ್ಷಗಳ ಹಾಗೂ ಗರಿಷ್ಠ ರೂ.500.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:** 3ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ. **5) ಪ್ರಿ-ಬಿಡ್ ಮೀಟಿಂಗ್ ದಿನಾಂಕ:** 05.03.2024 (11.30 ರ ನಂತರ)(ಕೆಡಬ್ಲ್ಯೂ-4ರ ಕಾಮಗಾರಿಗಳಿಗೆ ಮಾತ್ರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 11.03.2024 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:**12.03.2024 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 13.03.2024 (16.30 ಗಂಟೆ ನಂತರ) **09) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 15.03.2024 (11.30 ಗಂಟೆ ನಂತರ)(ಸಾಧ್ಯವಾದಲ್ಲಿ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ, **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in **ವಿಶೇಷ ಸೂಚನೆ:** ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ವಾ.ಸಾ.ಸಂ.ಇ/ಯಾದಗಿರಿ/390/ಕೆ.ಎಸ್.ಎಂ.ಸಿ.&ಎ/2023–24 ಲೋಕೋಪಯೋಗಿ ಇಲಾಖೆ, ವಿಭಾಗ,ಯಾದಗಿರಿ.



ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91–80–22977666/276/433/216/217 ಟೆಲಿ-ಫ್ಯಾಕ್ಸ್:080–26534477
ಇ–ಮೇಲ್: director@jayadevacardiology.com/pstodirectorsjicr@gmail.com/pe.sjicrblr@gmail.com

ಇ–ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್) ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಅರ್ಹ ಟೆಂಡರುದಾರರಿಂದ ಈ ಕೆಳಕಂಡ ವಿಷಯಗಳಿಗಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಕಾಮಗಾರಿಗಳ ವಿವರ
1	ಎಸ್‌ಜೆಐಸಿಆರ್/2023–24/ ಇಂಡ್0011 ದಿನಾಂಕ:05.03.2024	ವೈದ್ಯಕೀಯ ಜರ್ನಲ್‌ಗಳ ಪೂರೈಕೆ – 2024ರ ಚಂದಾದಾರಿಕೆ (ಜನವರಿ 2024 ರಿಂದ ಡಿಸೆಂಬರ್ 2024)
2	ಎಸ್‌ಜೆಐಸಿಆರ್/2023–24/ ಇಂಡ್0012 ದಿನಾಂಕ:05.03.2024	ಎಸ್‌ಜೆಐಸಿಆರ್‌ನ ವಿವಿಧ ಶಾಖೆಗಳಲ್ಲಿ ಅಗತ್ಯವಿರುವ ವೈದ್ಯಕೀಯ ಸಲಕರಣೆಗಳೊಂದಿಗೆ ಲ್ಯಾಬ್ ನ್ನು ಸ್ಥಾಪಿಸುವುದು.
3	ಎಸ್‌ಜೆಐಸಿಆರ್/2023–24/ ಇಂಡ್0007 ದಿನಾಂಕ:05.03.2024	ಬೆಂಗಳೂರಿನ ಎಸ್‌ಜೆಐಸಿಆರ್‌ನಲ್ಲಿ ಕುಡಿಯುವ ನೀರಿನ ಬ್ಯಾಕ್ಟೀರಿಯಾ ಮತ್ತು ರಾಸಾಯನಿಕ ವಿಶ್ಲೇಷಣೆ ನಡೆಸುವುದು.
4	ಎಸ್‌ಜೆಐಸಿಆರ್/2023–24/ ಇಂಡ್0013 ದಿನಾಂಕ:05.03.2024	ಆರ್‌ಸಿ ಆಧಾರದ ಮೇಲೆ ಇತರ ಅಗತ್ಯ ವಸ್ತುಗಳ ಪೂರೈಕೆ
5	ಎಸ್‌ಜೆಐಸಿಆರ್/2023–24/ ಇಂಡ್0014 ದಿನಾಂಕ:05.03.2024	ವೈದ್ಯಕೀಯ ಮತ್ತು ಸಾಮಾನ್ಯ ಸಲಕರಣೆಗಳ ವಾರ್ಷಿಕ ನಿರ್ವಹಣೆ

ಟೆಂಡರುದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ: 11.03.2024 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **15.04.2024 ರ ಸಂಜೆ 4.00 ಗಂಟೆಯವರೆಗೆ.**

1. ಪ್ರಿ–ಬಿಡ್ ಮೀಟಿಂಗ್ ದಿನಾಂಕ : **01.04.2024 ರ ಬೆಳಿಗ್ಗೆ 11:30 ಗಂಟೆಗೆ.**
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **16.04.2024 ರ ಸಂಜೆ 4:00 ಗಂಟೆಗೆ.**
3. **ಇ.ಎಂ.ಡಿ. :** ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತೆ.
4. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ / ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಆಸಕ್ತಿ ವ್ಯಕ್ತಪಡಿಸುವಿಕೆ

ಬೆವಿಕಂ, **"3 ವರ್ಷಗಳ ಅವಧಿಗೆ ಪಾವತಿಸುವ ವಿಧಾನ (Payment Gateway) & ಬೆವಿಕಂ ಮಿತ್ರಾ ಆಪ್ ಮೂಲಕ ಬೆವಿಕಂಗೆ ಆನ್‌ಲೈನ್ ಪಾವತಿ ಸೇವೆಗಳನ್ನು ಒದಗಿಸುವ ಸಲುವಾಗಿ ಬಿಡ್ಡರ್‌ನ ಆಯ್ಕೆಗಾಗಿ"** ಎಂಡಿಆರ್ ದರಗಳ ಅನ್ವೇಷಣೆಗೆ ಆಸಕ್ತಿ ವ್ಯಕ್ತಪಡಿಸಲು (ಇಓಐ) ಆಹ್ವಾನಿಸಿದೆ. ಇಓಐ ದಾಖಲಾತಿಗಳನ್ನು ಬೆವಿಕಂ ವೆಬ್‌ಸೈಟ್‌ನಲ್ಲಿ ಪ್ರಕಟಗೊಳ್ಳುವ ವೇಳಾ ಪಟ್ಟಿ: ಪ್ರಕಟಿಸುವ ದಿನಾಂಕ: 06/03/2024. ಆಸಕ್ತಿ ವ್ಯಕ್ತಪಡಿಸುವ (ಇಓಐ) ದಾಖಲಾತಿಗಳನ್ನು ಬೆವಿಕಂ ವೆಬ್‌ಸೈಟ್ **https://bescom.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಐಸಿಟಿ & ಎಂಐಎಸ್), 5ನೇ ಮಹಡಿ, ಬೆವಿಕಂ, ಬೆಳಕು ಭವನ, ಕೆ.ಆರ್.ವೃತ್ತ, ಬೆಂಗಳೂರು – 560001.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
Govt.of Karnataka
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆ, ಧಾರವಾಡ–580 001
OFFICE OF THE DEPUTY COMMISSIONER, DHARWAD DISTRICT, DHARWAD-580 001
ದೂರವಾಣಿ: 0836–2441609, 2233880, 2233888
E-mail: dudc_dwd@yahoo.co.in

ಸಂಖ್ಯೆ:DUDC:DWD:EST:CR: :2023-24 ದಿನಾಂಕ: 05–03–2024

ಅಲ್ಪಾವಧಿ ಟೆಂಡರ ವಿಸ್ತರಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು–1999 ಹಾಗೂ ನಿಯಮಾವಳಿ–2000 ರಂತೆ ನೊಂದಾಯಿಸಿದ ಅಧಿಕೃತ ವಾಹನ ಸಂಸ್ಥೆ/ಏಜನ್ಸಿಯವರಿಂದ ಇ–ಪ್ರೊಕ್ಯೂರಮೆಂಟನಲ್ಲಿ ರಜಿಸ್ಟ್ರೇಶನ್ ಮಾಡಿಸಿದ ವಾಹನ ಸಂಸ್ಥೆ/ಏಜನ್ಸಿಯವರಿಂದ ಟೆಂಡರುಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ಟೆಂಡರುಗಳನ್ನು ಆಹ್ವಾನಿಸಲಾಗಿತ್ತು, ಟೆಂಡರ Indent No: DMA/2023-24/SE2719, Indent No: DMA/2023-24/SE2721, Indent No: DMA/2023-24/SE2725

ಟೆಂಡರ್ ಹಾಕಲು ಇನ್ನು ಹೆಚ್ಚಿನ ಅವಧಿ ಬೇಕಾಗಿದ್ದರಿಂದ ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳನ್ನು ಇ–ಪ್ರೊಕ್ಯೂರಮೆಂಟ ಪ್ಲಾಟಫಾರ್ಮ https://kppp.karnataka.gov.in/ನಲ್ಲಿ ಟೆಂಡರ್ ಅವಧಿಯು ವಿಸ್ತರಿಸಲಾಗಿದೆ. ಹಾಗೂ ಕಛೇರಿ ಸಮಯದಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಧಾರವಾಡ.
ವಾ.ಸಾ.ಇ./ಧಾರವಾಡ/904/ದೇಶಪಾಂಡೆಪಬ್ಲಿಸಿಟಿ/2023–24

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ನಂ.ಗ್ರಾಕುನೀ& ನೈವಿ/ ಹಾವೇರಿ/ಜಿಬಿ–1/ಟೆಂಡರ್:32/2023–24/1885 ದಿನಾಂಕ: 02.03.2024

ಅಲ್ಪಾವಧಿ ಟೆಂಡರ ಪ್ರಕಟಣೆ

(E-GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

JJM ಯೋಜನೆಯಡಿ ಹಾನಗಲ್ಲ ತಾಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.

1) Tender queries/ Clarifications ಗೆ ಕೊನೆಯ ದಿನ ಮತ್ತು ಸಮಯ : ದಿನಾಂಕ:05.03.2024ರ 17.00 ಗಂಟೆಯವರೆಗೆ
2) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ : ದಿನಾಂಕ:11.03.2024ರ 17.00 ಗಂಟೆಯವರೆಗೆ
3) ಇ–ಪ್ರಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ:12.03.2024ರ 17.00 ಗಂಟೆಯವರೆಗೆ
4) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ ದಿನಾಂಕ:14.03.2024ರ 10.00 ಗಂಟೆಯವರೆಗೆ
5) ಪ್ರೀ ಬಿಡ್ ಮೀಟಿಂಗ್ ಸ್ಥಳ : C.E.R.D.W & S.D Bangalore ದಿನಾಂಕ: 06.03.2024ರ 11.00 ಗಂಟೆಯವರೆಗೆ

ಇಂಡೆಂಟ್ ನಂ. (1) Augmentation of MVS to Kusanur and other 8 villages in Hangal taluk of Haveri District RWSSD/2023-24/WS/WORK_ INDENT7699) ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E GOK ಇ–ಪ್ರಕ್ಯೂರಮೆಂಟ್ ಪ್ಲಾಟ್‌ಫಾರಂನಲ್ಲಿ https://kppp. karnataka. gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾವೇರಿ.
ವಾ.ಸಾ.ಇ./ಹಾವೇರಿ/508/ದೇಶಪಾಂಡೆಪಬ್ಲಿಸಿಟಿ/2023–24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಉಡುಪಿ
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಛೇರಿ,
ರಜತಾದ್ರಿ, ಬಿ ಬ್ಲಾಕ್, 2 ನೇ ಮಹಡಿ, ಕೊಠಡಿ ಸಂಖ್ಯೆ 304, ಮಣಿಪಾಲ, ಉಡುಪಿ ಜಿಲ್ಲೆ.
ದೂರವಾಣಿ: 0820–2574881, ಫ್ಯಾಕ್ಸ್ : 0820 – 2574881,
ಇ–ಮೇಲ್: dobcmudupi@gmail.com
ಸಂಖ್ಯೆ:ಹಿಂವಕಇ:ವಿನಿ:ಸಿಆರ್ 07:2022–23 ದಿನಾಂಕ: 04–03–2024.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25 ಮತ್ತು 2025–26 ಸಾಲಿನಲ್ಲಿ ಉಡುಪಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ನೊಂದಾಯಿತ ಟೆಂಡರ್‌ದಾರರು **ದಿನಾಂಕ: 04–03–2024 ರಿಂದ 03–05–2024 ರವರೆಗೆ** ಟೆಂಡರ್‌ಗಳ ನಿಗದಿತ ದಸ್ತಾವೇಜುಗಳನ್ನು: **https://kppp.karnataka.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿ, ಅವಶ್ಯಕ ಮಾಹಿತಿಯೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ದಾರರು ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿ, ರಜತಾದ್ರಿ ಮಣಿಪಾಲ ಉಡುಪಿ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– (ಹಾಕಪ್ಪ.ಆರ್.ಲಮಾಣಿ. ಕ.ಸಾ.ಸೆ)
ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ.
ವಾಸಾಇ/ಸನಿಉ/ಕೆಎಸ್‌ಎಂಸಿಎ/847/ 23–24 ದಿ: 05.03.2024

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483636/38/39
ಸಂಖ್ಯೆ: ಕರಾಪಾನಿನಿ/ಎಫ್‌ಎ/ನಿಶ್ಚಿತ ಠೇವಣಿ/4/2023–24 ದಿನಾಂಕ: 06.03.2024

ಇ–ಆಕ್ಷನ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು ರೂ. 125.00 ಕೋಟಿಗಳನ್ನು (ಹಿಂತೆಗೆಯಲಾಗದ) ಪ್ರಾದೇಶಿಕ ಗ್ರಾಮಿಣ ಬ್ಯಾಂಕ್‌ಗಳು ಸೇರಿದಂತೆ ಸಾರ್ವಜನಿಕ ವಲಯದ ಬ್ಯಾಂಕಗಳಲ್ಲಿ ಮತ್ತು ಖಾಸಗಿ ವಲಯ ಬ್ಯಾಂಕ್ ಗಳಲ್ಲಿ 60:40 ರ ಆನುಪಾತದಂತೆ 1 ವರ್ಷದ ಅವಧಿಗೆ ನಿಶ್ಚಿತ ಠೇವಣಿಗಾಗಿ ತೊಡಗಿಸಲು ಉದ್ದೇಶಿಸಲಾಗಿದ್ದು, ಠೇವಣಿ ಸ್ವೀಕರಿಸಲು ಈ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್ ಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಇ– ಆಕ್ಷನ್ ಮುಖಾಂತರ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಗಳನ್ನು **https://kppp.karnataka.gov.in/#/portal/portal-home** ಮತ್ತು **www.ksbcl.com** ವೆಬ್‌ಸೈಟ್ ನಲ್ಲಿ **ದಿನಾಂಕ: 06.03.2024** ರಿಂದ ಪಡೆಯಬಹುದಾಗಿದೆ

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)
ವಾಸಾಸಂಇ/ವಾಪ್ರ/ಜಿಎ/4078/2023–24

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಗ್ರಾ.ಕು.ನೀ.&ನೈ. ವಿಭಾಗ, ಪಂಚಾಯತ್ ಭವನ, 3ನೇ ಮಹಡಿ, ರಾಮನಗರ ವಿಭಾಗ, ರಾಮನಗರ.
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 17/ಕಾ.ಅ./ಗ್ರಾ.ಕು.ನೀ.&ನೈ.ವಿ./ರಾ./ ಟೆಂಡರ್/ಸ.ಇಂ./ಯು.ಜಿ.ಡಿ./2260/2023–24 ದಿನಾಂಕ : 05–03–2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ರಾಮನಗರ ತಾಲ್ಲೂಕಿನ ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ವರ್ಗ–01 ರ ಯೋಜನೆಯಡಿ ಯು.ಜಿ.ಡಿ. ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 133.74 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 2.00 ಲಕ್ಷಗಳು. 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 62.16 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 1.24 ಲಕ್ಷಗಳು. 3) ಕಾಲಾವಧಿ : 06 ತಿಂಗಳು. 4) ಟೆಂಡರ್‌ನ ಪೂರ್ವಭಾವಿ ಸಭೆ ದಿನಾಂಕ : 07–03–2024 ರ ಬೆಳಿಗ್ಗೆ 11.00 ಗಂಟೆಗೆ, ಸ್ಥಳ : ಕಾರ್ಯಪಾಲಕ ಅಭಿಯಂತರರ ಕಛೇರಿ, 3ನೇ ಮಹಡಿ, ಪಂಚಾಯತ್ ಭವನ, ರಾಮನಗರ, 5) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ : 11–03–2024 ರ ಸಂಜೆ 5.00 ಗಂಟೆಯವರೆಗೆ. 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 12–03–2024 ರ ಬೆಳಿಗ್ಗೆ 11.00 ಗಂಟೆಯ ನಂತರ. 7) ಆರ್ಥಿಕ ಬಿಡ್ ತೆರೆಯುವ ದಿನಾಂಕ : 14–03–2024 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. **ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ ವೆಬ್‌ಸೈಟ್ : https://kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/562/ಮಣಿಪಾಲ್/2023–24

JAWAHAR NAVODAYA VIDYALAYA,

Doddaballapur, Bengaluru Rural Dist.,
Date: 06-03-2024

TENDER NOTIFICATION

Sealed Tenders are invited from the reputed firms/manufacturers/suppliers / distributors/Services for the supply of items for the year 2024-25.

1. RICE 2. GROCERIES 3. VEGETABLES & FRUITS, 4. BAKERY ITEMS, 5. EGG AND CHICKEN, 6. BEDDING ITEMS(BED, BLANKET, BED SHEET, TOWEL, PILLOW COVER), 7. BELT, TIE, T-SHIRT, TRACKSUIT, SWEATERS, 8. WHITE & BLACK SCHOOL SHOES, HAWAI SLIIPERS, SOCKS, 09. READYMADE UNIFORM, 10. SCHOOL BAG, 11. UNIFORM WASHING & PRESSING, 12. HAIR CUTTING, 13. TOILETORY ITEMS, 14. LABOUR OUTSOURCING, 15. VEHICLE ON HIRE NEED BASIS / VEHICLE ON CONTRACT,16. M&R ITEMS – (Electrical and Plumbing/ Painting/Cement/Tiles/Granite.) 17. SALE OF CONDEMNATION ITEMS/SCRAP ITEMS (LAB EQUIPMENTS, COMPUTERS, SPORTS ITEMS, M&R ITEMS), 18. SALE OF CROPS(TAMARIND, MANGO & JACK FRUIT, 19. SALE OF OLD MILK COVERS/OLD OIL TINS/ MESS WASTE & OLD NEWS PAPERS, OUT DATED TEXT BOOKS AND WASTE IRON MATERIALS etc.

The Tender documents/details may be obtained from the Office of the Principal, Jawahar Navodaya Vidyalaya, Doddaballapura between 9.00 A.M to 4.00 P.M on all working days from 06-03-2024 by paying an amount of Rs. 200/- (Two hundred) by Cash or Digital payment to Vidyalaya SB A/c. No.10532695378, SBI, Bashettihalli Branch which is non refundable and the tender schedule can be downloaded from the Vidyalaya website https://www.navodaya.gov.in/nvs/nvs-school/BANGALORERURAL/en/home. While submitting the Tender form, the payment slip of Rs. 200/- has to be enclosed. The last date for sale of tender forms is 26-03-2024 by 1.00 PM and the submission of sealed tender is 27-03-2024 by 4.00 PM by BYHAND/ SPEED/REGISTERED POST/COURIER. The sealed tenders will be opened on 28-03-2024 at 11.00 am in the Office of the Principal, Jawahar Navodaya Vidyalaya, Doddaballapura, Bangalore Rural District. Contact number: 8116438494 (Principal)/ 9164245308(OS).

Sd/- PRINCIPAL

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಚೇರಿ, ಪೂನಾ ಬೆಂಗಳೂರು ರಸ್ತೆ, ನವನಗರ, ಹುಬ್ಬಳ್ಳಿ
Telephone No: 0836-2222535 Fax No. : 0836-2324307
Website : www.hescom.karnataka.gov.in E-mail ID: seeit@hescom.co.in, seeit.hescom@gmail.com
CIN: U31401KA2002SGC030437
No: HESCOM/SEE-IT&MT/EEIT1/2023-24/106 Dated: 05-03-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ವಿ), ಐಟಿ&ಎಮ್‌ಟಿ, ನಿಗಮ ಕಚೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರು ಈ ಕೆಳಗಿನ ಕೆಲಸಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ 2 ಭಾಗಗಳಲ್ಲಿ (ಭಾಗ–1 ಟೆಕ್ನೋ ಕಮರ್ಷಿಯಲ್ ಬಿಡ್ ಮತ್ತು (ಭಾಗ–2 ಪ್ರೈಜ್ ಬಿಡ್) ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಬಿಡ್ ಇಂಡೆಂಟ್ ಸಂಖ್ಯೆ	ಟೆಂಡರ್ ವಿವರಗಳು
1	HESCOM/2023-24 /EL/WORK_INDENT389	ಹೆಸ್ಕಾಂನ ಹುಬ್ಬಳ್ಳಿ ವಲಯದಲ್ಲಿ ಅಸ್ತಿತ್ವದಲ್ಲಿರುವ DTC ಮೀಟರಿಂಗ್ ಅನ್ನು ಥ್ರೆಡ್ ಥ್ರೂ ಮೀಟರ್ ಮೂಲಕ AMR/AMI ಪರಿಹಾರದೊಂದಿಗೆ 6 ವರ್ಷಗಳ ಬೆಂಬಲ ಮತ್ತು ನಿರ್ವಹಣೆ ದೊಂದಿಗೆ ನವೀಕರಿಸುವುದು.
2	HESCOM/2023-24/ EL/WORK_INDENT388	ಹೆಸ್ಕಾಂನ ಬೆಳಗಾವಿ ವಲಯದಲ್ಲಿ ಅಸ್ತಿತ್ವದಲ್ಲಿರುವ DTC ಮೀಟರಿಂಗ್ ಅನ್ನು ಥ್ರೆಡ್ ಥ್ರೂ ಮೀಟರ್ ಮೂಲಕ AMR/AMI ಪರಿಹಾರದೊಂದಿಗೆ 6 ವರ್ಷಗಳ ಬೆಂಬಲ ಮತ್ತು ನಿರ್ವಹಣೆ ದೊಂದಿಗೆ ನವೀಕರಿಸುವುದು.

ಸದರಿ ಟೆಂಡರದ ಪೂರ್ಣ ವಿವರಗಳನ್ನು ವೆಬ್‌ಸೈಟ್, https://kppp.karnataka.gov.in/ ರಲ್ಲಿ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನೀಯರರು (ವಿ),
(ಐಟಿ & ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ.ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560029.
ಫೋನ್: 080– 25536625, 25536789, 26096834, 26096888
ಸಂಖ್ಯೆ: ಕಹಾಮ/ಅಭಿ/ಎನ್‌ಪಿಎಫ್‌ಪಿ–ಯೋಜನೆ/ರಾಜಾನುಕುಂಟೆ/ಸಿವಿಲ್‌ಕೆಲಸಗಳು/01832/2023–24 ದಿನಾಂಕ: 04.03.2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ತಿದ್ದುಪಡಿ ಟೆಂಡರ್ ಪ್ರಕಟಣೆ

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಹಾಮ/ಅಭಿ/ಎನ್.ಪಿ.ಎಫ್.ಪಿ–ರಾಜಾನುಕುಂಟೆ/ಸಿವಿಲ್‌ಕೆಲಸಗಳು/01832/2023–24 ದಿನಾಂಕ: 03.02.2024 ರಂತೆ **"ರಾಜಾನುಕುಂಟೆ ಪಶು ಆಹಾರ ಘಟಕದ ಸರಹದ್ದಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ನೂತನ 1000–1200 ಮೆ.ಟನ್ ಸಾಮರ್ಥ್ಯದ ಪೌಚ್ ಫಿಲಂ ಘಟಕಕ್ಕೆ ಸಂಬಂಧಿಸಿದ ಕಟ್ಟಡಗಳ ನಿರ್ಮಾಣ ಮತ್ತಿತರೆ ಸಂಬಂಧಿಸಿದ ಸಿವಿಲ್ ಕೆಲಸಗಳು – ರಾಜಾನುಕುಂಟೆ ಬೆಂಗಳೂರು"** ಸಂಬಂಧ, ಹೊರಡಿಸಲಾಗಿದ್ದ ಟೆಂಡರ್ ಪ್ರಕಟಣೆಯಂತೆ ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಟೆಂಡರ್‌ನ್ನು ಸಲ್ಲಿಸುವ ಅವಧಿಯನ್ನು ವಿಸ್ತರಿಸಿ, ಮಾರ್ಪಾಡು ಮಾಡಿ ಈ ಕೆಳಕಂಡಂತೆ ತಿದ್ದುಪಡಿ ಟೆಂಡರ್ ಪ್ರಕಟಣೆಯನ್ನು ನೀಡಲಾಗಿದೆ.

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 06.03.2024 ರಿಂದ 19.04.2024 ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19.04.2024 ರ ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Part - 1) ತೆರೆಯುವ ದಿನಾಂಕ: 22.04.2024 ರಂದು ಬೆಳಿಗ್ಗೆ 11:30 ಗಂಟೆಗೆ.

ಟೆಂಡರ್‌ನ ಇನ್ನಿತರೆ ವಿವರಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ, ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ / ಬದಲಾವಣೆಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

(Help desk e-mail: support@eprochelpdesk.com and helpline No's +91-8046010000, +91-8068948777, 080-22230960, 080-22234115.)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿ–1)

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ , ಬೆಂಗಳೂರು – 560 009
ಸಂಖ್ಯೆ.: KRIDL/WKS/TND/KAPPEC/AEF/2023-24 ದಿನಾಂಕ: 05.03.2024

ಸಲಹೆಗಾರರ ಸೇವೆಗಾಗಿ ಅಲ್ಪಾವಧಿಯ ಟೆಂಡರ್ ಪ್ರಕಟಣೆ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಈ ಕೆಳಗಿನ ಕಾರ್ಯ ಯೋಜನೆಗಳೊಂದಿಗೆ ಸಲಹಾ ಸೇವೆಗಳನ್ನು ಒದಗಿಸಲು ಇ-ಟೆಂಡರ್ ಅನ್ನು ಆಹ್ವಾನಿಸುತ್ತದೆ. **ಕೆಪೆಕ್ (ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ) ಸಂಸ್ಥೆಗೆ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ಸಂರಕ್ಷಿಸಲು ಕರ್ನಾಟಕದ ವಿಜಯಪುರ ಅಲಿಯಾಬಾದ್ ಕೈಗಾರಿಕಾ ಪ್ರದೇಶದಲ್ಲಿ ಪ್ರಸ್ತುತ ಇರುವ ಗೋಡೌನ್ ಅನ್ನು ಕೋಲ್ಡ್ ಸ್ಟೋರೇಜ್ ಆಗಿ ಪರಿವರ್ತಿಸುವ ಕೆಲಸಕ್ಕಾಗಿ ಸಲಹೆಗಾರರ ಸೇವೆಗಳು, ಯೋಜನಾ ನಿರ್ವಹಣಾ ಸೇವೆಗಳು ಮತ್ತು ಮೂರನೇ ವ್ಯಕ್ತಿಯ ತಪಾಸಣೆ/ಪರಿಶೀಲನೆ ಸೇವೆಗಳನ್ನು ಒದಗಿಸುವುದು.**

ಸಲಹಾ ಸಂಸ್ಥೆಯು ಕಂಪನಿಗಳ ರಿಜಿಸ್ಟ್ರಾರ್‌ನಲ್ಲಿ ನೋಂದಾಯಿಸಲ್ಪಟ್ಟಿರಬೇಕು. ಸಲಹೆಗಾರರಾಗಿ ಇದೇ ರೀತಿಯ ಕಾರ್ಯ ಯೋಜನೆಗಳನ್ನು ಕನಿಷ್ಠ 5 ವರ್ಷಗಳ ಕಾಲ ನಿರ್ವಹಿಸಿದ ಅನುಭವವನ್ನು ಹೊಂದಿರಬೇಕು. ಸಲಹೆಗಾರ/ಸಲಹಾ ಸಂಸ್ಥೆಯು ಕಳೆದ 5 ಹಣಕಾಸು ವರ್ಷಗಳಲ್ಲಿ (ಹಣಕಾಸು ವರ್ಷ 2018–19 ರಿಂದ 2022–23 ವರೆಗೆ) ಸರಾಸರಿ ವಾರ್ಷಿಕ ವಹಿವಾಟು ರೂ.50.00 ಲಕ್ಷಗಳಿಗಿಂತ ಕಡಿಮೆಯಿಲ್ಲದಂತೆ ಹೊಂದಿರಬೇಕು. ಸಲಹೆಗಾರ/ಸಲಹಾ ಸಂಸ್ಥೆಯು ಕಳೆದ ಐದು ವರ್ಷಗಳಲ್ಲಿ **ರೂ.500.00 ಲಕ್ಷ** ಅಥವಾ ಅಧಿಕ ಯೋಜನಾ ವೆಚ್ಚದ ಸರ್ಕಾರಿ/ ಅರೆ–ಸರ್ಕಾರಿ/ ಸಾರ್ವಜನಿಕ ವಲಯದ ಘಟಕಗಳು /ಪ್ರಯೋಗಾಲಯಗಳು/ ಖಾಸಗಿ ಸಂಸ್ಥೆಗಳ ಕನಿಷ್ಠ ಒಂದು ರೀತಿಯ ಸಲಹಾ ಕಾರ್ಯಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರಬೇಕು. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತ ಸಂಸ್ಥೆಗಳು ಇ–ಆಡಳಿತ ಸಚಿವಾಲಯದ ಹೊಸ ವೆಬ್‌ಸೈಟ್: **www.kppp.karnataka.gov.in** ಮೂಲಕ ವೀಕ್ಷಿಸಬಹುದು ಮತ್ತು ಡೌನ್‌ಲೋಡ್ ಮಾಡಬಹುದು ಹಾಗೂ ಅರ್ಜಿ ಸಲ್ಲಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ಮೂಲಕ ಸೂಚಿತ ದಿನಾಂಕ ಮತ್ತು ಸಮಯದೊಳಗೆ ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ (ಅಂತರ್ಜಾಲದ ಮೂಲಕ ಆನ್‌ಲೈನ್) ಸಲ್ಲಿಸಬೇಕು. ಅಧಿಕ ಮಾಹಿತಿಗಾಗಿ ಇ–ಪ್ರೊಕ್ ಸಹಾಯವಾಣಿ: +91–8046010000 / +91–8068948777 ಅನ್ನು ಸಂಪರ್ಕಿಸಬಹುದು.

- ಸಲಹೆಗಾರ/ಸಲಹಾ ಸಂಸ್ಥೆಯು **ರೂ.50,000/–ಗಳ** ಇ.ಎಂ.ಡಿಯನ್ನು ಸಲ್ಲಿಸಬೇಕು.
- ವಿಚಾರಣೆಗಾಗಿ ಕೊನೆಯ ದಿನಾಂಕ ಮತ್ತು ಸಮಯ : **21.03.2024 ರಂದು 14.00 ಗಂಟೆ ವರೆಗೆ**
- ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **21.03.2024 ರಂದು 16.00 ಗಂಟೆ ವರೆಗೆ**
- ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **26.03.2024 ರಂದು 16.00 ಗಂಟೆಗೆ**
- ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **27.03.2024 ರಂದು 16.00 ಗಂಟೆಗೆ .**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಮುಖ್ಯ ಇಂಜಿನಿಯರ್ (ಬೆಂಗಳೂರು), ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09.
ದೂರವಾಣಿ: 080–28015604 / +91 82176 33267 / +91 99729 59899
ಇಮೇಲ್: tenderworks@kridl.net
ಸಹಿ/– ಮುಖ್ಯ ಇಂಜಿನಿಯರ್, ಕೆಆರ್‌ಐಡಿಎಲ್, (ಬೆಂಗಳೂರು)

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ

ಕಾರ್ಯನಿರ್ವಾಹಕ ಇಂಜಿನೀಯರರವರ ಕಾರ್ಯಾಲಯ,
ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ವಿಭಾಗ ನಂ. 01, ಬಾಗಲಕೋಟೆ – 587102.
ದೂರವಾಣಿ : 08354–295372, ಇ–ಮೇಲ್ : btdadn1@gmail.com
ಸಂಖ್ಯೆ : ಕಾ.ನಿ.ಇಂ./ಬಾ.ಪ.ಅ.ಪ್ರಾ./ವಿ–1/ಪಿಬಿ–02/ಟೆ.ಪ್ರ.ಸಂಖ್ಯೆ–05/ 2023–24/3139 ದಿನಾಂಕ : 05–03–2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ - 05

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಸಮಾಲೋಚಕರ ಸೇವೆಯನ್ನು ಒದಗಿಸುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ **ಇಂಡೆಂಟ್ ನಂ. : SE0003/02 ನೇ ಕರೆ ಮತ್ತು SE0004/02 ನೇ ಕರೆ ಕಾಮಗಾರಿಗಳಿಗೆ** ದ್ವಿಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : www.kppp.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ : 15–03–2024 ರ ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ : 16–03–2024 ರ ಸಂಜೆ 5.01 ಘಂಟೆಗೆ (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 18–03–2024 ರ ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ.) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ : 08354–295372 ಸಂಪರ್ಕಿಸಬಹುದಾಗಿದೆ.

ಸೂಚನೆಗಳು : 1) ಟೆಂಡರ್‌ಗೆ ಸಂಬಂಧಿಸಿದಂತೆ "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವ ದಿನಾಂಕಗಳು ಅಂತಿಮವಾಗಿರುವುದು. 2) ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳಲ್ಲಿ ಬದಲಾವಣೆ ಕುರಿತು ಮತ್ತು ಇನ್ನಿತರೆ ತಿದ್ದುಪಡೆಗಳು / ಮಾರ್ಪಾಡುಗಳನ್ನು "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಮತ್ತು ಸದರಿ ವಿಷಯ ಕುರಿತು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ. 01,
ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟ/429/ಮಣಿಪಾಲ್/2023–24

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01
ದೂರವಾಣಿ: 080–22133370, e-Mail: eepwdbngdn@yahoo.com
ಸಂಖ್ಯೆ: 29/2023–24 ದಿನಾಂಕ: 04.03.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ಆನೇಕಲ್ ಉಪವಿಭಾಗಕ್ಕೆ** ಸಂಬಂಧಿಸಿದಂತೆ 02 ಸಂಖ್ಯೆಯ (ರೂ. 495.00 **ಲಕ್ಷಗಳು** & ರೂ. 500.00 ಲಕ್ಷಗಳು) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. **ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ (https://kppp.karnataka.gov.in) ಸೂಚಿಸಲಾಗಿದೆ.**

(1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಕೆ.ಪಿ.ಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ: **04.03.2024** ರಿಂದ (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **12.03.2024** ಸಂಜೆ **4.00** ಗಂಟೆಯುವರೆಗೆ. (3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ **13.03.2024** ಸಂಜೆ **4.30** ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ–ಸಿ.ಪಿ/4076/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬ್ಯಾಟರಾಯನಪುರ ವಿಭಾಗ, ಸಂಖ್ಯೆ 2152/20, ಡಿಫೆನ್ಸ್ ಕಾಲೋನಿ, ಬೆಂಗಳೂರು ಜಲಮಂಡಳಿ ಟ್ಯಾಂಕ್ ರಸ್ತೆ, ಸಹಕಾರನಗರ, ಬೃ.ಬೆಂ.ಮ.ಪಾಲಿಕೆ ಕಚೇರಿ, ಬ್ಯಾಟರಾಯನಪುರ, ಬೆಂಗಳೂರು – 560 092
ಸಂಖ್ಯೆ: ಕಾಪಾಅ/ಬ್ಯಾಪು/ಬೃಬೆಂಮಪಾ/ಕೆಪಿಪಿಪಿ/22/2023–24 ದಿನಾಂಕ: 04.03.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ದ್ವಿಲಕೋಟೆ ಟೆಂಡರ್)


(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ ಸ್ಟ್ಯಾಂಡರ್ಡ್ ಬಿಡ್ ದಾಖಲೆಗಳಂತೆ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ
1	ವಾರ್ಡ್ ಸಂಖ್ಯೆ–08 ಕೊಡಿಗೇಹಳ್ಳಿ ಉಪ ವಿಭಾಗದಲ್ಲಿ ಜಂಟಿ ಆಯಕ್ತರವರ ಕಚೇರಿಯ 1ನೇ ಮಹಡಿ ಬ್ಯಾಂಕ್ ಭಾಗದ ಕಟ್ಟಡಕ್ಕೆ ನವೀಕರಣ ಮಾಡುವುದು (ಸಾಮಾನ್ಯರಿಗೆ) ಕಾಮಗಾರಿಯ ಅಂದಾಜು ಮೊತ್ತ: ₹.24.90 ಲಕ್ಷಗಳು ಇಎಂಡಿ ಮೊತ್ತ: ₹.49800/–
2	ವಾರ್ಡ್ ಸಂಖ್ಯೆ–10 ಬ್ಯಾಟರಾಯನಪುರದ ಎಪಿಸಿ ಬಡಾವಣೆ, ಲೇಕ್ ಶೋರ್ ಗಾರ್ಡನ್, ಕೆನರಾ ಬ್ಯಾಂಕ್ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು (ಸಾಮಾನ್ಯರಿಗೆ) ಕಾಮಗಾರಿಯ ಅಂದಾಜು ಮೊತ್ತ: ₹.200.00 ಲಕ್ಷಗಳು ಇಎಂಡಿ ಮೊತ್ತ: ₹.300000/–
3	ವಾರ್ಡ್ ಸಂಖ್ಯೆ–11 ಕೊಡಿಗೇಹಳ್ಳಿಯ ಮಾರುತಿನಗರ, ಭದ್ರಪ್ಪ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆ ಮಾಡುವುದು (2ನೇ ಕರೆ) (ಪ.ಪಂಗಡ) ಕಾಮಗಾರಿಯ ಅಂದಾಜು ಮೊತ್ತ: ₹.99.00 ಲಕ್ಷಗಳು ಇಎಂಡಿ ಮೊತ್ತ: ₹.99000/–
4	ವಾರ್ಡ್ ಸಂಖ್ಯೆ–11 ಕೊಡಿಗೇಹಳ್ಳಿಯ ಬಾಲಾಜಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು (ಸಾಮಾನ್ಯರಿಗೆ) ಕಾಮಗಾರಿಯ ಅಂದಾಜು ಮೊತ್ತ: ₹.100.00 ಲಕ್ಷಗಳು ಇಎಂಡಿ ಮೊತ್ತ: ₹.200000/–
5	ವಾರ್ಡ್ ಸಂಖ್ಯೆ–13 ವಿದ್ಯಾರಣ್ಯಪುರದ ಬಸವಸಮಿತಿ, ಜ್ಞಾನೇಶ್ವರಿ ಬಡಾವಣೆ, ಗುರುದರ್ಶನ್ ಬಡಾವಣೆ, ಸಪ್ತಗಿರಿ ಬಡಾವಣೆ, ವೆಂಕಟಸ್ವಾಮಪ್ಪ ಬಡಾವಣೆ, ಸೋಮಣ್ಣ ಗಾರ್ಡನ್, ಬಿಇಎಲ್ ಬಡಾವಣೆ, ಹೆಚ್‌ಎಂಟಿ ಬಡಾವಣೆ, ಬ್ಲೂಮ್ ಫೀಲ್ಡ್ ಗಾರ್ಡನ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು (ಸಾಮಾನ್ಯರಿಗೆ) ಕಾಮಗಾರಿಯ ಅಂದಾಜು ಮೊತ್ತ: ₹.200.00 ಲಕ್ಷಗಳು ಇಎಂಡಿ ಮೊತ್ತ: ₹.300000/–

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **14.03.2024**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **18.03.2024**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **20.03.2024**ರ ಬೆಳಿಗ್ಗೆ **11:00** ಗಂಟೆಗೆ ಸಾಧ್ಯವಾದಲ್ಲಿ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ತೆರೆಯಲಾಗುವುದು. (4) (ದ್ವಿಲಕೋಟೆ ಪದ್ಧತಿಗೆ) ಆರ್ಥಿಕ ಬಿಡ್‌ಗಳನ್ನು ದಿನಾಂಕ **22.03.2024**ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಬ್ಯಾಟರಾಯನಪುರ ವಿಭಾಗ



ಸುಭಾಷಿತ

ಕಲಿಕೆಯನ್ನು ನಿಲ್ಲಿಸುವ ವ್ಯಕ್ತಿಗೆ ವಯಸ್ಸು 20 ಆಗಿರಲೀ ಅಥವಾ 80 ಆಗಿರಲೀ ಆತ ವೃದ್ಧನಾದಂತೆಯೇ ಸರಿ. ಕಲಿಯುತ್ತಲೇ ಇರುವವರು ಚಿಕ್ಕವರಾಗಿಯೇ ಉಳಿಯುತ್ತಾರೆ. ಮನಸ್ಸಿಗೆ ವಯಸ್ಸಾಗದಂತೆ ನೋಡಿಕೊಳ್ಳಬೇಕು.

–ಹೆನ್ರಿ ಫೋರ್ಡ್

ತಪ್ಪನ್ನು ಸರಿಪಡಿಸಿದ ಸುಪ್ರೀಂ ಕೋರ್ಟ್ ನಿದರ್ಶನವಾಗಿ ಉಳಿಯಲಿರುವ ತೀರ್ಪು

ಶಾಸನಸಭೆಗಳ ಸದಸ್ಯರು ಸಚ್ಚಾರಿತ್ರ್ಯದಿಂದ ಇರಬೇಕಿರುವುದರ ಮಹತ್ವವನ್ನು ಸುಪ್ರೀಂ ಕೋರ್ಟ್ ಒತ್ತಿ ಹೇಳಿದೆ. 1998ರಲ್ಲಿ ಜೆಎಂಎಂ ಲಂಚ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಅಸಿಂಧುಗೊಳಿಸುವ ಮೂಲಕ, ಶಾಸನಸಭೆಗಳ ಸದಸ್ಯರಿಗೆ ಇರುವ ಹಕ್ಕುಗಳ ಮಿತಿ ಏನು ಎಂಬುದನ್ನು ಕೂಡ ಸ್ಪಷ್ಟಪಡಿಸಿದೆ. 1998ರ ತೀರ್ಪು ಶಾಸನಸಭೆಗಳ ಸದಸ್ಯರು, ಸದನದಲ್ಲಿ ಮತ ಚಲಾಯಿಸಲು ಅಥವಾ ಮಾತನಾಡಲು ಲಂಚ ಪಡೆದಿದ್ದರೂ ಅವರಿಗೆ ಕಾನೂನಿನ ಕ್ರಮದಿಂದ ರಕ್ಷಣೆ ಇದೆ ಎಂದು ಹೇಳಿತ್ತು. ಸಂವಿಧಾನದ 105ನೇ ವಿಧಿ ಹಾಗೂ 194ನೇ ವಿಧಿ ಆ ರಕ್ಷಣೆಯನ್ನು ನೀಡಿವೆ ಎಂದು ಹೇಳಿತ್ತು. ಈಗ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಸದನದಲ್ಲಿ ಮತ ಚಲಾಯಿಸಲು ಅಥವಾ ಮಾತನಾಡಲು ಲಂಚ ಪಡೆಯುವ ಶಾಸಕರು ಹಾಗೂ ಸಂಸದರಿಗೆ ಕಾನೂನಿನ ಕ್ರಮದಿಂದ ರಕ್ಷಣೆ ಇಲ್ಲ ಎಂದು ಸ್ಪಷ್ಟಪಡಿಸಿದೆ. 1993ರಲ್ಲಿ ಪಿ.ವಿ.ನರಸಿಂಹ ರಾವ್ ನೇತೃತ್ವದ ಸರ್ಕಾರಕ್ಕೆ ಅವಿಶ್ವಾಸ ಗೊತ್ತುವಳಿಯನ್ನು ಸೋಲಿಸಲು ಸಹಾಯ ಮಾಡುವ ಉದ್ದೇಶದಿಂದ ಜೆಎಂಎಂ ಪಕ್ಷದ ಐದು ಮಂದಿ ಸಂಸದರು ಲಂಚ ಪಡೆದಿದ್ದರು ಎಂಬ ಆರೋಪ ಇದೆ. ಲಂಚ ಪಡೆದ ಆರೋಪ ಇದ್ದರೂ, ಸದನದಲ್ಲಿ ಮತ ಚಲಾಯಿಸಿದ್ದಕ್ಕಾಗಿ ಸಂವಿಧಾನದ ವಿಧಿ 105(2)ರ ಅಡಿಯಲ್ಲಿ ರಕ್ಷಣೆ ಇದೆ ಎಂದು ಕೋರ್ಟ್ ಆಗ ಹೇಳಿತ್ತು. ತೀರ್ಪು ಬಂದಾಗಿನಿಂದಲೂ ಅದರ ಬಗ್ಗೆ ಆಕ್ಷೇಪಗಳು ಇದ್ದವು. ಈಗ ಏಳು ನ್ಯಾಯಮೂರ್ತಿಗಳ ನ್ಯಾಯಪೀಠವು ಆ ತೀರ್ಪನ್ನು ಅಸಿಂಧುಗೊಳಿಸುವ ಮೂಲಕ ಒಳ್ಳೆಯ ಕೆಲಸ ಮಾಡಿದೆ.



ಭ್ರಷ್ಟಾಚಾರದ ಬಗ್ಗೆ ಕಾನೂನು, ನೈತಿಕತೆ ಹಾಗೂ ನ್ಯಾಯದ ದೃಷ್ಟಿಯಿಂದ ಅತ್ಯುತ್ತಮವಾದ ನಿಲುವು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ವ್ಯಕ್ತವಾಗಿದೆ

ಶಾಸಕರು ಹಾಗೂ ಸಂಸದರು ಲಂಚ ಪಡೆದರೆ ಸಂಸದೀಯ ಪ್ರಜಾತಂತ್ರವ್ಯವಸ್ಥೆಯ ಅಡಿಪಾಯಕ್ಕೆ ಹಾನಿ ಆಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ಸರಿಯಾಗಿಯೇ ಇದೆ. ಭ್ರಷ್ಟಾಚಾರದ ಬಗ್ಗೆ ಕಾನೂನು, ನೈತಿಕತೆ ಹಾಗೂ ನ್ಯಾಯದ ದೃಷ್ಟಿಯಿಂದ ಅತ್ಯುತ್ತಮವಾದ ನಿಲುವನ್ನು ಸುಪ್ರೀಂ ಕೋರ್ಟ್ ಸೋಮವಾರ ನೀಡಿರುವ ತೀರ್ಪು ತಾಳಿದೆ. ಭ್ರಷ್ಟಾಚಾರದ ಕುರಿತ ಗ್ರಹಿಕೆಗಳು ಹಾಗೂ ಅದನ್ನು ನಿಗ್ರಹಿಸುವ ಕ್ರಿಯೆಗಳಿಗೆ ಇದು ಮುಂದಿನ ದಿನಗಳಲ್ಲಿ ಮಾರ್ಗದರ್ಶಿಯ ರೀತಿಯಲ್ಲಿ ಬಳಕೆಯಾಗಬೇಕು. 1998ರ ತೀರ್ಪು ಶಾಸನಸಭೆಗಳ ಸದಸ್ಯರಿಗೆ ತಮ್ಮ ಹಕ್ಕುಗಳನ್ನು ದುರ್ಬಳಕೆ ಮಾಡಿಕೊಳ್ಳಲು ಪರವಾನಗಿ ನೀಡುವ ಕೆಲಸ ಮಾಡಿತ್ತು, ದುರ್ಬಳಕೆಗೆ ಒಂದು ಸಮರ್ಥನೆಯನ್ನು ಒದಗಿಸಿಕೊಟ್ಟಿತ್ತು. ಅದು ಭ್ರಷ್ಟಾಚಾರಕ್ಕೆ ಮಾನ್ಯತೆ ನೀಡಿದಂತೆ ಇತ್ತು. ಅಲ್ಲದೆ, 1998ರ ತೀರ್ಪಿನಲ್ಲಿ ಬಹಳ ವಿಚಿತ್ರವಾದ ಒಂದು ವಿರೋಧಾಭಾಸ ಕೂಡ ಇತ್ತು. ಲಂಚದ ಪ್ರಭಾವಕ್ಕೆ ಗುರಿಯಾಗಿ, ಅದಕ್ಕೆ ಅನುಗುಣವಾಗಿ ಮತ ಚಲಾಯಿಸಿದವರಿಗೆ ಕಾನೂನಿನ ಕ್ರಮದಿಂದ ರಕ್ಷಣೆ ಇದೆ; ಆದರೆ, ಲಂಚ ಪಡೆದಿದ್ದರೂ ಲಂಚದ ಉದ್ದೇಶಕ್ಕೆ ಅನುಗುಣವಾಗಿ ಅಲ್ಲದೆ, ಸ್ವತಂತ್ರವಾಗಿ ಮತ ಚಲಾಯಿಸಿದವರಿಗೆ ಕಾನೂನಿನ ಕ್ರಮದಿಂದ ರಕ್ಷಣೆ ಇರುವುದಿಲ್ಲ ಎಂಬ ಅರ್ಥವನ್ನು ಅದು ನೀಡುತ್ತಿತ್ತು. ಆದರೆ ಈಗ ಬಂದಿರುವ ತೀರ್ಪು ಶಾಸನಸಭೆಗಳ ಸದಸ್ಯರಿಗೆ ಇರುವ ಹಕ್ಕುಗಳನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಇಲ್ಲ, ಲಂಚವೆಂದರೆ ಲಂಚವೇ, ಅದನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ಯಾರೇ ಪಡೆದಿದ್ದರೂ ಅದು ಲಂಚವೇ ಆಗುತ್ತದೆ ಎಂದು ಸ್ಪಷ್ಟಪಡಿಸಿದೆ.

ಶಾಸನಸಭೆಗಳ ಸದಸ್ಯರ ಹಕ್ಕುಗಳ ಬಗ್ಗೆ ಈ ತೀರ್ಪು ಸ್ಪಷ್ಟವಾಗಿ ವಿವರಣೆಗಳನ್ನು ನೀಡಿದೆ. ಶಾಸನಸಭೆಗಳ ಸದಸ್ಯರಿಗೆ ಇರುವ ವಿಶೇಷ ಹಕ್ಕುಗಳನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗಿದೆ, ಅವುಗಳನ್ನು ಹಲವು ರೀತಿಯಲ್ಲಿ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈ ಹಕ್ಕುಗಳನ್ನು ಸದನದ ಎಲ್ಲ ಕಾರ್ಯಕಲಾಪಗಳ ಜೊತೆ ಇರಿಸಿ ನೋಡಬೇಕು ಎಂದು ಕೋರ್ಟ್ ಹೇಳಿದೆ. ಸದಸ್ಯರ ಕರ್ತವ್ಯಗಳ ಜೊತೆ ಈ ಹಕ್ಕುಗಳಿಗೆ ಸಂಬಂಧ ಇರಬೇಕು ಎಂದು ವಿವರಿಸಿದೆ. ಸದಸ್ಯರ ಹಕ್ಕುಗಳು ಸದನದ ಕಲಾಪಗಳಿಗೆ ನೆರವಾಗುವ ರೀತಿಯಲ್ಲಿ ಮಾತ್ರ ಇರುತ್ತವೆ ಎಂದು ಹೇಳಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮುಂದುವರಿದ ಭಾಗವಾದ ಮತದಾನದ ಹಕ್ಕು ಯಾವುದೇ ಶಾಸನಸಭೆಯ ಪಾಲಿಗೆ ಅತ್ಯಗತ್ಯವಾದುದು. ಆದರೆ, ಆ ಹಕ್ಕು ಸದಸ್ಯರಿಗೆ ಅಸಮಾನವಾದ ಯಾವುದೇ ಸ್ಥಾನವನ್ನು ಕಲ್ಪಿಸಿಕೊಡುವುದಿಲ್ಲ. ವಿಶೇಷ ಹಕ್ಕುಗಳ ಪರಿಕಲ್ಪನೆಯನ್ನು ಕೋರ್ಟ್ ಬಹಳ ಸ್ಪಷ್ಟವಾಗಿ ವ್ಯಾಖ್ಯಾನಿಸಿದೆ. ಅಲ್ಲದೆ, ಆ ಹಕ್ಕುಗಳನ್ನು ಲಂಚ ಅಥವಾ ಅಪರಾಧದಿಂದ ಪ್ರತ್ಯೇಕಿಸಿದೆ. ಈ ತೀರ್ಪು ಭವಿಷ್ಯದಲ್ಲಿ ಒಂದು ಪೂರ್ವನಿದರ್ಶನವಾಗಿ ನಿಲ್ಲಲಿದೆ.

ದಿನದ ಟ್ವೀಟ್

ಶಾಶ್ವತ ಪರಿಹಾರ ರೂಪಿಸಿ



ಬೆಂಗಳೂರಿನಲ್ಲಿ ನೀರಿನ ಬಿಕ್ಕಟ್ಟು. ಖಾಸಗಿ ನೀರು ಸರಬರಾಜು ಮಾರಾಟ ವ್ಯವಸ್ಥೆಯನ್ನು ವಶಕ್ಕೆ ಪಡೆಯಲು ಸರ್ಕಾರ ನಿರ್ಧರಿಸಿದೆ. 1973ರಲ್ಲಿ ಆಹಾರಧಾನ್ಯ ಕೊರತೆಯ ಬಿಕ್ಕಟ್ಟನ್ನು ಬಗೆಹರಿಸಲು ಇಂದಿರಾ ಗಾಂಧಿ ಅವರು ಹೇಗೆ ಅದರ ಮಾರಾಟ ವ್ಯವಸ್ಥೆಯನ್ನು ವಶಕ್ಕೆ ಪಡೆದಿದ್ದರು ಎಂಬುದು ನೆನಪಾಗುತ್ತಿದೆ. ಆಗ, ಆಹಾರಧಾನ್ಯದ ಬೆಲೆ ಮತ್ತು ಅದರ ಕೊರತೆ ಎರಡೂ ದ್ವಿಗುಣಗೊಂಡಿದ್ದವು. 'ಮನೋಘೋರಣೆ' ಶಾಶ್ವತವಾಗಿ ಉಳಿದುಬಿಡಬಹುದು.

ಸುತನು ಗುರು

ಕಿಡಿನುಡಿ



ವಿಧಾನಸೌಧದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದವರಿಗೆ ತ್ವರಿತವಾಗಿ ಶಿಕ್ಷೆಯಾಗಬೇಕು. ಅದನ್ನು ಸಮರ್ಥನೆ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಆದರೆ, ರಾಜ್ಯಸಭೆಗೆ ಆಯ್ಕೆಯಾಗಿರುವ ಸೈಯದ್ ನಾಸಿರ್ ಹುಸೇನ್ ಅವರ ರಾಜೀನಾಮೆ ಕೇಳುವವರು, ಸಂಸತ್ತಿನಲ್ಲಿ ಭದ್ರತಾ ಲೋಪ ಆದಾಗ ಸಂಸದ ಪ್ರತಾಪ ಸಿಂಹ ಅವರ ರಾಜೀನಾಮೆಯನ್ನು ಯಾಕೆ ಕೇಳಲಿಲ್ಲ?

ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

25 ವರ್ಷಗಳ ಹಿಂದೆ

ಶನಿವಾರ, 6-3-1999

- **ಉಚಿತ ನಿವೇಶನದ ಆಮಿಷ ಲಕ್ಷಾಂತರ ರೂಪಾಯಿ ವಂಚನೆ**

ಬೆಂಗಳೂರು, ಮಾರ್ಚ್ 5– ಕಂದಾಯ ಇಲಾಖೆಯ ಇಬ್ಬರು ನೌಕರರು ಆಶ್ರಯ ಯೋಜನೆಯಲ್ಲಿ ಉಚಿತ ನಿವೇಶನ ಕೊಡಿಸುವುದಾಗಿ ಮುಗ್ಧ ಜನರನ್ನು ನಂಬಿಸಿ ದಾಖಲೆ ಪತ್ರಗಳಿಗೆಂದು ಲಕ್ಷಾಂತರ ರೂಪಾಯಿ ಹಣ ಪಡೆದು ನಕಲಿ ಹಕ್ಕು-ಪತ್ರಗಳನ್ನು ನೀಡಿ ವಂಚಿಸಿರುವ ಭಾರಿ ಹಗರಣವೊಂದು ಬೆಳಕಿಗೆ ಬಂದಿದೆ.

ವಿಭಾಗೀಯ ಆಯುಕ್ತರ ಕಚೇರಿಯಲ್ಲಿನ ಉಪ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಕಂದಾಯ ವಿಭಾಗದ ನಾಲ್ಕನೇ ದರ್ಜೆ ನೌಕರರೊಬ್ಬರು ಈ ಪ್ರಕರಣದ ಆಪಾದಿತರು. ಒಬ್ಬರನ್ನು ಬಂಧಿಸಲಾಗಿದ್ದು, ಮತ್ತೊಬ್ಬರು ತಲೆಮರೆಸಿಕೊಂಡಿದ್ದಾರೆ ಎನ್ನಲಾಗಿದೆ.

- **ರೈಲ್ವೆ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯ: ಸಂಸದರ ಅತೃಪ್ತಿ**

ನವದೆಹಲಿ, ಮಾರ್ಚ್ 5– ಕರ್ನಾಟಕಕ್ಕೆ ಈ ಬಾರಿಯ ರೈಲ್ವೆ ಬಜೆಟ್‌ನಲ್ಲಿ ತೀರಾ ಅನ್ಯಾಯವಾಗಿದೆ ಎಂದು ತೀವ್ರವಾಗಿ ಅಸಮಾಧಾನ ವ್ಯಕ್ತಪಡಿಸಿದ ರಾಜ್ಯದ ಸಂಸತ್ ಸದಸ್ಯರ ಸಭೆಯು, ಪ್ರಧಾನಿ ಮತ್ತು ರೈಲ್ವೆ ಸಚಿವರನ್ನು ಭೇಟಿಯಾಗಿ ಚರ್ಚಿಸಲು ಇಂದು ನಿರ್ಧರಿಸಿತು.

ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಲ್ಲಿನ ಕರ್ನಾಟಕ ಭವನದಲ್ಲಿ ಕರೆದಿದ್ದ ರಾಜ್ಯದ ಸಂಸತ್ ಸದಸ್ಯರ ಸಭೆಯಲ್ಲಿ, ರೈಲ್ವೆಯಲ್ಲಿ ರಾಜ್ಯಕ್ಕೆ ಈ ಬಾರಿ ತೀರಾ ಅನ್ಯಾಯವಾಗಿದೆ ಎಂಬ ಅಸಮಾಧಾನ ವ್ಯಕ್ತವಾಯಿತು.

50 ವರ್ಷಗಳ ಹಿಂದೆ

ಬುಧವಾರ, 6-3-1974

- **ಆಹಾರಧಾನ್ಯ ಸಂಗ್ರಹಣೆ: ಒಂದೇ ಒಂದು ಆಪಾದನೆ ಸ್ಥಿರಪಟ್ಟರೂ ರಾಜೀನಾಮೆಗೆ ಸಿದ್ಧ– ಅರಸು ಸವಾಲು**

ಬೆಂಗಳೂರು, ಮಾರ್ಚ್ 5– ಆಹಾರಧಾನ್ಯ ಅಕ್ರಮ ಸಂಗ್ರಾಹಕರ ವಿರುದ್ಧ ರಾಜ್ಯದಲ್ಲಿ ಈಚೆಗೆ ನಡೆದ ದಾಳಿಯು 'ರಾಜಕೀಯ ದುರುದ್ದೇಶದ್ದು, ಪಕ್ಷಕ್ಕೆ ಹಣ ಸಂಗ್ರಹಿಸಲು ಹೂಡಿದ್ದು ಎಂಬಿತ್ಯಾದಿ ನೂರು ಆಪಾದನೆಗಳ ಪೈಕಿ ಒಂದನ್ನಾದರೂ ರುಜುವಾತು ಮಾಡಿದರೆ, ರಾಜೀನಾಮೆ ನೀಡಿ ಹೊರಗೆ ಹೋಗುತ್ತೇನೆ' ಎಂದು ಮುಖ್ಯಮಂತ್ರಿ ದೇವರಾಜ ಅರಸು ಇಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದವರಿಗೆ ಸವಾಲು ಹಾಕಿದರು.

'ಏನೇ ತಪ್ಪುಗಳು ಆಗಲಿ, ಯಾರದೇ ನಿಷ್ಠುರವಾಗಲಿ ಪಡಿತರ ಕೊಡುತ್ತೇವೆ ಎಂದು ಜನಕ್ಕೆ ನಾವು ನೀಡಿದ ಭರವಸೆಯನ್ನು ಈಡೇರಿಸುತ್ತೇವೆ' ಎಂದರು.

- **ರಾಷ್ಟ್ರೀಕೃತ ಬ್ಯಾಂಕ್‌ಗಳ ದಕ್ಷತೆ, ಲಾಭಾಂಶ ಕುಸಿತ– ಚವಾಣ್ ಒಪ್ಪಿಗೆ**

ನವದೆಹಲಿ, ಮಾರ್ಚ್ 5– ರಾಷ್ಟ್ರದಾದ್ಯಂತ ರಾಷ್ಟ್ರೀಕೃತ ಬ್ಯಾಂಕುಗಳ ದಕ್ಷತೆ ಕುಸಿದಿದೆ ಎಂದು ಹಣಕಾಸು ಸಚಿವ ವೈ.ಬಿ. ಚವಾಣ್ ಇಂದು ರಾಜ್ಯಸಭೆಯಲ್ಲಿ ಒಪ್ಪಿಕೊಂಡರು.

ಸಚಿವರು ಎ.ಜಿ. ಕುಲಕರ್ಣಿ ಅವರಿಗೆ ಉತ್ತರ ಕೊಟ್ಟು, ಈ ಬ್ಯಾಂಕುಗಳಲ್ಲಿ ಠೇವಣಿದಾರರಿಗೆ ಒದಗಿಸುತ್ತಿರುವ ಸೇವೆಯ ಗುಣಮಟ್ಟ ಕಳೆದ ಕೆಲವು ವರ್ಷಗಳಲ್ಲಿ ಸ್ವಲ್ಪ ಕ್ಷೀಣಿಸಿದೆ ಎಂದು ಹೇಳಿದರು.

ಆಡಳಿತ ವರ್ಗ ಮತ್ತು ನೌಕರರ ನಡುವೆ ಬಾಂಧವ್ಯ ಉತ್ತಮಗೊಳಿಸಿ ದಕ್ಷತೆ ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆಯೆಂದು ಅವರು ತಿಳಿಸಿದರು.

ಹೀಗೂ ಸಿನಿಮಾ ನಿರ್ಮಿಸಬಹುದೇ ಎನ್ನುವಂತಿವೆ ಎರಡು ಮಲಯಾಳಂ ಚಿತ್ರಗಳು

ಇತಿಹಾಸ, ಭ್ರಮೆಯ ನಡುವಿನ ವಾಸ್ತವ



ವಿಶ್ಲೇಷಣೆ

ಕೃಷ್ಣಮೂರ್ತಿ ಹನೂರು


ಇತ್ತೀಚೆಗೆ ಬಿಡುಗಡೆಯಾದ ಎರಡು ಮಲಯಾಳಂ ಚಲನಚಿತ್ರಗಳು ಗತವನ್ನು ಕುರಿತು ಆಲೋಚಿಸುವಂತೆ, ಪ್ರೇಕ್ಷಕರ ಕುತೂಹಲ ಕೆರಳುವಂತೆ ಮಾಡುತ್ತಾ, ಕೊನೆಗೆ ಸಿನಿಮಾಗಳನ್ನು ಹೀಗೂ ನಿರ್ಮಿಸಬಹುದೇ ಎನಿಸುವಂತೆ ಇವೆ. ಜನವರಿ ಕೊನೆಯ ಭಾಗದಲ್ಲಿ ಬಿಡುಗಡೆಯಾದದ್ದು ಮೋಹನ್‌ಲಾಲ್ ಅಭಿನಯದ, ಲಿಜೋ ಜೋಸ್ ಪೆಲ್ಲಿಶ್ಶೇರಿ ನಿರ್ದೇಶನದ 'ಮಲೈಕೋಟ್ಟೈ ವಾಲಿಬನ್'. ಫೆಬ್ರುವರಿ ಮಧ್ಯಭಾಗದಲ್ಲಿ ಬಿಡುಗಡೆಯಾದದ್ದು ಮಮ್ಮುಟ್ಟಿ ಅಭಿನಯದ, ರಾಹುಲ್ ಸದಾಶಿವನ್ ನಿರ್ದೇಶನದ 'ಭ್ರಮಯುಗಂ'. ಭಾರತದ ಪ್ರಸಿದ್ಧ ಕಲಾವಿದರೆನಿಸಿರುವ ಮೋಹನ್‌ಲಾಲ್ ಮತ್ತು ಮಮ್ಮುಟ್ಟಿ ಅವರ ಸಿನಿಮಾಗಳ ಸೃಷ್ಟಿಯು ಪ್ರೇಕ್ಷಕರು ಸಾಮಾನ್ಯವಾಗಿ ಆಲೋಚಿಸದ ರೀತಿ ಇರುತ್ತದೆ ಮತ್ತು ಬಂಡವಾಳ ವಾಪಸಾತಿಯ ದೃಷ್ಟಿಯಿಂದ ಸೋಲಲಿ, ಗೆಲ್ಲಲಿ ಒಂದು ಹೊಸ ಕ್ರಮದ ಚಿತ್ರವನ್ನು ಮಾಡಿಯೇ ತೀರುತ್ತಾರೆ ಎನ್ನುವಂತೆ ಇರುತ್ತದೆ.

ಮೋಹನ್‌ಲಾಲ್ ದಶಕಗಳ ಹಿಂದೆಯೇ ಸಾಕ್ರೆಟೀಸನ ಪಾತ್ರದಲ್ಲಿ ಅಭಿನಯಿಸಿದ್ದರೆ, ಮಮ್ಮುಟ್ಟಿ ಅವರು ಮಲಯಾಳಂ ಜನಪದ ಕಥೆ ಆಧಾರಿತ 'ಒರು ವಡಕ್ಕನ್ ವೀರಗಾಥ' ಚಿತ್ರವನ್ನು ಜನ ನೋಡುವಂತೆ ಮಾಡಿದ್ದರು. ಹೋದ ವರ್ಷವೂ ಮಮ್ಮುಟ್ಟಿ 'ನನ್ ಪಗಲ್ ನೇರತ್ತ್ ಮಯಕ್ಕಮ್' ಸಿನಿಮಾದಲ್ಲಿ ಬಸ್ ಏಜೆಂಟನ ಪಾತ್ರ ಮಾಡಿದ್ದರು. ಇದನ್ನೆಲ್ಲ ಗಮನಿಸಿದಾಗ, ಮಲಯಾಳಂ ಪ್ರೇಕ್ಷಕರು ಇವನ್ನೆಲ್ಲ ನೋಡಿ ಮೆಚ್ಚುವಷ್ಟು ಪ್ರಬುದ್ಧರೇ ಎಂದುಕೊಂಡರೆ, ಅದು ನಿಜವಿರಬಹುದು ಎನಿಸುತ್ತದೆ.

ಇದೀಗ ಈ ಇಬ್ಬರು ಮಹಾನ್ ಕಲಾವಿದರ ಇತ್ತೀಚಿನ ಸಿನಿಮಾಗಳಿಗೆ ಬಂದರೆ, ಮೋಹನ್‌ಲಾಲ್‌ರ 'ಮಲೈಕೋಟ್ಟೈ ವಾಲಿಬನ್' ಚಿತ್ರದಲ್ಲಿ ಹುಡುಗರು ಮೆಚ್ಚುವ ಕಳರಿಪಯಟ್ಟು ಹೊಡೆತದ ಮಾದರಿ, ಸುಂದರಿಯರ ಮಾದಕ ನೃತ್ಯ, ಪ್ರಬುದ್ಧರೂ ಮೆಚ್ಚಿ ಆಹಾ ಎಂದುಕೊಳ್ಳುವ ಐತಿಹಾಸಿಕ ದೃಶ್ಯ ಸಂಬಂಧಿತ ಸಂಭಾಷಣೆಗಳ ವರಸೆ ಇದ್ದರೂ ಗಲ್ಲಾಪೆಟ್ಟಿಗೆಯಲ್ಲಿ ಅದು ನಿರೀಕ್ಷಿತ ಮಟ್ಟಿಗೆ ಯಶಸ್ಸು ಗಳಿಸಲಿಲ್ಲ. ಆದರೆ ಚಿತ್ರ ಮಾತ್ರ ಅದ್ಭುತ ರೋಚಕ ದೃಶ್ಯಗಳ ಸರಣಿಯೇ ಆಗಿದೆ. ಇತ್ತ ಮಮ್ಮುಟ್ಟಿಯವರ 'ಭ್ರಮಯುಗಂ'ನಲ್ಲಿ ಯಥಾವಿಧಿ ಸಿನಿಮಾ ಚೇಷ್ಟೆಗಳಿಲ್ಲದಿದ್ದರೂ ಯಶಸ್ಸು, ಲಾಭ ಗಳಿಸಿದೆ.

ಇದೇನೇ ಇರಲಿ, ಎರಡೂ ಚಿತ್ರಗಳ ಆರಂಭಿಕ ದೃಶ್ಯಗಳೆಂದರೆ, 'ಭ್ರಮಯುಗಂ' ಹಸಿರು ಕಾಡಿನ ನಡುವೆ ಒಬ್ಬ ದಿಕ್ಕು ತಪ್ಪಿದ ಆದಿಮಾನವನಂಥವನ ಪ್ರಯಾಣದೊಂದಿಗೆ ಆರಂಭವಾದರೆ, 'ಮಲೈಕೋಟ್ಟೈ ವಾಲಿಬನ್' ಹಸುರಿನ ಸುಳಿವೇ ಇಲ್ಲದ ಭಣಗುಟ್ಟುವ ಬರಡು ನೆಲದಲ್ಲಿ, ದೇಹ ಪರಾಕ್ರಮಿ ಎನಿಸಿಕೊಳ್ಳುವ ಜಟ್ಟಿಯ ಎತ್ತಿನ ಗಾಡಿಯ ಪ್ರಯಾಣದೊಂದಿಗೆ ಶುರುವಾಗುತ್ತದೆ. ಊರೂರ ಮೇಲೆ ಪ್ರಯಾಣಿಸುವ ಈ ಬಂಟ, ಪಟ್ಟಿನಲ್ಲೂ ಪಟ್ಟಿನಲ್ಲೂ ಕೋಟೆಗಳ ಒಳ-ಹೊರಗೆ ಜಟ್ಟಿಗಳೆಂಬುವರಿಗೆ ಮಣ್ಣು ಮುಕ್ಕಿಸಿ ಅಲ್ಲಲ್ಲಿಯ ಆಳರಸರನ್ನು ಬೆಚ್ಚಿ ಬೀಳಿಸುವ ಗಂಡಸು ತಾನೆಂದು ಘೋಷಿಸಿಕೊಳ್ಳುತ್ತಾನೆ. ಇತಿಹಾಸದ ಈ ಬಗೆಯ ಬಹುಪರಾಕುಗಳ ವಿರುದ್ಧ ದಿಕ್ಕಿನ 'ಭ್ರಮಯುಗಂ' ಚಿತ್ರದಲ್ಲಿ ಆಗಂತುಕ ದಿಕ್ಕುಗೆಟ್ಟು ಅರಣ್ಯದಲ್ಲಿ ದಾರಿ ಕಾಣದೆ ಯಾವುದೋ ಪಾಳುಬಿದ್ದ ಗುಡಿಯ ಕಡೆ ಬಂದರೆ, ಅಲ್ಲಿದ್ದ ಒಬ್ಬ ವ್ಯಕ್ತಿ ತನ್ನ ರೂಪು ಕಾಣಿಸದೆ ದನಿ ಮಾತ್ರದಲ್ಲಿ 'ನೀನು ಯಾರು?' ಎಂಬ ಸಹಜ ಅಥವಾ ಗಹನ ಪ್ರಶ್ನೆ ಕೇಳುತ್ತಾನೆ. ಆಗಂತುಕನಿಗೆ ತಬ್ಬಿಬ್ಬಾಗುತ್ತದೆ, ಉತ್ತರ ಹೊಳೆಯುವುದಿಲ್ಲ. ಇದಕ್ಕೆ ಉತ್ತರ ಹುಡುಕುವವನಂತೆ ಆ ಅರಣ್ಯದಲ್ಲಿಯೇ ಗತಿ ಕಾಣದೆ ಉಳಿಯಬೇಕಾಗುತ್ತದೆ. ಆಗಂತುಕನಿಗೆ ಪ್ರತಿನಿತ್ಯ ಗುಹೆ ಹೊಕ್ಕಂತೆ, ಸೆರೆ ಸಿಕ್ಕಂತೆ, ಗುಡಿ ಸೇರಿದಂತೆ ಭಾಸವಾಗುತ್ತದೆ.

ಒಂದು ಹಂತದಲ್ಲಿ, ಅದೇ ಗುಹೆಯಲ್ಲಿದ್ದ ಇನ್ನೊಬ್ಬ ಒಂಟಿ ಹಿರಿಯ (ಮಮ್ಮುಟ್ಟಿ) ಆಗಂತುಕನೊಂದಿಗೆ ಮಾತನಾಡುತ್ತಾ ಹೋಗುವಲ್ಲಿ, 'ದೇವರು ನಮಗೆ ಕೊಟ್ಟಿರುವ ವರ ಯಾವುದು?' ಎನ್ನುತ್ತಾನೆ. ಇದಕ್ಕೆ ಉತ್ತರಿಸಬೇಕಾದವರು ಪ್ರೇಕ್ಷಕರೋ ಅಥವಾ ಆ ಆಗಂತುಕನೋ ಎಂದು ಒಂದು ಕ್ಷಣ ಯೋಚಿಸುವಂತಾಗುತ್ತದೆ. ದೇವರು ಕೊಟ್ಟ ವರ ನಮ್ಮ ಸುತ್ತಿನ ಪ್ರಕೃತಿಯೇ, ನಾವು ನಿರ್ಮಿಸಿಕೊಂಡ ಅರಮನೆಯೇ, ಗಳಿಸಿದ ಐಶ್ವರ್ಯವೇ ಎಂದರೆ ಇವೇನೂ ಅಲ್ಲ! ಆ ಹಿರಿಯನೇ ಆಗಂತುಕನಿಗೆ ತಿಳಿಸಿಕೊಡುವ ಉತ್ತರ 'ಅದು ಸಮಯ' ಎನ್ನುವುದು. ಕಾಲ ಮುಂದೆ ಚಲಿಸಿದರೆ ಹಿಂದೆ ಬರುವುದೇ ಇಲ್ಲವಲ್ಲ! ಅರಣ್ಯವಾಸಿ ಹಿರಿಯನು ಅರೆಬೆಂದ ಮಾಂಸವನ್ನು ಅಗಿದಗಿದು ನುಂಗಿದರೆ, ಎದುರಿನ ಆಗಂತುಕ ಮಡಕೆಯ ಗಂಜಿಯನ್ನು ಶತಮಾನಗಳ ಹಸಿವಿನವನಂತೆ ಬಾಯಿಗಿಟ್ಟು ಸುರಿಯುತ್ತಾನೆ. ಮನುಷ್ಯನಿಗೆ ದೇವರು ಕೊಟ್ಟಿರುವುದು ಎರಡೇ, ಅದು ಅನ್ನ ಮತ್ತು ಸಮಯ.



ಹೀಗೆ 'ಭ್ರಮಯುಗಂ' ಬರೀ ಮೂರೋ ನಾಲ್ಕೋ ಪಾತ್ರಗಳೊಡನೆ ಮನುಷ್ಯನ ಒಂಟಿತನ, ಏಕಾಂತ, ಸಮಸ್ಯೆ-ಗಳಲ್ಲದವಕ್ಕೆ ಅನಗತ್ಯವಾಗಿ ಸಿಕ್ಕಿಹಾಕಿಕೊಳ್ಳುವುದು, ಸಂದಿಗೊಂದಿಯಲ್ಲಿ ಸಿಲುಕಿ ತಪ್ಪಿಸಿಕೊಳ್ಳುವುದನ್ನು ಹೇಳುತ್ತಾ ಹೊರಟರೆ, 'ಮಲೈಕೋಟ್ಟೈ ವಾಲಿಬನ್' ಈಗಾಗಲೇ ಸೂಚಿಸಿದಂತೆ, ಒಣಬಯಲಿನಲ್ಲಿ ಮೈಯ್ಯ ನೆಣ ಏರಿಸಿಕೊಂಡು ಹೋರಾಡುತ್ತ ನೆಲಕ್ಕೆ ರಕ್ತ ಚೆಲ್ಲುವ ಇತಿಹಾಸ ಸಂಬಂಧಿ ದೀರ್ಘ ಪ್ರಯಾಣದ ಚಿತ್ರವಾಗಿ ಕಾಣುತ್ತದೆ. ಇಲ್ಲಿಯ ವ್ಯಂಗ್ಯವೆಂದರೆ, ಸಾಮಾನ್ಯರು ಒಂದು ಹೊತ್ತಿನ ಅನ್ನಕ್ಕೆ ಬಡಿದಾಡಿದರೆ, ಪರಾಕ್ರಮಿಗಳು ಹೊತ್ತಿ ಉರಿಯುವ ಪಂಜುಗಳ ನಡುವೆ ಕುಸ್ತಿ ಆಡುತ್ತಾರೆ. ಇಲ್ಲಿ ಕೇರಳದ ಕಳರಿಪಯಟ್ಟು ರೋಚಕರೂಪದಲ್ಲಿ ತಿರುತಿರುಗಿ ಕಾಣಿಸಿಕೊಳ್ಳುತ್ತದೆ. ಇದರ ವಿರುದ್ಧ ದಿಕ್ಕಿನ ರೂಪಕವೋ ಎಂಬಂತೆ, ಒಂದು ಊರಿನ ಜಟ್ಟಿ ಹಾಕಿಸಿದ್ದ ವೀರಗಲ್ಲನ್ನು ವಾಲಿಬನ್ ಕಿತ್ತೆಸೆದರೆ, ಅದು ಒಣ ಬಯಲಿನಲ್ಲಿ ಹಸಿರು ತಡಕಾಡುತ್ತಿದ್ದ ಮೇಕೆಗಳ ಹಿಂಡಿನ ನಡುವೆ ಬೀಳುತ್ತದೆ. ಆಡು ಕಾಯುತ್ತ ಒಣ ರೊಟ್ಟಿ ಕಡಿಯುತ್ತಿದ್ದವನು, ಬಿದ್ದದ್ದು ಏನು ಎಂದು ಎದ್ದು ಹೋಗಿ ನೋಡುವಲ್ಲಿ, ಒಂದು ಆಡು ಇತ್ತ ಬಂದು ರೊಟ್ಟಿಯನ್ನು ಕಚ್ಚಿಕೊಂಡು ಹೋಗುತ್ತದೆ. ಶೂರರ ರಕ್ತರಂಜಿತ ಹೋರಾಟದಲ್ಲಿ ಬಡವರಿಗೆ ಬಂದ ಭಾಗ್ಯವೇನು ಎಂಬುದೇ ಇಲ್ಲಿಯ ಮುಖ್ಯ ಪ್ರಶ್ನೆ.

ಇದರೊಂದಿಗೆ ಈ ಚಿತ್ರದಲ್ಲಿ ಪುನರಾವರ್ತನೆಯ ಸಂಗತಿ ಎಂದರೆ, ಕಂಡದ್ದೂ ಸತ್ಯವಲ್ಲ, ಕಾಣದ್ದೂ ಸತ್ಯವಲ್ಲ, ಹಾಗಾದರೆ ಅದು ಅಡಗಿರುವುದು ಎಲ್ಲಿ ಎಂಬುದು. ಇದಕ್ಕೆ ಪೂರಕವೆನಿಸುವ ಸನ್ನಿವೇಶಗಳೂ ಇವೆ.

ಸೆರೆಮನೆಯೆಂಬ ಅರಮನೆಯಲ್ಲಿ ಹೆಣ್ಣುಮಕ್ಕಳನ್ನು ಇರಿದು ಕೊಲ್ಲುವ ಭಯಂಕರ ದೃಶ್ಯವೂ ಇದೆ. ಇದಕ್ಕೆ ಸಾಕ್ಷಿ ಎಂದರೆ, ನಾಳೆ ಯುದ್ಧದಲ್ಲಿ ತಾನು ಸೋತು ಸಾಯುವ ಅರಸ ಹಿಂದಿನ ದಿನ ತನ್ನ ರಾಣಿಯರನ್ನು ತಾನೇ ಕೊಂದು ಹೋದ ದಾಖಲೆಗಳು ಇವೆಯಲ್ಲ! ಸೋತ ಅರಸರು, ಗುಲಾಮರ 'ಮೇಲೆ ಕೋಟೆ ನಿಂತಿದೆ', 'ನೆತ್ತರು ಮತ್ತು ಕಣ್ಣೀರು ಬೆರೆತ ಸಮುದ್ರದಿಂದ ಸೂರ್ಯನು ಉದಯಿಸುವನು' ಎಂಬಂಥ ಸಂಭಾಷಣೆಗಳು ಚಿತ್ರ-ದುದ್ದಕ್ಕೂ ಕೇಳಿಸುತ್ತವೆ. ಇದರ ನಡುವೆ, ರಂಗಪಟ್ಟಣದ ನೃತ್ಯಗಾತಿಯ ಮೈ ಕತ್ತರಿಸಾಡುವ ಕುಣಿತ, ಅದನ್ನು ಹುಚ್ಚೆದ್ದು ನೋಡುವ ಪುರಜನ, ಅದರ ನಡುವೆಯೇ ನಾನಾ ಬಗೆಯ ತುರುಸಿನ ಮನೋಸ್ಪರ್ಧೆಯು ಚಿತ್ರದಲ್ಲಿ ಬಹಿರಂಗಗೊಳ್ಳುತ್ತಾ ಹೋದರೆ, 'ಭ್ರಮಯುಗಂ' ಮನುಷ್ಯನ ಅಂತರಂಗವನ್ನು ಬೆದಕುತ್ತಾ ಹೋಗುವ ಚಿತ್ರವಾಗುತ್ತದೆ.

ಈ ಎರಡೂ ಚಿತ್ರಗಳು ಕೊನೆಯಾಗುವುದು ಹಿಂದಿನ ಶತಮಾನಗಳಲ್ಲಿ ಕೇರಳಕ್ಕೆ ಆಗಮಿಸಿದ ಪರಕೀಯರ ದೃಶ್ಯದಿಂದ. ಚಿತ್ರದ ಅಂತ್ಯದಲ್ಲಿ ಸ್ಪ್ಯಾನಿಷ್ ದೊರೆಗಳೊಡನೆ ವಾಲಿಬನ್ ಹೋರಾಡಬೇಕಾಗಿ ಬಂದರೆ, 'ಭ್ರಮಯುಗಂ'ನಲ್ಲಿಯೂ ಡಚ್ಚರ ಸೈನ್ಯವು ಹೊಳೆ ದಾಟಿ ಬರುವ ದೃಶ್ಯ ಕಾಣಿಸಿಕೊಳ್ಳುತ್ತದೆ. ಹೊಳೆಯಲ್ಲಿ ತೇಲಿಹೋಗುವ ಹೆಣದ ದೃಶ್ಯವೂ ಇದೆ. ಇದು ದೇಶದ ಅಂತರಂಗ, ಬಹಿರಂಗ ಚರಿತ್ರೆ. ಹೀಗಾಗಿ, ಎರಡೂ ಚಿತ್ರಗಳ ವಸ್ತು, ದೃಶ್ಯಕ್ರಮ ಒಂದಾಗುತ್ತ, ಬೇರೆಯಾಗುತ್ತ, ಅರ್ಥಪೂರ್ಣ ಸಂಭಾಷಣೆಗಳಲ್ಲಿ, ಚರ್ಚೆಗಳಲ್ಲಿ ಶತಮಾನಗಳ ಕಥೆಗಳನ್ನು ಬಿತ್ತರಿ-ಸುತ್ತವೆ. ಚಿತ್ರಗಳು ಕಡೆಕಡೆಗೆ ಬರುವಲ್ಲಿ ನಿರ್ದೇಶಕರು ದೃಶ್ಯಗಳನ್ನು ಇನ್ನಿಷ್ಟು ಎಳೆದಂತೆ ತೋರುತ್ತದೆ.

ಇಷ್ಟಾದರೂ ಕೇರಳದ ಈ ಇಬ್ಬರು ಸೃಜನಶಕ್ತಿಯ ಪ್ರತಿಭಾನ್ವಿತ ಕಲಾವಿದರ ಚಿತ್ರಗಳು, ಹಿಂದೆಂದಿಗಿಂತಲೂ ಹೊರತಾದ ಯಾವ ಬಗೆಯ ಸಂಗತಿಯನ್ನು ಆರಿಸಿಕೊಂಡರೂ ಅವು ವರ್ತಮಾನೀಯವೇ ಆಗಿರುತ್ತವೆ ಎಂಬುದನ್ನೂ ಗಮನಿಸಬೇಕು. ಜತೆಗೆ ಪ್ರೇಕ್ಷಕರ ಚಿತ್ರ ವೀಕ್ಷಣೆಯ ಎತ್ತರ ಮತ್ತು ಚಿಂತನೆಯನ್ನೂ ಬೆಳೆಸುವಂತೆ ಇರುತ್ತವೆ.

ಚುರುಮುರಿ



60% ಕನ್ನಡ

• ಮಣ್ಣೆ ರಾಜು

'ರೀ, ನನಗೊಂದು ಡೌಟು, ಬೋರ್ಡ್‌ಗಳಲ್ಲಿ ಕನ್ನಡಕ್ಕೆ 60 ಪರ್ಸೆಂಟ್ ಆದ್ಯತೆ ನೀಡಬೇಕೆಂದು ಸರ್ಕಾರ ಹೇಳಿದೆ. ಪರ್ಸೆಂಟೇಜ್ ಪಾಲನೆಯ 'ಬೋರ್ಡ್ ಪರೀಕ್ಷೆ'ಯಲ್ಲಿ ಎಲ್ಲಾ ಮಳಿಗೆಗಳು ಪಾಸಾಗ್ತವಾ?' ಸುಮಿಗೆ ಅನುಮಾನ.

'ಅಧಿಕಾರಿಗಳು ಟೇಪ್ ಹಿಡಿದು ಬೋರ್ಡಿನ ಕನ್ನಡದ ಉದ್ದ, ಅಗಲವನ್ನು ಅಳತೆ ಮಾಡಿ ಕ್ಯಾಲ್ಕುಲೇಟ್ ಮಾಡ್ತಾರೆ. ಒಂದು ಪರ್ಸೆಂಟ್ ಕಮ್ಮಿಯಿದ್ದರೂ ಫೇಲ್ ಮಾಡಬಹುದು' ಅಂದ ಶಂಕ್ರಿ.

'ಇನ್ನೊಂದು ಡೌಟು, ಜ್ಯುವೆಲ್ಲರಿ ಮಾರ್ಟ್ ಅಂತ ಕನ್ನಡದಲ್ಲಿ ಬೋರ್ಡ್ ಬರೆಸಿದರೆ ಸಾಕೆ? ಆಭರಣ ಮಳಿಗೆ ಎಂದು ಕನ್ನಡಕ್ಕೆ ಅನುವಾದಿಸಿ ಬರೆಸಬೇಕೆ?'

'ಸದ್ಯಕ್ಕೆ ಅನುವಾದ ಕಡ್ಡಾಯವಿಲ್ಲ. ನಾಮಫಲಕದಲ್ಲಿ ಕನ್ನಡ ಪದಗಳು ಲಕಲಕ ಅನ್ನಬೇಕಷ್ಟೇ'.

'ಕನ್ನಡ ಅನುವಾದ, ಕಾಗುಣಿತ ತಪ್ಪಿಲ್ಲದ ಶುದ್ಧ ಕನ್ನಡವನ್ನು ಇನ್ನೊಂದು ಹಂತದಲ್ಲಿ ಸರ್ಕಾರ ಕಡ್ಡಾಯ ಮಾಡಬಹುದೇನೋ'.

'ಕೆಲವು ವಾಣಿಜ್ಯ ಮಳಿಗೆಗಳಲ್ಲಿ ಕನ್ನಡ ಗೊತ್ತಿಲ್ಲದ ಸಿಬ್ಬಂದಿ ಇರುತ್ತಾರೆ, ಅವರೊಂದಿಗೆ ವ್ಯವಹರಿಸಲು ಕನ್ನಡಿಗರಿಗೆ ಕಷ್ಟವಾಗಬಹುದು. 60 ಪರ್ಸೆಂಟ್ ಕನ್ನಡಿಗರಿಗೆ ಉದ್ಯೋಗ ಕೊಡಿ ಇಲ್ಲವೇ ಸಿಬ್ಬಂದಿಗೆ ಕನ್ನಡ ಕಲಿಸಿ ಅಂತ ಸಲಹೆ ಕೊಡಬೇಕು'.

'ಹಾಗೇ, ಗ್ರಾಹಕರು ಕನ್ನಡದಲ್ಲೇ ವ್ಯವಹರಿಸ-ಬೇಕು ಎಂದು ಕಡ್ಡಾಯ ಮಾಡಿಬಿಟ್ಟರೆ ಕನ್ನಡೇತರರಿಗೆ ವ್ಯವಹಾರ ಕಷ್ಟವಾಗಬಹುದು ಕಣ್ರೀ'.

'ಕನ್ನಡದಲ್ಲಿ ವ್ಯವಹರಿಸುವವರಿಗೆ ಡಿಸ್ಕೌಂಟ್ ಆಫರ್ ನೀಡಬಹುದು, 'ಒಂದೇ ತಿಂಗಳಲ್ಲಿ ಕನ್ನಡ ಕಲಿಯಿರಿ' ಪುಸ್ತಕ ಕೊಟ್ಟು ಗ್ರಾಹಕರನ್ನು ಮಳಿಗೆಗೆ ಆಕರ್ಷಿಸಬಹುದು'.

'ಚಪ್ಪಲಿಗಳನ್ನು ಇಲ್ಲಿಯೇ ಬಿಡಿ ಎನ್ನುವ ರೀತಿಯಲ್ಲಿ, 'ಬ್ಯಾಗ್‌ಗಳನ್ನು ಇಲ್ಲಿಯೇ ಇಡಿ' ಎಂದು ಕೆಲವು ವಾಣಿಜ್ಯ ಮಳಿಗೆಗಳ ಹೊರಗೆ ಬೋರ್ಡ್ ಹಾಕಿದ್ದಾರಂತೆ'.

'ಸ್ಫೋಟ ಪ್ರಕರಣ, ಸ್ಫೋಟಕ ಸುದ್ದಿಗಳಿಂದ ಎಚ್ಚೆತ್ತುಕೊಂಡು ಇಂತಹ ಬೋರ್ಡ್ ಹಾಕಿದ್ದಾರೆ, ಈ ಬೋರ್ಡ್‌ಗಳಲ್ಲಿ 60 ಪರ್ಸೆಂಟ್ ಕನ್ನಡವನ್ನು ಸರ್ಕಾರ ಕಡ್ಡಾಯ ಮಾಡಿಲ್ಲ...' ಅಂದ ಶಂಕ್ರಿ.

ಸಂಗತ

ಡಿಜಿಟಲ್ ಪಯಣ: ಖೆಡ್ಡಾಕ್ಕೆ ಬಿದ್ದೀರಿ

ಸೈಬರ್ ಲೋಕದಲ್ಲಿ ಮೋಸಕ್ಕೆ ಒಳಗಾದವರು ತಕ್ಷಣ ದೂರು ದಾಖಲಿಸಿದರೆ ಮಾತ್ರ ಅಪರಾಧಗಳಿಗೆ ಕಡಿವಾಣ ಹಾಕಲು ಸಾಧ್ಯ

• ಡಾ. ಮುರಳೀಧರ ಕಿರಣಕೆರೆ

ಹೆಚ್ಚುವರಿ ವಿದ್ಯುತ್ ಬಿಲ್ಲು ಕಟ್ಟಲು ಬಂದಿದ್ದ 'ಗೃಹಜ್ಯೋತಿ' ಫಲಾನುಭವಿಯಾದ ಪರಿಚಿತ ರೈತನೊಬ್ಬನನ್ನು ಕೇಳಿದೆ. 'ಇದೊಂದು ಬಿಲ್ಲಿಗೆ ಇಷ್ಟು ದೂರ ಬಂದಿದ್ದಾ? ಆನ್‌ಲೈನ್‌ನಲ್ಲೇ ಸುಲಭವಾಗಿ ಕಟ್ಟಬಹು-ದಿತ್ತಲ್ಲಾ?' ನನ್ನ ಕುತೂಹಲದ ಪ್ರಶ್ನೆಗೆ ಅವರು 'ಮೊದ್ಲು ಕರೆಂಟ್, ಫೋನು, ಡಿಶ್, ಎಲ್‌ಐಸಿ ಅಂತೆಲ್ಲಾ ಎಲ್ಲಾ ಬಿಲ್ಲುಗಳನ್ನು ಆನ್‌ಲೈನ್‌ನಲ್ಲೇ ಕಟ್ತಿದ್ದೆ. ಇತ್ಲಾಗೆ ಮೋಸ ಹೋದ್ಮೇಲೆ ಎಲ್ಲವನ್ನೂ ತೆಗೆದುಹಾಕ್ದೆ. ಈಗ ನನ್ ಹತ್ರ ಫೋನ್‌ಪೇ, ಗೂಗಲ್‌ಪೇ ಯಾವ್ದೂ ಇಲ್ಲ' ಎನ್ನುತ್ತಾ ತನಗಾದ ವಂಚನೆಯ ಕತೆಯನ್ನು ಬಿಚ್ಚಿಟ್ಟಿದ್ದ.

'ಕಾರಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಹಾಕಿಸ್ಬೇಕಿತ್ತು. ಮೊಬೈಲ್‌ಗೆ ಬಂದಿದ್ದ ಲಿಂಕ್ ಬಳಸಿ ಸಾವ್ರ ರೂಪಾಯಿ ಹಾಕಿದೆ. ರೆಡಿಯಾಗಲು ಮೂರು ತಿಂಗಳು ಆಗುತ್ತೆ, ಮೇಲೆ ಮತ್ತೊಂದು ಸಾವ್ರ ಕಟ್ಟಿದ್ರೆ ಹದಿನೈದು ದಿನದೊಳಗೆ ಮನೆ ವಿಳಾಸಕ್ಕೆ ಕಳುಹಿಸ್ತೀವಿ ಅಂದ್ರು. ಹಾಗೇ ಆಗ್ಲಿ ಅಂತ ಮತ್ತೆ ಒಂದು ಸಾವ್ರ ಹಾಕಿದೆ. ದುಡ್ಡು ಹೋಗಿದ್ದೇ ತಡ, ಆ ಸಂಪರ್ಕನೇ ಕಡಿದುಹೋಯ್ತು. ಆಮೇಲೇ ಗೊತ್ತಾಗಿದ್ದು ಅದು ನಕಲಿ ಸೈಟ್ ಅಂತ! ಅಷ್ಟರೊಳಗೆ ನನ್ನ ಫೋನ್ ನಂಬರ್, ಆಧಾರ್, ಇ-ಮೇಲ್ ಐಡಿ ಎಲ್ಲಾ ತಗೊಂಡಿದ್ರು. ಈಗೇನೋ ಹೋಗಿದ್ದು ಎರಡು ಸಾವ್ರ. ಮುಂದೆ ನನ್ನ ಬ್ಯಾಂಕ್ ಅಕೌಂಟಿಂದ ಗೊತ್ತಾಗ್ದಂಗೆ ಹಣ ಲಪಟಾಯಿಸಕ್ಕೆ ಶುರು ಮಾಡಿದ್ರೆ ಅಂತ ವಿಪ್ರೀತ ಹೆದ್ರಿಕೆ ಶುರುವಾಯ್ತು. ಅದಕ್ಕೆ ನನ್ನ ಬ್ಯಾಂಕ್ ಖಾತೆಗೆ ಲಿಂಕ್ ಆಗಿದ್ದ ಎಲ್ಲಾ ಆ್ಯಪ್‌ಗಳನ್ನೂ ತೆಗೆದುಹಾಕ್ಬಿಟ್ಟೆ. ಇನ್ನು ಎಷ್ಟು ಕಷ್ಟ ಆದ್ರೂ ತೊಂದ್ರೆ ಇಲ್ಲ, ಈ ಫೋನ್ ವ್ಯವಹಾರದ ಸಹವಾಸನೇ ಬೇಡ ಅಂತ ನಿರ್ಧಾರ ಮಾಡಿದ್ದೇನೆ' ವಿಷಾದದಿಂದಲೇ ವಿವರಿಸಿದ್ದ ಆ ಯುವ ಕೃಷಿಕ!

ಹೌದು, ಮೊಬೈಲ್, ನೆಟ್ ಬ್ಯಾಂಕಿಂಗ್, ಯುಪಿಐ ಮೂಲಕ ಹಣದ ವ್ಯವಹಾರ ಮಾಡುತ್ತಿರುವ ಬಹುತೇಕರ ಚಿಂತೆ ಈ ಥರದ್ದೇ. ಸರಿಯಾದ ತಿಳಿವಳಿಕೆ ಇಲ್ಲದೆ ನಕಲಿ ಜಾಲಕ್ಕೆ ಬಿದ್ದ ಹಲವರು ದೊಡ್ಡ ಮೊತ್ತದ ದುಡ್ಡು ಕಳೆದುಕೊಂಡು ಕಂಗೆಟ್ಟಿದ್ದಾರೆ. ಹಣ, ಸಮಯ, ಶ್ರಮ ಉಳಿಸುವ, ಒಂದಿನಿತೂ ಒತ್ತಡವಿಲ್ಲದೆ ಕುಳಿತಲ್ಲಿಂದಲೇ ಅತಿ ಸುಲಭದಲ್ಲಿ ನಿರ್ವಹಿಸಬಹು-ದಾದ ಡಿಜಿಟಲ್ ವ್ಯವಹಾರಗಳು ಏರುಗತಿಯಲ್ಲಿವೆ. ಬೆನ್ನಲ್ಲೇ ವಿವಿಧ ನಮೂನೆಯ ಸೈಬರ್ ವಂಚನೆಯ ಪ್ರಕರಣಗಳೂ ಹೆಚ್ಚುತ್ತಾ ಆತಂಕ ತಂದೊಡ್ಡುತ್ತಿವೆ!

ಅದರಲ್ಲೂ ಸರ್ಕಾರದ ಯೋಜನೆಗಳು, ನೇಮಕಾತಿ ಪರೀಕ್ಷೆಗಳು ಘೋಷಣೆಯಾದ ಹೊತ್ತಿನಲ್ಲಿ ಆನ್‌ಲೈನಿನಲ್ಲಿಯೇ ಅರ್ಜಿ ಹಾಕುವುದು, ಶುಲ್ಕ ಪಾವತಿಸುವುದು ಕಡ್ಡಾಯ. ಜನರ ಅನಿವಾರ್ಯ, ಧಾವಂತ, ಮುಗ್ಧತೆ, ಸೈಬರ್ ಅನಕ್ಷರತೆಯನ್ನೇ ಬಂಡ-ವಾಳವಾಗಿಸಿಕೊಳ್ಳುವ ಖದೀಮರು ನಕಲಿ ಲಿಂಕ್, ತಾಣಗಳೆಂಬ ಖೆಡ್ಡಾಕ್ಕೆ ಬೀಳಿಸಿ ಹಣ ಎಗರಿಸುವ ಮಾರ್ಗ ಕಂಡುಕೊಂಡಿರುವುದು ಚಿಂತೆಯ ವಿಷಯ.

ಮನುಕುಲದ ವಿಕಾಸದ ಉದ್ದೇಶದಿಂದ ಹೊಸ ಹೊಸ ಆವಿಷ್ಕಾರಗಳೊಂದಿಗೆ ವೇಗವಾಗಿ ಮುನ್ನಡೆ-ಯುತ್ತಿರುವ ಡಿಜಿಟಲ್ ತಂತ್ರಜ್ಞಾನವು ಹಣಕಾಸು ವಂಚನೆ, ಮಾಹಿತಿ ಕಳ್ಳತನ, ಅನೈತಿಕ ಚಟುವಟಿಕೆಗಳಿಗೆ ದುರ್ಬಳಕೆಯಾಗುತ್ತಾ ವಿನಾಶಕ್ಕೂ ಕಾರಣವಾಗುತ್ತಿರು-ವುದು ದುರ್ದೈವ. ಒಂದಲ್ಲ ಒಂದು ರೀತಿಯಲ್ಲಿ ಬಳಕೆ ಅನಿವಾರ್ಯವಾಗಿರುವ ಈ ದಿನಗಳಲ್ಲಿ ನಮ್ಮ ಸೈಬರ್ ಜಗತ್ತನ್ನು ಹೆಚ್ಚು ಸುರಕ್ಷಿತವಾಗಿ ಇಟ್ಟುಕೊಳ್ಳುವುದೇ ದೊಡ್ಡ ಸವಾಲು.

ಸೈಬರ್ ಲೋಕದಲ್ಲಿ ನಡೆಯುವ ತರತರಹದ ಮೋಸ, ಕಾನೂನುವಿರೋಧಿ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು, ಜಾಗೃತಿ ಶಿಬಿರಗಳು ಜನರನ್ನು ಎಚ್ಚರಿಸುವ ಕೆಲಸವನ್ನು ಮಾಡುತ್ತಿದ್ದರೂ ವಂಚಕರು ವಂಚಿಸಲು ಹೊಸ ಹೊಸ ವಿಧಾನಗಳನ್ನು ಹುಡುಕಿಕೊಳ್ಳುತ್ತಿದ್ದಾರೆ. ಅದರಲ್ಲೂ ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆಯುವ ಅಪರಾಧಗಳ ಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದೆ. ವಂಚನೆಯ ಸಾಧ್ಯತೆಗಳ ಬಗ್ಗೆ ಚೆನ್ನಾಗಿ ಅರಿವಿದ್ದವರೂ ಖೆಡ್ಡಾಕ್ಕೆ ಬೀಳುತ್ತಿರುವುದು ಮತ್ತೊಂದು ಆತಂಕಕಾರಿ ವಿಷಯ.



ಮೋಸಕ್ಕೊಳಗಾದವರು ತಕ್ಷಣ ದೂರು ದಾಖಲಿಸಿದರೆ ಮಾತ್ರ ಅಪರಾಧಗಳಿಗೆ ಕಡಿವಾಣ ಸಾಧ್ಯ. ಮಾಹಿತಿ ಕೊರತೆಯ ಕಾರಣ ಈ ಪ್ರಮಾಣವಂತೂ ತುಂಬಾ ಕಡಿಮೆಯಿದೆ.

ಸೈಬರ್ ಅಪರಾಧಗಳ ಕುರಿತಾಗಿ ಜನಸಾಮಾನ್ಯರಲ್ಲಿ ಎಚ್ಚರ ಮೂಡಿಸುವ ದಿಸೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಹೊರತಂದಿರುವ 'ಸೈಬರ್ ಸುರಕ್ಷಾ ಕ್ಯಾಲೆಂಡರ್- 2024' ಒಂದು ವಿನೂತನ ಹೆಜ್ಜೆ. ಸೈಬರ್ ವಂಚನೆಯ ಇತಿಹಾಸ, ವಂಚನೆಯ ನಮೂನೆಗಳು, ಮೋಸ ಹೋದಾಗ ಯಾರನ್ನು ಸಂಪರ್ಕಿಸಬೇಕು, ಆನ್‌ಲೈನ್‌ನಲ್ಲಿ ಸರಳವಾಗಿ ದೂರು ದಾಖಲಿಸುವ ಕ್ರಮ, ಸಹಾಯವಾಣಿ ಸಂಖ್ಯೆ, ಕಳೆದುಹೋದ ಮೊಬೈಲ್ ಫೋನ್, ಕ್ರೆಡಿಟ್, ಡೆಬಿಟ್ ಕಾರ್ಡ್‌ಗಳನ್ನು ನಿಷ್ಕ್ರಿಯ-ಗೊಳಿಸುವ ವಿಧಾನ, ಮಾಹಿತಿ ತಂತ್ರಜ್ಞಾನ ಕಾಯ್ದೆ-ಯಡಿಯಲ್ಲಿ ವಿವಿಧ ಅಪರಾಧಗಳಿಗೆ ನಿಗದಿಯಾದ ಶಿಕ್ಷೆಯ ಪ್ರಮಾಣ, ಸೈಬರ್ ವಂಚನೆಯಿಂದ ಪಾರಾಗಲು ವಹಿಸಬೇಕಾದ ಮುನ್ನೆಚ್ಚರಿಕೆ... ಹೀಗೆ ಸೈಬರ್ ಸುರಕ್ಷತೆ ಕುರಿತಾದ ಅಮೂಲ್ಯ ಮಾಹಿತಿಗಳ ಕಣಜ ಈ ಡಿಜಿಟಲ್ ಕ್ಯಾಲೆಂಡರ್. ಇದನ್ನು ಬಳಕೆದಾರಸ್ನೇಹಿಯಾಗಿ ವಿನ್ಯಾಸಗೊಳಿಸಿದ ಪೊಲೀಸ್ ಅಧಿಕಾರಿ ಮಂಜುನಾಥ ಲಿಂಗಾರೆಡ್ಡಿ ಅವರಿಗೊಂದು ಸಲಾಂ. ಈ ಕ್ಯಾಲೆಂಡರ್ ಪ್ರತಿ ಮನೆಯನ್ನೂ ತಲುಪಿದರೆ ಸೈಬರ್ ಅಪರಾಧಗಳಿಗೆ ಕಿಂಚಿತ್ತಾದರೂ ಬ್ರೇಕ್ ಬೀಳಬಹುದು!

ಹೌದು, ಶೂನ್ಯ ನಂಬಿಕೆ, ತಾಳಿಕೆ, ದೃಢೀಕರಣದ ನಂತರವಷ್ಟೇ ಮುಂದುವರಿಯುವ ಮೂಲ ತತ್ವವನ್ನು ಪಾಲಿಸಿದಾಗಷ್ಟೇ ನಮ್ಮ ಡಿಜಿಟಲ್ ಪಯಣ ಸುಖಕರವಾಗಿ ಇರಬಲ್ಲದು.

ವಾಚಕರ ವಾಣಿ

ಚುನಾವಣೆಗೆ ಮುನ್ನ ವಿವರ ಪ್ರಕಟವಾಗಲಿ

ಚುನಾವಣಾ ಬಾಂಡ್‌ಗಳನ್ನು ಫೆಬ್ರುವರಿ 15ರಂದು ರದ್ದುಪಡಿಸಿದ್ದ ಸುಪ್ರೀಂ ಕೋರ್ಟ್, ನಿರ್ದಿಷ್ಟ ಅವಧಿಯಲ್ಲಿ ಮಾರಾಟ ಮಾಡಿದ ಬಾಂಡ್‌ಗಳ ವಿವರಗಳನ್ನು ಮಾರ್ಚ್ 6ರೊಳಗೆ ಸಲ್ಲಿಸಲು ಮತ್ತು ಜಾಲತಾಣದಲ್ಲಿ ಪ್ರಕಟಿಸಲು ಭಾರತೀಯ ಸ್ಟೇಟ್ ಬ್ಯಾಂಕ್‌ಗೆ ಸೂಚನೆ ನೀಡಿತ್ತು. ಇದೀಗ ಸ್ಟೇಟ್ ಬ್ಯಾಂಕ್ ಈ ಕಾರ್ಯಕ್ಕೆ ಜೂನ್ 30ರವರೆಗೂ ಕಾಲಾವಕಾಶ ಕೋರಿರುವುದಾಗಿ ವರದಿಯಾಗಿದೆ.

ಈ ಬಾಂಡ್‌ಗಳ ವಿವರವನ್ನು ಮುಂದೆ ಒಂದು ದಿನ ನಿರ್ದಿಷ್ಟ ಮಾದರಿಯಲ್ಲಿ ಸಾರ್ವಜನಿಕವಾಗಿ ಪ್ರಕಟಿಸುವ ಪ್ರಮೇಯ ಬರಲಾರದು ಎಂದು ಬ್ಯಾಂಕ್ ಭಾವಿಸಿದ್ದಿರಬಹುದು. ಇದಕ್ಕಾಗಿ ಕಾಲಾವಕಾಶದ ಅಗತ್ಯ ಇರಲೂಬಹುದು. ಆದರೆ ಬ್ಯಾಂಕ್ ಕೋರಿರುವ ಅವಧಿಯು ಲೋಕಸಭಾ ಚುನಾವಣಾ ದಿನಾಂಕವನ್ನು ಮೀರುವುದರಿಂದ, ಅದರ ನಿರ್ಧಾರ ಆಡಳಿತ ಪಕ್ಷದ ಪರವಾಗಿದೆ ಎಂಬ ಸಂದೇಹಕ್ಕೆ ಕಾರಣವಾಗಿದೆ. ಆದ್ದರಿಂದ ಅಗತ್ಯ ವಿವರಗಳನ್ನು ಕನಿಷ್ಠ ಚುನಾವಣೆ ಪ್ರಾರಂಭದ ಮೊದಲು ಪ್ರಕಟಿಸುವುದು ಒಳ್ಳೆಯದು. ಇದರಿಂದ ಸಂದೇಹ ನಿವಾರಣೆಯಾಗುತ್ತದೆ ಮತ್ತು ಮತದಾರರಿಗೆ ರಾಜಕೀಯ ಪಕ್ಷಗಳ 'ಉದಾರ ದೇಣಿಗೆದಾರರ' ಬಗ್ಗೆ ಅಗತ್ಯ ಮಾಹಿತಿಯೂ ದೊರೆತಂತೆ ಆಗುತ್ತದೆ.

ಹರೀಶ್ ಕುಮಾರ್ ಕುಡ್ತಡ್ಕ, ಮಂಗಳೂರು

ತನಿಖೆ ತಾರ್ಕಿಕ ಅಂತ್ಯ ಕಾಣಬೇಕು

ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ ಎನ್ನಲಾದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿರುವುದು (ಪ್ರ.ವಾ., ಮಾರ್ಚ್ 5) ಪೊಲೀಸರ ದಿಟ್ಟ ಕ್ರಮವಾಗಿದೆ. ಸರ್ಕಾರವು ಪೊಲೀಸರ ತನಿಖೆಯಲ್ಲಿ ಯಾವುದೇ ಹಸ್ತಕ್ಷೇಪ ಮಾಡಿಲ್ಲ, ಅವರು ನಿರ್ಭಯವಾಗಿ ತಮ್ಮ ಕರ್ತವ್ಯ ಮಾಡಿದ್ದಾರೆ ಎಂಬುದು ಇದರಿಂದ ತಿಳಿಯುತ್ತದೆ. ಆದರೆ ಸರ್ಕಾರದ ಹೊಣೆಗಾರಿಕೆ ಇಲ್ಲಿಗೇ ಮುಗಿಯುವುದಿಲ್ಲ. ಮುಂದಿನ ತನಿಖೆ ನಿಷ್ಪಕ್ಷಪಾತವಾಗಿ ನಡೆದು, ಈ ಪ್ರಕರಣಕ್ಕೂ ಕಾಂಗ್ರೆಸ್ಸಿನ ಯಾವುದಾದರೂ ನಾಯಕರಿಗೆ ಏನಾದರೂ ಸಂಬಂಧ ಇದೆಯೇ ಎಂಬುದರ ಸತ್ಯಾಸತ್ಯತೆಯನ್ನೂ ಹೊರತರಬೇಕಾಗಿದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಚಾಣಾಕ್ಷರಿಗೆ ಅನುಕೂಲ ಆಗದಿರಲಿ

ಸದನದಲ್ಲಿ ಮತ ಚಲಾಯಿಸಲು ಅಥವಾ ಮಾತನಾಡಲು ಲಂಚ ಪಡೆಯುವ ಜನಪ್ರತಿನಿಧಿಗಳಿಗೆ ಕಾನೂನು ಕ್ರಮದಿಂದ 1998ರಲ್ಲಿ ವಿನಾಯಿತಿ ನೀಡಿದ್ದ ತನ್ನದೇ ತೀರ್ಪನ್ನು ಇದೀಗ ಸುಪ್ರೀಂ ಕೋರ್ಟ್ ಅಸಿಂಧು-ಗೊಳಿಸಿರುವುದು ಬಲು ಸಂತೋಷದ ವಿಷಯ. ಆದರೆ, 1998 ಮತ್ತು 2024ರ ನಡುವಿನ 26 ವರ್ಷಗಳ ಅಂತರವನ್ನು ಗಮನಿಸಿದರೆ, ದೇಶದ ಸಂವಿಧಾನದಲ್ಲಿನ ವಿಧಿಗಳು ಎಷ್ಟು ಸಂಕೀರ್ಣವಾಗಿವೆ ಮತ್ತು ಅದರಿಂದ ಪ್ರಜ್ಞಾಪೂರ್ವಕವಾಗಿ ವಿವೇಚನೆಯಿಂದ ಕಾರ್ಯನಿರ್ವಹಿಸುವ ನ್ಯಾಯಮೂರ್ತಿಗಳಿಗೂ ಎಷ್ಟು ಕಷ್ಟವಾಗುತ್ತಿದೆ ಎಂಬುದು ಅರ್ಥವಾಗುತ್ತದೆ. ಇವರಿಗೇ ಹೀಗಾದರೆ ಇನ್ನು ಸಾಮಾನ್ಯ ಜನರಿಗೆ ಸಂವಿಧಾನದ ಸಂಕೀರ್ಣ ಭಾಷೆ ಮತ್ತು ಪದಗಳು ಎಷ್ಟು ತೊಡಕನ್ನುಂಟು ಮಾಡಬಹುದು?!

ಏನೇ ಆದರೂ ಸುಪ್ರೀಂ ಕೋರ್ಟ್‌ನ ಈಗಿನ ತೀರ್ಪು ಶ್ಲಾಘನೀಯ. ಆದರೂ ಚಾಣಾಕ್ಷರಾದ ರಾಜಕಾರಣಿಗಳು ಚಾಪೆಯಡಿ ಅವಿತು ನಡೆಸುವ ವ್ಯವಹಾರಗಳಿಗೆ ಅನುಕೂಲ ಕಲ್ಪಿಸುವಂತಹ ವಿಧಿಗಳು ಸಂವಿಧಾನದಲ್ಲಿ ಇನ್ನೂ ಎಷ್ಟಿವೆಯೋ?

ರಮೇಶ್, ಬೆಂಗಳೂರು

ಆ್ಯಸಿಡ್ ಕೊಳ್ಳುವವರ ಪೂರ್ವಾಪರ ಅರಿಯಿರಿ

ದಕ್ಷಿಣ ಕನ್ನಡದ ಉಪ್ಪಿನಂಗಡಿ ಸಮೀಪದ ಕಡಬ ಪದವಿಪೂರ್ವ ಕಾಲೇಜಿನಲ್ಲಿ ಮೂವರು ವಿದ್ಯಾರ್ಥಿನಿಯರ ಮೇಲೆ ಆ್ಯಸಿಡ್ ದಾಳಿ ನಡೆದಿರುವುದು (ಪ್ರ.ವಾ., ಮಾರ್ಚ್ 5) ಆಘಾತಕಾರಿಯಾದ ಸಂಗತಿ. ಇಂತಹ ಕೃತ್ಯ ಎಸಗುವ ಆರೋಪಿಗಳ ವಿರುದ್ಧ ಸರ್ಕಾರ ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ ದಾಳಿಗಳು ನಿಲ್ಲದಿರುವುದಕ್ಕೆ ಮೂಲ ಕಾರಣ ಆ್ಯಸಿಡ್ ಪೂರೈಸುವವರು. ಆ್ಯಸಿಡ್ ಕೊಳ್ಳಲು ಬರುವವರ ಪೂರ್ವಾಪರ ತಿಳಿಯುವಂತೆ ಆ್ಯಸಿಡ್ ಪೂರೈಕೆದಾರರಿಗೆ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಯಾಕಾಗಿ ಅದನ್ನು ಉಪಯೋಗಿಸಲಿದ್ದಾರೆ ಎಂಬ ವಿವರ ಪಡೆಯುವಂತೆ, ಅವರಿಂದ ಆಧಾರ್ ಕಾರ್ಡ್‌ನಂತಹ ದಾಖಲೆಗಳನ್ನು ಪಡೆಯುವಂತೆ ತಿಳಿಸಬೇಕು. ಕೊಡುವ ಮಾಹಿತಿ ಸೂಕ್ತವಾಗಿ ಇಲ್ಲದಿದ್ದರೆ ಅಂತಹವರಿಗೆ ಯಾವುದೇ ಕಾರಣಕ್ಕೂ ಆ್ಯಸಿಡ್ ವಿತರಿಸಬಾರದು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಮನವರಿಕೆಯಾಗಲಿ ಗುಣಮಟ್ಟದ ಶಾಲೆಗಳ ಮಹತ್ವ

ಮೂಡುಬಿದಿರೆಯ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ 6ರಿಂದ 10ನೇ ತರಗತಿವರೆಗಿನ ಉಚಿತ ಶಿಕ್ಷಣಕ್ಕೆ ಪ್ರವೇಶ ಪಡೆಯಲು 19 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದ ಬಗ್ಗೆ ವರದಿಯಾಗಿದೆ (ಪ್ರ.ವಾ., ಮಾರ್ಚ್ 4). ಇವರಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಇದು, ಕನ್ನಡ ಮಾಧ್ಯಮ ಮತ್ತು ಗುಣಮಟ್ಟದ ಶಿಕ್ಷಣದ ಕುರಿತು ಪಾಲಕರ ಒಲವನ್ನು ತೋರಿಸುತ್ತದೆ. ಉತ್ತರ ಕರ್ನಾಟಕದಲ್ಲಿ ನೂರಾರು ಶಾಲೆ ಕಾಲೇಜುಗಳನ್ನು ನಡೆಸುವ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳು, ಮಠಗಳು ಇವೆ. ಕಳಪೆ ಗುಣಮಟ್ಟದ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗಿಂತ ಉತ್ತಮ ಗುಣಮಟ್ಟದ ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯುವ ಬಗ್ಗೆ ಇಂತಹ ಶಿಕ್ಷಣ ಸಂಸ್ಥೆಗಳು ಚಿಂತಿಸಬೇಕು. ಅಂತಹ ಶಾಲೆಗಳನ್ನು ಪಾಲಕರು ಅಪೇಕ್ಷಿಸುತ್ತಾರೆ ಎಂಬುದು ಆಳ್ವಾಸ್ ಶಾಲೆಯ ಪ್ರವೇಶದ ಒತ್ತಡದಿಂದ ಗೊತ್ತಾಗುತ್ತದೆ.

ಅಲ್ಲಲ್ಲಿ ಇರುವ ಕೆಲವು ಗುಣಮಟ್ಟದ ಸರ್ಕಾರಿ ಶಾಲೆಗಳಲ್ಲೂ ಈ ರೀತಿ ಪ್ರವೇಶಾತಿಯ ಒತ್ತಡ ಇರುವುದನ್ನು ಗಮನಿಸಬಹುದು. ಗುಣಮಟ್ಟದ ಕನ್ನಡ ಶಾಲೆಗಳ ಅಭಾವದಿಂದಾಗಿ ಪಾಲಕರು ಇಂಗ್ಲಿಷ್ ಮಾಧ್ಯಮದ ಕಡೆಗೆ ಸರಿ-ಯುತ್ತಿದ್ದಾರೆ. ಒಟ್ಟಾರೆ, ಸರ್ಕಾರಿ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿನ ಬದ್ಧತೆಯ ಅಭಾವದಿಂದಾಗಿ ಈ ರೀತಿಯ ಖಾಸಗಿ ಶಾಲೆಗಳ ಪ್ರವೇಶಾತಿಗೆ ಪಾಲಕರು ದೌಡಾಯಿಸುತ್ತಿದ್ದಾರೆ. ಇಂಗ್ಲಿಷ್ ಮಾಧ್ಯಮ ಶಾಲೆಗಳ ಆಕ್ರಮಣದಿಂದ ಕನ್ನಡವನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಗುಣಮಟ್ಟದ ಕನ್ನಡ ಮಾಧ್ಯಮ ಶಾಲೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಫ್‌ಎಸ್‌ಎಲ್ ವರದಿ ಏನು, ಎತ್ತ...

ವಿಧಿ ವಿಜ್ಞಾನ ಪ್ರಯೋಗಾಲಯಗಳ ಬಗ್ಗೆ ರಾಜ್ಯದಲ್ಲಿ ಈಗ ದೊಡ್ಡ ಮಟ್ಟದ ಚರ್ಚೆ ನಡೆಯುತ್ತಿದೆ. ವಿಧಿ ವಿಜ್ಞಾನ ಎಂಬುದು ನ್ಯಾಯ ತೀರ್ಮಾನದಲ್ಲಿ ಮಹತ್ವದ ಪಾತ್ರವಹಿಸುವ ಒಂದು ವೈಜ್ಞಾನಿಕ ವಿಭಾಗ. ಯಾವುದೇ ಪ್ರಕರಣಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಭೌತಿಕ ಸಾಕ್ಷ್ಯಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ವರದಿ ನೀಡುವುದು ವಿಧಿ ವಿಜ್ಞಾನ ಪ್ರಯೋಗಾಲಯಗಳ ಪ್ರಾಥಮಿಕ ಕರ್ತವ್ಯ. ರಾಜ್ಯ ಮಟ್ಟದಲ್ಲಿ ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯಗಳು ಇದ್ದರೆ, ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯಗಳಿವೆ. ಕೆಲವು ಸ್ವರೂಪದ ಪ್ರಕರಣಗಳಲ್ಲಿ ಖಾಸಗಿ ವಿಧಿ ವಿಜ್ಞಾನ ತಜ್ಞರು ನೀಡಿದ ವರದಿಯನ್ನು ಅಥವಾ ತಜ್ಞ ಅಭಿಪ್ರಾಯವನ್ನು ಪರಿಗಣಿಸಲಾಗುತ್ತದೆ. ಆದರೆ ಡಿಜಿಟಲ್ ಸಾಕ್ಷ್ಯಗಳಿಗೆ ಸಂಬಂಧಿಸಿದಂತೆ ಇಂತಹ ವರದಿ ನೀಡುವ ಅಧಿಕಾರ ದೇಶದ ಕೆಲವೇ ಸರ್ಕಾರಿ ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ ಇದೆ. ಈ ಪ್ರಯೋಗಾಲಯಗಳು ನೀಡುವ ವರದಿಗಳನ್ನಷ್ಟೇ ನ್ಯಾಯಾಲಯಗಳು ಮಾನ್ಯ ಮಾಡುತ್ತವೆ. ಖಾಸಗಿ ಪ್ರಯೋಗಾಲಯಗಳ ವರದಿಗಳನ್ನು ತನಿಖೆಗೆ ಬಳಸಿಕೊಳ್ಳಬಹುದು ಮತ್ತು ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯಗಳ ಮುಂದೆ ಹಾಜರುಪಡಿಸಬಹುದು

ಪ್ರಜಾವಾಣಿ ವಾರ್ತೆ



ವಿಧಾನಸೌಧದ ಆವರಣದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಘೋಷಣೆ ಕೂಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಿ ವಿಜ್ಞಾನ ಪ್ರಯೋಗಾಲಯದ (ಫಾರೆನ್ಸಿಕ್ ಸೈನ್ಸ್ ಲ್ಯಾಬ್-ಎಫ್‌ಎಸ್‌ಎಲ್) ವರದಿಯು ಈಗ ಭಾರಿ ಚರ್ಚೆಯಲ್ಲಿದೆ. ಆ ರೀತಿ ಘೋಷಣೆ ಕೂಗಿದ್ದು ನಿಜ ಎಂದು ಸರ್ಕಾರಿ ಎಫ್‌ಎಸ್‌ಎಲ್ ವರದಿ ಹೇಳುತ್ತದೆ ಎಂದು ರಾಜ್ಯ ಸರ್ಕಾರ ದೃಢಪಡಿಸಿದೆ. ಆದರೆ ಇದರ ಮಧ್ಯೆ ಖಾಸಗಿ ಎಫ್‌ಎಸ್‌ಎಲ್ ವರದಿಯೊಂದೂ ದೊಡ್ಡಮಟ್ಟದಲ್ಲಿ ಹಂಚಿಕೆಯಾಗುತ್ತಿದೆ. ವಿಡಿಯೊ-ಆಡಿಯೊನಂತಹ ಡಿಜಿಟಲ್ ಸಾಕ್ಷ್ಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಅಧಿಸೂಚನೆಯ ಅನ್ವಯ ಅನುಮತಿ ಪಡೆದ ಪ್ರಯೋಗಾಲಯಗಳಷ್ಟೇ ಇಂತಹ ವರದಿ ನೀಡುವ ಅಧಿಕಾರ ಹೊಂದಿವೆ.

ವಿಧಿ ವಿಜ್ಞಾನ ಪರೀಕ್ಷೆಯ ವರದಿಗಳನ್ನು ನ್ಯಾಯಾಲಯಗಳು ಭಾರತೀಯ ಸಾಕ್ಷ್ಯ ಸಂಹಿತೆ (ಈ ಹಿಂದಿನ ಭಾರತೀಯ ಸಾಕ್ಷ್ಯ ಕಾಯ್ದೆ) ಅಡಿ ಪರಿಗಣಿಸುತ್ತವೆ. ಈ ಕಾಯ್ದೆಯ 45ನೇ ಸೆಕ್ಷನ್‌ನಲ್ಲಿ ಇದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಯಾವುದೇ ಸಾಕ್ಷ್ಯ ಅಥವಾ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಅಭಿಪ್ರಾಯದ ಅಗತ್ಯವಿದ್ದರೆ ಅದು ತಜ್ಞರ ಅಭಿಪ್ರಾಯವನ್ನು ಕೇಳಬಹುದು. ಅದು ವಿದೇಶಿ ಕಾನೂನು, ವಿಜ್ಞಾನ, ಕಲೆ (ಬರವಣಿಗೆ ಮತ್ತು ಸಹಿಗೆ ಸಂಬಂಧಿಸಿದಂತೆ), ಧಾರ್ಮಿಕ ಶಾಸ್ತ್ರಗಳು... ಮೊದಲಾದ ವಿಚಾರಗಳಲ್ಲಿ ನ್ಯಾಯಾಲಯವು ತಜ್ಞರ ಅಭಿಪ್ರಾಯವನ್ನು ಪರಿಗಣಿಸುತ್ತದೆ. ಮೊದಲು ವಿಡಿಯೊ ಮತ್ತು ಆಡಿಯೊಗಳನ್ನೂ ಇದೇ ಸೆಕ್ಷನ್‌ಗಳ ಅಡಿಯಲ್ಲಿ ಪರಿಗಣಿಸಲಾಗುತ್ತಿತ್ತು. ಆದರೆ, 2009ರಲ್ಲಿ ಡಿಜಿಟಲ್ ಸಾಕ್ಷ್ಯಗಳಿಗೆ ಸಂಬಂಧಿಸಿದಂತೆ ತಜ್ಞರ ಅಭಿಪ್ರಾಯ ಪಡೆಯಲು ಹೊಸ ಸೆಕ್ಷನ್ ಅನ್ನು ರಚಿಸಲಾಯಿತು.

2009ರಲ್ಲಿ ಭಾರತೀಯ ಸಾಕ್ಷ್ಯ ಕಾಯ್ದೆಗೆ ತಿದ್ದುಪಡಿ ತಂದು 45ಎ ಎಂಬ ಹೊಸ ಸೆಕ್ಷನ್ ಅನ್ನು ಸೇರಿಸಲಾಯಿತು. 'ಎಲೆಕ್ಟ್ರಾನಿಕ್ಸ್ ಸಾಕ್ಷ್ಯಗಳ ಪರಿಶೀಲನಾ ಅಭಿಪ್ರಾಯ' ಎಂದು ಈ ಸೆಕ್ಷನ್ ಅನ್ನು ಹೆಸರಿಸಲಾಗಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 79ಎ ಅಡಿ ಮಾನ್ಯತೆ ಪಡೆದ ಪ್ರಯೋಗಾಲಯಗಳಿಗಷ್ಟೇ ಇಂತಹ ಪರಿಶೀಲನೆ ನಡೆಸಲು ಅವಕಾಶವಿದೆ. ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಗೆಜೆಟ್‌ನಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಕೇಂದ್ರೀಯ ಅಥವಾ ರಾಜ್ಯ ಎಫ್‌ಎಸ್‌ಎಲ್‌ಗಳಿಗೆ ಇಂತಹ ಮಾನ್ಯತೆ ನೀಡಬಹುದು.

ವಿಧಾನಸೌಧದ ಆವರಣದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಘೋಷಣೆ ಕೂಗಿದ್ದರ ಸಂಬಂಧ ಲಭ್ಯವಿರುವುದು ವಿಡಿಯೊ ಸಾಕ್ಷ್ಯ. ಈ ಸಾಕ್ಷ್ಯದ ಪರಿಶೀಲನೆಯನ್ನು ಭಾರತೀಯ ನ್ಯಾಯ ಸಂಹಿತೆಯ 45ಎ ಸೆಕ್ಷನ್ ಅಡಿಯಲ್ಲಿ ನಡೆಸಬೇಕಾಗುತ್ತದೆ. ಅಂತಹ ಪರಿಶೀಲನೆ ನಡೆಸಿ, ವರದಿ ನೀಡುವ ಅಧಿಕಾರ ಇರುವುದು ದೇಶದ 15 ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ ಮಾತ್ರ. ಇವುಗಳಲ್ಲಿ ಭಾರತೀಯ ಸೇನೆಯ ಕೆಲವು ಪ್ರಯೋಗಾಲಯಗಳೂ ಸೇರಿವೆ. ಇನ್ನುಳಿದ ಪ್ರಯೋಗಾಲಯಗಳೆಲ್ಲವೂ ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಅಧೀನದಲ್ಲಿರುವ ಸಂಸ್ಥೆಗಳಾಗಿವೆ. ಬೆಂಗಳೂರಿನ ಸರ್ಜಾಪುರದಲ್ಲಿ ಇರುವ ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೂ ಇಂತಹ ಡಿಜಿಟಲ್ ಸಾಕ್ಷ್ಯಗಳ ಕುರಿತು ವರದಿ ನೀಡುವ ಅಧಿಕಾರವಿದೆ. ಈ ಪ್ರಯೋಗಾಲಯವು ನೀಡುವ ವರದಿಗಳಿಗೆ ನ್ಯಾಯಾಲಯಗಳಲ್ಲಿ ತೂಕ ಹೆಚ್ಚು.

ಖಾಸಗಿ ಪ್ರಯೋಗಾಲಯಗಳೂ ಇಂತಹ ವಿಧಿ ವಿಜ್ಞಾನ ಪರೀಕ್ಷೆಯನ್ನು ನಡೆಸಬಹುದು. ಆದರೆ ಅವುಗಳನ್ನು ನೇರವಾಗಿ ನ್ಯಾಯಾಲಯಗಳಲ್ಲಿ 'ತಜ್ಞರ ಅಭಿಪ್ರಾಯ' ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಇಂತಹ ವರದಿಗಳಲ್ಲಿನ ಅಂಶಗಳನ್ನು ಬಳಸಿಕೊಂಡು ತನಿಖೆಯನ್ನು ನಡೆಸಬಹುದು. ಸರ್ಕಾರಿ ಎಫ್‌ಎಸ್‌ಎಲ್ ನೀಡಿದ ವರದಿಗೆ ವ್ಯತಿರಿಕ್ತ ಆಗಿರುವಂತಹ ವರದಿಯನ್ನು ಖಾಸಗಿ ಎಫ್‌ಎಸ್‌ಎಲ್ ನೀಡಿದ್ದರೆ, ಖಾಸಗಿ ವರದಿಯನ್ನು ಪರಿಶೀಲಿಸಿ ಎಂದು ನ್ಯಾಯಾಲಯವನ್ನು ಕೋರಬ ಹುದು. ಅದರ ಆಧಾರದಲ್ಲಿ ಮತ್ತೆ ವಿಧಿ ವಿಜ್ಞಾನ ಪರೀಕ್ಷೆ ನಡೆಸುವಂತೆ ನ್ಯಾಯಾಲಯವು ಸೂಚಿಸಬಹುದು. ಆದರೆ ಅವೆಲ್ಲವೂ ನ್ಯಾಯಾಧೀಶರ, ನ್ಯಾಯಮೂರ್ತಿಗಳ ವಿವೇಚನೆಗೆ ಬಿಟ್ಟಿದ್ದು ಎಂಬುದು ತಜ್ಞರ ಅಭಿಪ್ರಾಯ.

ವರದಿಯೊಂದರಿಂದಲೇ ಶಿಕ್ಷೆಯಾಗುವುದಿಲ್ಲ...

ಸಾಕ್ಷ್ಯಗಳ ಪರಿಶೀಲನೆಯಲ್ಲಿ ನ್ಯಾಯಾಲಯಗಳು ಎಫ್‌ಎಸ್‌ಎಲ್ ವರದಿಗಳನ್ನು 'ತಜ್ಞರ ಅಭಿಪ್ರಾಯ' ಎಂದಷ್ಟೇ ಪರಿಗಣಿಸುತ್ತವೆ. ಆ ವರದಿಯಲ್ಲಿನ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದು ಅಥವಾ ಅದರ ಆಧಾರದಲ್ಲಿ ತನ್ನದೇ ಪ್ರತ್ಯೇಕ ಅಭಿಪ್ರಾಯವನ್ನು ರೂಪಿಸಿಕೊಳ್ಳಲು ನ್ಯಾಯಾಲಯಕ್ಕೆ ಅವಕಾಶವಿದೆ. 'ಎಫ್‌ಎಸ್‌ಎಲ್ ವರದಿಗಳಲ್ಲಿನ ಅಭಿಪ್ರಾಯಕ್ಕೆ ಪೂರಕವಾಗಿ ಇತರ ಸಾಕ್ಷ್ಯಗಳೂ ಇರಬೇಕು' ಎಂದು ಭಾರತೀಯ ಸಾಕ್ಷ್ಯ ಸಂಹಿತೆಯಲ್ಲಿ ಹೇಳಿಲ್ಲ. ಆದರೂ, ಬಹುತೇಕ ಪ್ರಕರಣಗಳಲ್ಲಿ ನ್ಯಾಯಾಲಯಗಳು ಎಫ್‌ಎಸ್‌ಎಲ್ ವರದಿಗಳ ಆಧಾರದಲ್ಲಿ ಮಾತ್ರ ಪ್ರಕರಣವನ್ನು ಇತ್ಯರ್ಥಪಡಿಸುವುದಿಲ್ಲ.

'ತಜ್ಞರ ಅಭಿಪ್ರಾಯದ ಆಧಾರದ ಮೇಲೆ ಮಾತ್ರ ಯಾವುದೇ ವ್ಯಕ್ತಿಯ ಅಪರಾಧವನ್ನು ನಿಗದಿಮಾಡುವುದು ಮತ್ತು ಶಿಕ್ಷೆ ನೀಡುವುದು ಅಪಾಯಕಾರಿ. ಪೂರಕ ಸಾಕ್ಷ್ಯಗಳ ಅಗತ್ಯವಿದೆ' ಎಂದು ಮೊಹಮ್ಮದ್ ವರ್ಸಸ್ ಸ್ಟೇಟ್ ಆಫ್ ಉತ್ತರ ಪ್ರದೇಶ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತ್ತು. ದೇಶದ ಬೇರೆ ಬೇರೆ ನ್ಯಾಯಾಲಯಗಳೂ ಇದೇ ರೀತಿಯ ಅಭಿಪ್ರಾಯವನ್ನು ಹತ್ತಾರು ಪ್ರಕರಣಗಳಲ್ಲಿ ವ್ಯಕ್ತಪಡಿಸಿವೆ. ಹೀಗಾಗಿ ಎಫ್‌ಎಸ್‌ಎಲ್ ವರದಿ ಅಥವಾ ತಜ್ಞರ ಅಭಿಪ್ರಾಯವೊಂದರ ಆಧಾರದಲ್ಲಿ ನ್ಯಾಯಾಲಯಗಳು ಶಿಕ್ಷೆ ನೀಡುವುದಿಲ್ಲ ಎಂದು ದೃಢವಾಗಿ ಹೇಳಬಹುದು ಎಂದು 'ಎವಿಡೆನ್ಷಿಯರಿ ವ್ಯಾಲ್ಯೂ ಆಫ್ ಫಾರೆನ್ಸಿಕ್ ರಿಪೋರ್ಟ್ಸ್ ಇನ್ ಇಂಡಿಯನ್ ಕೋರ್ಟ್' ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

ಡಿಜಿಟಲ್ ಸಾಕ್ಷ್ಯ ಪರಿಶೀಲನೆ

ಇದು ಡಿಜಿಟಲ್ ಯುಗ. ನಮ್ಮೆಲ್ಲಾ ಸಂವಹನ-ವ್ಯವಹಾರವೂ ಡಿಜಿಟಲೀಕರಣಗೊಂಡಿವೆ. ಡಿಜಿಟಲ್ ಯುಗದಿಂದ ಎಷ್ಟು ಅನುಕೂಲಗಳು ಇವೆಯೋ ಅಷ್ಟೇ ಅನನುಕೂಲಗಳೂ ಇವೆ. ಯಾರನ್ನೇ ಆಗಲಿ, ಬಹುಬೇಗ ಮೋಸಗೊಳಿಸುವ ಗುಣಲಕ್ಷಣಗಳು ಈ ಯುಗದ್ದು. ಹಾಗೆಯೇ, ಇದರ ಬಹುದೊಡ್ಡ ಅನುಕೂಲವು ಇದರ ನಿಖರತೆ. ಇದೇ ಕಾರಣಕ್ಕೆ ಇತ್ತೀಚಿನ ವರ್ಷಗಳಲ್ಲಿ ಅಪರಾಧ ತನಿಖೆಯಲ್ಲಿ ಡಿಜಿಟಲ್ ರೂಪದ ಸಾಕ್ಷ್ಯವು ಹೆಚ್ಚು ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿವೆ. ಹಲವು ಅಪರಾಧ ಪ್ರಕರಣ ಗಳಲ್ಲಿ ಇಂಥ ಆಡಿಯೊ ಅಥವಾ ವಿಡಿಯೊ ಸಾಕ್ಷ್ಯಗಳು ಅಂತಿಮ ನಿರ್ಧಾರಕ್ಕೆ ಬರುವುದಕ್ಕೆ ನೆರವಾಗುತ್ತಿವೆ.

ಎಲ್ಲರ ಕೈಯಲ್ಲಿರುವ ಮೊಬೈಲ್, ಹೆಚ್ಚುತ್ತಿರುವ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಡಿಜಿಟಲ್ ಸಾಕ್ಷ್ಯಗಳ ಮೂಲ ಆಧಾರಗಳಾಗಿವೆ. ಮೊಬೈಲ್ ಮೂಲಕ ಮಾಡುವ ಕರೆಗಳು, ವಾಯ್ಸ್‌ಮೇಲ್‌ಗಳು, ರೆಕಾರ್ಡಿಂಗ್‌ಗಳು, ಕಂಪ್ಯೂಟರ್‌ಗಳಲ್ಲಿನ ಫೈಲ್‌ಗಳು– ಇವು ಡಿಜಿಟಲ್ ರೂಪದ ಸಾಕ್ಷ್ಯಗಳ ಇತರ ಆಧಾರಗಳು.



ಎಂಥದ್ದೇ ಅಪರಾಧ ಪ್ರಕರಣವಿರಲಿ, ಆಡಿಯೊ ಅಥವಾ ವಿಡಿಯೊ ಸಾಕ್ಷ್ಯಗಳು ಪ್ರತ್ಯಕ್ಷ ಸಾಕ್ಷಿಯಂತೆಯೇ ಮಹತ್ವದ್ದಾಗಿರುತ್ತವೆ. ಇವುಗಳು ಡಿಜಿಟಲ್ ರೂಪದಲ್ಲಿ ಇರುವುದರಿಂದಲೇ ಅವನ್ನು ತಿರುಚುವ ಸಂಭವವೂ ಹೆಚ್ಚು. ಆಧುನಿಕ ತಂತ್ರಜ್ಞಾನಗಳು ಹೀಗೆ ತಿರುಚುವ ಸಂಭವವನ್ನು ಹೆಚ್ಚು ಮಾಡಿವೆ. ಇದೇ ವೇಳೆ ಹೀಗೆ ತಿರುಚಿದ್ದನ್ನೂ ಅದೇ ಆಧುನಿಕ ತಂತ್ರಜ್ಞಾನದ ಮೂಲಕ ಪತ್ತೆ ಮಾಡಲೂ ಸಾಧ್ಯವಿದೆ. ಇದೇ ಕಾರಣಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯಗಳು ಪ್ರಮುಖ ಪಾತ್ರ ವಹಿಸುತ್ತವೆ.

ಸತ್ಯಾಸತ್ಯತೆ ಪತ್ತೆ ಹಚ್ಚುವುದು ಹೇಗೆ?

ವಿಧಿವಿಜ್ಞಾನ ಪ್ರಯೋಗಾಲಯಗಳು ಯಾವುದೇ ವಿಡಿಯೊ ಅಥವಾ ಆಡಿಯೊ ಸಾಕ್ಷ್ಯವನ್ನು ಪರಿಶೀಲಿಸಲು ಕೆಲವು ವೈಜ್ಞಾನಿಕ ಮಾದರಿಗಳನ್ನು ರೂಪಿಸಿಕೊಂಡಿವೆ. ಸಾಕ್ಷ್ಯಗಳ ಪರಿಶೀಲನೆಯು ಹೆಚ್ಚು ನಿಖರವಾಗಿ ಆಗುವ ಉದ್ದೇಶದಿಂದ 'ಕಾರ್ಯವಿಧಾನ ಕೈಪಿಡಿ'ಯನ್ನೂ ಕೇಂದ್ರ ಸರ್ಕಾರ ರೂಪಿಸಿದೆ.

- ಆಡಿಯೊ ಅಥವಾ ವಿಡಿಯೊ ಫೈಲ್‌ಗಳು ಯಾವುದೇ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳಲ್ಲಿ ಇದ್ದರೂ ಅದನ್ನು ಡಿಜಿಟಲ್ ವಿಧಿ ವಿಜ್ಞಾನದ ಮೂಲಕ ಪಡೆದುಕೊಳ್ಳಲಾಗುತ್ತದೆ
- ವಿವಿಧ ತಂತ್ರಜ್ಞಾನಗಳ ಮೂಲಕ, ವಿಧಿ ವಿಜ್ಞಾನ ಪರಿಕರಗಳ ಮೂಲಕ ಆಡಿಯೊ ಅಥವಾ ವಿಡಿಯೊ ಫೈಲ್‌ಗಳನ್ನು ಪರಿಶೀಲಿಸಲಾಗುತ್ತದೆ
- ವಿಡಿಯೊ ಸಾಕ್ಷ್ಯದ ಪ್ರತಿ ಫ್ರೇಮ್ ಅನ್ನೂ ಸತ್ಯವೋ ಅಲ್ಲವೊ ಎಂದು ಪರಿಶೀಲಿಸಲಾಗುತ್ತದೆ. ವಿಡಿಯೊದಲ್ಲಿರುವವರ ಮುಖಗಳ ಗುಣಲಕ್ಷಣಗಳನ್ನು ಪತ್ತೆಹಚ್ಚಲಾಗುತ್ತದೆ
- ಆಡಿಯೊ ಸಾಕ್ಷ್ಯಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲಾಗುತ್ತದೆ. ಜೊತೆಗೆ, ಆಡಿಯೊದಲ್ಲಿನ ಧ್ವನಿಯನ್ನು ಪತ್ತೆ ಹಚ್ಚಲಾಗುತ್ತದೆ. ಆಡಿಯೊದಲ್ಲಿರುವ ಧ್ವನಿಗೂ ಅಪರಾಧದಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗುವವರ ಧ್ವನಿಯನ್ನು ಹೋಲಿಕೆ ಮಾಡುವ ಕೆಲಸವನ್ನೂ ಮಾಡಲಾಗುತ್ತದೆ

ಆಧಾರ: ಭಾರತೀಯ ಸಾಕ್ಷ್ಯ ಸಂಹಿತೆ, ಮಾಹಿತಿ ತಂತ್ರಜ್ಞಾನ ಕಾಯ್ದೆ, ಕೇಂದ್ರ ವಿಧಿ ವಿಜ್ಞಾನ ಸೇವೆಗಳ ನಿರ್ದೇಶನಾಲಯ, ರಾಜ್ಯ ವಿಧಿ ವಿಜ್ಞಾನ ಸೇವೆಗಳ ನಿರ್ದೇಶನಾಲಯ, ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಧಿಸೂಚನೆಗಳು

ಏಪ್ರಿಲ್‌ನಲ್ಲಿ ತೆರೆಗೆ 'UI' ಲೋಕ



ಉಪೇಂದ್ರ

'ಉಪ್ಪಿ-2' ರಿಲೀಸ್ ಆದ 9 ವರ್ಷಗಳ ಬಳಿಕ ರಿಯಲ್ ಸ್ಟಾರ್ ಉಪೇಂದ್ರ ನಟಿಸಿ, ಆ್ಯಕ್ಷನ್ ಕಟ್ ಹೇಳಿರುವ 'UI' ಸಿನಿಮಾ ಮಾರ್ಚ್ ಅಂತ್ಯಕ್ಕೆ ಅಥವಾ ಏಪ್ರಿಲ್‌ನಲ್ಲಿ ತೆರೆಗೆ ಬರಲಿದೆ.

ಈಗಾಗಲೇ ಚಿತ್ರದ ಟೀಸರ್ ಹಾಗೂ 'ಚೀಪ್' ಹಾಡಿನ ತುಣುಕು ಬಿಡುಗಡೆಗೊಳಿಸಿರುವ ಉಪೇಂದ್ರ, ಸೋಮವಾರ (ಮಾರ್ಚ್ 4) ಚಿತ್ರದ ಮೊದಲ ಹಾಡನ್ನು ಬಿಡುಗಡೆಗೊಳಿಸಿದರು. 'ಟ್ರೋಲ್ ಆಗುತ್ತೆ.. ಇದು ಟ್ರೋಲ್ ಆಗುತ್ತೆ... ಇನ್‌ಸ್ಟಾದಲ್ಲಿ ತುಂಬಾ ರೀಲ್ಸ್ ಆಗುತ್ತೆ. ಕೆಲ್ಸ ಇಲ್ದೋರಿಗೆ ಟೈಂಪಾಸ್ ಆಗುತ್ತೆ...' ಎನ್ನುವ ಈ ಹಾಡು ಸದ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಟ್ರೋಲ್‌ಗಳ ಜೊತೆಗೆ ಜನರನ್ನು ಕಾಡುತ್ತಿರುವ ಪ್ರಸ್ತುತ ಸಮಸ್ಯೆಗಳ ಬಗ್ಗೆಯೂ ಹಾಡಿನಲ್ಲಿ ದೃಶ್ಯಗಳು ಅಡಗಿವೆ. ಈ ಹಾಡಿಗೆ ನರೇಶ್ ಕುಮಾರ್ ಎಚ್.ಎನ್ ಸಾಹಿತ್ಯವಿದ್ದು, ಐಶ್ವರ್ಯ ರಂಗರಾಜನ್, ಹರ್ಷಿಕಾ ದೇವನಾಥ್, ಬಿ.ಅಜನೀಶ್ ಲೋಕನಾಥ್ ಹಾಗೂ ಅನೂಪ್ ಭಂಡಾರಿ ಹಾಡಿದ್ದಾರೆ. ಶಿವಕುಮಾರ್ ಜೆ. ಕಲಾ ನಿರ್ದೇಶನದಲ್ಲಿ ಹಾಡು ಮೂಡಿಬಂದಿದೆ.

'ಇಂದಿನ ಪರಿಸ್ಥಿತಿ ಈ ಹಾಡಿಗೆ ಬೇಡಿಕೆ ಇಡುತ್ತಿತ್ತು. ಹೀರೊನೊಂದಿಗೆ ಪ್ರೀತಿಯಲ್ಲಿ ಬಿದ್ದು ತನ್ನದೇ ಲೋಕದಲ್ಲಿರುವ ನಾಯಕಿಗೆ ಸೂಕ್ತವಾಗುವಂತೆ, ಹಲವು ಟ್ರೋಲ್‌ಗಳನ್ನು ಬಳಸಿ ಈ ಹಾಡು ಮಾಡಲಾಗಿದೆ. ನಾನು ನರೇಶ್ ಜೊತೆಯಾಗಿ ಕೂತು ಈ ಹಾಡನ್ನು ಸಿದ್ಧಪಡಿಸಿದೆವು. ಇದು ಸುಲಭವಾಗಿರಲಿಲ್ಲ, ಪ್ರಸ್ತುತ ಇರುವ ಟ್ರೋಲ್‌ಗಳಿಂದಲೇ ಹಾಡು, ವಾಕ್ಯಗಳನ್ನು ತೆಗೆದು ಒಂದು ಕಥೆಯ ರೂಪದಲ್ಲಿ ಹಾಡು ಸಿದ್ಧಪಡಿಸಬೇಕಿತ್ತು. ಜನರೇ ಇಷ್ಟಪಟ್ಟಿರುವುದನ್ನು ಹಾಡಾಗಿ ಮಾಡಿದ್ದೇವೆ. 'ಚೀಪ್..'ಸಾಂಗ್ ಶೀಘ್ರದಲ್ಲೇ ಬಿಡುಗಡೆಯಾಗಲಿದೆ. ಸಿನಿಮಾವನ್ನು ಮಾರ್ಚ್ ಅಂತ್ಯಕ್ಕೆ ಅಥವಾ ಏಪ್ರಿಲ್‌ನಲ್ಲಿ ಬಿಡುಗಡೆಗೊಳಿಸಲಾಗುವುದು' ಎಂದಿದ್ದಾರೆ ಉಪೇಂದ್ರ.

ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್‌ಟೈನರ್ಸ್ ಲಾಂಛನದಲ್ಲಿ ಜಿ.ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಈ ಚಿತ್ರವನ್ನು ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ.

ಮಾರ್ಚ್ 15ಕ್ಕೆ 'ಲೈನ್‌ಮ್ಯಾನ್' ತೆರೆಗೆ



ತ್ರಿಗುಣ್

ರಘು ಶಾಸ್ತ್ರಿ ನಿರ್ದೇಶನದ, ತ್ರಿಗುಣ್ ನಾಯಕನಾಗಿ ನಟಿಸಿರುವ 'ಲೈನ್‌ಮ್ಯಾನ್' ಸಿನಿಮಾ ಮಾರ್ಚ್ 15ರಂದು ತೆರೆಕಾಣಲಿದೆ.

ಇತ್ತೀಚೆಗೆ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆ ಮಾಡಿರುವ ಚಿತ್ರತಂಡ, ಹಾಡೊಂದನ್ನು ರಿಲೀಸ್ ಮಾಡಿದೆ. 'ಧರೆಗೆ ದೊಡ್ಡವರು' ಎಂಬ ಜನಪದ ಹಾಡು ಇದಾಗಿದ್ದು, ನಿಂಗಶೆಟ್ಟಿ, ನಿಂಗರಾಜು ಕೆ. ಕಲ್ಲಪ್ಪ ಹಾಗೂ ಶಂಕರ್ ಈ ಹಾಡಿಗೆ ಧ್ವನಿಯಾಗಿದ್ದಾರೆ. ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನ ಈ ಹಾಡಿಗಿದೆ. ಇಂಧನ ಇಲಾಖೆ ಯಲ್ಲಿ ಕೆಲಸ ಮಾಡುವ ಲೈನ್‌ಮ್ಯಾನ್ ಗಳ ಕಥೆಯೊಂದನ್ನು ರಘು ತೆರೆಗೆ ತಂದಿದ್ದಾರೆ. ಚಿತ್ರದಲ್ಲಿ ತ್ರಿಗುಣ್‌ಗೆ, ಕಾಜಲ್ ಕುಂದರ್ ಜೋಡಿಯಾಗಿದ್ದು, ಬಿ. ಜಯಶ್ರೀ, ಮೈಕೊ ನಾಗರಾಜ್, ಹರಿಣಿ, ಅಂಜಲಿ, ಅಪೂರ್ವಶ್ರೀ ಸೇರಿದಂತೆ ದೊಡ್ಡ ತಾರಾಬಳಗವಿದೆ.

'ಭಿನ್ನ', 'ಡಿಯರ್ ಸತ್ಯ' ಸಿನಿಮಾಗಳನ್ನು ನಿರ್ಮಿಸಿರುವ ಪರ್ಪಲ್ ರಾಕ್ ಸಂಸ್ಥೆಯ ಮೂರನೇ ಚಿತ್ರ ಇದಾಗಿದೆ. ಶಾಂತಿ ಸಾಗರ್ ಛಾಯಾಚಿತ್ರಗ್ರಹಣ ಇದ್ದು, ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಸಿನಿಮಾ ತಯಾರಾಗಿದೆ. ಬೆಂಗಳೂರಿನಲ್ಲಿ ನಡೆಯುತ್ತಿರುವ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲೂ ಈ ಸಿನಿಮಾ ಪ್ರದರ್ಶನವಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಣಿಪುರದ್ದು ಎನ್ನಲಾದ ಎರಡು ಫೋಟೊಗಳನ್ನು ಕೊಲಾಜ್ ಮಾಡಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾ ಡುತ್ತಿದೆ. ಒಂದು ಫೋಟೊದಲ್ಲಿ ಬರಡಾಗಿರುವ ಗುಡ್ಡ ಪ್ರದೇಶವಿದೆ. ಇನ್ನೊಂದು ಫೋಟೊದಲ್ಲಿ ಅದೇ ಗುಡ್ಡ ಪ್ರದೇಶವು ಹಸಿರಿನಿಂದ ಕಂಗೊಳಿಸುತ್ತಿದೆ. ಮಣಿಪುರದ ಅರಣ್ಯ ಪ್ರದೇಶಗಳಲ್ಲಿ ಕುಕಿ ಬುಡಕಟ್ಟು ಸಮುದಾಯವು ವಾಸಿಸುತ್ತದೆ. ಈ ಬುಡಕಟ್ಟು ಸಮುದಾಯವು ಮಣಿಪುರಕ್ಕೆ ಬರುವ ಮುನ್ನ ಅರಣ್ಯಗಳು ಹಸಿರಾಗಿದ್ದವು. ಆ ಬುಡಕಟ್ಟು ಸಮುದಾಯವು ಮಣಿಪುರಕ್ಕೆ ಬಂದ ನಂತರ ಅಲ್ಲಿನ ಅರಣ್ಯ ಪ್ರದೇಶವು ನಾಶವಾಗಿದೆ ಎಂದು ಕೊಲಾಜ್ ಮಾಡಲಾದ ಫೋಟೊವನ್ನು ಹಂಚಿಕೊಳ್ಳುತ್ತಾ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಮಣಿಪುರಲ್ಲಿ ಕಳೆದ ಒಂದು ವರ್ಷದಿಂದ ಮೈತೇಯಿ ಸಮುದಾಯ ಹಾಗೂ ಕುಕಿ ಬುಡಕಟ್ಟು ಸಮುದಾಯಗಳ ಮಧ್ಯೆ ಸಂಘರ್ಷ ನಡೆಯುತ್ತಿದೆ. ಈ ಸಂಘರ್ಷದಲ್ಲಿ ನೂರಾರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರವು ಮಣಿಪುರದ ಪ್ರದೇಶದ ಚಿತ್ರಗಳಲ್ಲ. ಅದು ಬ್ರೆಜಿಲ್‌ನ ಮಿನಸ್ ಜೊರೈಜ್ ಪ್ರದೇಶದ್ದಾಗಿದೆ. ಬ್ರಿಟನ್‌ನ 'ಮೆಟ್ರೊ' ಹೆಸರಿನ ಪತ್ರಿಕೆಯೊಂದರಲ್ಲಿ ಇದೇ ಚಿತ್ರಗಳಿರುವ ವರದಿಯೊಂದು 2019ರ ಮೇ ತಿಂಗಳಿನ 4ರಂದು ಪ್ರಕಟಗೊಂಡಿದೆ. ಇಬ್ಬರು ವ್ಯಕ್ತಿಗಳು ಬರಡಾಗಿದ್ದ ಪ್ರದೇಶವನ್ನು ಮರ ನೆಡುವುದರ ಮೂಲಕ ಹಸಿರಾಗಿಸಿದ ವರದಿ ಅದಾಗಿದೆ. ಯುನೆಸ್ಕೊ ಕೂಡ ಈ ಬಗ್ಗೆ ವರದಿ ಪ್ರಕಟಿಸಿದೆ. ಆದ್ದರಿಂದ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರಗಳಿಗೂ ಮಣಿಪುರಕ್ಕೂ ಸಂಬಂಧವಿಲ್ಲ ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಸ್ನೇಹದ ಸಿರಿಗನ್ನಡಿ

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಹೊಟ್ಟೆಕಿಚ್ಚಿನವನಿಗೆ ಎಂದೂ ಸುಖದ ನಿದ್ರೆ ಇರುವುದಿಲ್ಲ. ಬೇರೆಯವರ ಸಂತಸ ಕಂಡು ಕರುಬುವ ಇವನಿಗೆ ನೆಮ್ಮದಿ ಎಂಬುದು ಮೊದಲೇ ಇಲ್ಲ. ಅವನಂತೆ ನಾನೂ ಯಶಸ್ವಿಯಾಗಬೇಕು ಎಂಬ ಹಟ, ಛಲಗಳಿಲ್ಲ. ದುರಹಂಕಾರಿ ಆದವನಿಗೆ ಒಳ್ಳೆಯ ಸ್ನೇಹಿತರೂ ಇರುವುದಿಲ್ಲ. ಇರುವ ಗೆಳೆಯರ ಮನಸ್ಸನ್ನು ತನ್ನ ಒರಟು ಮಾತುಗಳಿಂದ ಮುರಿದು ಅವರನ್ನು ದೂರ ತಳ್ಳುತ್ತಾನೆ. ಒಳ್ಳೆಯ ಮಿತ್ರರು ದಿಢೀರ್ ರೂಪುಗೊಳ್ಳುವುದಿಲ್ಲ. ನಮ್ಮ ಪ್ರೀತಿ, ಅನುಕಂಪ, ಸಹಾಯ, ಮತ್ತು ಉತ್ತಮ ನಡತೆಗಳಿಂದ ಅವರು ಬದುಕಲ್ಲಿ ಸಿಗುತ್ತಾರೆ. ಹತ್ತು ಉತ್ತಮ ದೋಸ್ತಿಗಳು ಸಾವಿರ ಆನೆಗಳ ಬಲವಿದ್ದಂತೆ.

ನಮ್ಮ ಅತ್ಯುತ್ತಮ ದರ್ಪಣ ಎಂದರೆ ಹಳೆಯ ಸ್ನೇಹಿತ. ಆತ ಮನವರಿತು ನುಡಿಯುವ ಮಿತ್ರ. ಒಳ್ಳೆಯ ಗೆಣೆಗಾರರ ನಡುವೆ ಒಂದು ಸಣ್ಣ ಮಾತು, ಚಿಟಿಕೆ ಗಾತ್ರದ ತಪ್ಪು ತಿಳಿವಳಿಕೆ, ಒಡಕನ್ನು ತಂದು ಹಾಕುತ್ತದೆ. ಬಿಟ್ಟಿರಲಾರೆವು ಎಂಬ ಗೆಳೆಯರು ಕೊಚ್ಚಿ ಹಾಕುವಷ್ಟು ಉಗ್ರ ಕೋಪಕ್ಕೂ ಬಂದು ನಿಲ್ಲುತ್ತಾರೆ. ನಡುವೆ ಇದ್ದು ಸರಿ ಮಾಡುವ ಹಿತಮಿತ್ರರಿದ್ದರೆ ಅಲ್ಲಲ್ಲಿಗೆ ಅದು ಸರಿ ಹೋಗಬಹುದು. ದಿನ, ತಿಂಗಳು, ಹಾಗೆ ಉರುಳಿದರೆ ವಿಷದ ಮೂಟೆಯ ಭಾರ ಹೆಚ್ಚಾಗುತ್ತಲೇ ಹೋಗುವುದು. ಮುಗುಳ್ನಕ್ಕು 'ಕ್ಷಮಿಸು ಗೆಳೆಯ' ಎಂದರೆ ಸರಿ ಹೋಗಬಹುದಾದ ಸಣ್ಣ ಕ್ಷಣವಿದು.

ಆದರೆ ಮುನಿಸಿಕೊಂಡ ಮಿತ್ರನಿಗೆ ಅಹಮ್ಮಿಕೆ ಹೆಗಲೇರುತ್ತದೆ. ನಾನು ಸೋಲಲೇ ಬಾರದೆಂಬ ಒಣ ಪ್ರತಿಷ್ಠೆ ನುಗ್ಗಿ ಬರುತ್ತದೆ. ಅದೇ ಸಮಯಕ್ಕೆ ಬೆಂಕಿಯನ್ನು ನಂದಿಸುವ ಬದಲು ಪೆಟ್ರೋಲ್ ಸುರಿಯುವ ಪುಡಿ ಗೆಳೆಯರು ಸಿಕ್ಕೇ ಸಿಗುತ್ತಾರೆ. ಅಮೂಲ್ಯ ಗೆಳೆತನದ ಗಡಿರೇಖೆ ಹಿಗ್ಗಿಸಲು ಇವರು ಸಾಕು. ನರಿಯನ್ನೇ ಮೋಸ ಮಾಡುವ ಛಾತಿ ಇರುವ ಇಂತಹ ಅನಾಹುತಕಾರಿ ಗೆಣೆಕಾರರು ಬಯಸದೆಯೂ ದಕ್ಕುತ್ತಾರೆ.

ನಿಜವಾದ ಸ್ನೇಹಿತ ಖಾಸಗಿ ಮಾತಿಗೆ ಕಿವಿ. ಅಗತ್ಯಬಿದ್ದಾಗ ಸೂಕ್ತ ಸಲಹೆಯ ಮಾರ್ಗದರ್ಶಿ. ನಾವು ಹೇಳದೆ ಮನದಲ್ಲೇ ಉಳಿಸಿಕೊಂಡ ಮಾತುಗಳನ್ನೂ ಕೇಳಿಸಿಕೊಳ್ಳುವ ಸಹನಶೀಲ. ನಮ್ಮನ್ನು ಒಪ್ಪಿಸುವ ರೀತಿ ಈತನಿಗೆ ಚೆನ್ನಾಗಿ ತಿಳಿದಿದೆ. ನಮ್ಮ ಮನಸ್ಸು ಕೂಡ ಅಷ್ಟೆ. ಇವನ ಒಂದು ಅಭಿಪ್ರಾಯಕ್ಕಾಗಿ ಕಾತರಿಸುತ್ತದೆ. ಏಕೆಂದರೆ ಅದೊಂದು ನಂಬಿಕೆ. ಒಳ್ಳೆಯ ಸ್ನೇಹಿತ ಎಂದೂ ಬೇಗ ಕಳೆದು ಹೋಗುವುದಿಲ್ಲ. ಬದುಕಲ್ಲಿ ಸಣ್ಣ ಸಲಹೆಯನ್ನೂ ನೀಡದವನು, ಕಿರು ಸಹಾಯವನ್ನೂ ಮಾಡದವನು ಖಂಡಿತಾ ಗೆಳೆಯನಾಗಲಾರ.

ಹೆಚ್ಚು ಪರಿಚಯದ ಮುಖಗಳಿದ್ದರೂ ಕೆಲವರು ಮಾತ್ರ ಉತ್ತಮ ಸ್ನೇಹಿತರಾಗುತ್ತಾರೆ. ಇಂಥವರನ್ನು ಮತ್ತೆ ಮತ್ತೆ ಸಂಪಾದಿಸಲು ಸಾಧ್ಯವಿಲ್ಲ. ನಮಗೆ ಸಂತಸ ಮತ್ತು ದುಃಖವಾದಾಗ ನಾವು ಯಾರಲ್ಲಿ ಮೊದಲು ಹಂಚಿಕೊಳ್ಳಬೇಕೆಂದು ಕಾತರಿಸುತ್ತೇವೆಯೋ ಅವರೇ ನಮ್ಮ ನಿಜವಾದ ಹೃದಯಗಳು. ಸಮೃದ್ಧಿಯ ಸಮಯದಲ್ಲಿ ಹಲವು ಸ್ನೇಹಿತರು ಖಂಡಿತಾ ಇರುತ್ತಾರೆ. ಆದರೆ ಸಂಕಷ್ಟದ ಸಮಯದಲ್ಲಿ ಉಳಿಯ ಬಲ್ಲವನು ಮಾತ್ರ ಸಾಂತ್ವನ ಹೇಳಬಲ್ಲ ಮಿತ್ರನಾಗಿರುತ್ತಾನೆ.

ಮರದ ಗುರುತು ಹಣ್ಣಿನಿಂದ ತಿಳಿಯುತ್ತದೆಯೇ ಹೊರತು ಅದರ ಎಲೆಗಳಿಂದಲ್ಲ. ಮೇಲುನೋಟದಲ್ಲಿ ಕಾಣುವ ಮನುಷ್ಯನೂ ಹೀಗೆ. ಒಂದು ಮಾಮೂಲಿ ಎಲೆಯಂತೆ. ಅವನೊಳಗಿನ ಒಳಿತೆಂಬ ಹಣ್ಣ ರುಚಿ ಅನುಭವಿಸಿದ ಮೇಲೆಯೇ ಅವನೆಂತಹ ಬೆಲೆಬಾಳುವ ಮರವೆಂಬುದು ತಿಳಿಯುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮಾರ್ಚ್ 6, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣದಶಮಿ ಗಂ. 06-31 ನಂತರ ಏಕಾದಶಿ ಗಂ. 28-14 ನಕ್ಷತ್ರ: ಪೂರ್ವಾಷಾಢ ಗಂ. 14-52 ಯೋಗ: ವ್ಯಾತೀಪತ ಗಂ. 11-33 ಕರಣ: ವಿಷ್ಟಿ ಗಂ.06-31, ಕುಂಭ ಮಾಸದ 22 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 1. ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-47 ಸೂರ್ಯಾಸ್ತ : 06-37 ಮುಸ್ಲಿಂ ದಿನಾಂಕ : 24 ಶಬನ್ ,ದಿನ ವಿಶೇಷ : ವಿಜಯ ಏಕಾದಶಿ, ಸ್ವಾಮಿ ದಯಾನಂದ ಸರಸ್ವತಿಯವರ ಜನ್ಮದಿನ, ಅದೃಷ್ಟ ಸಂಖ್ಯೆ : 8, 3

ಮೇಷ: ಕಾರ್ಮಿಕ ವರ್ಗದವರಲ್ಲಿ ಮೃದು ವರ್ತನೆ ತೋರಿದರೆ ಮಾತ್ರ ಲಾಭವಾಗುವುದು. ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಳ್ಳುವಿರಿ. ಹಣಕಾಸಿನ ಕೊರತೆ ಅಷ್ಟಾಗಿ ಕಾಡದು.

ವೃಷಭ: ಹೊಸ ಯೋಜನೆಗಳನ್ನು ಪ್ರಾರಂಭಿಸಲು ಮತ್ತು ಬಾಕಿ ಉಳಿದ ಕೆಲಸವನ್ನು ಪೂರ್ತಿಗೊಳಿಸಲು ಈ ದಿನ ಪ್ರಶಸ್ತವಾಗಿದೆ. ವ್ಯವಹಾರದಲ್ಲಿ ಪಾಲುದಾರರಿಂದ ಮೋಸ ಹೋಗುವ ಸಾಧ್ಯತೆ ಅತ್ಯಧಿಕವಾಗಿರಲಿದೆ.

ಮಿಥುನ: ನಿತ್ಯದ ವ್ಯವಹಾರಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳಿರುವುದಿಲ್ಲ. ಮೇಲಧಿಕಾರಿ ವರ್ಗದವರಿಗೆ ಲೆಕ್ಕ ಪತ್ರಗಳು ಸಮರ್ಪಕವಾಗಿರುವುದು ಕಂಡುಬರುವುದು. ವಿದ್ಯಾಭ್ಯಾಸದಲ್ಲಿನ ಪ್ರಗತಿ ಕಂಡು ಕಂಡುಬರುವುದು.

ಕರ್ಕಾಟಕ: ಸ್ಪರ್ಧಾ ಮನೋಭಾವದಿಂದ ಉನ್ನತ ಸ್ಥಾನಕ್ಕೆ ಏರಬಹುದು. ಈ ದಿನ ಮಕ್ಕಳಿಂದ ನೆಮ್ಮದಿ ಅಥವಾ ಸಮಾಧಾನದ ಮಾತುಗಳನ್ನು ಕೇಳುವಿರಿ. ಮನದ ಮಾತುಗಳಿಗೆ ಬೆಲೆ ಕೊಡುವುದು ಉತ್ತಮ.

ಸಿಂಹ: ಕಾರ್ಯಕ್ಷೇತ್ರದಲ್ಲಿ ಸಾಕಷ್ಟು ಎಚ್ಚರವಹಿಸದೆ ಅತಿ ವಿಶ್ವಾಸದಿಂದ ಮುಂದುವರಿದರೆ ಅಧಿಕಾರಿ ಜನರಿಂದ ಕಷ್ಟ-ನಷ್ಟಗಳು, ಸ್ಥಾನಮಾನಕ್ಕೆ ಹಾನಿ ಸಂಭವಿಸಬಹುದು. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನರಕ್ಕೇರಲು ಸಕಾಲವಾಗಿದೆ.

ಕನ್ಯಾ: ಉದ್ಯೋಗಸ್ಥ ಮಹಿಳೆಯರಿಗೆ ಅಧಿಕ ಕೆಲಸದ ಜತೆಯಲ್ಲಿ ಹೆಚ್ಚಿನ ಆದಾಯ ಉಂಟಾಗಲಿದೆ. ಸಂಬಂಧಗಳಿಗೆ ಅತಿಯಾಗಿ ಬೆಲೆ ಕೊಡುವ ಸಂಬಂಧಿಕರಿಂದ ಉಂಟಾದ ನೋವು ಮರೆಯಲಾಗದಂತೆ ಆಗುವುದು.

ತುಲಾ: ಬಹಳ ದಿನಗಳಿಂದ ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿದ್ದ ಅತಿ ಹೆಚ್ಚಿನ ವರಮಾನದ ಮಾರ್ಗವನ್ನು ಸ್ನೇಹಿತರೊಬ್ಬರು ತೋರುವರು. ಮೇಲಧಿಕಾರಿಗಳಲ್ಲಿ ಯಾವುದನ್ನೂ ಮುಚ್ಚಿಡಬೇಕಾದ ಅವಶ್ಯಕತೆ ಇರುವುದಿಲ್ಲ.

ವೃಶ್ಚಿಕ: ಮನಸ್ಸಿನ ಭಾವನೆಗಳನ್ನು ಸ್ನೇಹಿತರಲ್ಲಿ ಹೇಳಿಕೊಳ್ಳುವಿರಿ. ಅದರಿಂದಾಗಿ ಬಹಳ ದಿನದಿಂದ ಇದ್ದ ಆತಂಕ ದೂರಾಗುವುದು ಹಾಗೂ ಸಂತಸ ಮೂಡುತ್ತದೆ. ಆದಾಯದಲ್ಲಿ ಏರಿಳಿತವನ್ನು ನೋಡಬೇಕಾಗುತ್ತದೆ.

ಧನು: ಟೆಕ್ಸ್‌ಟೈಲ್ ಉದ್ಯಮದವರಿಗೆ ಅಪಾರ ಲಾಭವಿದ್ದು, ರಫ್ತು ವ್ಯವಹಾರಗಳನ್ನು ಹೆಚ್ಚಿಸಿಕೊಳ್ಳಬಹುದು. ವೈದ್ಯ ವೃತ್ತಿಯಲ್ಲಿನ ಸಾಧನೆಗೆ ಸಾಮಾಜಿಕವಾಗಿ ಗೌರವವನ್ನು ಪಡೆದುಕೊಳ್ಳುವಿರಿ. ಬಿಳಿ ಬಣ್ಣ ಶುಭ ತರಲಿದೆ

ಮಕರ: ಅನ್ವೇಷಣೆಯ ಹಾದಿಯಲ್ಲಿ ಮತ್ತಷ್ಟು ದೂರ ಸಾಗಿದಲ್ಲಿ ಯಶಸ್ಸಿನ ಛಾಯೆ ಕಾಣಲಿದೆ. ಪಾಲುದಾರಿಕೆಯನ್ನು ಮುಂದುವರಿಸುವ ಯೋಚನೆಯು ಸರಿಯಾಗಿರುವುದು. ಷೇರಿನ ವ್ಯವಹಾರದಲ್ಲಿ ಹೆಚ್ಚಿನ ಹಣ ಸಂಗ್ರಹವಾದೀತು.

ಕುಂಭ: ವೃತ್ತಿಪರವಾದ ಕನಸುಗಳ ಸಮೀಪಕ್ಕೆ ಸಾಗಲು ಅಗತ್ಯ ತಯಾರಿ ನಡೆಸಿ. ಲೇವಾದೇವಿ ವ್ಯವಹಾರಗಳಿಂದ ಗಳಿಸಿದ ಹಣ ಒಳ್ಳೆಯ ಕಾರ್ಯಗಳಿಗೆ ಸಹಾಯವಾಗುವುದು. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ.

ಮೀನ: ಮಕ್ಕಳ ವಿಚಾರದಲ್ಲಿ ಮನೆಯವರು ಹೇಳಿಕೊಂಡಿರುವ ಹರಕೆ ತೀರಿಸುವ ಬಗ್ಗೆ ನೆನಪಿರಲಿ .ಹೊಸದನ್ನು ಕಲಿಯುವುದಕ್ಕೆ ಉತ್ಸುಕರಾಗಿರುತ್ತೀರಿ. ವಾದ-ವಿವಾದಗಳನ್ನು ಮಾಡಿದಲ್ಲಿ, ಸಮಸ್ಯೆಗೆ ನಾಂದಿ ಹಾಡಿದಂತಾಗುವುದು.

ಪದಬಂಧ 5612


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಚಾರನ ಒಳ್ಳೆಯ ನಡತೆ (4)
4.ನಗರದಲ್ಲಿರುವ ಚರ್ಮವಾದ್ಯ (3)
5.ಭವ್ಯವಾದ ಆಕೃತಿ (4)
7.ಎಲ್ಲೆಯೊಳಗೆ ತೋರಿದ ಆತುರ (4)
8.ಸ್ವಭಾವಸಿದ್ಧವಾದುದು ಸಜದಲ್ಲಿದೆ (3)
9.ತಿಮ್ಮಪ್ಪನ ನೆಲೆನಾಡು (4)
12.ಇದು ಕನ್ನಡದವನ ಚಾಳೀಸು! (4)
14.ತಿಳಿವಳಿಕೆ ಇಲ್ಲದವ ಮರಕ್ಕೊರಗಿದ್ದಾನೆ (3)
15.ಭೇದಿಯಾಗಲು ಕೊಡುವ ಔಷಧ (4)

ಮೇಲಿಂದ ಕೆಳಕ್ಕೆ

1.ಸಿರಿಯ ಸೊಕ್ಕು! (4)
2.ಸರಿಯಾದ ಭಾಗ (4)
3.ನೇಸರನ ಇನ್ನೊಂದು ಹೆಸರು (2)
6.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
7.ಅಜಗರದ ಹತ್ತಿರ ಕಾಣಿಸಿದ ಆನೆ (2)
8.ಸರತಿ ಸಾಲಿನಲ್ಲಿರುವ ಹೆಂಡತಿ (2)
9.ಈತ ತಿರುಪೆ ಬೇಡುವವನು (3)
10.ರುಚಿಕಟ್ಟಾದ ಅಡುಗೆಯಿದು (4)
11.ಮನಸ್ಸಿನ ಬಯಕೆ (4)
13.ಕವಿತೆ ಬರೆಯುವವನು (2)



5611 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರತಿಫಲ 2.ಪ್ರಪಾತ
4.ಪಲ್ಲವಿ 6.ಉದರ
7.ಸಮೂಹಗಾನ 10.ಸಾರಣೆ
11.ಬಣ್ಣನೆ
13.ಪರೋಕ್ಷ 14.ಹೊಸಬಾಳು

ಮೇಲಿಂದ ಕೆಳಕ್ಕೆ:
1.ಪ್ರತಾಪ 2.ಪ್ರಖರ
3.ತಲೆಗಾಪು 5.ವಿಲಾಸ
6.ಉದಾಹರಣೆ 8.ನವಾಬ
9.ಸಮಾರೋಪ 10.ಸಾಪೇಕ್ಷ
12.ನೆರಳು

ಸುಡೊಕು 5997

7		4		5				3
			1		9	6		5
6		5		3			1	
2					4	1		9
	7	1		8				
4			9			3		7
	4		3		7		2	1
						7		
1	3			2			6	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5996 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1


ರೈಲು ಪ್ರಯಾಣಿಕರಿಗೆ ಸ್ವಿಗ್ಗಿ ಸೇವೆ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿದಂತೆ ದೇಶದ ನಾಲ್ಕು ಪ್ರಮುಖ ರೈಲು ನಿಲ್ದಾಣಗಳಲ್ಲಿ ಮಾರ್ಚ್ 12ರಿಂದ ಪ್ರಯಾಣಿಕರಿಗೆ ಆಹಾರ ಪದಾರ್ಥಗಳನ್ನು ಪೂರೈಸಲು ಸ್ವಿಗ್ಗಿ ಕಂಪನಿ ಸಜ್ಜಾಗಿದೆ.

ಸ್ವಿಗ್ಗಿ ಮತ್ತು ಭಾರತೀಯ ರೈಲ್ವೆ ಅಡುಗೆ ಮತ್ತು ಪ್ರವಾಸೋದ್ಯಮ ನಿಗಮವು (ಐಆರ್‌ಸಿಟಿಸಿ) ಮಂಗಳವಾರ ಈ ಕುರಿತ ಒಡಂಬಡಿಕೆಗೆ ಸಹಿ ಹಾಕಿವೆ.

ಮೊದಲ ಹಂತದಲ್ಲಿ ಬೆಂಗಳೂರು, ಭುವನೇಶ್ವರ, ವಿಶಾಖಪಟ್ಟಣ ಹಾಗೂ ವಿಜಯವಾಡ ನಿಲ್ದಾಣಗಳಲ್ಲಿ ಸೇವೆ ಆರಂಭವಾಗಲಿದೆ. ಹಂತ ಹಂತವಾಗಿ ಈ ಸೇವೆಯನ್ನು 59ಕ್ಕೂ ಹೆಚ್ಚು ನಿಲ್ದಾಣಗಳಿಗೆ ವಿಸ್ತರಿಸಲು ನಿರ್ಧರಿಸಲಾಗಿದೆ. ಪ್ರಯಾಣಿಕರು ಐಆರ್‌ಸಿಟಿಸಿ ಆ್ಯಪ್‌ನಲ್ಲಿ ತಾವು ಖರೀದಿಸಿರುವ ಟಿಕೆಟ್‌ನ ಪಿಎನ್‌ಆರ್ ಸಂಖ್ಯೆ ನಮೂದಿಸಬೇಕು. ಬಳಿಕ ಯಾವ ನಿಲ್ದಾಣಕ್ಕೆ ಆಹಾರ ಪೂರೈಸಬೇಕು ಎಂಬ ಬಗ್ಗೆ ಮುಂಗಡವಾಗಿ ಆರ್ಡರ್ ಮಾಡಬಹುದಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,405
ಇಂದಿನ ಅಂತ್ಯ	22,356
▼	49
ದಿನದ ಕನಿಷ್ಠ	22,269

ವಿನಿಮಯ ದರ

$ ಡಾಲರ್	82.85
£ ಪೌಂಡ್	105.18
€ ಯುರೊ	89.98
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹930 (925)
ಸೂರ್ಯಕಾಂತಿ (ರಿಫೈನ್ಡ್)	₹920 (920)
ಪಾಮೋಲಿನ್	₹885 (878)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹325-430

ದ್ವಿತಳಿ (ಬಿ.ವಿ) ₹322-575

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹164

ಆರ್‌ಎಸ್‌ಎಸ್-5 ₹159

ಗುಡ್ ಲಾಟ್ ₹147

(ಪ್ರತಿ ಕೆ.ಜಿಗೆ)





ಮಂಡ್ಯ ಜಿಲ್ಲೆಯ ಕಿಕ್ಕೇರಿ ಕೇಂದ್ರದಲ್ಲಿ ಕೊಬ್ಬರಿ ಮಾರಾಟಕ್ಕೆ ಹೆಸರು ನೋಂದಾಯಿಸಿಕೊಳ್ಳಲು ಬಂದಿದ್ದ ರೈತರು ಸೋಮವಾರ ರಾತ್ರಿ ಎಪಿಎಂಸಿ ಆವರಣದಲ್ಲಿಯೇ ನಿದ್ರೆಗೆ ಜಾರಿದ್ದರು (ಎಡಚಿತ್ರ). ಚಿಕ್ಕಮಗಳೂರು ಜಿಲ್ಲೆಯ ಬೀರೂರಿನ ನೋಂದಣಿ ಕೇಂದ್ರದ ಮುಂದೆ ಸಾಲುಗಟ್ಟಿ ಕುಳಿತಿರುವ ರೈತರು

6.92 ಲಕ್ಷ ಕ್ವಿಂಟಲ್ ಉಂಡೆ ಕೊಬ್ಬರಿ ಖರೀದಿಗೆ ಮಿತಿ ನಿಗದಿ

30,543 ರೈತರು ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಂಟು ಜಿಲ್ಲೆಗಳಲ್ಲಿ ಎರಡು ದಿನಗಳಿಂದ ಉಂಡೆ ಕೊಬ್ಬರಿ ಮಾರಾಟಕ್ಕೆ ಒಟ್ಟು 30,543 ರೈತರು ಹೆಸರು ನೋಂದಾಯಿಸಿದ್ದಾರೆ.

ಸೋಮವಾರದಂದು 8,740 ರೈತರು, ಒಟ್ಟು 1.07 ಲಕ್ಷ ಕ್ವಿಂಟಲ್ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದರು. ಖರೀದಿ ಕೇಂದ್ರಗಳಲ್ಲಿ ಸರ್ವರ್ ಹಾಗೂ ಇಂಟರ್‌ನೆಟ್ ಸಮಸ್ಯೆಯಿಂದಾಗಿ ಮೊದಲ ದಿನದಂದು ನೋಂದಣಿ ಮಂದಗತಿಯಲ್ಲಿತ್ತು. ಸರದಿ ಸಾಲಿನಲ್ಲಿ ನಿಂತು ಕಾಯ್ದಿದ್ದ ರೈತರು ನಿರಾಸೆ ಅನುಭವಿಸಿದ್ದರು.

ಎರಡನೇ ದಿನವಾದ ಮಂಗಳವಾರ ನೋಂದಣಿ ಪ್ರಕ್ರಿಯೆ ಚುರುಕು ಪಡೆಯಿತು. ಖರೀದಿ ಕೇಂದ್ರಗಳ ಬಳಿ ರೈತರ ದಟ್ಟಣೆ ಕಂಡುಬಂದಿತು.

> **ಕೊಬ್ಬರಿ ಖರೀದಿ ಮಾನದಂಡವು ಅವೈಜ್ಞಾನಿಕವಾಗಿದೆ. ಇದನ್ನು ಸರಿಪಡಿಸಿ ರೈತರಿಗೆ ನ್ಯಾಯ ಒದಗಿಸಿಕೊಡಬೇಕು**
> **ನಾರಾಯಣಸ್ವಾಮಿ,** ರೈತ ಮುಖಂಡ, ಮಂಡ್ಯ

21,803 ರೈತರು, ಒಟ್ಟು 2.64 ಲಕ್ಷ ಕ್ವಿಂಟಲ್ ಕೊಬ್ಬರಿ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದಾರೆ.

ಚಾಮರಾಜನಗರ 5 ಕ್ವಿಂಟಲ್, ಚಿಕ್ಕಮಗಳೂರು 35,791, ಚಿತ್ರದುರ್ಗ 27,162, ಹಾಸನ 71,649, ಮಂಡ್ಯ 33,904, ಮೈಸೂರು 886, ರಾಮನಗರ 2,063 ಮತ್ತು ತುಮಕೂರು ಜಿಲ್ಲೆಯಲ್ಲಿ 93,193 ಕ್ವಿಂಟಲ್ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದಾರೆ.

ಪ್ರಸಕ್ತ ಖುತುವಿನಡಿ ಕೇಂದ್ರ ಸರ್ಕಾರವು ರಾಜ್ಯದಲ್ಲಿ ಒಟ್ಟು 6.92 ಲಕ್ಷ ಕ್ವಿಂಟಲ್ (69,250 ಟನ್) ಕೊಬ್ಬರಿ ಖರೀದಿಗೆ ನಿರ್ಧರಿಸಿದೆ. ಈ ಖರೀದಿ ಪ್ರಮಾಣಕ್ಕೆ ತಲುಪಿದ ತಕ್ಷಣವೇ ನೋಂದಣಿ ಪ್ರಕ್ರಿಯೆ ಸ್ವಯಂಚಾಲಿತವಾಗಿ ಸ್ಥಗಿತವಾಗಲಿದೆ.

ಮಹಾಮಂಡಳಗಳ ಪೋರ್ಟಲ್‌ನಲ್ಲಿ ನೋಂದಣಿಯಾದ ಕೊಬ್ಬರಿ ಬೆಳೆಗಾರರ ದತ್ತಾಂಶವು ನಾಫೆಡ್‌ನ ಇ-ಸಮೃದ್ಧಿ ಪೋರ್ಟಲ್‌ಗೆ ರವಾನೆಯಾದ ನಂತರ ಖರೀದಿ ಆರಂಭವಾಗಲಿದೆ ಎಂದು ನಾಫೆಡ್ ಅಧಿಕಾರಿಗಳು ತಿಳಿಸಿದ್ದಾರೆ.

ನೋಂದಣಿ ಸರಾಗ: ಹಾಸನ ಜಿಲ್ಲೆಯಾದ್ಯಂತ ಕೊಬ್ಬರಿ ಖರೀದಿ ನೋಂದಣಿ ಸರಾಗವಾಗಿ ನಡೆಯಿತು. ಅಂಗವಿಕಲರನ್ನು ನೇರವಾಗಿ ಕರೆತಂದು ನೋಂದಣಿಗೆ ವ್ಯವಸ್ಥೆ ಮಾಡಲಾಗಿದೆ. ಕೇಂದ್ರಗಳ ಆವರಣದಲ್ಲಿ ರೈತರಿಗೆ ಊಟ, ಶಾಮಿಯಾನದ ವ್ಯವಸ್ಥೆಯನ್ನೂ ಮಾಡಲಾಗಿದೆ.

‘ರೈತರು ಸರದಿಯಲ್ಲಿ ಬರುತ್ತಿರುವುದರಿಂದ ನೋಂದಣಿಗೂ ಅನುಕೂಲವಾಗಿದ್ದು, ನಿತ್ಯ 200ಕ್ಕೂ ಹೆಚ್ಚು ನೋಂದಣಿ ಮಾಡಲು ಸಾಧ್ಯವಾಗುತ್ತಿದೆ’ ಎಂದು ಸಿಬ್ಬಂದಿ ತಿಳಿಸಿದರು.

ಎರಡನೇ ದಿನದಂದು ಜಿಲ್ಲಾವಾರು ರೈತರ ನೋಂದಣಿ	
ತುಮಕೂರು	7,582
ಹಾಸನ	5,969
ಮಂಡ್ಯ	2,944
ಚಿಕ್ಕಮಗಳೂರು	2,882
ಚಿತ್ರದುರ್ಗ	2,149
ರಾಮನಗರ	200
ಮೈಸೂರು	72
ಚಾಮರಾಜನಗರ	5

ವೃದ್ಧರಿಗೆ ಕಾಡಿದ ಬೆರಳಚ್ಚು ಸಮಸ್ಯೆ

ಚಿಕ್ಕಮಗಳೂರು: ಕೊಬ್ಬರಿ ಮಾರಾಟಕ್ಕೆ ಹೆಸರು ನೋಂದಣಿ ಮಾಡಿಕೊಳ್ಳಲು ಮುಗಿಬಿದ್ದಿರುವ ರೈತರು, ಸೋಮವಾರ ರಾತ್ರಿಯಿಡೀ ನೋಂದಣಿ ಕೇಂದ್ರದ ಮುಂದೆಯೇ ಮಲಗಿದ್ದರು.

ಕಡೂರಿನಲ್ಲಿ 2, ಬೀರೂರು, ಪಂಚನಹಳ್ಳಿ, ಅಜ್ಜಂಪುರ, ಚಿಕ್ಕಮಗಳೂರು, ತರೀಕೆರೆಯಲ್ಲಿ ತಲಾ ಒಂದು ನೋಂದಣಿ ಕೇಂದ್ರ ತೆರೆಯಲಾಗಿದೆ. ಕಡೂರು ಮತ್ತು ಬೀರೂರಿಗೆ ಸುತ್ತಮುತ್ತಲಿನ ಭಾಗಗಳಿಂದ ಬಂದಿದ್ದ ರೈತರು, ವಾಪಸ್ ಹೋದರೆ ಬೆಳಿಗ್ಗೆ ಬರುವಷ್ಟರಲ್ಲಿ ಸರದಿ ತಪ್ಪುವ ಭೀತಿಯಿಂದ ಅಲ್ಲೇ ಅಳವಡಿಸಿದ್ದ ಶಾಮಿಯಾನದ ಅಡಿಯಲ್ಲಿ ಮಲಗಿದರು.

ರಸ್ತೆಬದಿಯಲ್ಲಿನ ಕ್ಯಾಂಟೀನ್‌ಗಳಲ್ಲಿ ಊಟ, ಉಪಾಹಾರ ಮುಗಿಸಿ ನಸುಕಿನಿಂದಲೇ ಸಾಲಿನಲ್ಲಿ ನಿಂತರು. ಕೆಲ ವೃದ್ಧರ ಬೆರಳಚ್ಚು ಸವೆದಿದ್ದರಿಂದ ಹೊಂದಾಣಿಕೆಯಾಗದೆ ತೊಂದರೆ ಆಗುತ್ತಿರುವುದು ಕಂಡುಬಂದಿತು. ಮೂರು ಕೇಂದ್ರಗಳಲ್ಲಿ ಈ ಪರಿಸ್ಥಿತಿ ಸಾಮಾನ್ಯವಾಗಿತ್ತು.

ಸರ್ವರ್ ಸಮಸ್ಯೆಗೆ ಟೋಕನ್ ಪರಿಹಾರ

ತುಮಕೂರು: ಜಿಲ್ಲೆಯಲ್ಲಿ ಎರಡನೇ ದಿನದಂದು ನೋಂದಣಿಯು ಬಹುತೇಕ ಸುಸೂತ್ರವಾಗಿ ನಡೆಯಿತು.

ಸರ್ವರ್ ಸಮಸ್ಯೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿದ್ದು, ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ಸರದಿ ನಿಂತ ಎಲ್ಲಾ ರೈತರನ್ನು ಒಮ್ಮೆಲೇ ನೋಂದಣಿ ಮಾಡಿಕೊಳ್ಳುವುದು ಕಷ್ಟ ಎಂದು ಅರಿತು ಟೋಕನ್ ನೀಡುವ ವ್ಯವಸ್ಥೆ ಜಾರಿಗೆ ತರಲಾಗಿದೆ.

ಟೋಕನ್ ಪಡೆದವರು ಮರುದಿನ ಬಂದು ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ. ತಿಪಟೂರು ತಾಲ್ಲೂಕಿನಲ್ಲಿ ಮಾತ್ರ ಟೋಕನ್ ನೀಡದೆ ನೇರವಾಗಿ ನೋಂದಣಿ ಮಾಡಲಾಗುತ್ತಿದೆ.

ತುರುವೇಕೆರೆ ಎಪಿಎಂಸಿ ಆವರಣದ ಕಸಬಾ ಕೊಬ್ಬರಿ ಖರೀದಿ ಕೇಂದ್ರದಲ್ಲಿ ಜನಸಂದಣಿ, ನೂಕುನುಗ್ಗಲು ಇತ್ತು. ಟೋಕನ್ ಪಡೆಯಲು ಮಹಿಳೆಯರು, ರೈತರು ಮುಗಿಬಿದ್ದರು.

ಕಿಕ್ಕೇರಿ: ನೋಂದಣಿಗೆ ಜಾಗರಣೆ

ಕಿಕ್ಕೇರಿ (ಮಂಡ್ಯ ಜಿಲ್ಲೆ): ರೈತರು ಸೋಮವಾರ ರಾತ್ರಿ ಪಟ್ಟಣದ ಎಪಿಎಂಸಿಯಲ್ಲಿ ಜಾಗರಣೆ ಇದ್ದು ಮಂಗಳವಾರ ಸರದಿಗಾಗಿ ಕಾದರು. ಕೆಲಕಾಲ ಗದ್ದಲ ಉಂಟಾಯಿತು. ಪೊಲೀಸರ ಮಾತಿಗೂ ಕಿವಿಗೊಡಲಿಲ್ಲ. ತಹಶೀಲ್ದಾರ್ ನಿಸರ್ಗಪ್ರಿಯ ಸ್ಥಳಕ್ಕೆ ಬಂದು ರೈತರನ್ನು ಸಮಾಧಾನಪಡಿಸಿದರು. ಸೋಮವಾರ 130 ರೈತರು ನೋಂದಣಿಯಾಗಿದ್ದು, 800 ರೈತರಿಗೆ ಟೋಕನ್ ವಿತರಿಸಲಾಗಿತ್ತು. ಹೀಗಾಗಿ ನೋಂದಣಿ ಮಾಡಿಸಿಯೇ ಮನೆಗೆ ತೆರಳಲು ನಿಶ್ಚಯಿಸಿದ ಬಹುತೇಕರು ಮಾರುಕಟ್ಟೆ ಆವರಣದಲ್ಲಿ ಊಟ ತಿಂಡಿ ಲೆಕ್ಕಿಸದೇ ಇಡೀ ರಾತ್ರಿ ಕಳೆದರು. ನೀರು, ಶೌಚಾಲಯ ವ್ಯವಸ್ಥೆ ಸಿಗದೆ ಪರದಾಡಿದರು.

ವ್ಯವಹಾರ ವಿಭಜನೆಗೆ ಟಾಟಾ ತೀರ್ಮಾನ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನ ಮತ್ತು ವಾಣಿಜ್ಯ ವಾಹನ ಉದ್ಯಮಗಳಾಗಿ ಟಾಟಾ ಮೋಟರ್ಸ್ ವ್ಯವಹಾರದ ವಿಭಜನೆಗೆ ಕಂಪನಿಯ ಆಡಳಿತ ಮಂಡಳಿಯು ಸೋಮವಾರ ಒಪ್ಪಿಗೆ ನೀಡಿದೆ.

ಮಾರುಕಟ್ಟೆಯಲ್ಲಿನ ಬೆಳವಣಿಗೆಯ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಲು ಈ ನಿರ್ಧಾರ ಕೈಗೊಳ್ಳಲಾಗಿದೆ. ವಾಣಿಜ್ಯ ವಾಹನಗಳ ವ್ಯವಹಾರ ಹಾಗೂ ಅದಕ್ಕೆ ಸಂಬಂಧಿಸಿದ ಹೂಡಿಕೆಯು ಒಂದು ವಿಭಾಗದಲ್ಲಿ ಇರುತ್ತದೆ. ಎಲೆಕ್ಟ್ರಿಕ್ ವಾಹನಗಳು, ಜಾಗ್ವಾರ್ ಲ್ಯಾಂಡ್ ರೋವರ್ ಸೇರಿದಂತೆ ಪ್ರಯಾಣಿಕ ವಾಹನಗಳ ವ್ಯವಹಾರ ಹಾಗೂ ಅದಕ್ಕೆ ಸಂಬಂಧಿಸಿದ ಹೂಡಿಕೆಯು ಮತ್ತೊಂದು ವಿಭಾಗದಲ್ಲಿ ಇರುತ್ತದೆ ಎಂದು ಟಾಟಾ ಮೋಟರ್ಸ್, ಷೇರುಪೇಟೆಗೆ ತಿಳಿಸಿದೆ.


ಕಂಪನಿಯ ಈ ತೀರ್ಮಾನಕ್ಕೆ ಷೇರುದಾರರು, ಸಾಲಗಾರರು ಹಾಗೂ ಸೆಬಿ ಅನುಮತಿ ನೀಡಬೇಕಿದೆ. ಹಾಗಾಗಿ, ಈ ಪ್ರಕ್ರಿಯೆ ಪೂರ್ಣಗೊಳ್ಳಲು 15 ತಿಂಗಳು ಬೇಕಿದೆ.

ಷೇರಿನ ಮೌಲ್ಯ ಶೇ 3.50ರಷ್ಟು ಏರಿಕೆ: ವ್ಯವಹಾರ ವಿಭಜನೆಯ ಘೋಷಣೆ ಹೊರಬಿದ್ದ ಬೆನ್ನಲ್ಲೇ ಟಾಟಾ ಮೋಟರ್ಸ್‌ನ ಷೇರಿನ ಮೌಲ್ಯ ಮಂಗಳವಾರ ಶೇ3.50ರಷ್ಟು ಏರಿಕೆಯಾಗಿದೆ. ಸೆನ್ಸೆಕ್ಸ್‌ನಲ್ಲಿ ಶೇ 3.52 ಮತ್ತು ನಿಫ್ಟಿಯಲ್ಲಿ ಶೇ 3.58ರಷ್ಟು ಏರಿಕೆಯಾಗಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹1,021.95 ಮತ್ತು ₹1,022.60ಕ್ಕೆ ತಲುಪಿದೆ. ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹11,588 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ-ಕ್ಯಾಪ್ ₹3.39 ಲಕ್ಷ ಕೋಟಿಗೆ ಮುಟ್ಟಿದೆ.

ಷೇರು ಸೂಚ್ಯಂಕಗಳು ಇಳಿಕೆ: ಸೆನ್ಸೆಕ್ಸ್ 195 ಅಂಶ ಇಳಿಕೆಯಾಗಿ 73,677ಕ್ಕೆ ಸ್ಥಿರಗೊಂಡಿತು. ನಿಫ್ಟಿ 49 ಅಂಶ ಕಡಿಮೆಯಾಗಿ 22,356ಕ್ಕೆ ಕೊನೆಗೊಂಡಿತು.



ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಎಚ್.ಕೆ.ಜಿ. ಶೆಟ್ಟಿ, ಊರು ತಿಳಿಸಿಲ್ಲ.

- **ಪ್ರಶ್ನೆ: ಪ್ರಸ್ತುತ ನಾನು ಪಂಜಾಬ್ ನ್ಯಾಷನಲ್ ಬ್ಯಾಂಕಿನ 4,300 ಷೇರುಗಳನ್ನು ಹೊಂದಿದ್ದು, ಇದರಲ್ಲಿ ಸುಮಾರು 3,000 ಷೇರುಗಳನ್ನು ನನ್ನ ಮಗನಿಗೆ ವರ್ಗಾಯಿಸಬೇಕೆಂದಿದ್ದೇನೆ. ಈ ವರ್ಗಾವಣೆಗೆ ಸಂಬಂಧಿಸಿ ತೆರಿಗೆ ಲೆಕ್ಕ ಹಾಕುವಾಗ ನಾವು ಉಡುಗೊರೆಯಾಗಿ ವರ್ಗಾವಣೆ ಮಾಡಿದ ದಿನಾಂಕವನ್ನು ಪರಿಗಣಿಸಬೇಕೇ ಅಥವಾ ನಾನು ಷೇರು ಖರೀದಿ ಮಾಡಿದ ಮೂಲ ದಿನಾಂಕವನ್ನು ಪರಿಗಣಿಸಬೇಕೇ? ನಾನು ಖರೀದಿ ಮಾಡಿದ ದಿನಾಂಕ ಪರಿಗಣಿಸಿದರೆ ₹1 ಲಕ್ಷದ ತೆರಿಗೆ ವಿನಾಯಿತಿ ಸಿಗುತ್ತದೆ. ಈ ಬಗ್ಗೆ ತಿಳಿಸಿ.**

ಉತ್ತರ: ನಿಮ್ಮ ಬಳಿ ಇರುವ ಷೇರುಗಳಲ್ಲಿ ಒಂದಷ್ಟು ಷೇರುಗಳನ್ನು ಮಗನ ಹೆಸರಿಗೆ ವರ್ಗಾಯಿಸುವ ಸಂಬಂಧ, ಬರಬಹುದಾದ ತೆರಿಗೆಯ ಬಗ್ಗೆ ವಿಚಾರಿಸಿದ್ದೀರಿ. ಸಮೀಪದ ಬಂಧುಗಳ ವ್ಯಾಖ್ಯೆಯ ವ್ಯಾಪ್ತಿಯಲ್ಲಿ ಒಳಪಡುವ ವ್ಯಕ್ತಿಗಳಾದ ತಂದೆ- ತಾಯಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಇತ್ಯಾದಿ ವ್ಯಕ್ತಿಗಳ ನಡುವಿನ ಆರ್ಥಿಕ ವ್ಯವಹಾರಕ್ಕೆ ಕೆಲವು ತೆರಿಗೆ ವಿನಾಯಿತಿಗಳಿವೆ. ಹೀಗಾಗಿ, ಅಂತಹ ಆರ್ಥಿಕ ವ್ಯವಹಾರ ‘ಉಡುಗೊರೆ’ಯ ರೂಪದಲ್ಲಿದ್ದರೆ, ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 56(2)(ಎಕ್ಸ್)ನಲ್ಲಿ ಹೇಳಿರುವ ವಿವರಣೆಯಂತೆ ಅವುಗಳನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲಾಗುತ್ತದೆ. ಹೀಗಾಗಿ, ಉಡುಗೊರೆಯಾಗಿ ವರ್ಗಾಯಿಸುವ ಇಂತಹ ಷೇರುಗಳಿಗೆ ಸಂಬಂಧಿಕರೊಳಗೆ ವರ್ಗಾವಣೆಯಾದ ಸಂದರ್ಭದಲ್ಲಿ ತೆರಿಗೆ ಇರುವುದಿಲ್ಲ. ನಿಮ್ಮ ವಿಚಾರದಲ್ಲಿ, ನಿಮ್ಮ ಮಗ ತೆರಿಗೆ ಪಾವತಿಸಬೇಕಾದುದು ನೀವು ನೀಡಿರುವ ಷೇರುಗಳನ್ನು ಮಾರಾಟ ಮಾಡುವ ಸಂದರ್ಭದಲ್ಲಷ್ಟೇ.

ಆದರೆ, ಯಾವುದೇ ವರ್ಗಾವಣೆಗೊಂಡ ಷೇರುಗಳನ್ನು ನಂತರದ ಹಂತದಲ್ಲಿ ಮಾರಾಟ ಮಾಡುವಾಗ ಸಹಜವಾಗಿ ತೆರಿಗೆ ಇರುತ್ತದೆ. ಇದಕ್ಕೆ ಸಂಬಂಧಿಸಿ, ಖರೀದಿ ಮೌಲ್ಯವನ್ನು ಲೆಕ್ಕ ಹಾಕುವಾಗ ಮೂಲ ಷೇರುದಾರರು, ಅಂದರೆ ನೀವು ಪಾವತಿಸಿದ ಮೌಲ್ಯವನ್ನೇ ಖರೀದಿ ಮೊತ್ತವೆಂದು ಪರಿಗಣಿಸಲಾಗುತ್ತದೆ. ಅದೇ ರೀತಿ ನೀವು ಖರೀದಿಸಿದ ದಿನಾಂಕವನ್ನೇ ಪರಿಗಣಿಸಿ ಹೂಡಿಕೆಯ ಸಮಯಾನುಸಾರ ದೀರ್ಘಾವಧಿ ಅಥವಾ ಅಲ್ಪಾವಧಿ ಹೂಡಿಕೆ ಎಂಬುದನ್ನು ನಿರ್ಧರಿಸಲಾಗುತ್ತದೆ.

ಈ ಬಗ್ಗೆ ಅಗತ್ಯವಿರುವ ವರ್ಗಾವಣೆ ದಾಖಲೆಯನ್ನು ಬ್ರೋಕರ್ ಮೂಲಕ ಪಡೆದು ಇಟ್ಟುಕೊಳ್ಳಿ ಹಾಗೂ ನೀವು ಗಿಫ್ಟ್ ಡೀಡ್ ಬರೆಯಿಸಿಟ್ಟುಕೊಳ್ಳಿ. ನಿಮ್ಮ ಡಿಮ್ಯಾಟ್ ಖಾತೆಯಿಂದ ಅವರ ಖಾತೆಗೆ ವರ್ಗಾಯಿಸುವ ವರ್ಗಾವಣೆ ಪತ್ರವನ್ನೂ ನಿಮ್ಮ ಬ್ರೋಕರ್‌ಗೆ ಸಹಿ ಮಾಡಿ ಕೊಡಿ.

ಮಂಜು ಜಿ.ಬಿ., ಊರು ತಿಳಿಸಿಲ್ಲ.

- **ಪ್ರಶ್ನೆ: ನಮ್ಮದು ಕೂಡು ಕುಟುಂಬ. ನಾಲ್ವರು ಅಣ್ಣ–ತಮ್ಮಂದಿರು. ನಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಇದೆ. ಈಗ ಮನೆಯಲ್ಲಿ ಆಸ್ತಿ ಹಂಚಿಕೆ ಮಾಡಲಾಗಿದೆ. ಅದರ ಪ್ರಕಾರ ನಾಲ್ವರು ಸದಸ್ಯರಲ್ಲಿ ಮೂವರಿಗೆ ಆಸ್ತಿ ಹಂಚಿಕೆ ಆಗಿರುತ್ತದೆ. ಕಾರಣ ಇನ್ನೊಬ್ಬರು ದೈವಾಧೀನರಾಗಿದ್ದು, ಅವರಿಗೆ ಯಾವುದೇ ಆಸ್ತಿ ಬೇಡವೆಂದು ಹೇಳಿದ್ದರು. ಹಾಗಾಗಿ, ಅವರಿಗೆ ಆಸ್ತಿ ಹಂಚಿಕೆ ಮಾಡಿರುವುದಿಲ್ಲ. ಈಗ ನಾವು ಮೂವರು ಸಹೋದರರು ಅವರ ಮನೆಯವರಿಗೆ ಸ್ವಲ್ಪ ಹಣ ಕೊಡಲು ಸ್ವಯಂ ಪ್ರೇರಿತವಾಗಿ ಇಚ್ಛಿಸಿದ್ದೇವೆ. ಈಗ ಹಣವನ್ನು ಅವರಿಗೆ ಯಾವ ರೀತಿಯಲ್ಲಿ ಕೊಡಬಹುದು ತಿಳಿಸಿ. ಹಾಗೆಯೇ, ಆದಾಯ ತೆರಿಗೆ ವಿನಾಯಿತಿ ಸಿಗುವ ಬಗ್ಗೆಯೂ ತಿಳಿಸಿ.**

ಉತ್ತರ: ಸಾಮಾನ್ಯವಾಗಿ ಮನೆಯ ಆಸ್ತಿ ಹಂಚಿಕೆಯಾದಾಗ ವಾಸ್ತವ ದೃಷ್ಟಿಯಿಂದ ಕೆಲವು ಸ್ವತ್ತುಗಳನ್ನು ಸಮಾನವಾಗಿ ಪಾಲು ಮಾಡಲು ಕಷ್ಟವಾಗಬಹುದು ಅಥವಾ ಆ ರೀತಿ ಹಂಚಿಕೆ ಮಾಡುವುದು ಆಸ್ತಿಯ, ವಸ್ತುಗಳ ಉಪಯುಕ್ತತೆಗೆ ಬಾಧ್ಯವಾಗುವ ಕಾರಣ ಸಾಧ್ಯವಾಗಲಾರದು. ಇನ್ನೂ ಕೆಲವೊಮ್ಮೆ ಎಲ್ಲಾ ಮಂದಿ ಪಿತ್ರಾರ್ಜಿತ ಸ್ವತ್ತುಗಳಲ್ಲಿ ಆಸಕ್ತಿ ಹೊಂದಿರದೆ ಇರಬಹುದು. ಇಂತಹ ಸಂದರ್ಭದಲ್ಲಿ ಮೂಲ ಪಾಲುದಾರರೊಳಗೆ ಆಂತರಿಕ ಒಡಂಬಡಿಕೆ ಮಾಡಿಕೊಂಡು ಅಂತಹ ಆಸ್ತಿಗೆ ಪ್ರಸ್ತುತ ಮೌಲ್ಯ ಕಟ್ಟಿ ಯಾರು ಆಸ್ತಿ ಪಾಲನ್ನು ಬಿಟ್ಟುಕೊಡುತ್ತಾರೋ ಅವರಿಗೆ ಹಣದ ರೂಪದಲ್ಲಿ ಪಾಲು ಸಂದಾಯ ಮಾಡುವ ಸಂದರ್ಭಗಳೂ ಇವೆ. ಇದಕ್ಕಾಗಿ ಯಾರು ತಮ್ಮ ಹಕ್ಕು ಬಿಟ್ಟು ಕೊಡಲು ಒಪ್ಪಿಕೊಳ್ಳುತ್ತಾರೋ ಅವರು ಪರಸ್ಪರ ಪಾಲುದಾರೊಳಗೆ ‘ಹಕ್ಕು ತ್ಯಾಗಪತ್ರ’ ಬರೆಸಿಕೊಳ್ಳುವ ಮೂಲಕ ದಾಖಲೆಗಳನ್ನು ಇರಿಸಿಕೊಳ್ಳಬೇಕು.

ಇದಕ್ಕೆ ಪ್ರತಿಯಾಗಿ ಹಕ್ಕನ್ನು ತ್ಯಾಗ ಮಾಡಿದ ವ್ಯಕ್ತಿ ಪಡೆಯುವ ಹಣದ ಮೊತ್ತ ಆಸ್ತಿಗೆ ಸಂಬಂಧಿಸಿದ್ದಾಗಿದೆ ಎಂದು ಪರಿಗಣಿಸಲಾಗುತ್ತದೆ. ಆದಾಯ ತೆರಿಗೆಯಡಿ ಆಸ್ತಿ ವರ್ಗಾವಣೆಗೆ ಸಂಬಂಧಿಸಿ ಇರುವ ವರ್ಗಾವಣೆಗೆ ಸಂಬಂಧಿಸಿದ ಸೆಕ್ಷನ್ 2(47) ಅನ್ವಯ ಯಾವುದೇ ಆಸ್ತಿಯ ಹಕ್ಕನ್ನು ತ್ಯಾಗ ಮಾಡುವಾಗ ಅಂತಹ ಆಸ್ತಿ ಪರರ ಸ್ವಾಧೀನಕ್ಕೆ ಹೋಗುತ್ತದೆ ಹಾಗೂ ಇದು ‘ವರ್ಗಾವಣೆ’ಯ ಉಲ್ಲೇಖದಡಿ ಬರುತ್ತದೆ. ಈ ಸಂದರ್ಭದಲ್ಲಿ ಪಡೆಯುವ ಮೊತ್ತವನ್ನು ಸ್ವೀಕರಿಸಿದವರ ಹೆಸರಲ್ಲಿ ತೆರಿಗೆಗೆ ಒಳಪಡಿಸಲಾಗುತ್ತದೆ.

ನಿಮ್ಮ ವಿಚಾರದಲ್ಲಿ ಒಬ್ಬರು ಸಹೋದರರು ಪ್ರಸ್ತುತ ಇಲ್ಲದ ಕಾರಣ ಹಾಗೂ ಅವರು ಯಾವುದೇ ಆಸ್ತಿಯಲ್ಲಿ ಪಾಲು ಬೇಡವೆಂದು ಮೊದಲೇ ಹೇಳಿದ್ದರೂ, ಅವರ ಪಾಲಿನ ಆಸ್ತಿ ಅಥವಾ ಮೊತ್ತವನ್ನು ಮರಣಾ ನಂತರ ಮಾಡಲಾಗುತ್ತಿರುವ ಆಸ್ತಿ ಹಂಚಿಕೆಯಲ್ಲಿ, ಆಸ್ತಿಯ ಬದಲಾಗಿ ಅವರ ಹೆಂಡತಿ, ಮಕ್ಕಳಿಗೆ ಹಣದ ಮೂಲಕ ನೀವು ಕೊಡುತ್ತಿದ್ದೀರಿ. ನಿಮ್ಮ ಮಾಹಿತಿಯಂತೆ, ನಿಮ್ಮ ಸಹೋದರರು ಆಸ್ತಿಯಲ್ಲಿ ಪಾಲು ಬೇಡವೆಂದು ತಿಳಿಸಿರುವುದು ಮೌಖಿಕ ಮಾತಿನಂತಿದೆ. ಹೀಗಾಗಿ, ಆ ಸಂಬಂಧ ಅವರ ಪಾಲಿನ ಆಸ್ತಿಗಾಗಿ ಮುಂದಿನ ವಾರಸುದಾರರಿಂದ ಅಗತ್ಯವಿರುವ ಹಕ್ಕು ತ್ಯಾಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ದಾಖಲಿಸಿಟ್ಟುಕೊಳ್ಳಿ. ಇದಕ್ಕಾಗಿ ನೀವು ಅಗತ್ಯವಾಗಿ ಕಾನೂನು ಸಲಹೆಯನ್ನೂ ಪಡೆದುಕೊಳ್ಳಿ. ತೆರಿಗೆಗೆ ಸಂಬಂಧಿಸಿ, ಗ್ರಾಮೀಣ ಕೃಷಿ ಭೂಮಿಯನ್ನು ಹೊರತುಪಡಿಸಿ ಉಳಿದ ಎಲ್ಲ ಆಸ್ತಿಯೂ ತೆರಿಗೆ ವ್ಯಾಪ್ತಿಗೆ ಬರುತ್ತದೆ. ಈ ಸಂಬಂಧ ಪೂರ್ಣ ತೆರಿಗೆ ಲೆಕ್ಕಾಚಾರಕ್ಕೆ ಅಗತ್ಯ ದಾಖಲೆಗಳೊಂದಿಗೆ ತೆರಿಗೆ ಸಲಹೆಯನ್ನು ವಿಸ್ತೃತವಾಗಿ ಪಡೆದುಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಆ್ಯಪ್ ಮರುಸ್ಥಾಪನೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಪ್ಲೇ ಸ್ಟೋರ್‌ನಿಂದ ತೆಗೆದು ಹಾಕಿದ್ದ ಆ್ಯಪ್‌ಗಳನ್ನು ಮರುಸ್ಥಾಪಿಸಲು ಗೂಗಲ್ ಕಂಪನಿಯು ಸಮ್ಮತಿಸಿದೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಮತ್ತು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಸೇವಾ ಶುಲ್ಕ ಭರಿಸಲು ಹಿಂದೇಟು ಹಾಕಿದ್ದರಿಂದ ಮ್ಯಾಟ್ರಿಮನಿ ಡಾಟ್‌ಕಾಂ, ನೌಕರಿ ಆ್ಯಪ್ ಸೇರಿದಂತೆ ಹಲವು ಕಂಪನಿಗಳ ಆ್ಯಪ್‌ಗಳನ್ನು ಪ್ಲೇ ಸ್ಟೋರ್‌ನಿಂದ ಗೂಗಲ್ ತೆಗೆದು ಹಾಕಿತ್ತು. ಈ ನಿರ್ಧಾರವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಶೇ 11ರಿಂದ ಶೇ 25ರಷ್ಟು ಶುಲ್ಕ ಭರಿಸಲು ಒಪ್ಪಿಗೆ ಹಾಗೂ ಪ್ಲೇ ಸ್ಟೋರ್‌ನಿಂದ ಹೊರಗೆ ವಹಿವಾಟು ನಡೆಸುವ ಬಗ್ಗೆ ಸಮ್ಮತಿಸಿರುವ ಕಂಪನಿಗಳ ಆ್ಯಪ್‌ಗಳನ್ನು ನಾಲ್ಕು ದಿನಗಳ ಹಿಂದೆಯೇ ಮರುಸ್ಥಾಪಿಸಲಾಗಿದೆ.

ಬಿಕ್ಕಟ್ಟಿನ ಬಗ್ಗೆ ಗೂಗಲ್ ಮತ್ತು ನವೋದ್ಯಮ ಮುಖ್ಯಸ್ಥರ ನಡುವೆ ಸೋಮವಾರ ಸಚಿವರಾದ ಅಶ್ವಿನಿ ವೈಷ್ಣವ್ ಹಾಗೂ ರಾಜೀವ್ ಚಂದ್ರಶೇಖರ್ ನಡೆಸಿದ ಹಲವು ಸುತ್ತಿನ ಮಾತುಕತೆ ಫಲಪ್ರದವಾಗಿದೆ. ‘ಶುಲ್ಕ ವಿವಾದಕ್ಕೆ ಸಂಬಂಧಿಸಿದಂತೆ ಗೂಗಲ್ ಮತ್ತು ನವೋದ್ಯಮಗಳು ಮುಂದಿನ ದಿನಗಳಲ್ಲಿ ಪರಿಹಾರ ಕಂಡುಕೊಳ್ಳುವ ವಿಶ್ವಾಸವಿದೆ’ ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಮಾರುಕಟ್ಟೆ ಧಾರಣೆ

ಅಡಿಕೆ (ಶಿವಮೊಗ್ಗ)	
ಬೆಟ್ಟೆ	40069-54559
ಗೊರಬಲು	16009-36099
ರಾಶಿ	26009-48536
ಸರಕು	45159-83610
ಸಿದ್ದಾಪುರ	
ಬಿಳಿಗೋಟು	25109-28619
ಚಾಲಿ	34119-37099
ಕೋಕ	24299-26600
ಹೊಸಚಾಲಿ	30599-33809
ಕೆಂಪುಗೋಟು	30100-34899
ರಾಶಿ	43069-47099
ತಟ್ಟಿಬೆಟ್ಟೆ	38009-45809
ಶಿರಸಿ	
ಬೆಟ್ಟೆ	36299-46699
ಬಿಳಿಗೋಟು	23539-30699
ಚಾಲಿ	31099-34411
ಕೆಂಪುಗೋಟು	28698-33899
ರಾಶಿ	43408-47358
ಯಲ್ಲಾಪುರ	
ಬಿಳಿಗೋಟು	20119-31212
ಚಾಲಿ	31400-37699
ಕೋಕ	14899-26100
ಕೆಂಪುಗೋಟು	24899-35969
ರಾಶಿ	44009-52789
ತಟ್ಟಿಬೆಟ್ಟೆ	35969-43639
ಕಾರ್ಕಳ	
ಹೊಸತು	25000-34500
ಹಳತು	30000-43500
ಸಾಗರ	
ಬಿಳಿಗೋಟು	23899-24219
ಚಾಲಿ	32049-32799
ಕೋಕ	25899-25899
ಕೆಂಪುಗೋಟು	27989-31339



'ಮಾವೋವಾದಿಗಳ ಜೊತೆ ನಂಟು: ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲ'

ಜಿ.ಎನ್. ಸಾಯಿಬಾಬಾ ದೋಷಮುಕ್ತ


ಸಾಯಿಬಾಬಾ

ನಾಗಪುರ (ಪಿಟಿಐ): ಮಾವೋವಾದಿಗಳ ಜೊತೆ ನಂಟು ಹೊಂದಿದ ಆರೋಪ ಎದುರಿಸುತ್ತಿದ್ದ ದೆಹಲಿ ವಿಶ್ವ-ವಿದ್ಯಾಲಯದ ಮಾಜಿ ಪ್ರೊಫೆಸರ್ ಜಿ.ಎನ್. ಸಾಯಿಬಾಬಾ ಅವರನ್ನು ಬಾಂಬೆ ಹೈಕೋರ್ಟ್ ಮಂಗಳವಾರ ದೋಷಮುಕ್ತಗೊಳಿಸಿದೆ. ಅವರ ವಿರುದ್ಧದ ಆರೋಪಗಳನ್ನು ಸಾಬೀತುಮಾಡುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೈಕೋರ್ಟ್ ಹೇಳಿದೆ.

ಸಾಯಿಬಾಬಾ ಅವರಿಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಕೂಡ ಹೈಕೋರ್ಟ್ ರದ್ದುಪಡಿಸಿದೆ. ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಇತರ ಐವರನ್ನು ಕೂಡ ನ್ಯಾಯಮೂರ್ತಿಗಳಾದ ವಿನಯ್ ಜೋಷಿ ಮತ್ತು ವಾಲ್ಮೀಕಿ ಎಸ್.ಎ. ಮಿನೇಜಸ್ ಅವರು ಇದ್ದ ವಿಭಾಗೀಯ ಪೀಠವು ದೋಷಮುಕ್ತಗೊಳಿಸಿದೆ.

ಪತ್ನಿ ಸಂತಸ

ನವದೆಹಲಿ(ಪಿಟಿಐ): ಜಿ.ಎನ್. ಸಾಯಿಬಾಬಾ ಅವರನ್ನು ದೋಷಮುಕ್ತಗೊಳಿಸಿರುವ ಹೈಕೋರ್ಟ್ ಆದೇಶದಿಂದ ಸಮಾಧಾನ ಆಗಿರುವುದಾಗಿ ಅವರ ಪತ್ನಿ ವಸಂತಕುಮಾರಿ ಹೇಳಿದ್ದಾರೆ. 10 ವರ್ಷಗಳ ಹೋರಾಟದ ನಂತರ ನ್ಯಾಯ ಸಿಕ್ಕಿದೆ ಎಂದು ಅವರು ಪ್ರತಿಕ್ರಿಯೆ ನೀಡಿದ್ದಾರೆ.

ತಮ್ಮ ಪತಿ ಎಂತಹವರು ಎಂಬುದು ಅವರನ್ನು ಬಲ್ಲವರಿಗೆ ಗೊತ್ತಿತ್ತು ಎಂದು ಪತ್ನಿ ಹೇಳಿದ್ದಾರೆ. ಸಾಯಿಬಾಬಾ ಅವರ ಬೆಂಬಲಕ್ಕೆ ನಿಂತಿದ್ದ ವಕೀಲರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸಿದ್ದಾರೆ.

'ಸುಪ್ರೀಂ' ಮೆಟ್ಟಿಲೇರಿದ ಮಹಾರಾಷ್ಟ್ರ

ಜಿ.ಎನ್. ಸಾಯಿಬಾಬಾ ಅವರನ್ನು ದೋಷಮುಕ್ತಗೊಳಿಸಿದ ಬಾಂಬೆ ಹೈಕೋರ್ಟ್ ಆದೇಶ ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರವು ಮಂಗಳವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಕ್ರಮ ಜರುಗಿಸಲು ಪಡೆದಿದ್ದ ಅನುಮತಿಯು ಕಾನೂನುಬದ್ಧವಾಗಿ ಇರಲಿಲ್ಲ, ಸೂಕ್ತವಾಗಿ ಇರಲಿಲ್ಲ. ಹೀಗಾಗಿ, ಆ ಅನುಮತಿಗೆ ಕಾನೂನಿನ ಸಮ್ಮತಿ ಇಲ್ಲ ಎಂದು ಕೂಡ ವಿಭಾಗೀಯ ಪೀಠ ಹೇಳಿದೆ.

'ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದಕ್ಕೆ ನೀಡಿದ್ದ ಅನುಮತಿಯೇ ಅಮಾನ್ಯವಾದ ಕಾರಣ ಇಡೀ ಪ್ರಾಸಿಕ್ಯೂಷನ್ ಪ್ರಕ್ರಿಯೆ ಕಾನೂನಿನ ಮಾನ್ಯತೆ ಕಳೆದುಕೊಂಡಿದೆ. ಕಾನೂನಿನ ಅಡಿ ಕಡ್ಡಾಯವಾಗಿ ಪಾಲಿಸಬೇಕಿದ್ದ ನಿಯಮಗಳನ್ನು ಉಲ್ಲಂಘಿಸಿ ನಡೆದ ವಿಚಾರಣೆಯೇ ನ್ಯಾಯದಾನದ ವೈಫಲ್ಯಕ್ಕೆ ಸಮ' ಎಂದು ಹೈಕೋರ್ಟ್ ಹೇಳಿದೆ.

ಹೈಕೋರ್ಟ್ ತನ್ನ ಆದೇಶಕ್ಕೆ ಆರು ವಾರಗಳ ಅವಧಿಗೆ ತಡೆ ನೀಡಬೇಕು, ಆಗ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಆಗುತ್ತದೆ ಎಂದು ಪ್ರಾಸಿಕ್ಯೂಷನ್ ಪರ ವಕೀಲರು ಮನವಿ ಮಾಡಿದರು. ಆದೇಶಕ್ಕೆ ತಡೆ ಕೋರಿ ಅರ್ಜಿ ಸಲ್ಲಿಸುವಂತೆ ಹೈಕೋರ್ಟ್, ವಕೀಲರಿಗೆ ಸೂಚಿಸಿತು.

ಅಂಗವೈಕಲ್ಯ ಹೊಂದಿರುವ ಸಾಯಿಬಾಬಾ ಅವರನ್ನು 2014ರಲ್ಲಿ ಬಂಧಿಸಲಾಯಿತು. ಅವರು ಈಗ ನಾಗಪುರದ ಕೇಂದ್ರ ಕಾರಾಗೃಹದಲ್ಲಿ ಇದ್ದಾರೆ. ಮಹಾರಾಷ್ಟ್ರದ ಗಢಚಿರೋಲಿ ಜಿಲ್ಲೆಯ ಸೆಷನ್ಸ್ ನ್ಯಾಯಾಲಯವೊಂದು 2017ರ ಮಾರ್ಚ್‌ನಲ್ಲಿ, ಸಾಯಿಬಾಬಾ ಮತ್ತು ಇತರ ಐವರು ಮಾವೋವಾದಿಗಳ ಜೊತೆ ನಂಟು ಹೊಂದಿದ್ದ ಹಾಗೂ ದೇಶದ ವಿರುದ್ಧ ಸಮರ ಸಾರುವುದಕ್ಕೆ ಸಮನಾದ ಕೃತ್ಯಗಳಲ್ಲಿ ತೊಡಗಿದ್ದ ಆರೋಪ ಸಾಬೀತಾಗಿದೆ ಎಂದು ಆದೇಶ ನೀಡಿತ್ತು.

ಸಾಯಿಬಾಬಾ ಮತ್ತು ಇತರ ಐವರು ಯುಎಪಿಎ ಹಾಗೂ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಅಪರಾಧಿಗಳು ಎಂದು ಘೋಷಿಸಿತ್ತು. ಆದರೆ 2022ರ ಅಕ್ಟೋಬರ್‌ನಲ್ಲಿ ಹೈಕೋರ್ಟ್‌ನ ಇನ್ನೊಂದು ಪೀಠವು ಸಾಯಿಬಾಬಾ ಅವರನ್ನು ದೋಷ-ಮುಕ್ತಗೊಳಿಸಿತ್ತು. ಅವರ ವಿರುದ್ಧ ಯುಎಪಿಎ ಅಡಿಯಲ್ಲಿ ಕ್ರಮ ಜರುಗಿಸು-ವುದಕ್ಕೆ ಕಾನೂನುಬದ್ಧವಾಗಿ ಅನುಮತಿ ಪಡೆದಿರಲಿಲ್ಲ ಎಂದು ಹೇಳಿತ್ತು.

ಈ ಆದೇಶವನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರವು ಅದೇ ದಿನ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಹೈಕೋರ್ಟ್ ಆದೇಶಕ್ಕೆ ಆರಂಭದಲ್ಲಿ ತಡೆ ನೀಡಿದ್ದ ಸುಪ್ರೀಂ ಕೋರ್ಟ್, ನಂತರದಲ್ಲಿ ಆ ಆದೇಶವನ್ನು ರದ್ದುಪ-ಡಿಸಿತ್ತು. ಸಾಯಿಬಾಬಾ ಅವರು ಸಲ್ಲಿಸಿದ್ದ ಮೇಲ್ಮನವಿಯನ್ನು ಹೊಸದಾಗಿ ಆಲಿಸುವಂತೆ ಸೂಚಿಸಿತ್ತು.

ರಾಹುಲ್‌ಗೆ 'ಮೋದಿ' ಘೋಷಣೆ ಸ್ವಾಗತ

ಮಧ್ಯಪ್ರದೇಶ ಪ್ರವೇಶಿಸಿದ ಕಾಂಗ್ರೆಸ್‌ನ 'ನ್ಯಾಯ' ಯಾತ್ರೆ


ಮಧ್ಯಪ್ರದೇಶದ ಶಾಜಾಪುರದಲ್ಲಿ ಮಂಗಳವಾರ ಭಾರತ ಜೋಡೊ ನ್ಯಾಯ ಯಾತ್ರೆ ಸಾಗಿದ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬಾಕ್ಸರ್ ವಿಜೇಂದ್ರ ಗುಪ್ತಾ ಅವರ ಕೈಕುಲುಕಿದರು –ಪಿಟಿಐ ಚಿತ್ರ

ಶಾಜಾಪುರ(ಮಧ್ಯಪ್ರದೇಶ) (ಪಿಟಿಐ): ಶಾಜಾಪುರ ನಗರ ಮೂಲಕ ಮಧ್ಯಪ್ರದೇಶ ಪ್ರವೇಶಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಭಾರತ ಜೋಡೊ ನ್ಯಾಯ ಯಾತ್ರೆಗೆ ಮಂಗಳವಾರ 'ಮೋದಿ–ಮೋದಿ' ಘೋಷಣೆಗಳ ಸ್ವಾಗತ ದೊರೆಯಿತು.

ರಾಹುಲ್ ಗಾಂಧಿ ಇದ್ದ ವಾಹನ ಸೇರಿದಂತೆ ಭಾರತ ಜೋಡೊ ನ್ಯಾಯ ಯಾತ್ರೆಯ ವಾಹನಗಳು ನಗರದ ಎ.ಬಿ.ರಸ್ತೆಯಲ್ಲಿ ಸಾಗುತ್ತಿದ್ದ ವೇಳೆ, ಶಾಜಾಪುರ ಪಾಲಿಕೆ ಸದಸ್ಯ ಮುಕೇಶ್ ದುಬೆ ನೇತೃತ್ವದಲ್ಲಿ ನಿಂತಿದ್ದ ಬಿಜೆಪಿ ಕಾರ್ಯಕರ್ತರ ಗುಂಪೊಂದು 'ಮೋದಿ, ಮೋದಿ' ಎಂಬ ಘೋಷಣೆಗಳನ್ನು ಕೂಗಿತು.

ಬಿಜೆಪಿ ಕಾರ್ಯಕರ್ತರಿದ್ದ ಗುಂಪಿನ ಬಳಿ ಬಂದಾಗ ತಾವಿದ್ದ ವಾಹನವನ್ನು ರಾಹುಲ್ ನಿಲ್ಲಿಸಿದರು. ನಂತರ ವಾಹನದಿಂದ ಇಳಿದು, ಗುಂಪಿನತ್ತ ತೆರಳಿ, ಬಿಜೆಪಿ ಕಾರ್ಯಕರ್ತರ ಕೈ ಕುಲುಕಿದರು.

ಈ ವೇಳೆ, ಬಿಜೆಪಿ ಕಾರ್ಯಕರ್ತರು ಜೈ ಶ್ರೀ ರಾಮ್ ಘೋಷಣೆಗಳನ್ನು ಕೂಗಿದರು.

'ಆಲೂಗಡ್ಡೆ ನೀಡಿದೆವು...'

'ನಗರದ ಮೂಲಕ ರಾಜ್ಯ ಪ್ರವೇಶಿಸಿದ ರಾಹುಲ್ ಗಾಂಧಿ ಅವರು ವಾಹನ ಇಳಿದು ನಮ್ಮ ಬಳಿ ಬಂದಾಗ, ಮಧ್ಯಪ್ರದೇಶಕ್ಕೆ ನಿಮಗೆ ಸ್ವಾಗತ ಎಂದು ಅವರಿಗೆ ಹೇಳಿದೆವು' ಎಂದು ಬಿಜೆಪಿಯ ಪಾಲಿಕೆ ಸದಸ್ಯ ದುಬೆ ತಿಳಿಸಿದರು.

ನಂತರ ರಾಹುಲ್ ಅವರಿಗೆ ಆಲೂಗಡ್ಡೆ ನೀಡಿದೆವು ಎಂದರು.

ಬಳಿಕ ತಮ್ಮ ವಾಹನದತ್ತ ತೆರಳಿದ ರಾಹುಲ್ ಗಾಂಧಿ, ಬಿಜೆಪಿ ಕಾರ್ಯಕರ್ತರತ್ತ ಕೈಬೀಸಿದರಲ್ಲದೇ ವಾಹನ ಚಲಿಸುತ್ತಿದ್ದಂತೆ, ಅವರತ್ತ 'ಫ್ಲೈಯಿಂಗ್ ಕಿಸ್' ತೇಲಿ ಬಿಟ್ಟರು. ನಂತರ ಯಾತ್ರೆಯು ಉಜ್ಜೈನಿಯತ್ತ ಸಾಗಿತು.

ವಿವಾದಕ್ಕೆ ತಿರುಗಿದ ಡಿಎಂಕೆ ಮುಖಂಡನ ಹೇಳಿಕೆ • ಒಪ್ಪಲು ಸಾಧ್ಯವಿಲ್ಲ: ಕಾಂಗ್ರೆಸ್

ಭಾರತ ರಾಷ್ಟ್ರವಾಗಿರಲೇ ಇಲ್ಲ: ಎ. ರಾಜಾ



ಚೆನ್ನೈ/ನವದೆಹಲಿ (ಪಿಟಿಐ): ಡಿಎಂಕೆ ಪಕ್ಷದ ಮುಖಂಡ ಎ. ರಾಜಾ ಅವರು 'ಭಾರತವು ಎಂದಿಗೂ ರಾಷ್ಟ್ರವಾಗಿರಲಿಲ್ಲ; ಅದು ಹಲವು ಸಂಸ್ಕೃತಿಗಳ ಒಂದು ಉಪಖಂಡ' ಎಂದು ಹೇಳಿದ್ದಾರೆ ಎನ್ನಲಾದ ವಿಡಿಯೊ ಒಂದನ್ನು ವಿರೋಧ ಪಕ್ಷಗಳು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿವೆ. ಈ ವಿಡಿಯೊ ರಾಜಕೀಯ ವಿವಾದ ಸೃಷ್ಟಿಸಿದೆ.

ರಾಜಾ ಅವರ ಮಾತುಗಳು 'ದ್ವೇಷ ಭಾಷಣ' ಎಂದು ಬಿಜೆಪಿ ಕರೆದಿದೆ, ರಾಜಾ ಅವರ ಬಂಧನಕ್ಕೆ ಒತ್ತಾಯಿಸಿದೆ. ಡಿಎಂಕೆ ಪಕ್ಷದ ಮಿತ್ರಪಕ್ಷವಾಗಿರುವ ಕಾಂಗ್ರೆಸ್ ಕೂಡ ರಾಜಾ ಅವರ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದೆ. ಮಾತನಾಡುವಾಗ ಎಲ್ಲರೂ ಸಂಯಮವಹಿಸಬೇಕು ಎಂದು ಕಿವಿಮಾತು ಹೇಳಿದೆ.

ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳು ಜೈಲಿನಿಂದ ಹೊರಬಂದಾಗ ಬಿಜೆಪಿಯ ಕಾರ್ಯಕರ್ತರು 'ಜೈ ಶ್ರೀರಾಮ್' ಎಂದು, 'ಭಾರತ್ ಮಾತಾ ಕಿ ಜೈ' ಎಂದು ಘೋಷಣೆ ಕೂಗಿ ಅವರನ್ನು ಸ್ವಾಗತಿಸಿದ್ದರು ಎಂದು ರಾಜಾ ಅವರು ಈ ವಿಡಿಯೊದಲ್ಲಿ ಹೇಳಿದ್ದಾರೆ ಎನ್ನಲಾಗಿದೆ. ಹೀಗೆ ಮಾಡುವುದಕ್ಕೆ ಅವರಿಗೆ (ಬಿಜೆಪಿ ಕಾರ್ಯಕರ್ತರಿಗೆ) ನಾಚಿಕೆ ಆಗಲಿಲ್ಲವೇ ಎಂದು ರಾಜಾ ಪ್ರಶ್ನಿಸಿದ್ದಾರೆ.

'ಜೈ ಶ್ರೀರಾಮ್, ಭಾರತ್ ಮಾತಾ ಕಿ ಜೈ ಘೋಷಣೆಗಳು ಮೂಲಭೂತವಾದದ ಅರ್ಥ ನೀಡುತ್ತವೆ ಎಂದಾದರೆ ಆ ಜೈ ಶ್ರೀರಾಮ್ ಮತ್ತು ಭಾರತ ಮಾತೆಯನ್ನು ನಾವು ಎಂದಿಗೂ ಒಪ್ಪಿಕೊ-ಳ್ಳುವುದಿಲ್ಲ, ತಮಿಳುನಾಡು ಅದನ್ನು ಎಂದಿಗೂ ಒಪ್ಪುವುದಿಲ್ಲ' ಎಂದು ರಾಜಾ ಹೇಳಿದ್ದಾರೆ. ತಮ್ಮನ್ನು 'ರಾಮನ ವಿರೋಧಿ' ಎಂದು ಕರೆದರೂ ತಲೆಕೆಡಿಸಿ-ಕೊಳ್ಳುವುದಿಲ್ಲ ಎಂದಿದ್ದಾರೆ.

ವಿಡಿಯೊದಲ್ಲಿ ರಾಜಾ ಅವರು ಪಕ್ಷದ ಕಾರ್ಯ-ಕ್ರಮವೊಂದನ್ನು ಉದ್ದೇಶಿಸಿ ಮಾತನಾಡಿದ್ದಾರೆ. 'ಭಾರತವು ಒಂದು ರಾಷ್ಟ್ರವಲ್ಲ. ಇದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿ. ಭಾರತವು ಎಂದಿಗೂ ಒಂದು ರಾಷ್ಟ್ರವಾಗಿರಲಿಲ್ಲ. ಒಂದು ರಾಷ್ಟ್ರವೆಂದರೆ ಒಂದು ಭಾಷೆ, ಒಂದು ಸಂಪ್ರದಾಯ, ಒಂದು ಸಂಸ್ಕೃತಿ ಇರುತ್ತದೆ. ಅಂತಹ ಲಕ್ಷಣಗಳಿದ್ದರೆ ಮಾತ್ರ ರಾಷ್ಟ್ರ' ಎಂದು ಅವರು ಹೇಳಿದ್ದಾರೆ ಎನ್ನಲಾಗಿದೆ.

'ತಮಿಳು ಎಂಬುದು ಒಂದು ರಾಷ್ಟ್ರ, ಒಂದು ದೇಶ. ಮಲಯಾಳವು ಒಂದು ಭಾಷೆ, ಒಂದು ರಾಷ್ಟ್ರ ಮತ್ತು ಒಂದು ದೇಶ. ಒಡಿಯಾ ಒಂದು ರಾಷ್ಟ್ರ, ಒಂದು ಭಾಷೆ ಮತ್ತು ಒಂದು ದೇಶ. ಇಂತಹ ಎಲ್ಲ ರಾಷ್ಟ್ರೀಯ ಗುಂಪುಗಳು ಸೇರಿ ಭಾರತ ಆಗುತ್ತದೆ. ಹೀಗಾಗಿ ಭಾರತವು ದೇಶವಲ್ಲ, ಇದು ಹಲವು ಆಚರಣೆಗಳು, ಸಂಪ್ರದಾಯಗಳು ಮತ್ತು ಸಂಸ್ಕೃತಿಗಳು ಇರುವ ಉಪಖಂಡ' ಎಂದು ಅವರು ಹೇಳಿದ್ದಾರೆ ಎನ್ನಲಾಗಿದೆ.

ರಾಜಾ ಮಾತಿಗೆ ಬಿಜೆಪಿ, ಕಾಂಗ್ರೆಸ್ ಖಂಡನೆ

'ಭಾರತವು ಒಂದು ರಾಷ್ಟ್ರವಲ್ಲ, ಅದೊಂದು ಉಪಖಂಡ ಎಂದು ರಾಜಾ ಅವರು ಹೇಳಿರುವುದು ಮಾವೋವಾದಿ ಸಿದ್ಧಾಂತ' ಎಂದು ಬಿಜೆಪಿಯ ಹಿರಿಯ ನಾಯಕ ರವಿಶಂಕರ್ ಪ್ರಸಾದ್ ಆರೋಪಿಸಿದರು.

'... ನಾವು ರಾಮನ ವಿರೋಧಿಗಳು ಎಂಬುದಾಗಿ ಹೋಗಿ ಹೇಳಿ ಎಂದು ರಾಜಾ ಹೇಳಿದ್ದಾರೆ. ಇಂತಹ ಹೇಳಿಕೆಗಳನ್ನು ನಾವು ಖಂಡಿಸುತ್ತೇವೆ' ಎಂದು ಪ್ರಸಾದ್ ಹೇಳಿದರು. ಕಾಂಗ್ರೆಸ್ ಹಾಗೂ 'ಇಂಡಿಯಾ' ಮೈತ್ರಿಕೂಟದ ಇತರ ಪಕ್ಷಗಳು ಈ ಮಾತಿಗೆ ಸಹಮತ ಹೊಂದಿವೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ನಾವು ಒಪ್ಪುವುದಿಲ್ಲ– ಕಾಂಗ್ರೆಸ್: 'ನಾನು ರಾಜಾ ಅವರ ಮಾತುಗಳನ್ನು ನೂರಕ್ಕೆ ನೂರರಷ್ಟು ಒಪ್ಪುವುದಿಲ್ಲ. ಅಂತಹ ಮಾತುಗಳನ್ನು ನಾನು ಖಂಡಿಸುತ್ತೇನೆ. ರಾಮ ಎಲ್ಲರಿಗೂ ಸೇರಿದವ ಎಂಬುದು ನನ್ನ ನಂಬಿಕೆ' ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನೇತ್ ಹೇಳಿದ್ದಾರೆ.

'ರಾಮನು ಸಮುದಾಯಗಳು, ಮತಧರ್ಮ ಮತ್ತು ಜಾತಿಗಳನ್ನು ಮೀರಿದವನು. ಜೀವನದಲ್ಲಿ ರಾಮ ಒಂದು ಆದರ್ಶ, ರಾಮನೆಂದರೆ ಘನತೆ, ರಾಮನೆಂದರೆ ಮೌಲ್ಯಗಳು, ರಾಮನೆಂದರೆ ಪ್ರೀತಿ. ಅವರ ಹೇಳಿಕೆಯನ್ನು ನಾನು ಖಂಡಿಸುತ್ತೇನೆ' ಎಂದು ಅವರು ಹೇಳಿದರು.

ಡಿಎಂಕೆ ಇಲ್ಲದಿದ್ದರೆ ಭಾರತವೇ ಇರುವುದಿಲ್ಲ: ರಾಜಾ

ಚೆನ್ನೈ: ಚುನಾವಣೆಯ ನಂತರದಲ್ಲಿ ಡಿಎಂಕೆ ಪಕ್ಷವೇ ಇರುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ನೀಡಿದ ಹೇಳಿಕೆಗೆ ತಿರುಗೇಟು ನೀಡಿರುವ ಎ. ರಾಜಾ ಅವರು, 'ಡಿಎಂಕೆ ಇಲ್ಲದಿದ್ದರೆ ಭಾರತವೇ ಇರುವುದಿಲ್ಲ, ಬಿಜೆಪಿ ಇಂತಹ ಆಟ ಆಡಬಾರದು' ಎಂದು ಹೇಳಿದ್ದಾರೆ. ಕೊಯಮತ್ತೂರಿನಲ್ಲಿ ಮಾರ್ಚ್ 3ರಂದು ಮಾಡಿರುವ ಭಾಷಣದಲ್ಲಿ ಅವರು ಹೀಗೆ ಹೇಳಿದ್ದಾರೆ.

'ಅವರು ಈಗಿನ ಸಂವಿಧಾನವನ್ನು ಎಸೆಯಲು ಬಯಸಿದ್ದಾರೆ. ಭಾರತವೇ ಇರುವುದಿಲ್ಲ ಎಂದು ನಾನು ಹೇಳಿದ್ದೇಕೆ? ನೀವು ಅಧಿಕಾರಕ್ಕೆ ಬಂದರೆ ಸಂವಿಧಾನ ಇರುವುದಿಲ್ಲ ಮತ್ತು ಸಂವಿಧಾನ ಇರದಿದ್ದರೆ ಭಾರತ ಇರುವುದಿಲ್ಲ. ಭಾರತ ಇರದಿದ್ದರೆ ತಮಿಳುನಾಡು ಹೀಗೇ ಉಳಿಯುವುದಿಲ್ಲ, ನಾವು ಪ್ರತ್ಯೇಕಗೊಳ್ಳುತ್ತೇವೆ. ಚುನಾವಣೆಯ ನಂತರ ಡಿಎಂಕೆ ಇರುವುದಿಲ್ಲ ಎಂದಾದರೆ ಭಾರತವೂ ಇರುವುದಿಲ್ಲ. ನೀವು ಆಟ ಆಡುತ್ತಿದ್ದೀರಾ?' ಎಂದು ಅವರು ಹೇಳಿದ್ದಾರೆ.

ಶಹಜಹಾನ್ ವಶಕ್ಕೆ ಪಡೆಯಲು ಸಿಬಿಐ ವಿಫಲ

ಒಂದನೇ ಪುಟದಿಂದ...

ಅಧಿಕಾರಿಗಳ ಮೇಲಿನ ಹಲ್ಲೆ ಪ್ರಕರಣದ ತನಿಖೆಗೆ ಪಶ್ಚಿಮ ಬಂಗಾಳ ಪೊಲೀಸರು ಹಾಗೂ ಸಿಬಿಐ ಅಧಿಕಾ-ರಿಗಳನ್ನು ಒಳಗೊಂಡ ಜಂಟಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಕಲ್ಕತ್ತ ಹೈಕೋರ್ಟ್ ಜನವರಿ 17ರಂದು ಆದೇಶಿಸಿತ್ತು.

ಪ್ರಕರಣದ ಪ್ರಮುಖ ಆರೋಪಿ ಶಹಜಹಾನ್ ಶೇಖ್ ಅವರನ್ನು ಪಶ್ಚಿಮ ಬಂಗಾಳ ಪೊಲೀಸರು ಫೆ.29ರಂದು ಬಂಧಿಸಿದ್ದರು. ಎಸ್‌ಐಟಿ ರಚನೆಗೆ ಸಂಬಂಧಿಸಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಇ.ಡಿ ಹಾಗೂ ಪಶ್ಚಿಮ ಬಂಗಾಳ ಸರ್ಕಾರ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿದ್ದವು. ತನಿಖೆಯನ್ನು ಸಿಬಿಐಗೆ ವಹಿಸುವಂತೆ ಇ.ಡಿ ಕೋರಿದ್ದರೆ, ರಾಜ್ಯ ಪೊಲೀಸರಿಗೆ ವಹಿಸುವಂತೆ ಪಶ್ಚಿಮ ಬಂಗಾಳ ಸರ್ಕಾರ ಮನವಿ ಮಾಡಿತ್ತು.

ಅರ್ಜಿ ವಿಚಾರಣೆಯನ್ನು ಮಂಗಳವಾರ ನಡೆಸಿದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಂ ನೇತೃತ್ವದ ವಿಭಾಗೀಯ ಪೀಠವು, ಇ.ಡಿ ಅರ್ಜಿಯನ್ನು ಪುರಸ್ಕರಿಸಿತು.

ಶಹಜಹಾನ್ ಸ್ವತ್ತು ಜಪ್ತಿ

ನವದೆಹಲಿ/ಕೋಲ್ಕತ್ತ (ಪಿಟಿಐ): ಶಹಜಹಾನ್ ಶೇಖ್ ಅವರಿಗೆ ಸೇರಿದ, ಸಂದೇಶ್‌ಖಾಲಿಯಲ್ಲಿರುವ ₹12.78 ಕೋಟಿ ಮೌಲ್ಯದ ಸ್ವತ್ತುಗಳನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮಂಗಳವಾರ ಜಪ್ತಿ ಮಾಡಿದ್ದಾರೆ.

ಬ್ಯಾಂಕ್ ಠೇವಣಿಗಳು, ಒಂದು ಅಪಾರ್ಟ್‌ಮೆಂಟ್, ಕೃಷಿ ಭೂಮಿ ಹಾಗೂ ಮೀನುಗಾರಿಕೆ ನಡೆಸುವ ಜಮೀನುಗಳು ಜಪ್ತಿ ಮಾಡಿದ ಸ್ವತ್ತುಗಳಲ್ಲಿ ಸೇರಿವೆ.

'ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ, ಶಹಜಹಾನ್ ಶೇಖ್‌ಗೆ ಸೇರಿದ ಸ್ವತ್ತುಗಳನ್ನು ಜಪ್ತಿ ಮಾಡುವುದಕ್ಕೆ ಸಂಬಂಧಿಸಿ ತಾತ್ಕಾಲಿಕ ಆದೇಶವನ್ನು ಹೊರಡಿಸಲಾಗಿದೆ' ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಿದೆ.

'ಪಕ್ಷಪಾತದ ವರ್ತನೆ'

ಅರ್ಜಿ ವಿಚಾರಣೆ ವೇಳೆ, ಪಶ್ಚಿಮ ಬಂಗಾಳ ಪೊಲೀಸರ ಕಾರ್ಯವೈಖರಿಯನ್ನು ಕಟುವಾಗಿ ಟೀಕಿಸಿದ ಹೈಕೋರ್ಟ್‌ನ ವಿಭಾಗೀಯ ಪೀಠ, 'ಈ ಪ್ರಕರಣದಲ್ಲಿ ಪೊಲೀಸರು ಸಂಪೂರ್ಣ ಪಕ್ಷಪಾತದಿಂದ ವರ್ತಿಸಿದ್ದಾರೆ' ಎಂದು ಹೇಳಿತು.

'ಆರೋಪಿಯನ್ನು ರಕ್ಷಿಸುವ ಸಂಬಂಧ ತನಿಖೆಯನ್ನು ವಿಳಂಬ ಮಾಡಲಾಗಿದೆ' ಎಂದೂ ಪೀಠವು ಹೇಳಿತು.

'ತನಿಖೆ ನಡೆಸುವುದಕ್ಕಾಗಿ ಸಿಬಿಐಗೆ ಹಸ್ತಾಂತರಿಸಲು ಯೋಗ್ಯವಾದ ಪ್ರಕರಣ ಇದಾಗಿದೆ' ಎಂದು ಅಭಿಪ್ರಾಯಪಟ್ಟ ವಿಭಾಗೀಯ ಪೀಠ, 'ಸಂಜೆ 4.30ರ ಒಳಗಾಗಿ ಆರೋಪಿಯನ್ನು ಸಿಬಿಐಗೆ ಒಪ್ಪಿಸಬೇಕು' ಎಂದೂ ಆದೇಶಿ ನೀಡಿತ್ತು.


ರೈತ ಶುಭಕಿರಣ್ ಸಿಂಗ್ ಸಾವು ಪ್ರಕರಣದ ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಪಡಿಸಿ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಸದಸ್ಯರು ಮಂಗಳವಾರ ಅಮೃತಸರದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದರು –ಪಿಟಿಐ ಚಿತ್ರ

'ದೇಣಿಗೆ ಅಕ್ರಮ ಮರೆಮಾಚಲು ಯತ್ನ'

ಚುನಾವಣಾ ಬಾಂಡ್: ಗಡುವು ವಿಸ್ತರಣೆ ಬೇಡ– ಕಾಂಗ್ರೆಸ್

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ 'ಶಂಕಾಸ್ಪದ ವ್ಯವಹಾರ'ಗಳನ್ನು ಮರೆಮಾಚಲು ಕೇಂದ್ರವು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅನ್ನು ಬಳಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

ಚುನಾವಣಾ ಬಾಂಡ್‌ಗಳ ವಹಿವಾಟು ಕುರಿತ ಸಮಗ್ರ ವಿವರಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಗಡುವು ವಿಸ್ತರಿಸಬೇಕು ಎಂದು ಕೋರಿ ಎಸ್‌ಬಿಐ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವುದನ್ನು ಉಲ್ಲೇಖಿಸಿ ಕಾಂಗ್ರೆಸ್ ಈ ವಾಗ್ದಾಳಿ ನಡೆಸಿದೆ.

ಚುನಾವಣಾ ಬಾಂಡ್ ವಿವರಗಳನ್ನು ಮಾರ್ಚ್ 6ರ ಒಳಗೆ ಚುನಾವಣಾ ಆಯೋಗಕ್ಕೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಎಸ್‌ಬಿಐಗೆ ಆದೇಶಿಸಿತ್ತು. ಮೇಲ್ಮನವಿ ಸಲ್ಲಿಸಿದ್ದ ಎಸ್‌ಬಿಐ ಜೂನ್ 30ರವರೆಗೆ ಗಡುವು ವಿಸ್ತರಿಸಲು ಮನವಿ ಮಾಡಿತ್ತು.

'ಎಕ್ಸ್' ಜಾಲತಾಣದಲ್ಲಿ ಈ ಕುರಿತು ಪ್ರತಿಕ್ರಿಯಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಚುನಾವಣಾ ಬಾಂಡ್ ಎಂಬುದು ಪಾರದರ್ಶಕವಲ್ಲದ, ಪ್ರಜಾಸತ್ತಾತ್ಮಕವಲ್ಲದ ಹಾಗೂ ಸಮಾನ ಹೋರಾಟದ ವೇದಿಕೆಯನ್ನು ಹಾಳುಗೆಡವುವ ಯೋಜನೆಯಾಗಿದೆ ಎಂಬುದು ಕಾಂಗ್ರೆಸ್ ಪಕ್ಷದ ಸ್ಪಷ್ಟ ನಿಲುವಾಗಿದೆ' ಎಂದು ಹೇಳಿದ್ದಾರೆ.

ಅಕ್ರಮ ಚುನಾವಣಾ ಬಾಂಡ್ ಯೋಜನೆಯ ಬಹುದೊಡ್ಡ ಫಲಾನುಭವಿ ಬಿಜೆಪಿಯೇ ಆಗಿದೆ. ಈಗ ಸುಪ್ರೀಂ ಕೋರ್ಟ್ ತೀರ್ಪನ್ನು ತುಳಿಯಲು ಮೋದಿ ಸರ್ಕಾರ ಎಸ್‌ಬಿಐ ಅನ್ನು ಬಳಸಿ-ಕೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ವಕ್ತಾರ ಅಭಿಷೇಕ್ ಮನು ಸಿಂಘ್ವಿ ಅವರು, ಈ ಬೆಳವಣಿಗೆಯನ್ನು ನಾನು ಅಂದಾಜಿಸಿದ್ದೆ ಎಂದಿದ್ದಾರೆ.

ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ ಗೌರವ್ ಗೊಗೋಯಿ ಅವರು, ಎಸ್‌ಬಿಐ ಸಲ್ಲಿಸಿರುವ ಮೇಲ್ಮನವಿಯು ಸುಪ್ರೀಂ ಕೋರ್ಟ್ ಆದೇಶದ ಉದ್ದೇಶವನ್ನೇ ಹಾಳುಗೆಡವಲಿದೆ ಎಂದು ಟೀಕಿಸಿದ್ದಾರೆ.

'1 ಕ್ಲಿಕ್ ಸಾಕು, 5 ತಿಂಗಳ ಸಮಯ ಏಕೆ?'

ನವದೆಹಲಿ: ಚುನಾವಣಾ ಬಾಂಡ್‌ಗಳ ವಿವರ ಸಲ್ಲಿಸಲು ಸಮಯ ಕೋರುವ ಮೂಲಕ ಎಸ್‌ಬಿಐ, ಬಿಜೆಪಿ ಅವ್ಯವಹಾರಗಳನ್ನು ಮುಚ್ಚಿಹಾಕಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, 'ಭ್ರಷ್ಟ' ಬಿಜೆಪಿ ಸರ್ಕಾರ ರಕ್ಷಿಸಲು ಬ್ಯಾಂಕ್ ಯತ್ನಿಸುತ್ತಿದೆ. ಕೇಂದ್ರ ಸರ್ಕಾರವೂ ಈ ಬಗ್ಗೆ ಒತ್ತಡ ಹೇರಿದೆ ಎಂದು ಟೀಕಿಸಿದ್ದಾರೆ.

ಪಕ್ಷದ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನೇತ್, ಪೂರ್ಣ ಗಣಕೀಕರಣ ವ್ಯವಸ್ಥೆ ಇರುವ ಬ್ಯಾಂಕ್‌ಗೆ ವಿವರ ಸಲ್ಲಿಸಲು ಐದು ತಿಂಗಳ ಸಮಯ ಬೇಕೇ ಎಂದು ಪ್ರಶ್ನಿಸಿದ್ದಾರೆ.

'ಎಸ್‌ಬಿಐ 48 ಕೋಟಿ ಖಾತೆಗಳನ್ನು ನಿರ್ವಹಿಸುತ್ತಿದೆ. ಒಂದು ಕ್ಲಿಕ್‌ನಲ್ಲೇ ಐದು ನಿಮಿಷದಲ್ಲಿ ಸಮಗ್ರ ಮಾಹಿತಿ ಒದಗಿಸುವುದು ಬ್ಯಾಂಕ್‌ಗೆ ಸಾಧ್ಯವಿದೆ. ಆದರೂ, 22,217 ಬಾಂಡ್‌ಗಳ ವಿವರಗಳನ್ನು ಸಲ್ಲಿಸಲು ಐದು ತಿಂಗಳ ಸಮಯಾವಕಾಶ ಕೋರುತ್ತಿದೆ' ಎಂದೂ ಟೀಕಿಸಿದ್ದಾರೆ.

> ಮೋದಿ ಅವರ 'ನಿಜವಾದ ಮುಖ' ಮರೆಮಾಚುವ ಕೇಂದ್ರದ ಯತ್ನ ಇದಾಗಿದೆ. ದೇಣಿಗೆ ವ್ಯವಹಾರವನ್ನು ಮರೆಮಾಚಲು ಅಧಿಕಾರ ಬಳಸಿಕೊಳ್ಳುತ್ತಿದ್ದಾರೆ
>
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

> ಈ ವಹಿವಾಟಿನಲ್ಲಿ ಯಾರ ಪಾತ್ರವಿದೆ ಎಂಬುದು ಚುನಾವಣೆಗೆ ಮೊದಲು ತಿಳಿಯಬೇಕು. ಗಡುವು ವಿಸ್ತರಿಸಲು ಸುಪ್ರೀಂ ಕೋರ್ಟ್ ಅವಕಾಶ ನೀಡಬಾರದು
>
> **ಮನೀಶ್ ತಿವಾರಿ,** ಕಾಂಗ್ರೆಸ್ ಸಂಸದ

ವಿದೇಶಕ್ಕೆ ಕಳುಹಿಸುವ ಜಾಲ ವಿವಿಧೆಡೆ ಇ.ಡಿ ದಾಳಿ

ನವದೆಹಲಿ (ಪಿಟಿಐ): ಭಾರತೀಯರನ್ನು ವಿದೇಶಗಳಿಗೆ ಮುಖ್ಯವಾಗಿ ಅಮೆರಿಕ, ಕೆನಡಾಗೆ ಕಳುಹಿಸುವ ಅಕ್ರಮ ಜಾಲ, ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿ-ರುವ ಏಜೆಂಟರು, ಕನ್ಸಲ್ಟಂಟ್‌ಗಳಿಗೆ ಸೇರಿದ ಗುಜರಾತ್, ದೆಹಲಿ ಮತ್ತು ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿ (ಪಿಎಂಎಲ್‌ಎ) ಮಾರ್ಚ್ 1ರಂದು ಈ ರಾಜ್ಯಗಳ ವಿವಿಧ 29 ಸ್ಥಳಗಳಲ್ಲಿ ಕಾರ್ಯಾಚರಣೆ ಆರಂಭವಾಗಿತ್ತು ಎಂದು ಇ.ಡಿ ಮಂಗಳವಾರ ಈ ಕುರಿತ ಹೇಳಿಕೆಯಲ್ಲಿ ತಿಳಿಸಿದೆ.

ಇಂತಹದೇ ಕಾರ್ಯದಲ್ಲಿ ನಿರತರಾಗಿದ್ದ ಜಾಲದ ಮೇಲೆ ತನಿಖೆಯ ಭಾಗವಾಗಿ ಜನವರಿ, ಫೆಬ್ರುವರಿ ತಿಂಗಳಲ್ಲೂ ದಾಳಿ ನಡೆದಿತ್ತು. ಪ್ರಮುಖ ಆರೋಪಿಗಳಾದ ಭರತ್‌ಭಾಯ್ ಅಲಿಯಾಸ್ ಬಾಬಿ ಪಟೇಲ್, ರಾಜುಭಾಯ್ ಬೆಚರ್‌ಭಾಯ್ ಪ್ರಜಾಪತಿ, ಭವೇಶ್ ಅಶೋಕ್ ಭಾಯ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಇಸ್ರೇಲ್‌ನಲ್ಲಿ ಹಿಜ್ಬುಲ್ಲಾ ಉಗ್ರರಿಂದ ಕ್ಷಿಪಣಿ ದಾಳಿ

ಕೇರಳ ಯುವಕ ಸಾವು, ಇಬ್ಬರಿಗೆ ಗಾಯ

ಜೆರುಸಲೇಂ (ಪಿಟಿಐ): ಹಿಜ್ಬುಲ್ಲಾ ಉಗ್ರರು ಲೆಬನಾನ್ ಕಡೆಯಿಂದ ಇಸ್ರೇಲ್‌ನ ಉತ್ತರ ಗಡಿ ಭಾಗವಾದ ಮಾರ್ಗಲಿಯೂಟ್ ಪ್ರದೇಶದ ಮೇಲೆ ಟ್ಯಾಂಕರ್ ಅನ್ನು ಹೊಡೆದುರುಳಿಸಬಲ್ಲ ಕ್ಷಿಪಣಿಯ ದಾಳಿ ನಡೆಸಿದ್ದು, ಭಾರತೀಯ ಮೂಲದ ಒಬ್ಬರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಇನ್ನೂ ಇಬ್ಬರು ಭಾರತ ಮೂಲದವರು ಗಾಯಗೊಂಡಿದ್ದಾರೆ ಎಂದು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮೂರೂ ಮಂದಿ ಕೇರಳದವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ದಾಳಿಯಲ್ಲಿ ಒಟ್ಟಾರೆ ಏಳು ಮಂದಿ ಗಾಯಗೊಂಡಿದ್ದಾರೆ.

ಇಸ್ರೇಲ್‌ನ ಉತ್ತರ ಭಾಗವಾದ ಮಾರ್ಗಲಿಯೂಟ್ ಕೃಷಿ ಪ್ರದೇಶವಾ-ಗಿದ್ದು, ಕೃಷಿಕರೇ ಹೆಚ್ಚಾಗಿ ನೆಲೆಸಿದ್ದಾರೆ. ಈ ಪ್ರದೇಶದ ಮೇಲೆ ಸೋಮವಾರ ಬೆಳಿಗ್ಗೆ 11 ಗಂಟೆಯ ಸುಮಾರಿಗೆ ಕ್ಷಿಪಣಿ ದಾಳಿ ನಡೆದಿದೆ ಎಂದು ರಕ್ಷಣಾ ಸೇವೆಗಳ ವಕ್ತಾರ ಜಾಕಿ ಹೆಲ್ಲರ್ ಹೇಳಿದ್ದಾರೆ.

ಕ್ಷಿಪಣಿ ದಾಳಿಯಲ್ಲಿ ಮೃತಪಟ್ಟ-ವರನ್ನು ಕೇರಳದ ಕೊಲ್ಲಂನ ನಿಬಿನ್ ಮ್ಯಾಕ್ಸ್‌ವೆಲ್ (30) ಎಂದು ಗುರುತಿಸಲಾಗಿದ್ದು, ಅವರ ದೇಹವನ್ನು ಝಿವ್ ಆಸ್ಪತ್ರೆಯಲ್ಲಿ ಇಡಲಾಗಿದೆ. ಗಾಯಗೊಂಡವರನ್ನು ಬುಷ್ ಜೋಸೆಫ್ ಜಾರ್ಜ್ (31) ಮತ್ತು ಪಾಲ್ ಮೆಲ್ವಿನ್ (28) ಎಂದು ಗುರುತಿಸಲಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಜಾರ್ಜ್ ಮುಖ ಮತ್ತು ದೇಹದ ಮೇಲೆ ಗಾಯಗಳಾಗಿದ್ದು, ಅವರನ್ನು ಬೈಲಿನ್ಸನ್ ಆಸ್ಪತ್ರೆಗೆ ಸೇರಿಸಲಾಗಿದೆ. ಮೆಲ್ವಿನ್ ಅವರನ್ನು ಉತ್ತರ ಇಸ್ರೇಲ್‌ನ ಸಫೆಡ್‌ನಲ್ಲಿರುವ ಝಿವ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರು ಇಡುಕ್ಕಿ ಜಿಲ್ಲೆಯವರು ಎಂದು ಮೂಲಗಳು ತಿಳಿಸಿವೆ.

'ಗಾಯಗೊಂಡವರಿಗೆ ಇಸ್ರೇಲ್‌ನಲ್ಲಿ ಪೂರ್ಣ ಪ್ರಮಾಣದ ವೈದ್ಯಕೀಯ ಚಿಕಿತ್ಸೆ ದೊರೆಯಲಿದೆ' ಎಂದು ರಾಯಭಾರ ಕಚೇರಿ ತಿಳಿಸಿದೆ.

ಇಸ್ರೇಲ್‌ಗೆ ತೆರಳಿ 2 ತಿಂಗಳಾಗಿತ್ತು

ಕೊಲ್ಲಂ (ಕೇರಳ, ಪಿಟಿಐ): ನಿಬಿನ್ ಮ್ಯಾಕ್ಸ್‌ವೆಲ್ ಎರಡು ತಿಂಗಳ ಹಿಂದೆಯಷ್ಟೆ ಕೋಳಿ ಫಾರ್ಮ್‌ನಲ್ಲಿ ಕೆಲಸ ಮಾಡಲೆಂದು ಇಲ್ಲಿಂದ ಇಸ್ರೇಲ್‌ಗೆ ಹೋಗಿದ್ದರು.

'ನನ್ನ ದೊಡ್ಡ ಮಗ ಸೋಮವಾರ ಸಂಜೆ ಕರೆ ಮಾಡಿ ದಾಳಿಯಿಂದ ಮ್ಯಾಕ್ಸ್‌ವೆಲ್ ಗಾಯಗೊಂಡಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ತಿಳಿಸಿದ್ದ. ಆಮೇಲೆ ನಡುರಾತ್ರಿ ಕರೆ ಮಾಡಿ ಅವನು ಮೃತಪಟ್ಟ ವಿಷಯ ತಿಳಿಸಿದ' ಎಂದು ಟಿ.ವಿ. ವಾಹಿನಿಯೊಂದಕ್ಕೆ ಮೃತ ಯುವಕನ ತಂದೆ ತಿಳಿಸಿದ್ದಾರೆ.

ಮ್ಯಾಕ್ಸ್‌ವೆಲ್‌ಗೆ ನಾಲ್ಕೂವರೆ ವರ್ಷದ ಮಗಳಿದ್ದಾಳೆ. ಪತ್ನಿ ಈಗ ಗರ್ಭಿಣಿಯಾಗಿದ್ದಾರೆ. ಹಿಂದೆ ಮಸ್ಕತ್ ಹಾಗೂ ದುಬೈನಲ್ಲಿ ಕೆಲಸ ಮಾಡಿದ್ದ ಮ್ಯಾಕ್ಸ್‌ವೆಲ್, ಅನಂತರ ಊರಿಗೆ ಮರಳಿದ್ದ. ನಾಲ್ಕು ದಿನಗಳಲ್ಲಿ ಮ್ಯಾಕ್ಸ್‌ವೆಲ್ ಪಾರ್ಥಿವ ಶರೀರ ಕೇರಳ ತಲುಪುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

'ಸುರಕ್ಷಿತ ಸ್ಥಳಗಳಿಗೆ ತೆರಳಿ'

ನವದೆಹಲಿ: ಇಸ್ರೇಲ್ ಗಡಿ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭಾರತೀಯ ಪ್ರಜೆಗಳು ಸುರಕ್ಷಿತ ಪ್ರದೇಶಗಳಿಗೆ ತೆರಳುವಂತೆ ಇಸ್ರೇಲ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಮಂಗಳವಾರ ಸಲಹೆ ನೀಡಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಚೇರಿಯು ಸಹಾಯವಾಣಿಯನ್ನು ಪ್ರಕಟಿಸಿದೆ. ಇದನ್ನು ತಮ್ಮ ಸಂಪರ್ಕದಲ್ಲಿ-ರುವ ಭಾರತೀಯರೊಂದಿಗೆ ಹಂಚಿಕೊಳ್ಳುವಂತೆ ಕಚೇರಿ ತಿಳಿಸಿದೆ.

ನೇಮಕಾತಿ ಮಂಡಳಿ: ರೇಣುಕಾ ಮಿಶ್ರಾಗೆ ಕೊಕ್

ಲಖನೌ (ಪಿಟಿಐ): ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಬೆನ್ನಲ್ಲೇ, ಉತ್ತರ ಪ್ರದೇಶ ಪೊಲೀಸ್ ನೇಮಕಾತಿ ಮತ್ತು ಬಡ್ತಿ ಮಂಡಳಿಯ ಅಧ್ಯಕ್ಷೆ ರೇಣುಕಾ ಮಿಶ್ರಾ ಅವರನ್ನು ಆ ಹುದ್ದೆಯಿಂದ ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಮಿಶ್ರಾ ಅವರಿಗೆ ಯಾವುದೇ ಹುದ್ದೆಯನ್ನು ತೋರಿಸಿಲ್ಲ. ಜಾಗೃತ ದಳದ ನಿರ್ದೇಶಕ ರಾಜೀವ್ ಕೃಷ್ಣ ಅವರಿಗೆ ನೇಮಕಾತಿ ಮಂಡಳಿಯ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಫೆ.17 ಮತ್ತು 18ರಂದು ನಡೆದಿದ್ದ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪ ಕೇಳಿ ಬಂದ ಕಾರಣ ರಾಜ್ಯ ಸರ್ಕಾರವು ಪರೀಕ್ಷೆಯನ್ನು ರದ್ದು ಮಾಡಿತ್ತು. ಅಲ್ಲದೆ ಆರು ತಿಂಗಳ ಒಳಗಾಗಿ ಮರು ಪರೀಕ್ಷೆ ನಡೆಸುವಂತೆ ಸೂಚಿಸಿತ್ತು. 48 ಲಕ್ಷಕ್ಕೂ ಅಧಿಕ ಆಕಾಂಕ್ಷಿಗಳು ಪರೀಕ್ಷೆ ಬರೆದಿದ್ದರು. ಈ ಪ್ರಕರಣದ ಬಗ್ಗೆ ವಿಶೇಷ ಕಾರ್ಯಪಡೆಯು ತನಿಖೆ ನಡೆಸಲಿದೆ ಎಂದು ಸರ್ಕಾರ ತಿಳಿಸಿದೆ.

ರಣಜಿ ಟ್ರೋಫಿ ಸೆಮಿಫೈನಲ್: ಮಧ್ಯಪ್ರದೇಶ ಪರ ಯಶ್ ದುಬೆ ಹೋರಾಟ

ವಿದರ್ಭಕ್ಕೆ ಚಿಗುರಿದ ಗೆಲುವಿನಾಸೆ

ನಾಗ್ಪುರ (ಪಿಟಿಐ): ದಿನದ ಕೊನೆಯಲ್ಲಿ ಯಶ್ ದುಬೆ (94, 212ಎ, 4x10) ಅವರ ಮಹತ್ವದ ವಿಕೆಟ್ ಪಡೆದ ವಿದರ್ಭ ತಂಡ, ರಣಜಿ ಟ್ರೋಫಿ ಫೈನಲ್‌ನ ನಾಲ್ಕನೇ ದಿನವಾದ ಮಂಗಳವಾರ ಆಟ ಮುಗಿದಾಗ ಮಧ್ಯಪ್ರದೇಶದ ವಿರುದ್ಧ ಹಿಡಿತ ಸಾಧಿಸಿದೆ. ಮಾತ್ರವಲ್ಲ, ರೋಚಕ ಗೆಲುವಿನತ್ತ ಹೆಜ್ಜೆಯಿಟ್ಟಿದೆ.

ವಿಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸೆಮಿಫೈನಲ್ ಪಂದ್ಯದ ಕೊನೆಯ ದಿನವಾದ ಬುಧವಾರ ಆತಿಥೇಯ ವಿದರ್ಭ ತಂಡ ನಾಲ್ಕು ವಿಕೆಟ್ ಬೇಗನೇ ಪಡೆದಲ್ಲಿ ಮುಂಬೈ ವಿರುದ್ಧ ಫೈನಲ್ ಆಡುವ ಅವಕಾಶ ಪಡೆಯಲಿದೆ. ಇನ್ನೊಂದೆಡೆ ಗೆಲುವಿಗೆ ಇನ್ನೂ 93 ರನ್ ಗಳಿಸಬೇಕಾಗಿರುವ ಮಧ್ಯಪ್ರದೇಶ ಬಾಲಂಗೋಚಿ ಆಟಗಾರರಿಂದ ಸ್ಫೂರ್ತಿಯುತ ಹೋರಾಟದ ವಿಶ್ವಾಸದಲ್ಲಿದೆ.

ಗೆಲುವಿಗೆ 321 ರನ್‌ಗಳ ಬೆನ್ನು ಹತ್ತಿರುವ ಮಧ್ಯಪ್ರದೇಶ ನಾಲ್ಕನೇ ದಿನದ ಕೊನೆಗೆ 6 ವಿಕೆಟ್‌ಗೆ 228 ರನ್ ಗಳಿಸಿದೆ. ಕೊನೆಯ ಪ್ರಮುಖ ಬ್ಯಾಟರ್ ಸಾರಾಂಶ್ ಜೈನ್ (ಔಟಾಗದೇ 16) ಜೊತೆ ಖಾತೆ ತೆರೆಯದ ಕುಮಾರ ಕಾರ್ತಿಕೇಯ ಆಟ ಮುಂದುವರಿಸಲಿದ್ದಾರೆ.


ಮಧ್ಯಪ್ರದೇಶ ತಂಡದ ಯಶ್ ದುಬೆ —ಎಕ್ಸ್ ಚಿತ್ರ

ಆದಿತ್ಯ ಸರ್ವಟೆ (51ಕ್ಕೆ2) ಮಾಡಿದ ದಿನದ ಕೊನೆಯ ಓವರ್‌ಗಿಂತ ಹಿಂದಿನ ಓವರ್‌ನಲ್ಲಿ, ಉತ್ತಮವಾಗಿ ಆಡುತ್ತಿದ್ದ ದುಬೆ, ಅಮನ್ ಮೊಖಾಡೆ ಅವರಿಗೆ ಕ್ಯಾಚಿತ್ತಿದ್ದು, ಪಂದ್ಯವನ್ನು ವಿದರ್ಭ ಕಡೆ ವಾಲಿಸಿತು. ಮೂರು ವರ್ಷಗಳಲ್ಲಿ ಎರಡನೆ ಬಾರಿ ಫೈನಲ್ ತಲುಪುವ ಮಧ್ಯಪ್ರದೇಶ ಆಸೆಗೆ ದೊಡ್ಡ ಹೊಡೆತ ನೀಡಿತು. ಇನ್ನೊಂದೆಡೆ ವಿಕೆಟ್‌ಗಳು ಉರುಳಿದರೂ ದುಬೆ ಬೇರೂರಿ ತಂಡಕ್ಕೆ ಆಧಾರವಾಗಿದ್ದರು.

ದುಬೆ ಎರಡನೇ ವಿಕೆಟ್‌ಗೆ ಹರ್ಷ್ ಗಾವಳಿ (67, 80ಎ, 4x11) ಜೊತೆ 106 ರನ್ ಸೇರಿಸಿದ್ದರು. ಆದರೆ ಈ ಜೊತೆಯಾಟ ಮುರಿದ ನಂತರ ನಿಯಮಿತವಾಗಿ ವಿಕೆಟ್‌ಗಳು ಬಿದ್ದವು. ಸಾಗರ್ ಸೋಲಂಕಿ (12), ಶುಭಂ ಶರ್ಮಾ (6) ಮತ್ತು ವೆಂಕಟೇಶ ಅಯ್ಯರ್ (19) ಹೆಚ್ಚುಹೊತ್ತು ನಿಲ್ಲಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಶತಕ ಹೊಡೆದಿದ್ದ ಮಾಧವ ಮಂತ್ರಿ ಎರಡನೇ ಇನಿಂಗ್ಸ್‌ನಲ್ಲಿ ಎಂಟು ರನ್ ಗಳಿಸಲಷ್ಟೇ ಶಕ್ತರಾದರು.

ಇದಕ್ಕೆ ಮೊದಲು, 6 ವಿಕೆಟ್‌ಗೆ 343 ರನ್‌ಗಳೊಡನೆ ಎರಡನೇ ಇನಿಂಗ್ಸ್ ಮುಂದುವರಿಸಿದ ವಿದರ್ಭ ಕೊನೆಯ 4 ವಿಕೆಟ್‌ಗಳಿಂದ 59 ರನ್ ಸೇರಿಸಿ 402 ರನ್‌ಗಳಿಗೆ ಆಲೌಟ್ ಆಯಿತು. 97 ರನ್ ಗಳಿಸಿ ಅಜೇಯರಾಗಿದ್ದ ಯಶ್ ರಾಥೋಡ್ ಶತಕ ಪೂರೈಸಿದರಲ್ಲದೇ ಅದನ್ನು 141 ರನ್‌ಗಳಿಗೆ (200 ಎ, 4x18, 6x2) ಬೆಳೆಸಿದರು. ಮಧ್ಯಪ್ರದೇಶ ಕಡೆ ಅನುಭವ ಮಂಡಲ್ 5 ವಿಕೆಟ್ ಪಡೆದರು. ಮಧ್ಯಪ್ರದೇಶ ಮೊದಲ ಇನಿಂಗ್ಸ್‌ನಲ್ಲಿ 82 ರನ್‌ಗಳ ಮುನ್ನಡೆ ಪಡೆದಿತ್ತು.

ಸ್ಕೋರುಗಳು: ವಿದರ್ಭ: 170 ಮತ್ತು 402 (ಯಶ್ ರಾಥೋಡ್ 141, ಆದಿತ್ಯ ಸರ್ವಟೆ 21; ಅನುಭವ್ ಅಗರ್ವಾಲ್ 92ಕ್ಕೆ5, ಕುಲವಂತ್ ಖೆಜ್ರೋಲಿಯಾ 64ಕ್ಕೆ2); ಮಧ್ಯಪ್ರದೇಶ: 252 ಮತ್ತು 71 ಓವರುಗಳಲ್ಲಿ 6 ವಿಕೆಟ್‌ಗೆ 228 (ಯಶ್ ದುಬೆ 94, ಹರ್ಷ್ ಗಾವಳಿ 67; ಆದಿತ್ಯ ಸರ್ವಟೆ 51ಕ್ಕೆ2, ಅಕ್ಷಯ್ ವಾಖರೆ 38ಕ್ಕೆ3).

ಕರ್ನಾಟಕ ಫೈನಲ್‌ಗೆ

ಬೆಂಗಳೂರು: ಪಾರಸ್ ಗುರುಭಕ್ಷ್ ಆರ್ಯ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಬಲದಿಂದ ಕರ್ನಾಟಕ ತಂಡವು ನಾಗ್ಪುರ ಸಮೀಪದ ಕಲಮ್ನದಲ್ಲಿ ನಡೆದ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ವಿದರ್ಭ ತಂಡವನ್ನು 278 ರನ್‌ಗಳಿಂದ ಮಣಿಸಿತು.

ಮತ್ತೊಂದು ಸೆಮಿಫೈನಲ್‌ನಲ್ಲಿ ಉತ್ತರ ಪ್ರದೇಶ ಮತ್ತು ಮುಂಬೈ ತಂಡಗಳು ಸೆಣಸುತ್ತಿದ್ದು, ವಿಜೇತ ತಂಡವು ಮಾರ್ಚ್ 10ರಿಂದ ನಡೆಯುವ ಫೈನಲ್‌ನಲ್ಲಿ ಕರ್ನಾಟಕವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ 466. ವಿದರ್ಭ 73. ಎರಡನೇ ಇನಿಂಗ್ಸ್: ಕರ್ನಾಟಕ 141. ವಿದರ್ಭ 49 ಓವರುಗಳಲ್ಲಿ 256 (ಅಭಿಷೇಕ್ ಎಸ್. ಅಗರ್‌ವಾಲ್ 78, ಸತ್ಯಂ ಭೋಯರ್ 34; ಪಾರಸ್ ಗುರುಭಕ್ಷ್ ಆರ್ಯ 108ಕ್ಕೆ 6, ಮೊಹ್ಸಿನ್ ಖಾನ್ 75ಕ್ಕೆ 2, ಧೀರಜ್ ಜೆ.ಗೌಡ 54ಕ್ಕೆ 2). ಫಲಿತಾಂಶ: ಕರ್ನಾಟಕಕ್ಕೆ 278 ರನ್‌ಗಳ ಜಯ.

ಟಾರ್ಪಿಡೋಸ್‌ಗೆ ಜಯ

ಚೆನ್ನೈ: ಬೆಂಗಳೂರು ಟಾರ್ಪಿಡೋಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಹೈದರಾಬಾದ್ ಬ್ಲಾಕ್ ಹಾಕ್ಸ್ ವಿರುದ್ಧ 15-6, 15-11, 15-12 ರಿಂದ ಗೆಲುವು ಸಾಧಿಸಿದೆ.

ಚೆನ್ನೈನ ಜವಾಹರ್‌ಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಬೆಂಗಳೂರು ಆಟಗಾರರು ಎಲ್ಲಾ ಹಂತಗಳಲ್ಲೂ ಮೇಲುಗೈ ಸಾಧಿಸಿ ಎದುರಾಳಿ ತಂಡವನ್ನು ಮಣಿಸಿದರು.

ಡೆಲ್ಲಿಗೆ ಸವಾಲಾಗದ ಮುಂಬೈ

ಡಬ್ಲ್ಯುಪಿಎಲ್: ಲ್ಯಾನಿಂಗ್, ಜೆಮಿಮಾ ಬಿರುಸಿನ ಅರ್ಧಶತಕ

ನವದೆಹಲಿ: ನಾಯಕಿ ಮೆಗ್ ಲ್ಯಾನಿಂಗ್ ಮತ್ತು ಜೆಮಿಮಾ ರಾಡ್ರಿಗಸ್ ಅವರ ಬಿರುಸಿನ ಅರ್ಧ ಶತಕಗಳ ನಂತರ ಬೌಲರ್‌ಗಳ ಸಾಂಘಿಕ ಪ್ರದರ್ಶನದಿಂದ ಡೆಲ್ಲಿ ಕ್ಯಾಪಿಟಲ್ಸ್ ತವರಿನಲ್ಲಿ ಶುಭಾರಂಭ ಮಾಡಿತು. ಮಹಿಳಾ ಪ್ರೀಮಿಯರ್ ಲೀಗ್‌ನ ತವರಿನ ಲೆಗ್‌ನ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 29 ರನ್‌ಗಳಿಂದ ಜಯಿಸಿದ ಡೆಲ್ಲಿ ತಂಡ ಲೀಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮೆಗ್ ಲ್ಯಾನಿಂಗ್ (53, 38ಎಸೆತ, 4x6, 6x2) ಮತ್ತು ಜೆಮಿಮಾ ರಾಡ್ರಿಗಸ್ (ಅಜೇಯ 69, 33 ಎಸೆತ, 4x8, 6x3) ಅವರ ಮಿಂಚಿನ ಆಟದ ನೆರವಿನಿಂದ ಡೆಲ್ಲಿ 4 ವಿಕೆಟ್‌ಗೆ 192 ರನ್‌ಗಳ ದೊಡ್ಡ ಮೊತ್ತ ಪೇರಿಸಿತು. ಆರಂಭದಲ್ಲೇ ಕುಸಿದ ಮುಂಬೈ ಇಂಡಿಯನ್ಸ್ ತಂಡ ಯಾವ ಹಂತದಲ್ಲೂ ಈ ಸವಾಲಿನ ಗುರಿಯನ್ನು ಬೆನ್ನಟ್ಟುವಂತೆ ಕಾಣಲಿಲ್ಲ. ಅದು 20 ಓವರುಗಳಲ್ಲಿ 8 ವಿಕೆಟ್‌ಗೆ 163 ರನ್ ಗಳಿಸಲು ಶಕ್ತವಾಯಿತು.

ಟಾಸ್ ಸೋತ ನಂತರ ಡೆಲ್ಲಿ ತಂಡಕ್ಕೆ ಲ್ಯಾನಿಂಗ್ ಮತ್ತು ಶಫಾಲಿ ಬಿರುಸಿನ ಆರಂಭ ನೀಡಿದರು. ಓವರಿಗೆ ಹತ್ತರ ಸರಾಸರಿಯಲ್ಲಿ 4.3 ಓವರುಗಳಲ್ಲಿ 48 ರನ್ ಹರಿದುಬಂತು. ಮೂರನೇ ಓವರ್‌ನಲ್ಲಿ ಸೈಕಾ ಇಶಾಖ್ ಅವರಿಂದ ಜೀವದಾನ ಪಡೆದಿದ್ದ ಶಫಾಲಿ, ಶಬ್ನಿಮ್ ಬೌಲಿಂಗ್‌ನಲ್ಲಿ ಸತತ ಎರಡು ಸಿಕ್ಸರ್ ಎತ್ತಿದರು. ನಂತರ ಅವರಿಗೇ ವಿಕೆಟ್ ನೀಡಿದರು.

ಇನ್ನೊಂದೆಡೆ ರನ್ ವೇಗ ಕಾಪಾಡಿಕೊಂಡ ಲ್ಯಾನಿಂಗ್, ಪೂಜಾ ವಸ್ತ್ರಾಕರ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಳ್ಳುವ ಮೊದಲು ಹಾಲಿ ಲೀಗ್‌ನಲ್ಲಿ ಮೂರನೇ ಅರ್ಧ ಶತಕ ಪೂರೈಸಿದರು. ಈ ಹಿಂದಿನ ಪಂದ್ಯಗಳಲ್ಲಿ ಲಯಕ್ಕೆ ಪರದಾಡಿದ್ದ ಜೆಮಿಮಾ ರಾಡ್ರಿಗಸ್ ಇಲ್ಲಿ ಆರಂಭದಿಂದಲೇ ಆಕ್ರಮಣಕಾರಿಯಾದರು. 19ನೇ ಓವರ್‌ನಲ್ಲಿ ಶಿವರ್ ಬ್ರಂಟ್ ಬೌಲಿಂಗ್‌ನಲ್ಲಿ ಸಿಕ್ಸರ್ ಎತ್ತಿ ಅರ್ಧ ಶತಕ ಪೂರೈಸಿದ ಅವರು ತಂಡದ ಮೊತ್ತವನ್ನು 200ರ ಸಮೀಪ ತಲುಪಿಸಿದರು.

ಮುಂಬೈ ತಂಡ ಮೊದಲ ಮೂರು ವಿಕೆಟ್‌ಗಳನ್ನು 29 ರನ್ನಿಗೆ ಕಳೆದುಕೊಂಡು ಸಂಕಷ್ಟಕ್ಕೆ ಒಳಗಾಯಿತು. ನಂತರ ಹೋರಾಟ ತೋರುವಲ್ಲಿ ವಿಫಲವಾಯಿತು. ಕೆಳಮಧ್ಯಮ ಕ್ರಮಾಂಕದಲ್ಲಿ ಅಮನ್‌ಜೋತ್ ಕೌರ್ (42, 27ಎ, 4X7) ಮಾತ್ರ ಪ್ರತಿರೋಧ ತೋರಿದರು. ಡೆಲ್ಲಿ ಕ್ಯಾಪಿಟಲ್ಸ್ ಪರ ಎಡಗೈ ಸ್ಪಿನ್ನರ್ ಜೆಸ್ ಯೊನಾಸನ್ 21 ರನ್ನಿಗೆ 3 ವಿಕೆಟ್ ಪಡೆದು ಪರಿಣಾಮಕಾರಿ ಎನಿಸಿದರು. ಡೆಲ್ಲಿ ತಂಡ ಐದು ಪಂದ್ಯಗಳಲ್ಲಿ ನಾಲ್ಕು ಗೆದ್ದು ಎಂಟು ಪಾಯಿಂಟ್ ಕಲೆಹಾಕಿ ಅಗ್ರಸ್ಥಾನ ಕಾಪಾಡಿಕೊಂಡಿದೆ.


ಡೆಲ್ಲಿ ತಂಡದ ಜೆಮಿಮಾ ರಾಡ್ರಿಗಸ್ ಬ್ಯಾಟಿಂಗ್ –ಪಿಟಿಐ ಚಿತ್ರ

ಮುಂಬೈ ಇಂಡಿಯನ್ಸ್‌ಗೆ ಇದು ಎರಡನೇ ಸೋಲು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರುಗಳಲ್ಲಿ 4 ವಿಕೆಟ್‌ಗೆ 192 (ಮೆಗ್ ಲ್ಯಾನಿಂಗ್ 53, ಶಫಾಲಿ ವರ್ಮಾ 28, ಜೆಮಿಮಾ ರಾಡ್ರಿಗಸ್ ಔಟಾಗದೇ 69; ಸೈಕಾ ಇಶಾಖ್ 29ಕ್ಕೆ1, ಪೂಜಾ ವಸ್ತ್ರಾಕರ್ 20ಕ್ಕೆ1); **ಮುಂಬೈ ಇಂಡಿಯನ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 163 (ಹೇಲಿ ಮ್ಯಾಥ್ಯೂಸ್ 29, ಅಮನ್‌ಜೋತ್ ಕೌರ್ 42, ಸಜೀವನ್ ಸಜನಾ ಔಟಾಗದೇ 24; ಮರೈಝನ್ ಕಾಪ್ 37ಕ್ಕೆ2, ಜೆಸ್ ಯೊನಾಸನ್ 21ಕ್ಕೆ3).
ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 29 ರನ್ ಜಯ
ಪಂದ್ಯದ ಆಟಗಾರ್ತಿ: ಜೆಮಿಮಾ ರಾಡ್ರಿಗಸ್

ಬುಧವಾರದ ಪಂದ್ಯ: ರಾಯಲ್ ಚಾಲೆಂಜರ್ಸ್ ಬೆಂಗಳೂರು– ಗುಜರಾತ್ ಜೈಂಟ್ಸ್ (ರಾತ್ರಿ 7.30)
ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಫ್ರೆಂಚ್ ಓಪನ್: ಲಕ್ಷ್ಯಗೆ ಜಯ, ರಾಜಾವತ್‌ಗೆ ನಿರಾಸೆ

ಸಾತ್ವಿಕ್–ಚಿರಾಗ್ ಮುನ್ನಡೆ

ಪ್ಯಾರಿಸ್ (ಪಿಟಿಐ): ವಿಶ್ವದ ಅಗ್ರಗಣ್ಯ ಡಬಲ್ಸ್ ಆಟಗಾರರಾದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಉತ್ತಮ ಹೋರಾಟದ ಪಂದ್ಯದಲ್ಲಿ ಮಲೇಷ್ಯಾದ ಓಂಗ್ ಯೂ ಸಿನ್ ಮತ್ತು ಟಿಯೊ ಈ ಯಿ ವಿರುದ್ಧ ಗೆಲುವು ಸಾಧಿಸಿ ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿಗೆ ಪ್ರವೇಶಿಸಿತು.

ಭಾರತದ ಆಟಗಾರರು ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ವಿಶ್ವದ 12ನೇ ಶ್ರೇಯಾಂಕಿತ ಮಲೇಷ್ಯಾ ಜೋಡಿಯನ್ನು 21-13, 24-22 ರಿಂದ 47 ನಿಮಿಷಗಳಲ್ಲಿ ಮಣಿಸಿತು. ಕೊನೆಯ ಎಂಟು ಮುಖಾಮುಖಿಯಲ್ಲಿ ಇದು ಭಾರತದ ಜೋಡಿಗೆ ಐದನೇ ಜಯ.

ಏಷ್ಯನ್ ಗೇಮ್ಸ್ ಚಾಂಪಿಯನ್ನರಾದ ಸಾತ್ವಿಕ್ ಮತ್ತು ಚಿರಾಗ್ ಮುಂದಿನ ಸುತ್ತಿನಲ್ಲಿ ಮಲೇಷ್ಯಾದ ಇನ್ನೊಂದು ಜೋಡಿ- ಮನ್ ವೀ ಚೊಂಗ್ ಮತ್ತು ಕೈ ವುನ್ ಟೀ ಅವರನ್ನು ಎದುರಿಸಲಿದ್ದಾರೆ.


ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ


ಭಾರತದ ಆಟಗಾರ್ತಿಯರ ವ್ಯವಹಾರವಾಗಿದ್ದ ಡಬಲ್ಸ್ ಪಂದ್ಯದಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತರಾದ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು 16-21, 21-19, 21-17 ಅಂತರದಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ವಿರುದ್ಧ ಜಯಗಳಿಸಿ ಎರಡನೇ ಸುತ್ತಿಗೆ ಪ್ರವೇಶಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ಭಾರತದ ಲಕ್ಷ್ಯ ಸೇನ್ ಅವರು ಆರಂಭಿಕ ಸುತ್ತಿನ ಪಂದ್ಯದಲ್ಲಿ 15-21, 21-15, 21-3 ರಿಂದ ಜಪಾನ್‌ನ ಕಾಂತಾ ತ್ಸುನೆಯಮಾ ವಿರುದ್ಧ ಜಯ ಗಳಿಸಿದರು. ಅವರು ಪ್ರೀ ಕ್ವಾರ್ಟರ್‌ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಲಿ ಶೆನ್ ಫೆಂಗ್ (ಚೀನಾ) ಅವರನ್ನು ಎದುರಿಸಲಿದ್ದಾರೆ.

ಮತ್ತೊಂದು ಪಂದ್ಯದಲ್ಲಿ ಪ್ರಿಯಾಂಶು ರಾಜಾವತ್ ಅವರು 8-21, 15-21 ರಿಂದ ಅಗ್ರ ಶ್ರೇಯಾಂಕದ ವಿಕ್ಟರ್ ಅಕ್ಸೆಲ್ಸನ್ (ಡೆನ್ಮಾರ್ಕ್) ಅವರಿಗೆ ಮಣಿದರು.

ಚೆಸ್: ಅಬ್ದುಸತ್ತಾರೋವ್ ವಿರುದ್ಧ ಗೆದ್ದ ಪ್ರಜ್ಞಾನಂದ

ಪ್ರಾಗ್ (ಪಿಟಿಐ): ಹಿಂದಿನ ದಿನದವರೆಗೆ ಅಗ್ರಸ್ಥಾನದಲ್ಲಿದ್ದ ನಾದಿರ್ಬೆಕ್ ಅಬ್ದುಸತ್ತಾರೊವ್ (ಉಜ್ಬೇಕಿಸ್ತಾನ) ಅವರನ್ನು ಸೋಲಿಸಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ, ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಮಂಗಳವಾರ ಆರನೇ ಸುತ್ತಿನ ನಂತರ ಜಂಟಿ ಎರಡನೇ ಸ್ಥಾನಕ್ಕೆ ಏರಿದ್ದಾರೆ.


ಪ್ರಜ್ಞಾನಂದ

ಕಪ್ಪು ಕಾಯಿಗಳಲ್ಲಿ ಗಳಿಸಿದ ಈ ಗೆಲುವಿನಿಂದ ಪ್ರಜ್ಞಾನಂದ ಅಗ್ರಸ್ಥಾನದ ಸನಿಹದಲ್ಲಿದ್ದಾರೆ. ಹತ್ತು ಆಟಗಾರರ ರೌಂಡ್‌ರಾಬಿನ್ ಲೀಗ್‌ನಲ್ಲಿ ಇನ್ನೂ ಮೂರು ಸುತ್ತುಗಳು ಉಳಿದಿವೆ.

ಎರಡನೇ ಸ್ಥಾನದಲ್ಲಿದ್ದ ಪರ್ಹಾಮ್ ಮಘಸೂಡ್ಲು ಅವರು ಆರನೇ ಸುತ್ತಿನಲ್ಲಿ ಝೆಕ್ ರಿಪಬ್ಲಿಕ್‌ನ ಎನ್ಗುಯೆನ್ ಥಾಯ್ ದೈವಾನ್ ಅವರಿಗೆ ಸೋತಿದ್ದೂ ಪ್ರಜ್ಞಾನಂದ ಅವರಿಗೆ ಪರೋಕ್ಷವಾಗಿ ನೆರವಾಗಿದೆ.

ಅಬ್ದುಸತ್ತಾರೋವ್ ಅವರು ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದ್ದು ಅಗ್ರಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ, ರಿಚರ್ಡ್ ರ‍್ಯಾಪೋರ್ಟ್ (ರುಮೇನಿಯಾ) ಮತ್ತು ಇರಾನ್‌ನ ಮಘಸೂಡ್ಲು ತಲಾ 3.5 ಪಾಯಿಂಟ್ಸ್ ಶೇಖರಿಸಿದ್ದು ಎರಡನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಭಾರತದ ಇನ್ನೊಬ್ಬ ಆಟಗಾರ ಡಿ.ಗುಕೇಶ್ ಅವರು ತಳದಲ್ಲಿರುವ ಪೋಲೆಂಡ್‌ನ ಮಾಥ್ಯೂಸ್ ಬಾರ್ಟೆಲ್ (2) ಅವರಿಗೆ ಶರಣಾದರು. ಬಿಳಿಕಾಯಿಗಳಲ್ಲಿ ಆಡುವ ಅವಕಾಶ ಪಡೆದ ಗುಕೇಶ್ ಗೆಲ್ಲುವರೆಂಬ ನಿರೀಕ್ಷೆ ಹುಸಿಯಾಯಿತು. ವಿದಿತ್ ಗುಜರಾತಿ (2) ಇನ್ನೊಂದು ಪಂದ್ಯದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ (3) ಅವರೆದುರು ಸೋಲನುಭವಿಸಿದರು. ಝೆಕ್ ರಿಪಬ್ಲಿಕ್‌ನ ಡೇವಿಡ್ ನವಾರ (3) ಮತ್ತು ರುಮೇನಿಯಾದ ರ‍್ಯಾಪೋರ್ಟ್ (3.5) ತಮ್ಮ ನಡುವಣ ಪಂದ್ಯ 'ಡ್ರಾ' ಮಾಡಿಕೊಂಡರು.

ಪಿಸಿಐ ಅಮಾನತು ಹಿಂಪಡೆದ ಸಚಿವಾಲಯ

ನವದೆಹಲಿ (ಪಿಟಿಐ): ದೀರ್ಘಕಾಲದಿಂದ ನನೆಗುದಿಯಲ್ಲಿದ್ದ ಚುನಾವಣಾ ಪ್ರಕ್ರಿಯೆಯನ್ನು ಭಾರತ ಪ್ಯಾರಾಲಿಂಪಿಕ್ಸ್ ಸಮಿತಿಯು (ಪಿಸಿಐ) ಆರಂಭಿಸಿದ ಕಾರಣ ಕ್ರೀಡಾ ಸಚಿವಾಲಯ ಅದರ ಮೇಲೆ ಈ ಹಿಂದೆ ವಿಧಿಸಿದ್ದ ಅಮಾನತನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಂಗಳವಾರ ಹಿಂತೆಗೆದುಕೊಂಡಿದೆ. ಮೂರು ಬಾರಿಯ ಪ್ಯಾರಾಲಿಂಪಿಕ್ ಪದಕ ವಿಜೇತ ಜಾವೆಲಿನ್ ಥ್ರೊ ಪಟು ದೇವೇಂದ್ರ ಜಜಾರಿಯಾ ಅವರು ಪಿಸಿಐ ಅಧ್ಯಕ್ಷರಾಗುವುದು ಖಚಿತವಾಗಿದೆ.

ರಾಷ್ಟ್ರೀಯ ಕ್ರೀಡಾ ಸಂಹಿತೆಯ ಅನ್ವಯ ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲು ಉದ್ದೇಶಪೂರ್ವಕವಾಗಿ ವಿಳಂಬ ಮಾಡಿದ್ದಕ್ಕಾಗಿ ಸಚಿವಾಲಯವು ಫೆಬ್ರುವರಿ 2 ರಂದು ಪಿಸಿಐ ಮಾನ್ಯತೆಯನ್ನು ಅಮಾನತಿನಲ್ಲಿಟ್ಟಿತ್ತು. ಮಾರ್ಚ್ 6 ರಿಂದ 15 ರವರೆಗೆ ಪ್ಯಾರಾ ಶೂಟಿಂಗ್ ವಿಶ್ವಕಪ್ ನಡೆಯಲಿರುವ ಕಾರಣ ಜನವರಿ 31ಕ್ಕಿಂತ ಮೊದಲು ನಡೆಸಬೇಕಿದ್ದ ಚುನಾವಣೆಯನ್ನು ಪಿಸಿಐ ಮಾರ್ಚ್ 28ಕ್ಕೆ ಮುಂದೂಡಿತ್ತು. ಅಮಾನತುಗೊಂಡ ನಂತರ, ಆಡಳಿತ ಮಂಡಳಿ ಸದಸ್ಯರನ್ನು ಆಯ್ಕೆ ಮಾಡಲು ಮಾರ್ಚ್ 9 ರಂದು ಚುನಾವಣೆ ನಡೆಸುವುದಾಗಿ ಮಂಡಳಿ ಉದ್ದೇಶಿಸಿತು. ನಾಮಪತ್ರ ಸ್ವೀಕಾರ ಪ್ರಕ್ರಿಯೆ ಪ್ರಾರಂಭಿಸಿತು. ಹೆಚ್ಚಿನ ಉನ್ನತ ಹುದ್ದೆಗಳಿಗೆ ಚುನಾವಣೆಯಿಲ್ಲದೇ ಅವಿರೋಧವಾಗಿ ಆಯ್ಕೆ ನಡೆಯುವುದು ಖಚಿತವಾಗಿದೆ.

'ಚುನಾವಣಾ ಪ್ರಕ್ರಿಯೆಯಲ್ಲಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳು ಸರ್ವಾನುಮತದಿಂದ ಆಯ್ಕೆಯಾಗುವ ಹಂತ ತಲುಪಿರುವುದರಿಂದ ಮತ್ತು ಮಾರ್ಚ್ 6-15ರ ವರೆಗೆ ನವದೆಹಲಿಯಲ್ಲಿ ವಿಶ್ವ ಪ್ಯಾರಾ ಶೂಟಿಂಗ್ ವಿಶ್ವಕಪ್ ಆಯೋಜನೆಯನ್ನು ಪರಿಗಣಿಸಿ ಪಿಸಿಐ ಮೇಲಿನ ಅಮಾನತನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲು ನಿರ್ಧರಿಸಲಾಗಿದೆ' ಎಂದು ಪಿಸಿಐಗೆ ಸಚಿವಾಲಯ ಪತ್ರ ಬರೆದಿದೆ.

ವಿವಿಧ ಹುದ್ದೆಗಳಿಗೆ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾಧಿಕಾರಿ ಉಮೇಶ್ ಸಿನ್ಹಾ ಬಿಡುಗಡೆ ಮಾಡಿದ್ದು, ಅಧ್ಯಕ್ಷ ಸ್ಥಾನಕ್ಕೆ ಜಜಾರಿಯಾ ಮಾತ್ರ ಕಣದಲ್ಲಿದ್ದಾರೆ.

ರೂಟ್, ಸ್ಮಿತ್, ಕೇನ್‌ಗೆ ಬೌಲ್ ಮಾಡುವುದು ಇಷ್ಟ: ಅಶ್ವಿನ್



ಧರ್ಮಶಾಲಾ (ಪಿಟಿಐ): 'ಜೋ ರೂಟ್, ಸ್ಟೀವನ್ ಸ್ಮಿತ್ ಮತ್ತು ಕೇನ್ ವಿಲಿಯಮ್ಸನ್ ಅವರಿಗೆ ಬೌಲಿಂಗ್ ಮಾಡುವುದನ್ನು ನಾನು ಖುಷಿಪಡುತ್ತೇನೆ. ಅವರು ಈಗ ವಿಶ್ವದ ಅತ್ಯುತ್ತಮ ಬ್ಯಾಟರ್‌ಗಳಾಗಿ ಗುರುತಿಸಿಕೊಂಡಿದ್ದಾರೆ' ಎಂದು ಸ್ಪಿನರ್ ರವಿಚಂದ್ರನ್ ಅಶ್ವಿನ್ ಅಭಿಪ್ರಾಯಪಟ್ಟರು.

ಧರ್ಮಶಾಲಾದಲ್ಲಿ ಇಂಗ್ಲೆಂಡ್ ವಿರುದ್ಧ ಮಾರ್ಚ್ 7 ರಿಂದ ನಡೆಯಲಿರುವ ಟೆಸ್ಟ್ ಸರಣಿಯ ಐದನೇ ಹಾಗೂ ಅಂತಿಮ ಪಂದ್ಯ ಅಶ್ವಿನ್ ಪಾಲಿಗೆ ನೂರನೇ ಟೆಸ್ಟ್ ಆಗಲಿದೆ. 37 ವರ್ಷದ ಸ್ಪಿನ್ನರ್ 13 ವರ್ಷಗಳ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಮ್ಮ ಸ್ಮರಣೀಯ ಕ್ಷಣ, ಕಲಿತ ಪಾಠಗಳನ್ನು ಮಾಧ್ಯಮಗೋಷ್ಠಿಯಲ್ಲಿ ತೆರೆದಿಟ್ಟರು.

'ಪ್ರಥಮ ದರ್ಜೆ ಪಂದ್ಯವನ್ನಾಡುವ ಮೊದಲು ನಾನು ತಮಿಳುನಾಡು ತಂಡದ 'ನೆಟ್ಸ್'ನಲ್ಲಿ ಎಸ್.ಬದರೀನಾಥ್ ಅವರಿಗೆ ಬೌಲ್ ಮಾಡಿದ್ದೆ. ಅವರು ಸ್ಪಿನ್ ಎದುರು ಅತ್ಯುತ್ತಮ ಆಟಗಾರ. ಹಾಗೆಯೇ ಮಿಥುನ್ ಮನ್ಹಾಸ್ ಮತ್ತು ರಜತ್ ಭಾಟಿಯಾ (ಇಬ್ಬರೂ ದೆಹಲಿ) ಅವರಿಗೂ ಬೌಲ್ ಮಾಡಿದ್ದೆ. ಈ ಮೂವರೂ ಸ್ಪಿನ್ ಎದುರಿಸುವಲ್ಲಿ ಚಾಣಾಕ್ಷರು. ಅಂತರರಾಷ್ಟ್ರೀಯ ಕ್ರಿಕೆಟ್ ಆಡುವ ಮೊದಲು ನನಗೆ ಒಂದು ಹಂತದ 'ಶಾಲಾ ಶಿಕ್ಷಣ' ಇವರಿಂದ ದೊರಕಿತ್ತು' ಎಂದು ಅಶ್ವಿನ್ ಹೇಳಿದರು. ಈ ಮೂವರು ನನಗೆ ಅಮೂಲ್ಯ ಪಾಠಗಳನ್ನು ಕಲಿಸಿದರು ಎಂದರು.

ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ಮೊದಲೇ ಅವರು ಸೀಮಿತ ಓವರುಗಳ ಕ್ರಿಕೆಟ್‌ನಲ್ಲಿ ಭಾರತ ತಂಡಕ್ಕೆ ಆಡಿದ್ದರು. ಐಪಿಎಲ್‌ನಲ್ಲಿ ಸಿಎಸ್‌ಕೆ ತಂಡದ ಪರ ಪ್ರದರ್ಶನ ಅವರಿಗೆ ಈ ಅವಕಾಶ ನೀಡಿತ್ತು.

ಆದರೆ ಚುಟುಕು ಕ್ರಿಕೆಟ್‌ನಿಂದಾಗಿಯಷ್ಟೇ ತಮಗೆ ಭಾರತ ತಂಡದಲ್ಲಿ ಆಡುವ ಅವಕಾಶ ಸಿಕ್ಕಿತು ಎಂಬುದನ್ನು ಅವರು ಒಪ್ಪಲಿಲ್ಲ. 'ನಾನು ಟಿ20 ಕ್ರಿಕೆಟ್‌ನಿಂದಾಗಿ ಭಾರತ ತಂಡಕ್ಕೆ ಬಂದಿದ್ದೇನೆ ಎಂಬುದು ಸರಿಯಲ್ಲ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 30–40 ಪಂದ್ಯಗಳನ್ನು ಆಡಿದ್ದೆ. ನಂತರವಷ್ಟೇ ತಂಡಕ್ಕೆ ಆಯ್ಕೆಯಾದೆ' ಎಂದರು.

ಮೈಲಿಗಲ್ಲಿಗಿಂತ ಗೆಲುವು ಮುಖ್ಯ: 'ನೂರನೇ ಟೆಸ್ಟ್ ಎಂಬುದು ನನಗೆ ಸಂಖ್ಯೆ ಮಾತ್ರ. ಇಂಗ್ಲೆಂಡ್ ವಿರುದ್ಧ ಸರಣಿಯ ಐದನೇ ಹಾಗೂ ಕೊನೆಯ ಪಂದ್ಯ ಗೆಲ್ಲುವುದು ನನಗೆ ಅದಕ್ಕಿಂತ ಹೆಚ್ಚು ಮುಖ್ಯವಾಗುತ್ತದೆ' ಎಂದು ಅಶ್ವಿನ್ ಹೇಳಿದರು.

'ಇದು ನನಗೆ ಮಹತ್ವದ್ದೇನಲ್ಲ. ನನ್ನ ಪತ್ನಿ ಮತ್ತು ತಾಯಿಗೆ ತುಂಬಾ ಮಹತ್ವದ್ದು. ನನ್ನ ಮಗಳು ನನಗಿಂತ ಹೆಚ್ಚು ಕಾತುರಳಾಗಿದ್ದಾಳೆ. ನನಗೆ ಇದು ಸಂಖ್ಯೆ ಮಾತ್ರ' ಎಂದರು.

ಹಾಲಿ ಸರಣಿಯ ಮೂರನೇ ಪಂದ್ಯದಲ್ಲಿ ಅಶ್ವಿನ್ 500 ವಿಕೆಟ್‌ಗಳ ಮೈಲಿಗಲ್ಲು ತಲುಪಿದ್ದರು.

ಬಾಕ್ಸಿಂಗ್: ಲಕ್ಷ್ಯ ಚಾಹರ್‌ಗೆ ಸೋಲು

ಬುಸ್ಟೊ ಅರ್ಸಿಝಿಯೊ (ಇಟಲಿ), (ಪಿಟಿಐ): ಹಾಲಿ ರಾಷ್ಟ್ರೀಯ ಚಾಂಪಿಯನ್ ಲಕ್ಷ್ಯ ಚಾಹರ್ ಅವರು ಪ್ರಥಮ ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಕ್ವಾಲಿಫೈಯರ್ಸ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದ ಭಾರತದ ಐದನೇ ಬಾಕ್ಸರ್ ಎನಿಸಿದರು. ಅವರು ಸೋಮವಾರ ತಡರಾತ್ರಿ ಇರಾನ್‌ನ ಘೆಶ್ಲಾಗಿ ಮೇಸಮ್ ಎದುರು ನಡೆದ ಸೆಣಸಾಟದ ಮೂರನೇ ಸುತ್ತಿನಲ್ಲಿ ಹೊರಬಿದ್ದರು. ಆ ಮೂಲಕ ಭಾರತದ ವೈಫಲ್ಯದ ಸರಮಾಲೆ ಮುಂದುವರಿಯಿತು. ಘೆಶ್ಲಾಗಿ ಅವರು 2021ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಮೊದಲ ಸುತ್ತಿನಲ್ಲಿ 2–3 ರಿಂದ ಸೋತ ಲಕ್ಷ್ಯ, ಎರಡನೇ ಸುತ್ತನ್ನು 3–2 ರಿಂದ ಜಯಿಸಿದರು. ಆದರೆ ಮೂರನೇ ಸುತ್ತಿನಲ್ಲಿ ನಾಕ್‌ಔಟ್ ಆಧಾರದಲ್ಲಿ ಸೋತರು.


ಲಕ್ಷ್ಯ ಚಾಹರ್

ಭಾರತದ ಎಲ್ಲಾ ನಾಲ್ಕೂ ಮಂದಿ ಎರಡನೇ ಸುತ್ತು ತಲುಪಲು ವಿಫಲರಾದಂತಾಗಿದೆ. ದೀಪಕ್ ಬೋರಿಯಾ (51 ಕೆ.ಜಿ), ನರೇಂದರ್ ಬೆರ್ವಾಲ್ (+92 ಕೆ.ಜಿ), ಜಾಸ್ಮಿನ್ ಲಂಬೋರಿಯಾ (60 ಕೆ.ಜಿ) ಇತರ ಮೂವರು.

ಭಾರತದ ಇನ್ನೂ ಐದು ಮಂದಿ ಇಲ್ಲಿ ಕಣದಲ್ಲಿದ್ದಾರೆ. ಈ ಅರ್ಹತಾ ಟೂರ್ನಿಯ ಸೆಮಿಫೈನಲ್ ತಲುಪಿದರೂ ಒಲಿಂಪಿಕ್ ಕೋಟಾ ದೊರೆಯಲಿದೆ. ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಮೊಹಮ್ಮದ್ ಹುಸಾಮುದ್ದೀನ್, ಆರು ಬಾರಿಯ ಏಷ್ಯನ್ ಪದಕ ವಿಜೇತ ಶಿವ ಥಾಪಾ ಈ ಐವರಲ್ಲಿ ಒಳಗೊಂಡಿದ್ದಾರೆ.

ನಿಖತ್ ಝರೀನ್ (50 ಕೆ.ಜಿ), ಪ್ರೀತಿ ಪವಾರ್ (54 ಕೆ.ಜಿ), ಪ್ರವೀಣ್ ಹೂಡ (57 ಕೆ.ಜಿ) ಮತ್ತು ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ) ಅವರು ಕಳೆದ ವರ್ಷದ ಏಷ್ಯನ್ ಗೇಮ್ಸ್‌ನಲ್ಲಿ ತೋರಿದ ಪ್ರದರ್ಶನದ ಆಧಾರದಲ್ಲಿ ಪ್ಯಾರಿಸ್‌ಗೆ ಟಿಕೆಟ್ ಪಡೆದಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ 9 ಮಂದಿ ಬಾಕ್ಸರ್‌ಗಳು ಪಾಲ್ಗೊಂಡಿದ್ದರು.

ಇಲ್ಲಿ ವಿಫಲರಾದ ಬಾಕ್ಸರ್‌ಗಳು ಬ್ಯಾಂಕಾಕ್‌ನಲ್ಲಿ ಮೇ 23 ರಿಂದ ಜೂನ್ 3ರವರೆಗೆ ನಡೆಯಲಿರುವ ಎರಡನೇ ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಅರ್ಹತಾ ಟೂರ್ನಿಯ ಮೂಲಕ ಒಲಿಂಪಿಕ್ ಕೂಟಕ್ಕೆ ಅರ್ಹತೆ ಪಡೆಯುವ ಕೊನೆಯ ಅವಕಾಶ ಹೊಂದಿದ್ದಾರೆ.

ಹಣ ಕದ್ದು ಪಾಕ್ ಬಾಕ್ಸರ್ ನಾಪತ್ತೆ

ಕರಾಚಿ (ಪಿಟಿಐ): ಇಟಲಿಯಲ್ಲಿ ಒಲಿಂಪಿಕ್ ಅರ್ಹತಾ ಬಾಕ್ಸಿಂಗ್ ಟೂರ್ನಿಯಲ್ಲಿ ಪಾಲ್ಗೊಳ್ಳಲು ಹೋಗಿದ್ದ ಪಾಕಿಸ್ತಾನದ ಯುವ ಬಾಕ್ಸರ್ ಜೊಹೆಬ್ ರಶೀದ್, ತಂಡದ ಸಹ ಆಟಗಾರನ ಪರ್ಸ್‌ನಿಂದ ಹಣವನ್ನು ಕದ್ದು ನಾಪತ್ತೆಯಾಗಿದ್ದಾರೆ ಎಂದು ಪಾಕಿಸ್ತಾನ ಅಮೆಚೂರ್ ಬಾಕ್ಸಿಂಗ್ ಫೆಡರೇಷನ್ ಮಂಗಳವಾರ ತಿಳಿಸಿದೆ.

ಫೆಡರೇಷನ್‌ನ ಹಿರಿಯ ಅಧಿಕಾರಿಯೊಬ್ಬರು ಇದನ್ನು ಇಟಲಿಯಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿಯ ಗಮನಕ್ಕೆ ತಂದಿದ್ದಾರೆ ಮತ್ತು ಘಟನೆಯ ಬಗ್ಗೆ ಪೊಲೀಸರಿಗೆ ದೂರು ಸಹ ಸಲ್ಲಿಸಿದ್ದಾರೆ ಎಂದು ಹೇಳಿದೆ. ಜೋಹೆಬ್ ಸದ್ಯ ಯಾರೊಂದಿಗೂ ಸಂಪರ್ಕದಲ್ಲಿಲ್ಲ.

ಕಳೆದ ವರ್ಷ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಜೊಹೆಬ್, ಉದಯೋನ್ಮುಖ ಪ್ರತಿಭೆ ಎನಿಸಿದ್ದರು.

'ಒಲಿಂಪಿಕ್ ಅರ್ಹತಾ ಪಂದ್ಯಾವಳಿಯಲ್ಲಿ ಭಾಗವಹಿಸಲು ಐದು ಸದಸ್ಯರ ತಂಡದ ಭಾಗವಾಗಿ ಅಲ್ಲಿಗೆ ಹೋಗಿದ್ದ ಜೊಹೆಬ್ ರಶೀದ್ ವರ್ತಿಸಿದ ರೀತಿ ಫೆಡರೇಶನ್ ಮತ್ತು ದೇಶಕ್ಕೆ ಮುಜುಗರ ಉಂಟು ಮಾಡಿದೆ' ಎಂದು ರಾಷ್ಟ್ರೀಯ ಒಕ್ಕೂಟದ ಕಾರ್ಯದರ್ಶಿ ಕರ್ನಲ್ ನಾಸಿರ್ ಅಹ್ಮದ್ ಹೇಳಿದ್ದಾರೆ.

ಮಹಿಳಾ ಬಾಕ್ಸರ್ ಲಾರಾ ಇಕ್ರಮ್ ತರಬೇತಿಗಾಗಿ ಹೊರಗೆ ಹೋಗಿದ್ದರು. ಆಗ ಜೊಹೆಬ್ ರಿಷಪ್ಷನ್ ಕೌಂಟರ್‌ನಿಂದ ಆಕೆಯ ಕೋಣೆಯ ಕೀ ಪಡೆದು, ಅವರ ಪರ್ಸ್‌ನಿಂದ ವಿದೇಶಿ ಕರೆನ್ಸಿ ಕಳವು ಮಾಡಿ ನಾಪತ್ತೆಯಾಗಿದ್ದಾರೆ ಎಂದು ನಾಸಿರ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಮಾರ್ಗಸೂಚಿ ಪರಿಷ್ಕರಣೆ

ನವದೆಹಲಿ (ಪಿಟಿಐ): ಈಚೆಗಿನ ದಿನ ಗಳಲ್ಲಿ ಜನಪ್ರಿಯತೆ ಪಡೆದ ಕ್ರೀಡೆಗಳನ್ನು ಸೇರಿಸಿಕೊಳ್ಳಲು ಮತ್ತು ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು, ಕೇಂದ್ರ ಸರ್ಕಾರವು ಕ್ರೀಡಾ ಕೋಟಾದಡಿ ನೇಮಕಾತಿ ಮತ್ತು ಬಡ್ತಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ.

'ಕೇಂದ್ರ ಕ್ರೀಡಾ ಸಚಿವಾಲಯದ ಜತೆಗೆ ಸಮಾಲೋಚನೆ ನಡೆಸಿ ಮಾರ್ಗಸೂಚಿಗಳನ್ನು ಪರಿಷ್ಕರಿಸಲಾಗಿದೆ. ಸರ್ಕಾರಿ ಉದ್ಯೋಗಗಳಲ್ಲಿ ಕ್ರೀಡಾ ಕೋಟಾದಡಿ ನೇಮಕಾತಿ ಪ್ರಕ್ರಿಯೆಗೆ ಇನ್ನಷ್ಟು ಸ್ಪಷ್ಟತೆ ತರುವುದು ಇದರ ಉದ್ದೇಶ. ಇತ್ತೀಚಿನ ದಿನಗಳಲ್ಲಿ ಹೆಚ್ಚು ಮಹತ್ವ ಪಡೆದುಕೊಂಡಿರುವ ಕ್ರೀಡೆಗಳನ್ನು ಸೇರಿಸಿಕೊಳ್ಳುವುದು ಮತ್ತು ಕ್ರೀಡೆಗಳಲ್ಲಿ ಗಮನಾರ್ಹ ಪ್ರದರ್ಶನ ತೋರುವವರಿಗೆ ಉತ್ತೇಜನ ನೀಡುವುದು ಗುರಿ' ಎಂದು ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಹೇಳಿದೆ.

ಟೆನಿಸ್: ನಗಾಲ್ ಶುಭಾರಂಭ



ಇಂಡಿಯನ್ ವೆಲ್ಸ್ (ಅಮೆರಿಕ), (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಇಂಡಿಯನ್ ವೆಲ್ಸ್ ಮಾಸ್ಟರ್ಸ್ ಟೂರ್ನಿಯ ಮೊದಲ ಅರ್ಹತಾ ಸುತ್ತಿನಲ್ಲಿ ಸೋಮವಾರ ಅಮೆರಿಕದ ಸ್ಟೆಫಾನ್ ಡೊಸ್ತಾನಿಕ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿದರು.

ಎಂಟನೇ ಶ್ರೇಯಾಂಕದ ಪಡೆದಿದ್ದ ನಗಾಲ್ 6–2, 6–2 ರಿಂದ ದೊಸ್ತಾನಿಕ್ ಅವರನ್ನು 68 ನಿಮಿಷಗಳ ಸೆಣಸಾಟದಲ್ಲಿ ಮಣಿಸಿದರು. ದೊಸ್ತಾನಿಕ್ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದರು. ನಗಾಲ್ ಇದೇ ಮೊದಲ ಬಾರಿ ಈ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಒಮ್ಮೆಯೂ ಬ್ರೇಕ್ ಪಾಯಿಂಟ್‌ಗೆ ಅವಕಾಶ ನೀಡದೇ ಅವರು ವಿಜೇತರಾದರು. ಅಂತಿಮ ಅರ್ಹತಾ ಸುತ್ತಿಗೆ ಅರ್ಹತೆ ಪಡೆಯುವ ಮೂಲಕ ನಗಾಲ್ ಖಾತೆಗೆ 10 ರ‍್ಯಾಂಕಿಂಗ್ ಪಾಯಿಂಟ್ ಸೇರುವುದು ಖಚಿತವಾಯಿತು. ಜೊತೆಗೆ ₹11.85 ಲಕ್ಷ ಬಹುಮಾನವೂ ಖಚಿತವಾಯಿತು. ನಗಾಲ್ ಎರಡನೇ ಅರ್ಹತಾ ಸುತ್ತಿನಲ್ಲಿ ಕೊರಿಯಾದ ಸಿಯಾಂಗ್ ಚಾನ್ ಹಾಂಗ್ ಅವರನ್ನು ಎದುರಿಸಲಿದ್ದಾರೆ. ಈ ಪಂದ್ಯ ಗೆದ್ದವರು ಪ್ರಧಾನ ಸುತ್ತಿಗೆ ಅರ್ಹತೆ ಪಡೆಯುತ್ತಾರೆ.

ಚೆನ್ನೈ ತಲುಪಿದ ಧೋನಿ

ಚೆನ್ನೈ (ಪಿಟಿಐ): ಮುಂಬರುವ ಐಪಿಎಲ್ ಟೂರ್ನಿಯ ತಯಾರಿಗಾಗಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ನಾಯಕ ಮಹೇಂದ್ರ ಸಿಂಗ್ ಧೋನಿ ಮಂಗಳವಾರ ಚೆನ್ನೈಗೆ ತಲುಪಿದ್ದಾರೆ.

ಕಳೆದ ಆವೃತ್ತಿಯಲ್ಲಿ ಐದನೇ ಬಾರಿ ಪ್ರಶಸ್ತಿಯನ್ನು ಗೆದ್ದುಕೊಂಡ ಚೆನ್ನೈ ತಂಡದ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಧೋನಿ ಕಾರಿನಿಂದ ಇಳಿಯುತ್ತಿರುವ ಚಿತ್ರವನ್ನು ಹಂಚಿಕೊಳ್ಳಲಾಗಿದೆ.

42 ವರ್ಷದ ಧೋನಿ ಅವರಿಗೆ ಈ ಸಲದ ಐಪಿಎಲ್ ಕೊನೆಯ ಟೂರ್ನಿ ಆಗಿರಲಿದೆ ಎಂಬ ಊಹಾಪೋಹಗಳು ಹಬ್ಬಿದೆ. ಸಿಎಸ್‌ಕೆಯ ಮೊದಲ ಬ್ಯಾಚ್ ಶುಕ್ರವಾರ ಚೆನ್ನೈಗೆ ತಲುಪಲಿದ್ದು, ಶನಿವಾರ ತರಬೇತಿ ಆರಂಭಿಸಿದೆ.

ಮಾರ್ಚ್ 22ರಂದು ಮೊದಲ ಪಂದ್ಯದಲ್ಲಿ ಚೆನ್ನೈ ತಂಡವು ತವರಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಜತೆ ಮುಖಾಮುಖಿಯಾಗಲಿದೆ.

ಹೊಸ ನೀತಿ: 18ರಂದು ಸಭೆ

ನವದೆಹಲಿ (ಪಿಟಿಐ): ರಾಜ್ಯ ಕ್ರಿಕೆಟ್ ಸಂಸ್ಥೆಗಳ ಜತೆ ವಿದೇಶಿ ಮಂಡಳಿಗಳು ಸಹಯೋಗ ಹೊಂದುವುದಕ್ಕೆ ಸಂಬಂಧಿಸಿದ ಹೊಸ ನೀತಿ ಕುರಿತು ಮಾರ್ಚ್ 18ರಂದು ನಡೆಯುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಚರ್ಚೆ ನಡೆಯಲಿದೆ.

ರಾಜ್ಯ ಕ್ರಿಕೆಟ್ ಸಂಸ್ಥೆಗಳು ವಿದೇಶಿ ಮಂಡಳಿಗಳೊಂದಿಗೆ ಕ್ರಿಕೆಟ್ ಟೂರ್ನಿ ಸಂಘಟಿಸುವುದಕ್ಕೆ ಸಂಬಂಧಿಸಿದಂತೆ ನೀತಿ ರೂಪಿಸುವ ಕುರಿತು ಸಮಾಲೋಚನೆ ನಡೆಯಲಿದೆ. ಕೌನ್ಸಿಲ್ ಸಭೆಯ ಎಂಟು ಅಂಶಗಳ ಕಾರ್ಯಸೂಚಿಯಲ್ಲಿ ಇದು ಒಳಗೊಂಡಿದೆ.

ಪುರುಷರ ವಿಭಾಗದ ಆಟಗಾರರ ಹೊಸ ಗುತ್ತಿಗೆ ಪಟ್ಟಿಯ ಸ್ಥಿರೀಕರಣ ಕುರಿತು ಚರ್ಚೆ ನಡೆಯಲಿದೆ. ಅಲ್ಲದೆ, ಮುಂದಿನ ಸಾಲಿನ ದೇಶೀಯ ಟೂರ್ನಿಗಳಿಗೆ ವೇಳಾಪಟ್ಟಿ ರೂಪಿಸುವುದು ಕಾರ್ಯಸೂಚಿಯಲ್ಲಿ ಇರಲಿದೆ.

ಮಾನ್ಯತೆ ನಿರೀಕ್ಷೆಯಲ್ಲಿ ಅಂಧರ ಕ್ರಿಕೆಟ್

ನವದೆಹಲಿ (ಪಿಟಿಐ): ಭಾರತ ಅಂಧರ ಕ್ರಿಕೆಟ್ ಇನ್ನೂ ಮೇಲಿನ ಮಟ್ಟಕ್ಕೇರಬೇಕಾದರೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮಾನ್ಯತೆ ಅತ್ಯಗತ್ಯ ಎಂದು ಭಾರತ ಅಂಧರ ಕ್ರಿಕೆಟ್ ತಂಡದ ಕೋಚ್ ಮೊಹಮ್ಮದ್ ಇಬ್ರಾಹಿಂ ಸೋಮವಾರ ಹೇಳಿದ್ದಾರೆ.

ಬಿಸಿಸಿಐನ ಮಾನ್ಯತೆ ಮಾತ್ರವಲ್ಲ, ಸಾಮಾನ್ಯ ಕ್ರಿಕೆಟಿಗರಿಗೆ ಇರುವಂಥೆ ಅಂಧ ಆಟಗಾರರಿಗೂ ಮಂಡಳಿಯಿಂದ ಕೇಂದ್ರೀಯ ಗುತ್ತಿಗೆಗಳನ್ನು ನೀಡಬೇಕಾಗಿದೆ ಎಂದರು.

'ಅಂಧರ ಕ್ರಿಕೆಟ್‌ನಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿರುವ ಪಾಕಿಸ್ತಾನ ತಂಡದ ಆಟಗಾರರು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಗುತ್ತಿಗೆಯಡಿ ಬರುತ್ತಾರೆ. ಅವರಿಗೆ ಮಂಡಳಿಯ ಬೆಂಬಲವಿದೆ' ಎಂದು ಅವರು ಹೇಳಿದರು.

ಐಎಂಎಫ್‌ನಿಂದ ಹಣಕಾಸು ನೆರವಿಗೆ ಶೆಹಬಾಜ್ ಸೂಚನೆ

ಇಸ್ಲಾಮಾಬಾದ್ (ಪಿಟಿಐ): ದೇಶದ ಆರ್ಥಿಕ ಸ್ಥಿತಿಗತಿ ಸುಧಾರಿಸುವುದು ತಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದಿರುವ ಪಾಕಿಸ್ತಾನದ ನೂತನ ಪ್ರಧಾನಿ ಶೆಹಬಾಜ್ ಷರೀಫ್ ಅವರು, ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಸಂಸ್ಥೆಯವರ ಜೊತೆ ಮಾತುಕತೆ ನಡೆಸಿ, ಹೆಚ್ಚಿನ ಹಣಕಾಸಿನ ನೆರವು ಕೇಳುವಂತೆ ಹಣಕಾಸು ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದಾರೆ.

ಈಗಾಗಲೇ ಸುಸ್ತಿದಾರನಾಗಿರುವ ಪಾಕಿಸ್ತಾನಕ್ಕೆ ಕಿರು ಅವಧಿಯ ಹಣಕಾಸು ನೆರವು ಒಪ್ಪಂದದಂತೆ (ಎಸ್‌ಬಿಎ) ₹2.48 ಲಕ್ಷ ಕೋಟಿ ನೀಡುವುದಾಗಿ ಐಎಂಎಫ್ ಕಳೆದ ವರ್ಷ ಜೂನ್‌ನಲ್ಲಿ ಹೇಳಿತ್ತು. ಅದರಂತೆ ಜನವರಿಯಲ್ಲಿ ₹5.80 ಸಾವಿರ ಕೋಟಿಯನ್ನು ಮೊದಲ ಕಂತಿನಲ್ಲಿ ಪಾಕಿಸ್ತಾನಕ್ಕೆ ನೀಡಿತ್ತು.

'ಶೆಹಬಾಜ್ ಷರೀಫ್ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆಲವು ಗಂಟೆಗಳಲ್ಲೇ ದೇಶದ ಆರ್ಥಿಕತೆಯನ್ನು ಮರು ಸ್ಥಾಪಿಸುವ ಕುರಿತು ಸಭೆ ನಡೆಸಿದರು. ಆರ್ಥಿಕ ನೆರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಐಎಂಎಫ್ ಜೊತೆ ಮಾತುಕತೆ ನಡೆಸುವಂತೆ ಆದೇಶಿಸಿದರು' ಎಂದು ಪಿಎಂಎಲ್–ಎನ್ ಪಕ್ಷದ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ.

ಮೋದಿ ಶುಭಾಶಯ

ನವದೆಹಲಿ (ಪಿಟಿಐ): ಪಾಕಿಸ್ತಾನದ ನೂತನ ಪ್ರಧಾನಿ ಶೆಹಬಾಜ್ ಷರೀಫ್ ಅವರಿಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಶುಭಾಶಯ ಹೇಳಿದ್ದಾರೆ.

'ಪಾಕಿಸ್ತಾನದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿರುವ ನಿಮಗೆ ಶುಭ ಕೋರುವೆ' ಎಂದಷ್ಟೆ ಮೋದಿ 'ಎಕ್ಸ್'ನಲ್ಲಿ ಚುಟುಕಾಗಿ ಬರೆದಿದ್ದಾರೆ.

ಭಾರತೀಯ ಸೇನಾ ಪಡೆಗೆ ನಮ್ಮ ನೆಲದಲ್ಲಿ ಜಾಗವಿಲ್ಲ: ಮಾಲ್ದೀವ್ಸ್ ಅಧ್ಯಕ್ಷ

ಮಾಲೆ (ಪಿಟಿಐ): ಭಾರತ ವಿರೋಧಿ ಧೋರಣೆಯನ್ನು ಮುಂದುವರಿಸಿರುವ ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು, ಮೇ 10ರ ಬಳಿಕ ಭಾರತದ ಯಾವೊಬ್ಬ ಸೇನಾ ಸಿಬ್ಬಂದಿಯನ್ನೂ ದೇಶದಲ್ಲಿ ಇಟ್ಟುಕೊಳ್ಳುವುದಿಲ್ಲ. ನಾಗರಿಕರ ಪೋಷಾಕಿನಲ್ಲಿ ಕೂಡ ಸೇನಾ ಸಿಬ್ಬಂದಿಯನ್ನು ದೇಶದಲ್ಲಿ ಇರಲು ಬಿಡುವುದಿಲ್ಲ ಎಂದು ಹೇಳಿದ್ದಾರೆ ಎಂದು ಮಂಗಳವಾರ ಮಾಧ್ಯಮವೊಂದು ವರದಿ ಮಾಡಿದೆ.

ವಿಮಾನಯಾನ ವೇದಿಕೆಯೊಂದರ ಉಸ್ತುವಾರಿ ವಹಿಸಿಕೊಳ್ಳಲು ಭಾರತೀಯ ನಾಗರಿಕ ಸೇವೆಯಲ್ಲಿರುವ ತಂಡವು ಮಾಲ್ದೀವ್ಸ್ ತಲುಪಿ ಒಂದು ವಾರ ಕಳೆಯುವ ಮುನ್ನವೇ ಮುಯಿಜು ಅವರ ಈ ಹೇಳಿಕೆ ಹೊರಬಿದ್ದಿದೆ.

ಬಾ ಅಟೋಲ್ ಐದಫುಷಿ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಭಾರತೀಯ ಸೇನೆಯನ್ನು ದೇಶದಿಂದ ಹೊರಹಾಕುವಲ್ಲಿ ನಮ್ಮ ಸರ್ಕಾರ ಯಶಸ್ವಿಯಾಗಿದೆ. ಹೀಗಿರುವಾಗ, ಗಾಳಿಸುದ್ದಿ ಹಬ್ಬಿಸುವವರು ಇದೀಗ ಪರಿಸ್ಥಿತಿಯನ್ನು ತಿರುಚಲು ಯತ್ನಿಸುತ್ತಿದ್ದಾರೆ' ಎಂಬುದಾಗಿ ಅವರು ಹೇಳಿದ್ದಾರೆ ಎಂದು ವರದಿಯಾಗಿದೆ.

'ಜಾಗತಿಕ ವ್ಯವಸ್ಥೆಗೆ ಹೊಸ ರೂಪ; ಭಾರತ –ದ. ಕೊರಿಯಾ ಮಹತ್ವದ ಪಾತ್ರ'

ಸೋಲ್ (ಪಿಟಿಐ): ಜಾಗತಿಕ ವ್ಯವಸ್ಥೆಗೆ ಹೊಸ ರೂಪ ನೀಡುವ ಪ್ರಕ್ರಿಯೆಯಲ್ಲಿ ಭಾರತ ಮತ್ತು ದಕ್ಷಿಣ ಕೊರಿಯಾ ಹೆಚ್ಚಿನ ಹೊಣೆ ಹೊತ್ತಿದ್ದು, ಸಕ್ರಿಯವಾಗಿ ಕೊಡುಗೆ ನೀಡುತ್ತಿವೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಇಲ್ಲಿನ ಕಾರ್ಯಕ್ರಮವೊಂದರಲ್ಲಿ ಮಂಗಳವಾರ ಮಾತನಾಡುತ್ತಾ, 'ಕೊರಿಯಾ ಗಣರಾಜ್ಯದ ಜೊತೆಗಿನ ಭಾರತದ ಪಾಲುದಾರಿಕೆಯು ಅನಿಶ್ಚಿತ ಜಾಗತಿಕ ವ್ಯವಸ್ಥೆಯಲ್ಲಿ ಹೆಚ್ಚು ಪ್ರಾಮುಖ್ಯ ಪಡೆದಿದೆ' ಎಂದು ಹೇಳಿದರು.

ಭಯೋತ್ಪಾದನೆ ನಿಗ್ರಹ ಹಾಗೂ ಜನಸಮೂಹ ನಾಶ ಮಾಡುವಂತಹ ಶಸ್ತ್ರಾಸ್ತ್ರಗಳ ತಡೆಗೆ ಕೈಗೊಳ್ಳುವ ಕ್ರಮಗಳು ಜಲಮಾರ್ಗದಲ್ಲಿ ಸುರಕ್ಷತೆಯ ಖಾತರಿ ನೀಡಲಿವೆ. ಇದು, ಉಭಯ ದೇಶಗಳಿಗೆ ಮೂಲಭೂತ ಭದ್ರತಾ ವಿಷಯವಾಗಿದೆ ಎಂದು ಹೇಳಿದರು.

'ಜಾಗತಿಕ ಹಂತದಲ್ಲಿ ಭಯೋತ್ಪಾದನೆಯಂತಹ ಸವಾಲು ಎದುರಿಸುವುದನ್ನು ಅರಿತಿದ್ದೇವೆ. ಒಟ್ಟಾಗಿ ಜೊತೆಗೂಡಿ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದು ಎಂದಿಗೂ ಸಮಾನವಾದ ಅವಕಾಶವನ್ನು ಕಲ್ಪಿಸಲಿದೆ' ಎಂದು ಜೈಶಂಕರ್ ಪ್ರತಿಪಾದಿಸಿದರು.

ಪ್ರಧಾನಿ, ಭದ್ರತಾ ಸಲಹೆಗಾರರ ಜತೆ ಚರ್ಚೆ

ಸೋಲ್ (ಪಿಟಿಐ): ದಕ್ಷಿಣ ಕೊರಿಯಾ ಪ್ರಧಾನಿ ಹ್ಯಾನ್ ಡಕ್ ಸೂ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಮಂಗಳವಾರ ಇಲ್ಲಿ ಭೇಟಿಯಾಗಿದ್ದು, ಉಭಯ ದೇಶಗಳ ಬಾಂಧವ್ಯ ವೃದ್ಧಿ ಕುರಿತು ಚರ್ಚಿಸಿದರು.

ನಾಲ್ಕು ದಿನಗಳ ಭೇಟಿಗೆ ಇಲ್ಲಿಗೆ ಆಗಮಿಸಿರುವ ಜೈಶಂಕರ್ ಅವರು, 10ನೇ ಭಾರತ–ದಕ್ಷಿಣ ಕೊರಿಯಾದ ಜಂಟಿ ಆಯೋಗದ ಸಭೆಯ (ಜೆಸಿಎಂ) ಸಹ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

'ಜೆಸಿಎಂ ವಿಸ್ತೃತವಾಗಿ ನಡೆಯುವ ನಿರೀಕ್ಷೆಯಿದೆ. ಪರಸ್ಪರ ಸಹಕಾರ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಬಾಂಧವ್ಯವನ್ನು ಬಲಪಡಿಸುವ ಕುರಿತು ಚರ್ಚಿಸಲಿದ್ದೇವೆ' ಎಂದು ಪ್ರವಾಸ ತೆರಳುವ ಮುನ್ನ ನವದೆಹಲಿಯಲ್ಲಿ ಜೈಶಂಕರ್ ಹೇಳಿದ್ದರು.